ರಾಜ್ಯೋದಯ ರಜತೋತ್ಸವ ಸಂಚಿಕೆ

ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 10
ಸಂಚಿಕೆ 4
ಅಕ್ಟೋಬರ್-ಡಿಸೆಂಬರ್-1981

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE: Kannada Quarterly of the Bangalore University, Bangalore
Vol. 10. No. 4, October–December 1981

Chief Editor: Dr. G. S. Sivarudrappa

ಪ್ರಧಾನ ಸಂಪಾದಕರು :
ಡಾ॥ ಜಿ. ಎಸ್. ಶಿವರುದ್ರಪ್ಪ

ಸಂಪಾದಕರು :

ಡಾ॥ ಎಸ್. ವಿದ್ಯಾಶಂಕರ
ಶ್ರೀ ಕೆ. ವಿ. ನಾರಾಯಣ
ಡಾ॥ ಸೂರ್ಯನಾಥ ಕಾಮತ್

ವಾರ್ಷಿಕ ಚಂದಾ : ರೂ. 8–00
ರೂ. 5–00 (ವಿದ್ಯಾರ್ಥಿಗಳಿಗೆ)

ಆಜೀವ ಸದಸ್ಯತ್ವ : ರೂ. 100–00

ಪ್ರಕಾಶಕರು : ಕೆ. ಸಿ. ಶಿವಪ್ಪ
ನಿರ್ದೇಶಕ (ಕಾರ್ಯನಿರ್ವಾಹಕ), ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560 056

ಮುದ್ರಣ : ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು 560 056

ಪರಿವಿಡಿ

ಏಕೀಕೃತ ಕರ್ನಾಟಕದ ಕಾಲು ಶತಮಾನ

ಸೂರ್ಯನಾಥ ಕಾಮತ್

ಇಸವಿ 1956ರ ನವೆಂಬರ್ ಒಂದನೆಯ ತಾರೀಕು ಕರ್ನಾಟಕವು ಏಕೀಕೃತವಾಗಿ ನವ ಮೈಸೂರು ರಾಜ್ಯದ ಉದಯವಾಯಿತು. ದಶಕಗಳ ಕಾಲದ ಏಕೀಕರಣ ಚಳವಳಿಯ ನಂತರ ಈ ಕನಸು ನನಸಾಗಿತ್ತು. "ಸುಮಾರು ಎರಡು ಕೋಟಿ ಕನ್ನಡಿಗರು ಒಟ್ಟಿಗೆ—ಅನೇಕಕಾಲ ಆಗಲಿದ್ದ ನಂತರ—ಸೇರುತ್ತೇವೆಂಬ ಯೋಚನೆಯೇ ರೋಮಾಂಚಕಾರಿಯಾಗಿದೆ. ನಮ್ಮ ಬಾಳಿನಲ್ಲಿ ಇದಕ್ಕಿಂತ ಚರಿತ್ರಾರ್ಹ ಸಂಗತಿಯೇ ಇರಲಾರದು. ನೂರು ಇನ್ನೂರು ಮುನ್ನೂರು ವರ್ಷಗಳ ಕೆಳಗೆ ಬೇರೆ ಬೇರೆ ಹದಿನೆಂಟು ಇಪ್ಪತ್ತು ಸರ್ಕಾರಗಳಿಗೆ ಹಂಚಿಹೋಗಿ ಅಣ್ಣ ತಮ್ಮಂದಿರನ್ನೇ ಗುರುತಿಸಲಾರದೆ ಕಂಗಾಲಾಗಿ ಕಂಗೆಟ್ಟಿದ್ದ ನಮ್ಮನ್ನು ಮತ್ತೆ ನಮ್ಮ ಪ್ರಿಯಬಂಧುಗಳೊಡನೆ ಸೇರಿಸಿದ ನಮ್ಮ ಸಂವಿಧಾನಕ್ಕೆ ನಾವು ಎಷ್ಟು ಕೃತಜ್ಞರಾಗಿದ್ದರೂ ಅಲ್ಪವೇ? ಎಂದು ನಾಡಿನ ಗಣ್ಯ ಸಾಹಿತಿಗಳೊಬ್ಬರು ಅಂದಿನ ಕನ್ನಡಿಗರ ಮನಸ್ಥಿತಿಯನ್ನು ಬಣ್ಣಿಸಿದ್ದಾರೆ.

ಒಂದಾದ ಈ ಕನ್ನಡ ನಾಡಿನ ರಾಜ್ಯಪಾಲರಾಗಿ ಮೈಸೂರಿನ ಮಾಜೀ ಮಹಾರಾಜ ಜಯಚಾಮರಾಜ ಒಡೆಯರೂ ಮುಖ್ಯ ಮಂತ್ರಿಗಳಾಗಿ ಗಣ್ಯ ಸ್ವಾತಂತ್ರ್ಯ ಯೋಧ ಎಸ್. ನಿಜಲಿಂಗಪ್ಪನವರೂ ಅಧಿಕಾರ ವಹಿಸಿಕೊಂಡರು. ಹೊಸ ರಾಜ್ಯದ ವಿಧಾನ ಸಭೆಯಲ್ಲಿ 210 ಸದಸ್ಯರೂ ವಿಧಾನ ಪರಿಷತ್ತಿನಲ್ಲಿ 63 ಸದಸ್ಯರೂ ಇದ್ದರು. 1952ರಲ್ಲಿ ನಡೆದಿದ್ದ ಮಹಾ ಚುನಾವಣೆಯ ಕಾಲಕ್ಕೆ ಮದ್ರಾಸು, ಮುಂಬೈ ಹಾಗೂ ಹೈದರಾಬಾದ್ ಪ್ರಾಂತಗಳ ಕನ್ನಡ ಪ್ರದೇಶಗಳ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರು ಹೊಸ ವಿಧಾನ ಮಂಡಲದಲ್ಲಿ ಹಳೆಯ ಮೈಸೂರಿನ ಸದಸ್ಯರ ಜೊತೆ ಸ್ಥಾನಾಪನ್ನರಾದರು. ಮುಂದೆ 1957ರಲ್ಲಿ ಮಹಾಚುನಾವಣೆ ನಡೆದಾಗ ವಿಧಾನ ಸಭೆಯಲ್ಲಿ ಕಾಂಗ್ರೆಸ್ಸು 151 ಸ್ಥಾನಗಳನ್ನು ಪಡೆಯಿತು. ಅದು ಪಡೆದ ಮತಗಳು ಶೇ. 52.08. ಒಟ್ಟು 19 ಸ್ಥಾನಗಳನ್ನೂ ಶೇ. 14.05 ಮತಗಳನ್ನೂ ಪಡೆದ ಪ್ರಜಾ ಸಮಾಜವಾದಿ ಪಕ್ಷವು ಪ್ರಮುಖ ವಿರೋಧ ಪಕ್ಷವಾಗಿತ್ತು. ಎಸ್. ನಿಜಲಿಂಗಪ್ಪನವರೆ ಮತ್ತೆ ಮುಖ್ಯಮಂತ್ರಿಯಾಗಿ ಆಯ್ಕೆಗೊಂಡರು. ಆದರೆ ಕಾಂಗ್ರೆಸ್ ಪಕ್ಷದೊಳಗಿನ ಒಳಜಗಳಗಳ ಪರಿಣಾಮವಾಗಿ ಅವರು 1958ರ ಮೇ ತಿಂಗಳಲ್ಲಿ ತಮ್ಮ ಸ್ಥಾನವನ್ನು ಅವರು ಬಿ.ಡಿ. ಜತ್ತಿ ಅವರಿಗೆ ಬಿಟ್ಟುಕೊಡಬೇಕಾಯಿತು.

ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದ ಈ ಮೊದಲ ಅವಧಿ (1956–58) ಯಲ್ಲಿ ಆದ ಮುಖ್ಯ ಸಾಧನೆಗಳ ಪೈಕಿ ಉಲ್ಲೇಖನೀಯವಾದುದು. 1957ರಲ್ಲಿ ಬಿ.ಡಿ. ಜತ್ತಿಯವರು ಅಧ್ಯಕ್ಷರಾಗಿರುವ ಭೂಸುಧಾರಣಾ ಮಂಡಳಿಯ ರಚನೆ. ಇದಲ್ಲದೆ 1955ರಲ್ಲಿ ನೇಮಿಸಿದ್ದ ಮಸ್ಕರ್‍ನ್ಹೆಂ ವೇತನ ಆಯೋಗದ ವರದಿಯನ್ನು ಅವರು ಕಾರ್ಯಾಚರಣೆಗೆ ತಂದರು. ಕರ್ನಾಟಕದ ವಿದ್ಯುತ್ ಮಂಡಳಿಯ ಸ್ಥಾಪನೆ ಅವರ ಇನ್ನೊಂದು ಗಣ್ಯ ಕಾರ್ಯ. ತುಂಗಭದ್ರಾ ಉನ್ನತ ಮಟ್ಟದಕಾಲುವೆ ಯೋಜನೆ (ಮೊದಲ ಹಂತ), ಘಟಪ್ರಭಾ ಯೋಜನೆಯ ಎರಡನೆಯ ಹಂತ, ಕಬಿನಿ ಜಲಾಶಯ ಯೋಜನೆ, ಮುಂತಾದ ಗಣ್ಯ ನೀರಾವರಿ ಕಾರ್ಯಗಳು ಎರಡನೆಯ ಪಂಚವಾರ್ಷಿಕ ಯೋಜನೆಯ ಅಂಗವಾಗಿ ಆಗ ಆರಂಭಿಸಲ್ಪಟ್ಟವು. ದಾಂಡೇಲಿಯಲ್ಲಿ ಖಾಸಗಿ ಬಂಡವಾಳದ ಕಾಗದ ಕಾರ್ಖಾನೆಯು ಶುರುವಾಯಿತು (1958). ಎ.ಡಿ. ಗೋರ್ವಾಲಾರ ನೇತೃತ್ವದಲ್ಲಿ ಆಡಳಿತ ಸುಧಾರಣಾ ಆಯೋಗವು ಸ್ಥಾಪನೆಗೊಂಡಿತು. 1957ರ ನಂತರ ವಿಧಾನ ಸಭೆಯಲ್ಲಿ ಕೆ. ಕೆಂಚಪ್ಪ ವಿರೋಧ ಪಕ್ಷದ ನಾಯಕರಾಗಿದ್ದರು.

ಜತ್ತಿಯವರ ಆಡಳಿತ ಕಾಲದಲ್ಲಿ ಶರಾವತಿ ಜಲವಿದ್ಯುತ್ ಯೋಜನೆಯನ್ನು ಅಮೆರಿಕದ ನೆರವಿನಿಂದ ಅಂತಿಮ ರೂಪಕ್ಕೆ ತರಲಾಯಿತು. ಜಿಲ್ಲಾ ಬೋರ್ಡ್‌ಗಳನ್ನು ರದ್ದುಗೊಳಿಸಿ ತಾಲ್ಲೂಕು ಅಭಿವೃದ್ಧಿ ಮಂಡಳಿಗಳನ್ನು 1959ರಲ್ಲಿ ಸ್ಥಾಪಿಸಲಾಯಿತು. ಇದೇ ಕಾನೂನಿನಂತೆ 1,500ಕ್ಕಿಂತ ಹೆಚ್ಚು ಮತ್ತು 10,000ಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ಕಂದಾಯದ ಗ್ರಾಮ ಅಥವಾ ಗ್ರಾಮಗಳ ಗುಂಪುಗಳಲ್ಲಿ ಪಂಚಾಯತ್ ಬೋರ್ಡ್‌ಗಳನ್ನು ಸ್ಥಾಪಿಸಲಾಯಿತು. ಭೂಸುಧಾರಣಾ ಕಾನೂನನ್ನು ಇವರ ಕಾಲದಲ್ಲೇ ಸಿದ್ಧಪಡಿಸಿದರೂ ಅದು 1962 ರಲ್ಲಿ ಮಂಜೂರಾಗಿ 1965ರಲ್ಲಿ ಕಾರ್ಯಾಚರಣೆಗೆ ಬಂತು. 1961ರಲ್ಲಿ ಮಂಜೂರಾದ ಕಡ್ಡಾಯ ಶಿಕ್ಷಣ ಮಸೂದೆಯಂತೆ ಆರರಿಂದ ಹನ್ನೊಂದು ವರ್ಷಗಳ ನಡುವಣ ಮಕ್ಕಳನ್ನು ಶಾಲೆಗೆ ಕಳುಹಿಸಬೇಕೆಂದು ಕಡ್ಡಾಯ ಮಾಡಲಾಯಿತು. ವಾರ್ಷಿಕ ಆದಾಯ ರೂ. 1,200ಕ್ಕೆ ಕಡಿಮೆ ಇರುವ ದಂಪತಿಗಳ ಮಕ್ಕಳಿಗೆ ಹೈಸ್ಕೂಲಿನವರೆಗೆ ಶಿಕ್ಷಣವನ್ನು ಉಚಿತವಾಗಿ ಮಾಡಲಾಯಿತು. ಆಂಧ್ರ ಪ್ರದೇಶದ ಸರಕಾರದ ಜೊತೆ ಪಾಲುಗಾರಿಕೆಯಲ್ಲಿ ತುಂಗಭದ್ರಾ ಉಕ್ಕಿನ ಕಾರ್ಖಾನೆಯನ್ನು ಹೊಸಪೇಟೆಯಲ್ಲಿ ಸ್ಥಾಪಿಸಲಾಯಿತು (1960). ಕೈಗಾರಿಕೆಗಳನ್ನು ವಿಶೇಷತಃ ಸಣ್ಣಪ್ರಮಾಣದ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಜತ್ತಿಯವರು ಅನೇಕ ಕ್ರಮಗಳನ್ನು ಕೈಗೊಂಡರು.

ನೌಕರಿ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಸ್ಥಾನ ಕಾದಿರಿಸುವ ಬೇಡಿಕೆಯನ್ನು ಗಮನಿಸಲು ಜತ್ತಿ ಸರಕಾರವು ನೇಮಿಸಿದ್ದ ಡಾ॥ ಆರ್. ನಾಗನಗೌಡ ಸಮಿತಿಯ ವರದಿಯನ್ನು ರಾಜ್ಯ ಶ್ರೇಷ್ಠ ನ್ಯಾಯಾಲಯವು ಸಂವಿಧಾನಬಾಹಿರವೆಂದು ತಳ್ಳಿಹಾಕಿತು.

ನಿಜಲಿಂಗಪ್ಪ ಮತ್ತು ಜತ್ತಿಯವರ ಆಡಳಿತಗಳ ಬಹುಭಾಗವು ಏಕೀಕೃತ ಕರ್ನಾಟಕದ ಹಿಂದಣ ಐದು ಭಾಗಗಳಲ್ಲಿದ್ದ ವಿವಿಧ ಕಾನೂನುಗಳ ಸ್ಥಾನದಲ್ಲಿ ಇಡೀ ಕರ್ನಾಟಕಕ್ಕೆ ಸಾಮಾನ್ಯವಾಗಿ ಇರಬೇಕಾದಂತ ಹೊಸ ಕಾನೂನುಗಳನ್ನು ಸಿದ್ಧಪಡಿಸಿ ಮಂಜೂರು ಮಾಡಿಕೊಳ್ಳುವ ಕಾರ್ಯದಲ್ಲಿ ವ್ಯಯವಾಯಿತು. ಇಡೀರಾಜ್ಯದಲ್ಲಿ ಒಂದೇ ವಿಧದ ನಿಯಮಾವಳಿಗಳು ಜಾರಿಯಲ್ಲಿರುವಂತೆ ಮಾಡಲು ಇದು ಅವಶ್ಯವಾಗಿತ್ತು.

1962ರ ಮಹಾ ಚುನಾವಣೆಯ ನಂತರ ಸುಮಾರು ಮೂರೂವರೆ ತಿಂಗಳ ಕಾಲ ಎಸ್. ಆರ್. ಕಂಠಿಯವರು ರಾಜ್ಯದ ಮುಖ್ಯಮಂತ್ರಿಯಾಗಿದ್ದರು (ಮಾರ್ಚ್ 9 ರಿಂದ ಜೂನ್ 21) ವಿಧಾನ ಸಭಾ ಚುನಾವಣೆಯಲ್ಲಿ ನಿಜಲಿಂಗಪ್ಪನವರು ಸೋತುದರಿಂದ (ಕಾಂಗ್ರೆಸ್ಸಿನಲ್ಲಿ ಆಗ ನಿಜಲಿಂಗಪ್ಪನವರ ಗುಂಪಿನ ಮೇಲ್ಮೈ ಆಗಿ ಅವರೇ ಮುಖ್ಯಮಂತ್ರಿಯಾಗುವರೆಂಬ ನಿರೀಕ್ಷೆಯಿತ್ತು), 'ರಾಮನು ವನವಾಸದಿಂದ ಮರಳುವ ತನಕ' ತಾನು ಭರತನಾಗಿ ಆಡಳಿತ ನಿರ್ವಹಿಸುವುದಾಗಿ ಕಂಠಿ ಹೇಳಿಕೊಂಡಿದ್ದರು. ಮುಂದೆ ಜೂನ್‌ನಲ್ಲಿ ಮುಖ್ಯಮಂತ್ರಿಗಳಾದ ನಿಜಲಿಂಗಪ್ಪನವರು 1968ರ ಮೇ ತಿಂಗಳವರೆಗೆ ಅಧಿಕಾರದಲ್ಲಿದ್ದರು. 1967ರ ಡಿಸೆಂಬರ್‌ನಲ್ಲಿ ನಿಜಲಿಂಗಪ್ಪನವರು ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಆಯ್ಕೆಗೊಂಡರೂ ಮುಂದೆ ಆರು ತಿಂಗಳ ಕಾಲ ಮುಖ್ಯಮಂತ್ರಿಯಾಗಿ ಮುಂದುವರಿದರು. (ಅವರು ಮಂತ್ರಿಪದ ತ್ಯಜಿಸುವ ಬಗ್ಗೆ ಹಾಗೂ ಮಂದಿನ ಉತ್ತರಾಧಿಕಾರಿಯ ಬಗ್ಗೆ ಊಹಾಪೋಹಗಳು ನಡೆದಿರಲು 'ಭರತನಿಗೆ ಅವಕಾಶವಿದೆಯೇ ?' ಎಂಬ ಪ್ರಶ್ನೆಯನ್ನು ಕಂಠಿಯವರಿಗೆ ಕೇಳಲಾಗಿ 'ಇಲ್ಲ, ಈಗ ಲವ-ಕುಶರ ಪ್ರಭಾವ ಹೆಚ್ಚಿದಂತಿದೆ', ಎಂದು ಅವರು ಉತ್ತರಿಸಿದ್ದರು. ಹೀಗೆ ಉಲ್ಲೇಖಿತರಾದ ಲವ-ಕುಶರು ನಿಜಲಿಂಗಪ್ಪನವರ ಸಂಪುಟದಲ್ಲಿ ಇದ್ದ ವೀರೇಂದ್ರ ಪಾಟೀಲ ಹಾಗೂ ರಾಮಕೃಷ್ಣ ಹೆಗ್ಡೆ).

ನಿಜಲಿಂಗಪ್ಪನವರ ಈ ಎರಡನೆಯ ಅವಧಿಯು ಅನೇಕ ದೂರಗಾಮಿಯೋಜನೆಗಳಿಂದಾಗಿ ಸ್ಮರಣೀಯವಾಗಿದೆ. ಮಂಗಳೂರು ಬಂದರು ಯೋಜನೆ ಹಾಗೂ ಹಾಸನ-ಮಂಗಳೂರು ರೈಲು ಮಾರ್ಗಗಳನ್ನು ಇದೇ ಕಾಲದಲ್ಲಿ ಕೇಂದ್ರ ಸರಕಾರವು ಮಂಜೂರು ಮಾಡಿತು. ಅವರು ಪಾನ ನಿಷೇಧವನ್ನು ಸಡಿಲಗೊಳಿಸಿ, 1968ರಲ್ಲಿ ಹೆಚ್ಚು ಕಡಿಮೆ ಪೂರ್ತಿಯಾಗಿ ಅದನ್ನು ಕಿತ್ತುಹಾಕಿದರು. ರಾಜ್ಯ ಬೊಕ್ಕಸಕ್ಕೆ ಇದರಿಂದ ಉತ್ಪನ್ನ ಹೆಚ್ಚಿದ್ದರ ಜೊತೆ ರಾಜ್ಯದ ರಾಜಕಾರಣದಲ್ಲಿ ಶ್ರೀಮಂತ ಅಬಕಾರಿ ಗುತ್ತೇದಾರರ ಪ್ರಭಾವ ಹೆಚ್ಚಲು ಮುಂದೆ ದಾರಿಯಾಯಿತು. ಕೃಷಿ -ವಿಶ್ವವಿದ್ಯಾಲಯ (1963) ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳ ಸ್ಥಾಪನೆ ಆಯಿತು (1964). ಬೆಂಗಳೂರು ನಗರಕ್ಕೆ ಕಾವೇರಿಯಿಂದ ಕುಡಿಯುವ ನೀರು ಒದಗಿಸುವ ಯೋಜನೆ ಈ ಕಾಲದಲ್ಲಿ ಅಂತಿಮ ರೂಪ ಕಂಡಿತು. ಅನೇಕ ನೀರಾವರಿ ಯೋಜನೆಗಳನ್ನು (ನಾಲ್ಕು ದೊಡ್ಡ ಹಾಗೂ ಐದು ಸಣ್ಣಪ್ರಮಾಣದವು) ಮೂರನೆಯ ಯೋಜನೆಯಂತೆ

ರಾಜ್ಯದಲ್ಲಿ ಕೈಗೊಳ್ಳಲಾಗಿದ್ದು ರಾಜ್ಯದಲ್ಲಿ ನೀರಾವರಿ ಭೂಮಿ 1956ರಲ್ಲಿ ಶೇಕಡ 7 ಇದ್ದುದು 1968ರಲ್ಲಿ ಶೇಕಡ 10ಕ್ಕೆ ಏರಿತು. ಆದರೆ ಈ ಕಾಲದಲ್ಲಿ ಸರಕಾರೀ ನೌಕರರ ಉಗ್ರ ಚಳವಳಿ ನಡೆಯಿತು. ಮುಂದೆ ನ್ಯಾಯಮೂರ್ತಿ ತುಕೋಳ್ ವೇತನ ಆಯೋಗದ ನೇಮಕವಾಯಿತು. ಅಲ್ಲದೆ 1968ರ ಜನವರಿ ಫೆಬ್ರುವರಿತಿಂಗಳು ಗಳಲ್ಲಿ ಉಗ್ರಹಿಂದೀ ವಿರೋಧೀ ಚಳವಳಿ ನಡೆದು ಬೆಂಗಳೂರು, ಮೈಸೂರುಗಳಲ್ಲಿ ಕಾಲೇಜುಗಳನ್ನು ಹಲವು ಬಾರಿ ಮುಚ್ಚಬೇಕಾಗಿ ಬಂತಲ್ಲದೆ ಬೆಂಗಳೂರಲ್ಲಿ ಗೋಲೀ ಬಾರಾಗಿ ಐವರೂ ಮೈಸೂರಲ್ಲಿ ಒಬ್ಬರು ಸತ್ತರು. ಮಹಾರಾಷ್ಟ್ರ-ಕರ್ನಾಟಕ ಗಡಿವಿವಾದ ಉಲ್ಬಣಿಸಿ, ಕರ್ನಾಟಕ ಸರಕಾರದ ವಿರೋಧವನ್ನು ಗಣಿಸದೆ ಕೇಂದ್ರವು 1966ರ ಅಕ್ಟೋಬರ್‌ನಲ್ಲಿ ಮಹಾಜನ್ ಆಯೋಗವನ್ನು ನೇಮಿಸಿತು. ಮುಂದೆ 1967ರಲ್ಲಿ ಅದರ ವರದಿ ಬಂದಾಗ ಕರ್ನಾಟಕಕ್ಕೆ ಅದು ಅನುಕೂಲಕರವಲ್ಲ ವಾದರೂ ಕರ್ನಾಟಕವು ಅದನ್ನು ಒಪ್ಪಿಕೊಂಡರೂ ಅದರ ನೇಮಕಕ್ಕೆ ಒತ್ತಾಯ ಮಾಡಿದ ಮಹಾರಾಷ್ಟ್ರ ಸರಕಾರವೇ ಅದನ್ನು ತಿರಸ್ಕರಿಸಿತು.

1962ರ ಚುನಾವಣೆಯಲ್ಲಿ ಕಾಂಗ್ರೆಸ್ಸು ಹಿಂದಿನ 151ಕ್ಕೆ ಬದಲಾಗಿ 138 ಸ್ಥಾನಗಳನ್ನು ಗೆದ್ದಿತು. ಇಪ್ಪತ್ತು ಸ್ಥಾನಗಳನ್ನು ಗೆದ್ದ ಪ್ರಜಾ ಸಮಾಜವಾದಿ ಪಕ್ಷ ಪ್ರಮುಖ ವಿರೋಧ ಪಕ್ಷವಾಗಿ ಎಸ್. ಶಿವಪ್ಪನವರು ವಿರೋಧ ಪಕ್ಷದ ನಾಯಕರಾದರು. ನಿಜಲಿಂಗಪ್ಪ ಸಂಪುಟದ ಬಗ್ಗೆ ತೀವ್ರ ಭ್ರಷ್ಟಾಚಾರದ ಆಪಾದನೆಗಳನ್ನು ಮಾಡಲಾಯಿತು. ಈ ಪೈಕಿ ಶರಾವತಿ ವಿದ್ಯುದಾಗಾರ ಕಾಮಗಾರಿಯಲ್ಲಿ ಆಯಿತೆನ್ನಲಾದ ಅಪವ್ಯಯದ ಪ್ರಶ್ನೆ ಮುಖ್ಯವಾಗಿದ್ದು, ಮುಂದೆ ಕೇಂದ್ರ ಸರಕಾರವು ಈ ಬಗ್ಗೆ ವಿಚಾರಣೆ ನಡೆಸಿ ನಿಜಲಿಂಗಪ್ಪನವರನ್ನು ದೋಷ ಮುಕ್ತರೆಂದು ಪ್ರಕಟಿಸಿತು. 1967ರ ಚುನಾವಣೆಗೆ ಮೊದಲು ವಿರೋಧ ಪಕ್ಷಗಳು ಒಂದು ಜಂಟಿರಂಗ ರಚಿಸಲು ಪ್ರಯತ್ನಿಸಿ, ಬಹು ಮಟ್ಟಿಗೆ ಯಶಗೊಂಡರು. ಚುನಾವಣೆಗೆ ಮೊದಲು ಅಸ್ತಿತ್ವಕ್ಕೆ ಬಂದ (ಸಾಹುಕಾರ ಚನ್ನಯ್ಯ ಟಿ. ಸುಬ್ರಮಣ್ಯ, ಆರ್. ಶಾಮಣ್ಣ, ಕೆ. ಎಚ್. ಪಾಟೀಲ್, ಅಣ್ಣಾರಾವ್ ಗಣಮುಖಿ ಮುಂತಾದವರು ನಾಯಕರಾಗಿದ್ದ) ಜನತಾ ಪಕ್ಷವೆಂಬ ಹೊಸ ಪಕ್ಷವು 16 ಸ್ಥಾನಗಳನ್ನು, ಸ್ವತಂತ್ರ ಪಕ್ಷವು 16 ಸ್ಥಾನಗಳನ್ನೂ ಪ್ರಜಾಸಮಾಜವಾದಿಗಳು 23 ಸ್ಥಾನಗಳನ್ನೂ ಗೋಪಾಲ ಗೌಡರ ನಾಯಕತ್ವದ ಸಂಯುಕ್ತ ಸಮಾಜವಾದೀ ಪಕ್ಷವು 6 ಸ್ಥಾನಗಳನ್ನೂ ಗೆದ್ದವು. 1952 ರಿಂದ ಚುನಾವಣೆಗಳನ್ನು ಸ್ಪರ್ಧಿಸಿ ವಿಫಲವಾಗುತ್ತ ಬಂದ ಜನಸಂಘವು ಮೊದಲಬಾರಿ ವಿಧಾನಸಭೆಯಲ್ಲಿ 4 ಸ್ಥಾನಗಳನ್ನು ಗೆದ್ದಿತು. 1956ರಲ್ಲಿ ಸ್ಥಾಪನೆಗೊಂಡು 1957 ಮತ್ತು 1962ರಲ್ಲಿ ನಾಲ್ಕು-ನಾಲ್ಕು ಸ್ಥಾನಗಳನ್ನು ಗೆದ್ದಿದ್ದ ಲೋಕ ಸೇವಕ ಸಂಘವು ಈ ಬಾರಿ ಕೇವಲ ಎರಡು ಸ್ಥಾನಗಳನ್ನು ಗೆದ್ದಿತು. ಉತ್ತರ ಕರ್ನಾಟಕದಲ್ಲಿ ಪ್ರಬಲವಾಗಿದ್ದ ಈ ಪಕ್ಷದಿಂದ 1967ರಲ್ಲಿ ಚುನಾಯಿತರಾದವರಲ್ಲಿ ಎಸ್. ಆರ್. ಬೊಮ್ಮಾಯಿ

ಒಬ್ಬರು. ಒಟ್ಟು 216 ಸದಸ್ಯರಿರುವ ವಿಧಾನ ಸಭೆಯಲ್ಲಿ (1967ರಲ್ಲಿ ಚುನಾಯಿತ ಸದಸ್ಯ ಸಂಖ್ಯೆ 208 ರಿಂದ 216ಕ್ಕೆ ಏರಿಸಲಾಗಿತ್ತು) ಕಾಂಗ್ರೆಸ್ಸು ಕೇವಲ 126 ಸ್ಥಾನಗಳನ್ನು ಗೆದ್ದಿತು. 1967ರಲ್ಲಿ ಕರ್ನಾಟಕದಿಂದ ಲೋಕ ಸಭೆಗೆ ವಿರೋಧಪಕ್ಷದ ಒಂಭತ್ತು ಸದಸ್ಯರು ಚುನಾಯಿಸಲ್ಪಟ್ಟಿದ್ದರು. ಈ ಪೈಕಿ ಸ್ವತಂತ್ರ ಪಕ್ಷದವರು ಐವರು. ಇವರಲ್ಲಿ ಜೆ. ಎಂ. ಇಮಾಂ ಮತ್ತು ಲೋಬೋ ಪ್ರಭು ಉಲ್ಲೇಖನೀಯರು. ಇದಕ್ಕೂ ಹಿಂದೆ, 1952 ಹಾಗೂ 1957ರಲ್ಲಿ ತಲಾ ಇಬ್ಬರು ಹಾಗೂ 1962ರಲ್ಲಿ ಕೇವಲ ಒಬ್ಬರು ವಿರೋಧಪಕ್ಷದಿಂದ ಲೋಕಸಭೆಗೆ ಆಯ್ಕೆಗೊಂಡಿದ್ದರು. 1962ರಲ್ಲಿ ಆಯ್ಕೆಗೊಂಡವರು ಲೋಕಸೇವಕ ಸಂಘದ ಅಳವಂಡಿ ಶಿವಮೂರ್ತಿ ಸ್ವಾಮಿ.

1968ರಲ್ಲಿ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾದರು. (1968ರ ಮೇಯಿಂದ 1971ರ ಮಾರ್ಚ್ ವರೆಗೆ) ಮೂರು ವರ್ಷಗಳಿಗೂ ಕಡಿಮೆ ಕಾಲದ ಇವರ ಅಧಿಕಾರಾವಧಿಯ ಅನೇಕ ಮಹತ್ವದ ಸಾಧನೆಗಳಾದುವು. ರಾಜ್ಯದಲ್ಲಿ ಕೈಗಾರಿಕೆಗಳ ಬೆಳವಣಿಗೆಯನ್ನು ಪ್ರೋತ್ಸಾಹಿಸಲು ರಾಜ್ಯದ ಹೊರಗಿನ ಬಂಡವಾಳಕ್ಕೆ ವಿಶೇಷ ಸವಲತ್ತುಗಳನ್ನು ನೀಡಲಾಯಿತು. ಇವರ ಕಾಲಾವಧಿಯಲ್ಲೇ ಆಹಾರ ಧಾನ್ಯಗಳ ಮಟ್ಟಿಗೆ ಅವರೆಗೆ ಕೊರತೆಯ ರಾಜ್ಯವಾಗಿದ್ದ ಕರ್ನಾಟಕವು ಸ್ವಯಂ ಪೂರ್ಣತೆಯನ್ನು ಸಾಧಿಸಿತು. (ರಾಜ್ಯದ ವಾರ್ಷಿಕ ಧಾನ್ಯ ಬಳಕೆ 51 ಲಕ್ಷ ಟನ್ ಆದರೆ, 1971-72ರಲ್ಲಿ 58.72 ಲಕ್ಷ ಟನ್ ಬೆಳೆಯಲಾಗಿತ್ತು.) ಕಾಳೀನದೀ ವಿದ್ಯುತ್ ಯೋಜನೆಗೆ 1970ರಲ್ಲಿ ಅಂತಿಮರೂಪ ಕೊಡಲಾಯಿತು. 1970ರ ಹೊತ್ತಿಗೆ 10,000 ಗ್ರಾಮಗಳಿಗೆ ವಿದ್ಯುತ್ತನ್ನು ಪೂರೈಸಲಾಯಿತು.

1967ರ ಚುನಾವಣೆಯ ನಂತರ ಎಲ್ಲ ವಿರೋಧ ಪಕ್ಷಗಳು ಎಸ್. ಶಿವಪ್ಪನವರ ನಾಯಕತ್ವದಲ್ಲಿ ಸಂಯುಕ್ತ ವಿರೋಧೀ ವಿಧಾಯಕ ದಳ ಎಂಬ ವಿರೋಧೀ ಗುಂಪನ್ನು ವಿಧಾನ ಸಭೆಯಲ್ಲಿ ರಚಿಸಿಕೊಂಡರು. ಅವರಲ್ಲಿ ಸುಮಾರು 90 ಸದಸ್ಯರಿದ್ದರು. ಈ ವಿರೋಧೀ ಗುಂಪು ಹಿಂದಿಗಿಂತಲೂ ಉಗ್ರವಾಗಿ ಆಡಳಿತ ಪಕ್ಷವನ್ನು ಟೀಕಿಸಿ ಆಡಳಿತವನ್ನು ಬಿಗುಗೊಳಿಸಲು ಕಾರಣವಾಯಿತು. 1969ರಲ್ಲಿ ಕಾಂಗ್ರೆಸ್ಸು ವಿಭಜಿತವಾಗಿ, ನಿಜಲಿಂಗಪ್ಪನವರ ನಾಯಕತ್ವವನ್ನು ಪ್ರತಿಭಟಿಸಿ ಇಂದಿರಾಗಾಂಧೀ ಪಕ್ಷದಿಂದ ಹೊರ ನಡೆದಾಗ ವೀರೇಂದ್ರ ಪಾಟೀಲರು ನಿಜಲಿಂಗಪ್ಪನವರ ಪಕ್ಷದಲ್ಲಿ ಉಳಿದರು. ಕರ್ನಾಟಕದಲ್ಲಿ ನಿಜಲಿಂಗಪ್ಪನವರ ನಾಯಕತ್ವದ ಸಂಸ್ಥಾ ಕಾಂಗ್ರೆಸ್ಸು ಅಧಿಕಾರದಲ್ಲಿ ಮುಂದುವರಿಯಿತು. 'ಏಕೀಕರಣದ ನಂತರ ಕರ್ನಾಟಕದಲ್ಲಿ ಲಿಂಗಾಯತರೇ ಮುಖ್ಯಮಂತ್ರಿಗಳಾಗಿ ಆಯ್ಕೆಯಾಗುತ್ತ ರಾಜ್ಯದಲ್ಲಿ ಬಹುದೊಡ್ಡ ಸಂಖ್ಯೆಯ ಕೋಮಾದ ಲಿಂಗಾಯತರಿಗೇ ಆಡಳಿತದಲ್ಲಿ ಅನುಕೂಲವಾಗುತ್ತಿದೆ.

ಅಭಿವೃದ್ಧಿಕಾರ್ಯಗಳೆಲ್ಲ ಉತ್ತರ ಕರ್ನಾಟಕದಲ್ಲೇ ನಡೆಯುತ್ತಿವೆ' ಎಂಬ ಉಗ್ರ ಆಪಾದನೆಗಳು ಈ ಕಾಲದಲ್ಲಿ ಕೇಳಿ ಬಂದವು. ಈ ರೀತಿ ಟೀಕೆ ಮಾಡುತ್ತಲಿದ್ದ ಅನೇಕ ಗುಂಪುಗಳು ಇಂದಿರಾ ಕಾಂಗ್ರೆಸ್ ಸೇರಲು ಮುನ್ನುಗ್ಗಿದರು.

ಇದೇ ಕಾಲದಲ್ಲಿ 1970ರಲ್ಲಿ ವೀರೇಂದ್ರ ಪಾಟೀಲರ ವಿರುದ್ಧ "ಎಕ್ಸ್-ಪೋ ಚಳವಳಿ" ನಡೆಯಿತು. ಜಪಾನ್‌ನಲ್ಲಿ ನಡೆಯುತ್ತಿದ್ದ "ಎಕ್ಸ್‌ಪೋ-70" ಎಂಬ ಭಾರೀ ವಸ್ತುಪ್ರದರ್ಶನವೊಂದಕ್ಕೆ ಕರ್ನಾಟಕದಿಂದ ಕಳುಹಿಸಲು ಒಂದು ತರುಣರ ವೀಕ್ಷಕ ತಂಡಕ್ಕೆ ಸದಸ್ಯರನ್ನು ಆಯ್ಕೆಮಾಡುವಾಗ ಭಾರೀ ಪಕ್ಷಪಾತ ಮಾಡಲಾಗಿದೆ ಎಂಬ ನೆಪದಿಂದ ನಡೆದ ಈ ವಿದ್ಯಾರ್ಥಿ ಚಳವಳಿಯು ತೀರ ಉಗ್ರವಾಗಿ ರಾಜ್ಯವನ್ನೇ ವ್ಯಾಪಿಸಿ ಹಿಂಸಾಚಾರಗಳಿಗೆ ಕೂಡ ಅವಕಾಶಮಾಡಿತು.

1971ರಲ್ಲಿ ಲೋಕಸಭೆಗೆ ನಡೆದ ಮಧ್ಯಕಾಲೀನ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ ಕರ್ನಾಟಕದಲ್ಲಿನ ಎಲ್ಲ 27 ಸ್ಥಾನಗಳನ್ನು ಗಳಿಸಿದ್ದರಿಂದ ಸಂಸ್ಥಾ ಕಾಂಗ್ರೆಸ್ ಬಹುಸಂಖ್ಯೆಯ ಶಾಸನಸಭಾ ಸದಸ್ಯರು ಪಕ್ಷಾಂತರಮಾಡಿ ಇಂದಿರಾ ಕಾಂಗ್ರೆಸ್ ಸೇರಿದರು. ಇದರಿಂದ ಬಹುಮತ ಕಳೆದುಕೊಂಡ ವೀರೇಂದ್ರ ಪಾಟೀಲರು ರಾಜೀನಾಮೆ ಕೊಡಬೇಕಾಗಿ ಬಂತು. ಕರ್ನಾಟಕದಲ್ಲಿ ಒಂದು ವರ್ಷ ರಾಷ್ಟ್ರಪತಿ ಆಡಳಿತ ಬಂದು ಆಗ ರಾಜ್ಯಪಾಲರಾಗಿದ್ದ ಧರ್ಮವೀರ ಆಡಳಿತ ನಿರ್ವಹಿಸಿದರು.

1969ರಲ್ಲಿ ಕಾಂಗ್ರೆಸ್ ವಿಭಜನೆಯಾದಾಗ ಇಂದಿರಾ ಕಾಂಗ್ರೆಸ್ಸಿನ ಸಂಘಟನೆಯ ಜವಾಬ್ದಾರಿಯನ್ನು ಡಿ. ದೇವರಾಜ ಅರಸು ಅವರು ವಹಿಸಿಕೊಂಡರು. ಆಗ ರಾಜ್ಯದಲ್ಲಿದ್ದ ಜನತಾ ಪಕ್ಷ, ಪ್ರಸವಾ, ಸ್ವತಂತ್ರ ಪಕ್ಷ ಹಾಗೂ ಸಂಸೋಪಗಳ ಅನೇಕ ಸದಸ್ಯರು ಹೊಸ ಪಕ್ಷವನ್ನು ಸೇರಿ ಎಚ್. ಸಿದ್ದವೀರಪ್ಪನವರ ನೇತೃತ್ವದಲ್ಲಿ ಹೊಸ ವಿರೋಧ ಪಕ್ಷವನ್ನು ರಚಿಸಿಕೊಂಡರು. 1972ರಲ್ಲಿ ವಿಧಾನಸಭೆಗೆ ಚುನಾವಣೆ ನಡೆದಾಗ ಇಂದಿರಾ ಕಾಂಗ್ರೆಸ್ 165 ಸ್ಥಾನಗಳನ್ನೂ ಸಂಸ್ಥಾ ಕಾಂಗ್ರೆಸ್ 24 ಸ್ಥಾನಗಳನ್ನೂ ಸಂಸೋಪ ಹಾಗೂ ಕಮ್ಯುನಿಸ್ಟ್ ಪಕ್ಷಗಳು ತಲಾ ಮೂರು ಸ್ಥಾನಗಳನ್ನೂ ಗೆದ್ದವು. ಕೊನೆಯ ಪಕ್ಷವು ಇಂದಿರಾ ಕಾಂಗ್ರೆಸ್ ಜೊತೆ ಒಪ್ಪಂದಮಾಡಿ ಚುನಾವಣೆಗೆ ಸ್ಪರ್ಧಿಸಿತ್ತು. ಪ್ರಸವಾ ಪಕ್ಷವು ಅಸ್ತಿತ್ವ ಕಳೆದುಕೊಂಡಿತು. ಲೋಕಸೇವಕ ಸಂಘ ಮತ್ತು ಜನಸಂಘಗಳು ಒಂದು ಸ್ಥಾನವನ್ನೂ ಪಡೆಯಲಿಲ್ಲ. ಆದರೆ ಮುಂದೆ ಪರಿಷತ್ತಿಗೆ ನಡೆದ ಚುನಾವಣೆಗಳಲ್ಲಿ ಜನಸಂಘವು ಪದವೀಧರ ಕ್ಷೇತ್ರದಿಂದ ಕೆಲ ಸ್ಥಾನಗಳನ್ನು ಗೆದ್ದಿತು. ವಿಧಾನಪರಿಷತ್ತಿನಲ್ಲಿ ಸಂಸ್ಥಾ ಕಾಂಗ್ರೆಸ್ಸಿನ ಬಹುಮತ ಕೆಲವು ಕಾಲ ಮುಂದುವರಿಯಿತು. ಟಿ. ಎನ್. ನರಸಿಂಹ ಮೂರ್ತಿ ಪರಿಷತ್ತಿನಲ್ಲಿ ವಿರೋಧಿ ನಾಯಕರಾಗಿದ್ದರು. 1972 ರಲ್ಲಿ ದೇವರಾಜ ಅರಸರು ಮುಖ್ಯಮಂತ್ರಿಗಳಾದರು. ರಾಜ್ಯದಲ್ಲಿನ ಬಹುಸಂಖ್ಯ ಕೋಮಿನವರಾದ ಲಿಂಗಾಯಿತರು ಹಾಗೂ ಒಕ್ಕಲಿಗರ ಮೇಲಾಟಕ್ಕೆ ಉತ್ತರವಾಗಿ ಅಲ್ಪ ಸಂಖ್ಯಾತವರ್ಗಗಳ ಪ್ರಾತಿನಿಧ್ಯ.

ಉಳ್ಳ ಮಂತ್ರಿ ಮಂಡಳ ಇದೆಂದು ಅಭಿಪ್ರಾಯ ಪಡಲಾಯಿತು. ರಾಜ್ಯಕ್ಕೆ ಕರ್ನಾಟಕ ವೆಂದು ನಾಮಕರಣ ಮಾಡಿದ್ದು (1973) ಹಾಗೂ ಕನ್ನಡವನ್ನು ಎಲ್ಲ ಹಂತಗಳ ಹಾಗೂ ಕನ್ನಡವನ್ನೇ ಎಲ್ಲ ಹಂತಗಳ ಆಡಳಿತ ಭಾಷೆಯೆಂದು ಬಳಸಲು ನಿರ್ಣಯಿ ಸಿದ್ದು ಈ ಕಾಲದ ಉಲ್ಲೇಖನೀಯ ಕ್ರಮಗಳು. ಕರ್ನಾಟಕ ಭೂ ಸುಧಾರಣಾ ತಿದ್ದುಪಡಿ ಕಾನೂನನ್ನು ಮಂಜೂರು ಮಾಡಿ (1973) ಎಲ್ಲ ತಾಲ್ಲೂಕುಗಳಲ್ಲಿ ಭೂಮಿಯನ್ನು ಉಳುವವನಿಗೆ ನೀಡುವ ಬಗ್ಗೆ ಕ್ರಮ ಕೈಗೊಳ್ಳಲು ಭೂ ಪಂಚಾ ಯಿತಿಗಳನ್ನು ನೇಮಿಸಿದ್ದು ಈ ಕಾಲದ ಇನ್ನೊಂದು ಗಣ್ಯ ಕ್ರಮ. ಅರಸು ಅವರ ಎಂಟು ವರ್ಷಗಳ ಪ್ರದೀರ್ಘ ಆಡಳಿತಾವಧಿಯಲ್ಲಿ ಇನ್ನೂ ಅನೇಕ ಗಣ್ಯ ಸಾಧನೆ ಗಳಾದವು. ಕಾಳೀ ನದೀ ಜಲವಿದ್ಯುತ್ ಯೋಜನೆಯ ಒಂದು ಹಂತ ಪೂರ್ಣವಾಗಿ ರಾಜ್ಯದಲ್ಲಿ ಒಟ್ಟು 17,000 ಗ್ರಾಮಗಳಿಗೆ ವಿದ್ಯುತ್ ಪೂರೈಕೆಯಾಯಿತು ಅನೇಕ ಗ್ರಾಮಗಳಲ್ಲಿ ಬಡವರ ಮನೆಗೆ ಪುಕ್ಕಟೆ ವಿದ್ಯುತ್ ಪೂರೈಸುವ "ಭಾಗ್ಯ ಜ್ಯೋತಿ" ಯೋಜನೆ ಆರಂಭಿಸಲಾಯಿತು. ಔದ್ಯಮಿಕ ಕ್ಷೇತ್ರದಲ್ಲೂ ಅಪಾರ ಪ್ರಗತಿಯಾಯಿತು. ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ವಿಸ್ತರಿಸಿ ಅದನ್ನು ಒಂದು ಲಾಭ ನೀಡುವ ಉದ್ದಿಮೆಯಾಗಿ ಮಾಡಲಾಯಿತು. ಮಂಡ್ಯ ಜಿಲ್ಲೆಯಲ್ಲಿ ಸ್ಕೂಟರ್ ಮತ್ತು ಟಯರ್ ಕಾರ್ಖಾನೆಗಳು ಹಾಗೂ ರಾಜ್ಯದಲ್ಲಿ ಅನೇಕ ಸಿಮೆಂಟ್ ಮತ್ತು ಸಕ್ಕರೆ ಕಾರ್ಖಾನೆಗಳು ಆರಂಭ ವಾದುವು. ಇರಾನ್‌ನ ನೆರವಿನಿಂದ ಕುದುರೆಮುಖದಲ್ಲಿ ಕಬ್ಬಿಣದ ಅದುರು ಎತ್ತುವ ಬೃಹತ್ ಉದ್ಯಮಕ್ಕೆ ನಾಂದಿಯಾಯಿತು. ವಾರ್ಷಿಕ ಆದಾಯ 4,800 ರೂ.ವರೆಗೆ ಇರುವ ಎಲ್ಲ ಕುಟುಂಬಗಳ ಮಕ್ಕಳಿಗೆ ಮೆಟ್ರಿಕ್‌ವರೆಗೆ ಪುಕ್ಕಟೆ ಶಿಕ್ಷಣ ನೀಡುವ ಸವಲತ್ತು ಜಾರಿಗೆ ತರಲಾಯಿತು. ಬಡವರಿಗೆ ಮನೆಕಟ್ಟಿಕೊಳ್ಳಲು ಮೂರು ಲಕ್ಷ ಉಚಿತ ನಿವೇಶನಗಳನ್ನು ನೀಡಲಾಯಿತಲ್ಲದೆ ಅನೇಕರಿಗೆ ಜನತಾ ಮನೆಗಳನ್ನು ನೀಡಲಾಯಿತು. ಈ ಪೈಕಿ ಹರಿಜನ, ಗಿರಿಜನ ವರ್ಗಗಳಿಗೆ 20,000 ಮನೆಗಳನ್ನು ಕಟ್ಟಿಕೊಡಲಾಯಿತು. ನಾರಾಯಣ ಪೈ ವೇತನ ಆಯೋಗವನ್ನು ನೇಮಿಸಿ ಅದರ ಶಿಫಾರಸುಗಳನ್ನು ಜಾರಿಗೆ ತರಲಾಯಿತು. ರಾಜ್ಯದ ಮೂರೂ ವಿಶ್ವವಿದ್ಯಾಲಯಗಳಿಗೆ ಏಕರೂಪದ ಆಡಳಿತ ವ್ಯವಸ್ಥೆ ತರಲು ಕಾನೂನೊಂದನ್ನು ಜಾರಿಮಾಡಲಾಯಿತು.

ಸರಕಾರೀ ನೌಕರಿ ಮತ್ತು ಶಿಕ್ಷಣ ಸಂಸ್ಥೆಗಳ ಪ್ರವೇಶದಲ್ಲಿ ಹಿಂದುಳಿದವರಿಗೆ ರಕ್ಷಣೆ ಒದಗಿಸಲು ಸೂಕ್ತ ಸೂತ್ರವನ್ನು ನಿರೂಪಿಸಲು ಹಾವನೂರು ಆಯೋಗ ವನ್ನು ನೇಮಿಸಲಾಯಿತು. ಹಿಂದುಳಿದ ವರ್ಗಗಳ 'ಬೈಬಲ್' ಎಂದು ಕರೆಯಲಾದ ಈ ಆಯೋಗದ ವರದಿಗನುಗುಣವಾಗಿ ಹರಿಜನ ಗಿರಿಜನರಿಗಲ್ಲದೆ, ಅನೇಕ ಹಿಂದುಳಿದ ಜಾತಿಯವರಿಗೂ, ಜಾತಿಭೇದವಿಲ್ಲದೆ ಆರ್ಥಿಕವಾಗಿ ಹಿಂದುಳಿದವರಿಗೂ, ಸ್ಥಾನಗಳನ್ನು ಮೀಸಲಿಡುವ ಪದ್ಧತಿ ಜಾರಿಗೆ ಬಂತು. ಇಂದಿರಾ ಗಾಂಧಿಯವರು ಪ್ರಕಟಿಸಿದ ಇಪ್ಪತ್ತಂಶಗಳ ಕಾರ್ಯಕ್ರಮವನ್ನು ಜಾರಿಗೆ ತರುವಲ್ಲಿ ಅರಸು ಸಂಪುಟದ ಅನೇಕ

ಮಹತ್ವದ ಕ್ರಮಗಳನ್ನು ಕೈಗೊಂಡಿತು. ಭೂ ಸುಧಾರಣೆ ಮತ್ತು ಹಾವನೂರು ಆಯೋಗದ ವರದಿಯ ಕಾರ್ಯಾಚರಣೆಯಲ್ಲಿ ಸರಕಾರದ ಕ್ರಮಗಳ ಬಗ್ಗೆ ಉಗ್ರಟೀಕೆ ಬಂದರೂ ಬಹು ಸಂಖ್ಯಾತರ ಬೆಂಬಲವು ಇಂದಿರಾ ಕಾಂಗ್ರೆಸ್ಸಿಗೇ ದೊರೆತು 1977ರ ಚುನಾವಣೆಯಲ್ಲಿ ಆ ಪಕ್ಷವು ಕರ್ನಾಟಕ ದಲ್ಲಿ 28ರಲ್ಲಿ 26 ಸ್ಥಾನಗಳನ್ನು ಗಳಿಸಿತು. ಮುಂದೆ ಚಿಕ್ಕಮಗಳೂರಿನಲ್ಲಿ ಉಪ ಚುನಾವಣೆಗೆ ಸ್ಪರ್ಧಿಸಿ ಇಂದಿರಾ ಗಾಂಧಿಯವರು ಲೋಕಸಭೆಗೆ ಆಯ್ಕೆಗೊಳ್ಳುವುದೂ ಸಾಧ್ಯವಾಯಿತು.

1977ರ ಚುನಾವಣೆಯ ನಂತರ ಇಂದಿರಾ ಕಾಂಗ್ರೆಸ್ಸಿನಲ್ಲಿ ಮತ್ತೆ ಒಡಕಾಗಿ ಕೆ. ಎಚ್. ಪಾಟೀಲರ ನೇತೃತ್ವದಲ್ಲಿ 40ಕ್ಕೂ ಮೇಲ್ಪಟ್ಟು ಶಾಸನಸಭಾ ಸದಸ್ಯರು ಪಕ್ಷ ತ್ಯಜಿಸಿದಾಗ ಇಂದಿರಾ ಪಕ್ಷದ ಅರಸು ಸಂಪುಟವು 1.1.1978ರಂದು ರಾಜೀನಾಮೆ ನೀಡಿ ರಾಜ್ಯದಲ್ಲಿ 55 ದಿನಗಳ ರಾಜ್ಯಪಾಲರ ಆಡಳಿತ ಬಂದು ಗೋವಿಂದ ನಾರಾಯಣರು ಅಧಿಕಾರ ನಿರ್ವಹಿಸಿದರು. ದೀರ್ಘಕಾಲ ಆಡಳಿತ ನಡೆಸಿದ ಅರಸು ಅವರ ಆಡಳಿತದಲ್ಲಿ ಭ್ರಷ್ಟಾಚಾರವು ತೀರ ಹೆಚ್ಚಿತ್ತೆಂದು ತೀವ್ರ ಆಪಾದನೆ ಬಂತು. ಆ ಬಗ್ಗೆ ನೇಮಕಗೊಂಡ ಗ್ರೋವರ್ ಆಯೋಗವು ಇಂಥ ಕೆಲವು ಅಪಾದನೆಗಳು ನಿಜವೆಂದು ಅಭಿಪ್ರಾಯವಿತ್ತಿತು. 1978ರ ಫೆಬ್ರುವರಿಯಲ್ಲಿ ವಿಧಾನಸಭೆಗೆ ಚುನಾವಣೆ ನಡೆದು, ಇಂದಿರಾ ಕಾಂಗ್ರೆಸ್ಸಿಗೆ 151 ಸ್ಥಾನಗಳು ದಕ್ಕಿದವು. ಕೆ. ಎಚ್ ಪಾಟೀಲರು ನಾಯಕರಾಗಿದ್ದ (ಬ್ರಹ್ಮಾನಂದ ರೆಡ್ಡಿ) ಕಾಂಗ್ರೆಸ್ಸು ಕೇವಲ ಎರಡು ಸ್ಥಾನ ಪಡೆಯಿತು. 1977ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಹಾಗೂ ರಾಜ್ಯದಿಂದ ಲೋಕಸಭೆಗೆ ಎರಡು ಸ್ಥಾನಗಳನ್ನು ಗೆದ್ದಿದ್ದ ಜನತಾಪಕ್ಷವು ವಿಧಾನ ಸಭೆಯಲ್ಲಿ 59 ಸ್ಥಾನಗಳನ್ನು ಗೆದ್ದಿತು. ಇಷ್ಟು ಸಂಖ್ಯೆಯಲ್ಲಿ ಒಂದೇ ವಿರೋಧಪಕ್ಷವು ರಾಜ್ಯ ವಿಧಾನಸಭೆಯಲ್ಲಿ ಸ್ಥಾನಗಳನ್ನು ಗೆದ್ದಿರಲಿಲ್ಲ. ವಿಧಾನಸಭೆಯಲ್ಲಿ ಎಚ್. ಡಿ. ದೇವೇಗೌಡರೂ ಪರಿಷತ್ತಿನಲ್ಲಿ ಎ. ಕೆ. ಸುಬ್ಬಯ್ಯನವರೂವಿರೋಧಪಕ್ಷದ ನಾಯಕರಾದರು.

ಇಂದಿರಾ ಕಾಂಗ್ರೆಸ್ಸಿನ ರಾಜ್ಯಶಾಖೆಯ ಅಧ್ಯಕ್ಷತೆಯನ್ನು ತ್ಯಜಿಸಬೇಕೆಂಬ ಆದೇಶವನ್ನು ಉಲ್ಲಂಘಿಸಿ ಮುಖ್ಯಮಂತ್ರಿ ದೇವರಾಜ ಅರಸು ಅವರು 1979ರ ಜೂನ್‌ನಲ್ಲಿ ಇಂದಿರಾ ಕಾಂಗ್ರೆಸ್‌ನಿಂದ ಹೊರಬಿದ್ದರು. ಇದು ಕರ್ನಾಟಕವಲ್ಲಿ ಕಾಂಗ್ರೆಸ್ಸಿನಲ್ಲಿ ನಡೆದ ಮೂರನೆಯ ಒಡಕು. ಬಹುಪಾಲು ಶಾಸಕರು ಅರಸು ಅವರ ಜೊತೆ ಉಳಿದುದರಿಂದ ಅರಸು 1980ರ ಜನವರಿ ವರೆಗೆ ಅಧಿಕಾರವಲ್ಲಿ ಉಳಿದರು. ಅರಸು ಅವರು ಆಗ ಬ್ರಹ್ಮಾನಂದ ರೆಡ್ಡಿಯವರು ನಾಯಕರಾಗಿದ್ದ ಕಾಂಗ್ರೆಸ್ ಪಕ್ಷಸೇರಿ ಅದರ ರಾಷ್ಟ್ರೀಯ ಸಮಾವೇಶವನ್ನು ಬೆಂಗಳೂರಲ್ಲೇ ಕರೆದು ತಾವೇ ಅದರ ಅಖಿಲ ಭಾರತ ಅಧ್ಯಕ್ಷರಾದರು. 1977ರಲ್ಲಿ ಇಂದಿರಾ ಕಾಂಗ್ರೆಸ್ ತ್ಯಜಿಸಿ ಬ್ರಹ್ಮಾನಂದ ರೆಡ್ಡಿಯವರ ಪಕ್ಷ ಸೇರಿದ್ದ ಕರ್ನಾಟಕದ ಬಹುಪಾಲು ಕಾಂಗ್ರೆಸ್ಸಿಗರು (ಕೆ.ಎಚ್. ಪಾಟೀಲ್, ಎಸ್. ಎಂ. ಕೃಷ್ಣ ಇತ್ಯಾದಿ) ಈ ಹೊಸ ಸನ್ನಿವೇಶದಲ್ಲಿ ಇಂದಿರಾ ಕಾಂಗ್ರೆಸ್ ಸೇರಿದರು.

1980ರಲ್ಲಿ ಲೋಕಸಭೆಗೆ ನಡೆದ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ 28ರಲ್ಲಿ 27 ಸ್ಥಾನಗಳನ್ನು ರಾಜ್ಯದಲ್ಲಿ ಗಳಿಸಿ, ಅರಸು ಕಾಂಗ್ರೆಸ್ಸಿನ ಟಿ.ಎ.ಪೈ, ಎಂ. ವಿ. ಕೃಷ್ಣಪ್ಪನವರಂಥ ಗಣ್ಯ ನಾಯಕರು ಠೇವಣಾತಿ ಕಳೆದುಕೊಳ್ಳು ವಂತಾಯಿತು. 1971 ರಲ್ಲಾದಂತೆ, ಮತ್ತೆ ಇತಿಹಾಸ ಪುನಾರಾವರ್ತನೆಯಾಗಿ, ಅರಸು ಅವರ ಜೊತೆಗಿದ್ದ ಶಾಸಕರು ಇಂದಿರಾ ಕಾಂಗ್ರೆಸ್ಸಿಗೆ ಪಕ್ಷಾಂತರಮಾಡಿ, ಜನವರಿ 7 ರಂದು ಅರಸು ಮುಖ್ಯಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟರು. ಆಗ ಶಾಸನ ಸಭೆಯಲ್ಲಿ ಇಂದಿರಾ ಗುಂಪಿನ ನಾಯಕರಾಗಿದ್ದ (ಹಿಂದೆ ಅರಸು ಸಂಪುಟದಲ್ಲಿ ಮಂತ್ರಿಯಾಗಿದ್ದು, 1979ರಲ್ಲಿ ಅರಸು-ಇಂದಿರಾ ವಿರಸವಾದಾಗ ಮಂತ್ರಿಪದವಿಗೆ ರಾಜೀನಾಮೆ ನೀಡಿದ್ದ) ಆರ್. ಗುಂಡೂರಾವ್ 12-1-1980 ರಂದು ಮುಖ್ಯಮಂತ್ರಿಯಾದರು. ಅರಸು ಬೆಂಬಲಿಗರಾಗಿದ್ದವರೂ ಜನತಾ ಪಕ್ಷದ ಅನೇಕ ಶಾಸಕರೂ ಇಂದಿರಾ ಕಾಂಗ್ರೆಸ್ಸಿಗೆ ಸೇರಿಕೊಂಡು, ವಿರೋಧ ಪಕ್ಷವು ಉಭಯ ಸದನಗಳಲ್ಲೂ ತೀರ ಸೊರಗಿದ ಸ್ಥಿತಿಗೆ ಈಗ ಬಂದಿದೆ. ವಿರೋಧ ಪಕ್ಷಗಳ ಜೊತೆ ಆರಂಭದಲ್ಲಿ ಸ್ನೇಹದ ನಿಲುವನ್ನು ತಳೆದ ಗುಂಡೂರಾಯರು ಜನತಾ ಪಕ್ಷದ ಸದಸ್ಯರು ಪರಿಷತ್ತಿನ ಉಪಾಧ್ಯಕ್ಷರಾಗಲು ನೆರವಾದರು. ಜೊತೆಗೆ ತಾವು ಇಂದಿರಾ ಆಶೀರ್ವಾದದಿಂದಲೇ ಅಧಿಕಾರಕ್ಕೆ ಬಂದವರು ಎಂದು ನಮ್ರವಾಗಿ ಹೇಳಿಕೊಂಡರು. ಭೂಪಂಚಾಯ್ತಿಗಳು ತಮ್ಮ ಕೆಲಸವನ್ನು 1981ರ ರಾಜ್ಯೋತ್ಸವದ ಮೊದಲೇ ಮುಗಿಸಬೇಕೆಂದು ನಿರ್ಧರಿಸಿ, ಅಂಥ ಪಂಚಾಯ್ತಿಗಳ ಸಂಖ್ಯೆ ಹೆಚ್ಚಿಸಿದರು. ಅನೇಕ ಪಂಚಾಯ್ತಿಗಳು ಈಗಾಗಲೇ ತಮ್ಮ ಕೆಲಸ ಮುಗಿಸಿದ ವರದಿ ಬಂದಿದ್ದು, ಬಹುಶಃ ಈ ಗುರಿ ಸಾಧ್ಯ ಆಗಬಹುದು. ಮಂಗಳೂರು ಮತ್ತು ಕಲ್ಬುರ್ಗಿಯಲ್ಲಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿದರು (1980). ಆಡಳಿತದಲ್ಲಿ ಚುರುಕು ಹುಟ್ಟಿಸಲು 'ಕಡತಯಜ್ಞ' ಆರಂಭಿಸಿದರು. ತಮಗೆ ಸರಿ ಕಂಡ ಬೇಡಿಕೆಗಳನ್ನು ಸ್ಥಳದಲ್ಲಿಯೇ ಮಾನ್ಯ ಮಾಡುವ ದಿಟ್ಟತನ ತೋರಿದರು.

ಆದರೆ ನಾಡಿನ ಜನಪ್ರಿಯ ಪತ್ರಿಕೆಗಳ ಜೊತೆ ಸರಿಯಾದ ಸಂಬಂಧ ಇಟ್ಟುಕೊಳ್ಳುವಲ್ಲಿ ಮುಖ್ಯಮಂತ್ರಿಗಳು ಸಮರ್ಥರಾಗಿಲ್ಲ. ಪತ್ರಿಕಾಲಯದ ದಿಗ್ಬಂಧನದಂಥ ವಿಚಿತ್ರ ಸನ್ನಿವೇಶಗಳು ಇವರ ಕಾಲದಲ್ಲಿ ಆದುವು. ಹಿಂದಿನ ಸರಕಾರದ ಕೆಲವು ನೀತಿಗಳ ಬಗ್ಗೆ ರೈತರಲ್ಲಿ ಮೂಡಿದ್ದ ಅಸಮಾಧಾನವು ಈ ಕಾಲದಲ್ಲಿ ಸ್ಫೋಟವಾಗಿ ನರಗುಂದದಲ್ಲಿ ಹಿಂಸಾಚಾರ, ಗೋಲಿಬಾರು ಆಯಿತು. 1981ರಲ್ಲಿ ನಿಪ್ಪಾಣಿ, ಶಿವಮೊಗ್ಗಗಳಲ್ಲಿ ಉಗ್ರ ರೈತಚಳುವಳಿ, ಭಾರೀ ರೈತ ಜಾತಾ ಬೆಂಗಳೂರಿಗೆ ಬಂದ ಅಪೂರ್ವ ಘಟನೆ ನಡೆದವು.

ಈ ತರುಣ ಮುಖ್ಯಮಂತ್ರಿಯ ಆಡಳಿತ ಬಗ್ಗೆ ಮೌಲ್ಯ ಮಾಪನಮಾಡಲು ಇನ್ನೂ ಕಾಲಾವಕಾಶಬೇಕು.

ರಾಜ್ಯದ ಇತಿಹಾಸಕ್ಕೆ ಪೂರಕವಾಗುವ ಕೆಲವೊಂದು ಅಂಕಿ ಸಂಖ್ಯೆಗಳನ್ನು ನೀಡಿ ಈ ಸಮೀಕ್ಷೆಯನ್ನು ಪೂರ್ತಿಗೊಳಿಸಬಹುದು. ಕರ್ನಾಟಕದ ಜನಸಂಖ್ಯೆ 1951ರ ಗಣತಿಯಂತೆ 1,94,00,000 ಇದ್ದುದು ಈಗ (1981 ರಲ್ಲಿ) 3,70,00,000 ಆಗಿದೆ. ಸಾಕ್ಷರತೆ ಶೇಕಡಾ ಸುಮಾರು 20 ಇದ್ದುದು (1951) ಈಗ 38.41 ಆಗಿದೆ. ತಲಾ ಸರಾಸರಿ ವಾರ್ಷಿಕ ಆದಾಯ 1956ರಲ್ಲಿ ರೂ. 230 ಇದ್ದು 1978-79 ರಲ್ಲಿ ರೂ. 1,054 ಆಗಿದೆ.. ನೀರಾವರಿ ಭೂಮಿ ಶೇಕಡಾ 7 ಇದ್ದುದು ಶೇಕಡಾ 18ನ್ನು ದಾಟಿದೆ. ಒಟ್ಟು ಆಹಾರ ಧಾನ್ಯ ಉತ್ಪಾದನೆ 1956ರಲ್ಲಿ 32.70 ಲಕ್ಷ ಟನ್ ಇದ್ದುದು 1974-75 ರಲ್ಲಿ 64 ಲಕ್ಷ ಟನ್ ಆಗಿತ್ತು. ರಾಜ್ಯದಲ್ಲಿ 1956ರಲ್ಲಿ 1650 ನೋಂದಾಯಿಸಿದ ಕೈಗಾರಿಕಾ ಘಟಕಗಳು (ಫ್ಯಾಕ್ಟರಿ) ಇದ್ದಲ್ಲಿ 1979ರಲ್ಲಿ ಇವುಗಳ ಸಂಖ್ಯೆ 9000ವನ್ನು ದಾಟಿತ್ತು. ಕರ್ನಾಟಕದ ಪ್ರಗತಿಯಸ್ಥೂಲಚಿತ್ರ ಪಡೆಯಲು ಈ ಅಂಕೆಸಂಖ್ಯೆಗಳು ನೆರವಾಗ ಬಹುದೇನೋ.

ಭಾವೈಕ್ಯ ಸಾಧನೆ

ಎಂ. ವಿ. ಸೀತಾರಾಮಯ್ಯ

ಭಾವೈಕ್ಯ ಎಂದ ಕೂಡಲೆ ರಾಷ್ಟ್ರಮಟ್ಟದಲ್ಲಿ ಬಳಕೆಯಾಗುತ್ತಿರುವ emotional integration ಎಂಬ ಮಾತು ತಟ್ಟನೆ ನಮ್ಮ ನೆನಪಿಗೆ ಬರುತ್ತದೆ. ಭಾವವೆಂದರೆ ಚಿತ್ತವೃತ್ತಿ. ಭಾವ ಮನಸ್ಸಿನ ಸ್ವಾಭಾವಿಕ ವಿಕಾರ. ಈ ಮೂಲಭೂತವಾದ ಚಿತ್ತವೃತ್ತಿಗಳು ಎಂಟೆಂದು ನಾಟ್ಯಶಾಸ್ತ್ರಕಾರನಾದ ಭರತನ ಮತ.

ನಮ್ಮ ನಿತ್ಯ ಜೀವನದಲ್ಲಿ ಒಂದಲ್ಲ ಒಂದು ರೀತಿಯಲ್ಲಿ. ಸಂದರ್ಭಕ್ಕೆ ಅನುಗುಣವಾಗಿ. ಚಿತ್ತವೃತ್ತಿಗಳು ನಮ್ಮಲ್ಲಿ ಪ್ರಕಟಗೊಳ್ಳುತ್ತಲೇ ಇರುತ್ತವೆ. ಒಡವೆ ವಸ್ತ್ರಗಳನ್ನು ಸಕಾಲದಲ್ಲಿ ಒಪ್ಪಿಸಿ ಕೈಹಿಡಿದಾಕೆಯನ್ನು ಪ್ರಸನ್ನಗೊಳಿಸುವುದರಲ್ಲಿ ಕೊರತೆಯಾದರೆ ಕೈಹಿಡಿದಾಕೆ ಮುನಿಸಿಕೊಳ್ಳುವುದು ಎಲ್ಲ ಸದ್ಗೃಹಸ್ಥರ ಅನುಭವಕ್ಕೂ ಬಂದ ವಿಷಯ. ಅರಸಾದರೂ ಅಷ್ಟೆ, ಆಳಾದರೂ ಅಷ್ಟೆ. ಸಚಿವನೂ ಒಂದೇ ಸೇವಕನೂ ಒಂದೆ. ಮಕ್ಕಳು ಅವಿಧೇಯವಾಗಿ ನಡೆದುಕೊಂಡಾಗ ಸಿಟ್ಟಿದ್ದು ದಂಡಿಸದೆ ಇರುತ್ತೇವೆಯೇ ? ಟಾರು ರಸ್ತೆಯ ಮೇಲೆ ಬಾಳೇ ಹಣ್ಣಿ ಸಿಪ್ಪೆ ಮೆಟ್ಟಿ ಜಾರಿಬಿದ್ದ ಮುದುಕಿಯನ್ನು ಕಂಡು 'ಅಯ್ಯೋ ಪಾಪ' ಎಂದರೆ, ಒಬ್ಬ ಪೋಕಿಲಾಲ ಹಾಗೆ ಜಾರಿ ಬಿದ್ದಾಗ ನಮ್ಮ ನಗುವಿಗೆ ಸೌಜನ್ಯ ಅಡ್ಡ ಬಂದೀತೆ ? ಈ ಭಾವ ಪ್ರದರ್ಶನಗಳೆಲ್ಲವೂ ಮನುಷ್ಯ ಪ್ರಾಣಿಗೆ ಸಹಜವಾದವು : ಸಮಾನವಾದವು. ಈ ಬಗೆಯ ಭಾವಪ್ರದರ್ಶನ (ಮನೋವಿಜ್ಞಾನಿಗಳ ಅಭಿಪ್ರಾಯದಂತೆ ಕೂಡ) ಚಿತ್ತಸ್ವಾಸ್ಥ್ಯಕ್ಕೆ ನಿಸರ್ಗ ಏರ್ಪಡಿಸಿರುವ 'ತೂಬು.'

ಕುಟುಂಬ ಜೀವನದಲ್ಲಿಯೇ ಆಗಲಿ ಸಾಮಾಜಿಕ ಜೀವನದಲ್ಲಿಯೇ ಆಗಲಿ ಭಾವ ಪ್ರಕಟನ ಸಹಜವಾದರೂ ಒಂದು ಎಲ್ಲೆಕಟ್ಟನ್ನು ಮೀರಿದಾಗ ಅದು ಅಸ್ವಾಭಾವಿಕವಾಗಬಹುದು. ವ್ಯಕ್ತಿಗತವಾಗಿ ಸಾಮೂಹಿಕವಾಗಿ ಅಹಿತಕರವಾಗಬಹುದು ; ಅಪಾಯದ ಸ್ಥಿತಿಯನ್ನೂ ಮುಟ್ಟಬಹುದು. ಹೀಗೆ ಅತಿರೇಕಕ್ಕೆ ಹೋಗಬಹುದಾದ ಭಾವಗಳನ್ನು ಪ್ರಾಚೀನ ಶಾಸ್ತ್ರಕಾರರು ಆರು ಎಂದು ಹೇಳಿ ಅವು 'ಅರಿಷಡ್ವರ್ಗ' ಎಂದು ಎಚ್ಚರಿಕೆ ನೀಡಿದರು. ಕಾಮ ಕ್ರೋಧ ಲೋಭ ಮೋಹ ಮದಮಾತ್ಸರ್ಯ—ಇವೇ ಅರಿಷಡ್ವರ್ಗ ಎಂದು ಪ್ರಸಿದ್ಧವಾಗಿರುವುದು. ಮನುಷ್ಯ ಆರುಕುದುರೆ ಸಾರೋಟು ; ಇಂದ್ರಿಯನಿಗ್ರಹ ಅಥವಾಮನೋ ನಿಗ್ರಹ ಎಂಬ

ಕಡಿವಾಣ ಬಿಗಿದ ಲಗಾಮು ಹಿಡಿದು ಆರು ಕುದುರೆ ಸಾರೋಟನ್ನು ಎಚ್ಚರಿಕೆಯಿಂದ ನಡಸದೆ ಹೋದರೆ ಸಾರೋಟು ಮಗುಚಿ ಬಿದ್ದು, ಪ್ರಯಾಣ ನಿಂತುಹೋಗುವುದು ; ಅಂತ್ಯಗೊಳ್ಳಲೂಬಹುದು.

ಪ್ರಸ್ತುತ ನಮ್ಮ ರಾಷ್ಟ್ರದ, ವಿಶೇಷವಾಗಿ ಭಾರತಾಂತರ್ಗತವಾದ ಕರ್ನಾಟಕದ ಈ ಭಾವ ಸ್ವರೂಪದ ಹಿನ್ನೆಲೆಯಲ್ಲಿ, ಜನಜೀವನದಲ್ಲಿ ಭಾರತ ಭಾವೈಕ್ಯದ ಸಾಧನೆ ಎಷ್ಟರಮಟ್ಟಿಗೆ ಆಗಿದೆ ? ಸಾಧನೆ ಆಗಿರದಿದ್ದರೆ ಅದು ಸಿದ್ಧಿಸಲು ನಾವು ಕೈಗೊಳ್ಳಬೇಕಾದ ಕರ್ತವ್ಯ ಯಾವುದು? ಎನ್ನುವುದನ್ನು ವಿಚಾರಮಾಡಬಹುದು.

ಈ ಮೊದಲೆ ಹೇಳಿದಂತೆ, 'ಭಾವ' ಆಂತರಿಕವಾದುದು. ನಾವು ವಾಸ ಮಾಡುವ ನೆಲ, ಅಥವಾ ನಾಡು; ನಾವು ಆಡುವ ನುಡಿ ; ನಾವು ಅನುಸರಿಸುವ ಮತ ಧರ್ಮ ; ಮತಧರ್ಮಕ್ಕೆ ಅನುಗುಣವಾದ ಆಚಾರ-ವಿಚಾರ, ನಂಬಿಕೆ, ನಡೆವಳಿ- ಇವೆಲ್ಲ ಬಾಹ್ಯ. ಭಾರತೀಯರ, ಕನ್ನಡಿಗರ, ಜನಜೀವನದಲ್ಲಿ ಈ ಬಾಹ್ಯಾಭ್ಯಂತರ ಸಾಧನಗಳು ಏಕೋಭಾವಕ್ಕೆ ಪೂರಕವಾಗಿ, ಕೆಲವೊಮ್ಮೆ ಪೂರಕವಾಗಿ, ಪರಿಣಮಿಸಿವೆ.

ಭರತ ಖಂಡದಲ್ಲಿ ವಾಸಿಸುವ ನಾವೆಲ್ಲರೂ ಒಂದು ಎಂಬ ಭಾವನೆ ವೇದೋಪನಿಷತ್ತುಗಳ ಕಾಲದಿಂದ ತೊಡಗಿ ಬಲುಮಟ್ಟಿಗೆ ಇಂದಿನವರೆಗೂ ಬೆಳೆದು ಬಂದು ಜನಮನದಲ್ಲಿ ಸುಭದ್ರವಾಗಿ ನೆಲೆ ನಿಂತಿದೆ ಎಂದು ಹೇಳಬಹುದು. ಇದಕ್ಕೆ ಬಲವಾದ ಆಸರೆ ಭೌಗೋಳಿಕ ಸಂದರ್ಭ. ಭಾರತಕ್ಕೆ ಮಾತ್ರವಲ್ಲ, ಅನೇಕ ದೇಶಗಳಿಗೆ ಅನ್ವಯಿಸ ತಕ್ಕ ಮಾತು ಇದು. ಒಂದುತನದ ಎಣಿಕೆಗೆ ಭೌಗೋಳಿಕ ಸಂದರ್ಭ ಅನುಕೂಲವಾಗಿದ್ದರೂ ವಿಭಿನ್ನ ರಾಜ್ಯಾಡಳಿತಗಳು ವಿಚ್ಛಿದ್ರತೆಗೆ ಕಾರಣವಾಗಬಹುದು. ರಾಮಾಯಣ ಕಾಲದಿಂದ ತೊಡಗಿ ಇತಿಹಾಸ ಕಾಲವಲ್ಲಿ ಗುಪ್ತವಂಶದವರೆಗೂ ಪ್ರಚುರವಾಗಿ ಅಶ್ವಮೇಧಯಾಗದ ಆಚರಣೆ, ಚಕ್ರವರ್ತಿ ಸಾರ್ವಭೌಮತ್ವವನ್ನು ಸ್ಥಾಪಿಸಲು ಕೈಗೊಳ್ಳುತ್ತಿದ್ದ ದಿಗ್ವಿಜಯಗಳು—ಇವುಗಳ ಹಿಂದೆ ಏಕತೆಯನ್ನು ಸಾಧಿಸುವ ಮೂಲೋದ್ದೇಶವನ್ನು ಗುರುತಿಸಬಹುದು. ಕನ್ನಡ ನಾಡಿನ ಮಟ್ಟಿಗೆ ಹೇಳುವುದಾದರೆ, ರಾಷ್ಟ್ರಕೂಟರ 3ನೆಯ ಗೋವಿಂದನ ಕಾಲದಲ್ಲಿ ಕನ್ನಡನಾಡು ಮೊತ್ತ ಮೊದಲಿಗೆ ಉತ್ತರ ದಿಗ್ವಿಜಯವನ್ನು ಸಾಧಿಸಿತು. ಅವನಷ್ಟೇ ಪ್ರತಾಪಶಾಲಿಯಾದ ಅಮೋಘವರ್ಷ ನೃಪತುಂಗನು ಚಿಕ್ಕಂದಿನಿಂದಲೇ ರಾಜ್ಯಭಾರ ವಹಿಸಿಕೊಳ್ಳಬೇಕಾಗಿ ಬಂದರೂ ತನ್ನ ಚಿಕ್ಕಪ್ಪ ಕರ್ಕ (ಈತನೇ ಶಾಸನೋಕ್ತ ಪಾತಳ ಮಲ್ಲನಿರಬಹುದೆ?) ಹಾಗೂ ಸಮರ್ಥ ಮಂತ್ರಿ ಬಂಕರಸ (ಅಥವಾ ಬಂಕೆಯ), ಇಂಥವರ ನೆರವಿನಿಂದ ಒಳ-ಹೊರ-ಹಗೆಗಳನ್ನು ಜಯಿಸಿ, "ಕಾವೇರಿಯಿಂದಂ ಆ ಗೋದಾವರಿ ವರಮಿರ್ಪ ನಾಡಾದಾ ಕನ್ನಡದೊಳ್ ಭಾವಿಸಿದ ಜನಪದಂ, ವಸುಧಾ ವಲಯ ವಿಲೀನ ವಿಶ್ವದ ವಿಶೇಷಂ" ಎಂದು ತನ್ನ ಕಾಲದ ಭಾಷೋಪಲಕ್ಷಿತ ಭೌಗೋಳಿಕ ಎಲ್ಲೆ ಕಟ್ಟನ್ನು

ಗಟ್ಟಿಯಾಗಿ ಗುರುತಿಸಿ, ಕನ್ನಡದ ಭಾವೈಕ್ಯಕ್ಕೆ ಬುನಾದಿ ಹಾಕಿದನು. ಆ ವೇಳೆಗಾಗಲೇ ಸಂಸ್ಕೃತ ಭಾರತದ ಸಾರ್ವದೇಶೀಯ, ಸಾರ್ವಜನೀಯ ಭಾಷೆಯಾಗಿ ನೆಲೆಗೊಂಡಿತ್ತು. ಕನ್ನಡವೂ ಸೇರಿದಂತೆ ದಕ್ಷಿಣದ ದ್ರಾವಿಡ ವರ್ಗದ ಜಾನಪದದ ದೇಸಿನುಡಿಗಳ ಮೇಲೆ ತನ್ನ ವರ್ಚಸ್ಸನ್ನು ಪ್ರಬಲವಾಗಿ ಬೀರಿತ್ತು. ಸಂಸ್ಕೃತ ಭೂಯಿಷ್ಠವಾದ ಹಲ್ಮಿಡಿಯ ಶಾಸನ (ಸು. 450), ನೃಪತುಂಗನ ಕಾಲದವರೆಗೂ ಮತ್ತು ಈಚೆಗೂ ಬಹುತರ ಶಾಸನಗಳು ಸಂಸ್ಕೃತದಲ್ಲಿರುವುದು. ಸಂಸ್ಕೃತವೇ ಮೇಲುಗೈಯಾಗಿತ್ತೆಂಬುದನ್ನು ಸಾರಿ ಹೇಳುತ್ತವೆ. ನೃಪತುಂಗ ಪೂರ್ವಯುಗದಲ್ಲಿ ಕನ್ನಡ ಗದ್ಯಪದ್ಯ ಕವಿಗಳು ಆಗಿಹೋಗಿದ್ದರೂ ಯಾವ ಕಾರಣದಿಂದಲೋ ಏನೋ ಆ ಕನ್ನಡ ಕೃತಿಗಳು ಕಾಲಗರ್ಭದಲ್ಲಿ ಜೀರ್ಣವಾಗಿ ಹೋಗಿದ್ದವು. ಕನ್ನಡ ಜಾನಪದರೇನೋ "ಕುರಿತೋದದೆಯುಂ (ಕನ್ನಡ)[1] ಕಾವ್ಯಪ್ರಯೋಗ ಪರಿಣತಮತಿಗಳ್" ಆಗಿದ್ದರು ; ಕನ್ನಡ ನುಡಿಯೊಲವಿನ ವಿಷಯದಲ್ಲಿ ಅತ್ಯುಗ್ರರ್ ಕೂಡ ಆಗಿದ್ದಿರಬೇಕು. ನೃಪತುಂಗ ಸಂಸ್ಕೃತ ದ್ವೇಷಿಯೇನೂ ಆಗಿರಲಿಲ್ಲ. ಅವನ ಆ ಸ್ಥಾನದಲ್ಲಿ ಆಶ್ರಯ ಪಡೆದಿದ್ದ ಜಿನಸೇನ, ಮಹಾವೀರ, ಗುಣಭದ್ರ, ಶಾಕಟಾಯನ, ಈ ಜೈನ ಲೇಖಕರುಗಳ ಕೃತಿಗಳೆಲ್ಲವೂ ಸಂಸ್ಕೃತದಲ್ಲಿವೆ ಎನ್ನುವುದು ಗಮನಾರ್ಹ ನೃಪತುಂಗನೇ ಬರೆದಿರುವನೆಂದು ಹೇಳಲಾದ "ಪ್ರಶ್ನೋತ್ತರ" ರತ್ನಮಾಲಿಕೆ ಕೂಡ ಸಂಸ್ಕೃತದಲ್ಲಿರುವುದನ್ನು ಗಮನಿಸಬಹುದು. ನೃಪತುಂಗನ ಆಡಳಿತ ಕಾಲದಲ್ಲಿ ಕನ್ನಡ ಸಾಹಿತ್ಯ ಸೃಷ್ಟಿಕಾರ್ಯ ನಿಂತೇಹೋಗಿತ್ತೆಂದು ಕಾಣುತ್ತದೆ. ಅದಕ್ಕೆ ಉತ್ತೇಜನ ಮತ್ತು ಮಾರ್ಗದರ್ಶನ ನೀಡುವ ಸಲುವಾಗಿಯೇ ಅತ ತನ್ನ ಸಭಾಸದ ಶ್ರೀವಿಜಯನಿಂದ ಕವಿರಾಜಮಾರ್ಗವನ್ನು ಬರೆಸಿದ್ದು. ಕವಿರಾಜಮಾರ್ಗಕಾರನಾದ ಶ್ರೀವಿಜಯ 'ರಘುವಂಶ ಮಹಾಪುರಾಣ'ವನ್ನು ರಚಿಸಿರುವನೆಂದು ಈಗ ಖಚಿತವಾಗಿ ತಿಳಿದು ಬಂದಿದೆ. ಅವನು 'ಚಂದ್ರ ಪ್ರಭಾಪುರಾಣ', 'ನೃಪತುಂಗಾಭ್ಯುದಯ' ಎಂಬ ಕಾವ್ಯಗಳನ್ನೂ ರಚಿಸಿದ್ದರಬೇಕು ಎಂದು ಊಹಿಸಲು ಅವಕಾಶವಿದೆ. ಹೀಗೆ, ರಾಜಾಶ್ರಯದಲ್ಲಿ ಕನ್ನಡ ಕಾವ್ಯಸೃಷ್ಟಿಗೆ ಶ್ರೀಕಾರ ಹಾಕಿದವನು ಶ್ರೀವಿಜಯ. ಈ ರಾಜಾಶ್ರಯ ನೀಡಿಕೆಯ ಪದ್ಧತಿ ಮೈಸೂರು ಒಡೆಯರ ಕಾಲದ ಉದ್ದಕ್ಕೂ ಅಡೆತಡೆ ಇಲ್ಲದೆ ಸಾಗಿಬಂತು. ಅಂದಿನಿಂದ ಇಂದಿನ ತನಕ ಕನ್ನಡಿಗರನ್ನು ಭಾವಾತ್ಮಕವಾಗಿ ಒಂದುಗೂಡಿಸಿರುವುದು ಕನ್ನಡ ಭಾಷೆ ; ಈ ಭಾಷೆಯನ್ನು ಆಡುಭಾಷೆಯಾಗಿ ಮಾತ್ರವಲ್ಲದೆ ಸಾಹಿತ್ಯದ ಭಾಷೆಯಾಗಿ, ಜೀವಂತವಾಗಿ ಉಳಿಸಿ ಬೆಳೆಸುವುದು ಅವರಲ್ಲಿ ನಿರ್ಮಾಣವಾಗಿರುವ ವಿಪುಲ ಸಾಹಿತ್ಯ ಸಂಪತ್ತು.

ಕವಿರಾಜಮಾರ್ಗದ ಕೆಲವು ವಿದ್ಯಮಾನಗಳು ಇಂದಿಗೂ ಪ್ರಸ್ತುತವಾಗಿರುವುದರಿಂದ, ಭೂತದ ನೆರಳು ವರ್ತಮಾನದ ಅಂಚನ್ನು ಸೋಕಿಕೊಂಡೇ ಇರುವುದರಿಂದ,

---

1. ಕಂಸಗಳ ನಡುವಣ ಮಾತು ನನ್ನದು

ಈ ಬಗೆಗೆ ಈವರೆಗೆ ಪ್ರಸ್ತಾಪಿಸಿರುವುದಾಗಿದೆ. ಅಂದು ತಲೆದೋರಿದ ಕನ್ನಡ-ಸಂಸ್ಕೃತಗಳ ಒರಸೊರಸು ಇಂದು ಇಲ್ಲ ಎನ್ನಲಾಗದು. ಸಂಸ್ಕೃತ ಪ್ರೇಮಿಗಳು ಕನ್ನಡದ ಹಿತಕ್ಕೆ ಅಡ್ಡಿಯಾದಾಗಲೆಲ್ಲ ಕವಿಗಳು ಸಿಡಿದೆದ್ದಿದ್ದಾರೆ. ಕನ್ನಡಿಗರು (ತೆಲುಗರಂತೆಯೇ) ಸಂಸ್ಕೃತ ದ್ವೇಷಿಗಳಲ್ಲ ಎನ್ನುವುದಕ್ಕೆ ಕನ್ನಡದ ವ್ಯಾಕರಣ ಶಾಸ್ತ್ರಕಾರರೂ ಕವಿಗಳೂ ಕನ್ನಡ ಬರಹದಲ್ಲಿ ತತ್ಸಮ-ತದ್ಭವ ಶಬ್ದಗಳಿಗೆ ಹೆಬ್ಬಾಗಿಲು ತೆರೆದುಕೊಟ್ಟಿರುವುದೇ ನಿದರ್ಶನವಲ್ಲವೆ? ಪ್ರಾಚೀನ ಕವಿಗಳು ಕೂಡ, ಎಲ್ಲರೂ ಅಲ್ಲದಿದ್ದರೂ ಅಗ್ರಪಂಕ್ತಿಯ ಅನೇಕ ಕವಿಗಳು, ಉಭಯ ವ್ಯಾಕರಣ ಪಂಡಿತರು ; ಉಭಯ ಕವಿಗಳು. ಸಹಿಷ್ಣುತೆ ಭಾವೈಕ್ಯದ ಅಡಿಗಲ್ಲು ; ಭಾವೈಕ್ಯ ಎಂಬ ಮಾತಿನಲ್ಲಿಯೆ ಬಾಹ್ಯದಲ್ಲಿ ನೂರುಭೇದಗಳಿದ್ದರೂ ಆಂತರಿಕವಾಗಿ ಐಕ್ಯ ಸಾಧ್ಯವಾಗಬೇಕು ಎಂಬ ಧ್ವನಿ ಇದೆ. ಭಾವ ಪ್ರತಿಬಿಂಬನಕ್ಕೆ ನುಡಿಯೊಂದೇ ಸಾಧನ. ಕನ್ನಡಿಗರ ಭಾವೈಕ್ಯಕ್ಕೆ ಕನ್ನಡತನವೊಂದೇ ಪ್ರಬಲವಾದ, ಮುಖ್ಯವಾದ ಸಾಧನ. ಯಾವುದೋ ಆಮಿಷಕ್ಕೆ ಬಲಿಯಾಗಿ ಕನ್ನಡತನವನ್ನು ಬಿಟ್ಟುಕೊಟ್ಟು ಹೆರನುಡಿಗೆ-ಅದು ಸಕ್ಕದವಾಗಬಹುದು, ಹಿಂದಿ ಆಗಬಹುದು, ಇಂಗ್ಲಿಷಾಗಬಹುದು—ಮನತೆತ್ತರೆ, ಕನ್ನಡಿಗರಲ್ಲಿ ಭಾವೈಕ್ಯಸಿದ್ಧಿಸದು. ಪ್ರಾಚೀನಯುಗದಲ್ಲಿ ಹಿಂದಿ ಇಂಗ್ಲಿಷುಗಳ ಪ್ರಸಕ್ತಿ ಇರಲಿಲ್ಲ. ಸಂಸ್ಕೃತದ ಪ್ರಭಾವ ಎಲ್ಲೆ ಮೀರಿದಾಗ ಮಾತ್ರ ಕನ್ನಡ ಹೆಡೆಯೆತ್ತಿ ಬುಸುಗುಟ್ಟುತ್ತಿತ್ತು. ಇಂದಾದರೂ ಅಷ್ಟೆ. ಶಿಕ್ಷಣ ವ್ಯವಸ್ಥೆಯಲ್ಲಿ ಸಂಸ್ಕೃತವನ್ನು ಚೆನ್ನಾಗಿ ಅಭ್ಯಾಸ ಮಾಡುವ, ಅಭ್ಯಾಸ ಮಾಡಿಸುವ ದೃಷ್ಟಿಯಿಂದ ಹೊರತಾದ ಅನ್ಯ ಕಾರಣಗಳಿಗಾಗಿ ಸಂಸ್ಕೃತವನ್ನು ಎತ್ತಿ ಹಿಡಿಯುವ ಜನರೇ ಸಂಸ್ಕೃತೋದ್ಧಾರ ಚಳವಳಿಯ ನಾಯಕರು. ಒಟ್ಟಾರೆ ಕನ್ನಡಿಗರ ಮನಸ್ಸು ಹೇಗೋ ನಾನರಿಯೆ. ನನ್ನ ಸ್ವಂತ ಅಭಿಪ್ರಾಯವಾಗಿ ಒಂದು ಅಡ್ಡಮಾತನ್ನು ಆಡಬಹುದಾದರೆ, ಅಖಂಡ ಭಾರತದ ಎಲ್ಲ ಪ್ರದೇಶಗಳಲ್ಲೂ ಹೆಚ್ಚಾಗಿಯೋ ಕಡಮೆಯಾಗಿಯೋ ಸಲುವಳಿಯಲ್ಲಿರುವ, ಎಲ್ಲ ಪ್ರಾದೇಶಿಕ ಭಾಷೆಗಳೊಂದಿಗೂ ಮಾತೃ ಸಂಬಂಧವನ್ನೋ ಇಲ್ಲವೆ ದಾತೃಸಂಬಂಧವನ್ನೋ ಅನಾದಿ ಕಾಲದಿಂದ—ಹಿಂದಿ, ಇಂಗ್ಲಿಷುಗಳು ಪ್ರಾಮುಖ್ಯಕ್ಕೆ ಬರುವ ಸಂಭವದ ಸುಳಿವೂ ಇಲ್ಲದಿದ್ದ ಕಾಲದಿಂದ—ಅತ್ಯಂತ ನಿಕಟವಾಗಿ ಹೊಂದಿರುವ ಸಂಸ್ಕೃತವನ್ನು ಯಾವ ಭಾರತೀಯನೂ (ಕನ್ನಡಿಗನೂ ಭಾರತೀಯನಷ್ಟೆ !) ದ್ವೇಷಿಸಿ ತಿರಸ್ಕರಿಸಲಾರ ; ತಿರಸ್ಕರಿಸ ಸಲ್ಲ. ಕನ್ನಡಕ್ಕೂ ಸಂಸ್ಕೃತಕ್ಕೂ ರಕ್ತಸಂಬಂಧ ಇಲ್ಲದಿರಬಹುದು. ಆದರದು ಎಂದಿನಿಂದಲೂ ರಕ್ತದಾನ ಮಾಡುತ್ತ ಬಂದಿದೆ. ಕನ್ನಡ ರಕ್ತಹೀನತೆಯಿಂದ ನರಳದಿರಬೇಕಾದರೆ ಇಂದಿಗೂ ಅದರ ನೆರವು ಬೇಕೇಬೇಕು. ಒಂದು ಸತ್ತ್ವ ಪರೀಕ್ಷೆ ಮಾಡಬಹುದು : ಅಖಿಲಭಾರತ ಸಂಪರ್ಕ ಭಾಷೆಯಾಗಿ ಇಂಗ್ಲಿಷು, ಹಿಂದಿ, ಸಂಸ್ಕೃತ ಈ ಮೂರರಲ್ಲಿ ಯಾವುದು ಬೇಕು ಎಂಬ ಬಗ್ಗೆ ಸ್ಥಾನನಿರ್ದೇಶ ಸಹಿತವಾದ ಸಾರ್ವಜನಿಕಾಭಿಪ್ರಾಯವನ್ನು ಪಡೆಯುವ ವ್ಯವಸ್ಥೆಮಾಡಲಿ ; ಸಂಸ್ಕೃತ, ಇಂಗ್ಲಿಷು, ಹಿಂದಿ ಈ ಕ್ರಮದಲ್ಲಿ ಸಾರ್ವಜನಿಕಾಭಿಪ್ರಾಯ ಮೂಡುತ್ತದೆ ಎಂದು ನನಗನ್ನಿಸುತ್ತದೆ. ಕನ್ನಡಿಗರಲ್ಲಿ ಭಾವೈಕ್ಯ ನಿಚ್ಚಹಸುರಾಗಿ ಬಣ್ಣಗೆಡದೆ ಬದುಕಬೇಕಾದರೆ ಜನರ ಬದುಕಿನ ಎಲ್ಲ ರಂಗಗಳಲ್ಲೂ ಕನ್ನಡ ನಾಡಿನೆತ್ತರಾಗಿ ಹರಿದಾಡುತ್ತಿರಬೇಕು.

ಅಜೀರ್ಣದ ಕನವರಿಕೆಯ ಘೋಷಣೆಗಳಿಂದ ಅದು ಸಿದ್ಧಿಸದು ; ಎಚ್ಚರದ ಚೆಚ್ಚರದ ಚಟುವಟಿಕೆಯಿಂದ ಮಾತ್ರ ಅದು ಸಾಧ್ಯ. ಹೆಚ್ಚು ಹೇಳಿ, ಪ್ರಯೋಜನ ಏನು ? ಒಂದು ಮಾತಿನಲ್ಲಿ, ಕನ್ನಡಿಗರ, ಆಂತರಿಕ ಭಾವೈಕ್ಯ ಸಾಧನೆಗೆ ಕನ್ನಡವೇ ತಾರಕಮಂತ್ರ; ಸಂಸ್ಕೃತವಲ್ಲ, ಹಿಂದಿಯಲ್ಲ, ಇಂಗ್ಲಿಷು ಅಲ್ಲವೇ ಅಲ್ಲ. ಈ ದಿಸೆಯಲ್ಲಿ, ಸರ್ಕಾರದ ಹೊಣೆಗಾರಿಕೆ ಮಾತ್ರವಲ್ಲ ಪ್ರತಿಯೊಬ್ಬ ಕನ್ನಡ ಪ್ರಜೆಯ ಹೊಣೆಗಾರಿಕೆಯೂ ಇದೆ. ಹುಟ್ಟು ಕನ್ನಡಿಗ ಅಲ್ಲದ ಪ್ರತಿಯೊಬ್ಬನೂ (ಳೂ) ತಾನು ಕನ್ನಡ ಪ್ರಜೆ ಎಂದು ಅರಿತು ನುಡಿಯಬೇಕು, ನಡೆಯಬೇಕು. ನಮ್ಮ ಸರ್ಕಾರ ಈ ನಿಟ್ಟಿನಲ್ಲಿ ಕಾರ್ಯಾ ರಂಭಮಾಡಿದೆ ; ಆದರೆ ಆಗಬೇಕಾದ ಕಾರ್ಯಬಹಳಷ್ಟಿದೆ. ನ್ಯಾಯಾಲಯಗಳು ಕನ್ನಡದಲ್ಲಿ ತೀರ್ಪುಕೊಡಲು ಉತ್ತೇಜನ ನೀಡುತ್ತಿರುವುದು ಭಾವೈಕ್ಯ ಸಾಧನೆಗೆ ನೆರವಾಗುವ ಒಂದು ಕ್ರಮ.

ಭಾಷೆ ಸಾಹಿತ್ಯಗಳ ದೃಷ್ಟಿಯಿಂದ ವಿಚಾರ ಮಾಡುತ್ತಿರುವಾಗ, ಸಾಂಸ್ಕೃತಿಕ ವಾಗಿ, ಕನ್ನಡ ನಾಡೆಲ್ಲವೂ ಒಂದು, ಯಾವ ಜಾತಿ ಮತಗಳಿಗೇ ಸೇರಿರಲಿ, ಕನ್ನಡಿಗ ರೆಲ್ಲರೂ ಒಂದು ಭಾಷಾ ಕುಟುಂಬಕ್ಕೆ ಸೇರಿದವರು ಎಂಬ ಕಲ್ಪನೆಗೆ ಒಂದು ಆಕಾರ ಬರುವಂತೆ ಮಾಡಿದ ಶ್ರೇಯಸ್ಸು ಕನ್ನಡ ಸಾಹಿತ್ಯ ಪರಿಷತ್ತಿಗೆ ಸಲ್ಲುತ್ತದೆ. ಆರಂಭದ ದಿನಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಗ್ರಾಂಥಿಕ ಭಾಷೆಯ ಏಕರೂಪತೆಯನ್ನು ಸಾಧಿಸಲು ಪ್ರಯತ್ನ ಮಾಡಿತು. ಪರಿಷತ್ ಪತ್ರಿಕೆಯಲ್ಲಿ ಕೆಲವು ಬರಹಗಳೂ ಪ್ರಕಟವಾದುವು. ಈ ಪ್ರಯತ್ನ ಒಂದು ಆದರ್ಶವನ್ನು ಮುಂದಿಟ್ಟಿತ್ತು. ಸಾಹಿತ್ಯ ಪ್ರಪಂಚದಲ್ಲಿ ನವೋದಯಯುಗಪೂರ್ವದಲ್ಲಿಯೆ ಗಳಗನಾಥರ ಕಾದಂಬರಿ ಮೈಸೂರು ಪ್ರಾಂತದಲ್ಲಿಯೂ, ವೆಂಕಟಾಚಾರ್ಯರ ಕಾದಂಬರಿಗಳು ಉತ್ತರ ಕರ್ನಾಟಕ ದಲ್ಲಿಯೂ ಜನಪ್ರಿಯವಾಗಿದ್ದುದನ್ನು ನೋಡಿದರೆ ಭಿನ್ನಾಭಾಷಾ ಶೈಲಿಗಳು ಸಾಹಿತ್ಯ ಪ್ರಸಾರಕ್ಕೆ ಅಡ್ಡಿಯಾಗಲಿಲ್ಲ. ಗ್ರಂಥ ಕನ್ನಡದ್ದು ಎನ್ನುವುದಷ್ಟೇ ಸಾಕಾಗಿತ್ತು. ಮುಂದೆ, ಕುವೆಂಪು, ಬೇಂದ್ರೆ ಅವರ ಕಾವ್ಯದ ಬಗೆಗೂ ಇದೇ ಮಾತನ್ನು ಹೇಳ ಬಹುದು. ಯಾವ ಕಡೆಯವರೇ ಆಗಲಿ, ಗ್ರಂಥಕರ್ತರ ನಡುವೆ, ಗ್ರಂಥವಾಚಕರಲ್ಲಿ ಕನ್ನಡತನದ ಏಕೀಭಾವ ವಿಕಾಸಗೊಂಡು ಕನ್ನಡ ನಾಡಿನಲ್ಲಿ ದಿನದಿನಕ್ಕೆ ಅಗಲಗಲ ವಾಗಿ ಶ್ರಾವಣದ ತುಂಬಿದ ಕೆರೆ ಹೊಸ ನೆಲಕ್ಕೆ ಕೋಡಿವರಿದು ಪಸರಿಸಿಕೊಳ್ಳುವ ಬಗೆಯಲ್ಲಿ ಹರಡಿಕೊಳ್ಳುತ್ತಿತ್ತು. ಈ ಭಾವಾಭಿವೃದ್ಧಿಗೆ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ನಾಡಿನ ಬೇರೆಬೇರೆ ಸ್ಥಳಗಳಲ್ಲಿ ಏರ್ಪಡಿಸುತ್ತಿದ್ದ ಸಾಹಿತ್ಯ ಸಮ್ಮೇಳನಗಳು ಪ್ರೇರಕ ಶಕ್ತಿಯಾಗಿ ಪರಿಣಮಿಸಿದುವು. ಮೈಸೂರು ಸಂಸ್ಥಾನದ ಊರುಗಳಲ್ಲಿ ಸಮ್ಮೇಳನನಡೆದಾಗ ಸಂಸ್ಥಾನದ ಹೊರಗಿನ ಸಾಹಿತಿಗಳನ್ನೂ ಸಂಸ್ಥಾನದ ಹೊರಗಡೆ ಆದಾಗ ಸಂಸ್ಥಾನದ ಸಾಹಿತ್ಯಗಳನ್ನೂ ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆಮಾಡುವ ಸಂಪ್ರದಾಯ ಅನುಸರಣೆಯಲ್ಲಿತ್ತು. ಬಿ. ಎಂ. ಶ್ರೀ. ಕಲಬುರ್ಗಿ ಸಮ್ಮೇಳನದ ಅಧ್ಯಕ್ಷರಾಗಿ ತಮ್ಮ ವಾಗ್ಮಿತೆಯಿಂದ, ಘನ ಗಂಭೀರ ಮೋಹಕ ಶೈಲಿಯಿಂದ, ಕನ್ನಡದ ಉದ್ಧಾರದ ಬಗೆಗಿನ ಕಳಕಳಿಯಿಂದ, ಅಲ್ಲಿನ ಕನ್ನಡ ಜನದ ಮನಸ್ಸನ್ನು

ಸೂರೆಗೊಂಡರೆ ಇತ್ತ ಮೈಸೂರು ಸಮ್ಮೇಳನಕ್ಕೆ ಆಲೂರು ವೆಂಕಟರಾಯರು ಅಧ್ಯಕ್ಷರಾಗಿ ಧಾರವಾಡದ ಗಂಡುಮೆಟ್ಟಿನ ಅಷ್ಟೇನೂ ಕರ್ಣ ಸುಭಗವಲ್ಲದ ಉರುಟು ಮಾತಿನಲ್ಲೆ ಕನ್ನಡ ಕೆಚ್ಚನ್ನು ಇತ್ತಕಡೆ ತುಂಬಿದರು. ಅಗಲೇ ಅಲ್ಲವೆ, ಬೇಂದ್ರೆ ಯವರ ಜಾನಪದ ಸತ್ವದ ದೇಸಿಗಟ್ಟಿನ ಗೇಯಕಾವ್ಯ ಮೈಸೂರಿನ ಶ್ರೋತೃವೃಂದದ ಮೇಲೆ ತನ್ನ ಗಾರುಡಿಗ ಮೋಡಿಯನ್ನು ಬೀರಿದ್ದು? ರಾಜರತ್ನಂ ಅವರ ಮೈಸೂರು ಕಡೆಯ ದೇಸಿಯ ರತ್ನನ ಪದಗಳು ಮಡಿಕೇರಿಯಲ್ಲಿ ಎಲ್ಲ ಕನ್ನಡಿಗರ ಹೃದಯವನ್ನೂ ಮೊತ್ತಮೊದಲಿಗೆ ಸೂರೆಗೊಂಡಿತು. ಈಗ ಕನ್ನಡ ಸಾಹಿತ್ಯ ಎಂದರೆ ಒಂದೇ : ಮಂಗಳೂರು ಕನ್ನಡ, ಧಾರವಾಡದ ಕನ್ನಡ, ಮೈಸೂರು ಕನ್ನಡ ಎಂಬ ಮಾತು ಈಗ ಭೇದಕ ಗುಣವನ್ನು ಕಳೆದುಕೊಂಡಿದೆ. ಸಾಹಿತ್ಯಲೋಕದ ಬರವಣಿಗೆಯ ಭಾಷೆಯಲ್ಲಿ ಅಪ್ರಯತ್ನವಾಗಿಯೇ ಒಂದು ಏಕರೂಪದ ಪ್ರಮಾಣ ಭಾಷೆ (standard language) ರೂಪಗೊಂಡು, ಪ್ರಚಲಿತವಾಗಿದೆ. ಈ ಏಕ ರೂಪತಾ ಸಾಧನೆಯಲ್ಲಿ ಅಂದಿನ ಕಾಲದ ಪ್ರಬುದ್ಧ ಕರ್ಣಾಟಕ, ಜಯಕರ್ನಾಟಕ, ಶಿವಾನುಭವ ಮುಂತಾದ ಸಾಹಿತ್ಯ ಪತ್ರಿಕೆಗಳು ಪೀಠ ಹಾಕಿದವು ; ಇಂದಿನ ಸಾಹಿತ್ಯ ಪತ್ರಿಕೆಗಳು ಮತ್ತು ಸುದ್ದಿಪತ್ರಿಕೆಗಳು ಆ ಪೀಠದ ಮೇಲೆ ಕನ್ನಡ ದೇವಿಯನ್ನು ಕೂರಿಸಿ ಎಲ್ಲ ಕನ್ನಡಿಗರ ನಾಡೊಲವನ್ನು ಏಕಮುಖವಾಗಿ ಮಾಡಿವೆ.

ಕರ್ನಾಟಕ ಏಕೀಕರಣ ಅಗುವುದಕ್ಕೆ ಮುಂಚೆಯೇ, ಕನ್ನಡ ಸಾಹಿತ್ಯ ಪರಿಷತ್ತು (1915) ಹುಟ್ಟುಗಾಣುವುದಕ್ಕೆ ಮುನ್ನವೆ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ (20 ಜುಲೈ, 1890) ಹುಟ್ಟಿತ್ತು. ಮೈಸೂರಿನ ವಿದ್ವಾಂಸರನ್ನು ಕರೆಸಿ ಕೊಂಡು ಭಾಷಣ ಮಾಡಿಸುತ್ತಿತ್ತು. ಬಿ. ಎಂ. ಶ್ರೀ. ಮಾಸ್ತಿ, ಗೋವಿಂದಪೈ, ಎಂ.ಆರ್.ಶ್ರೀ., ಅ.ನ.ಕೃ., ಮುಂತಾದವರೆಲ್ಲ ಅಲ್ಲಿ ಉಪನ್ಯಾಸ ಮಾಡಿದ್ದಾರೆ. ವಿದ್ಯಾವರ್ಧಕ ಸಂಘದ ಕಟ್ಟಡಕ್ಕೆ ಮೈಸೂರಿನ ಮಹಾರಾಜರು ಧನಸಹಾಯ ಮಾಡಿದ್ದು, ಆ ಕಟ್ಟಡ ಚಾಮರಾಜೇಂದ್ರ ಭವನ ಎಂಬ ಹೆಸರನ್ನು ಧರಿಸಿತು. ಪರಿಷತ್ತಿನ ಭವನ ಕೃಷ್ಣರಾಜ ಪರಿಷನ್ಮಂದಿರ ಆಯಿತು. ಮೈಸೂರಿನ ದೊರೆಗಳ ಬಗ್ಗೆ ಉತ್ತರ ಕರ್ನಾಟಕದ ಮುದುವೀಡು ಕೃಷ್ಣರಾಯರಂಥ ಮುಖಂಡರು ಮೈಸೂರರ ಒಡೆತನದಲ್ಲೆ ಕನ್ನಡ ನಾಡು ಒಂದುಗೂಡಲಿ ಎಂದು ಹೇಳಿದ್ದುಂಟು. ಮುದುವೀಡರಂತೂ ಮೈಸೂರರಸರು ಭಾವಿ ಕರ್ನಾಟಕದ ಗವರ್ನರ್ ಆಗಲಿ ಎಂದೇ ಘೋಷಿಸುತ್ತಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ನಿಧಾನವಾಗಿ, ಸುಭದ್ರವಾಗಿ, ನಿರ್ಮಾಣವಾದ ಈ ಅಖಂಡ ಕರ್ನಾಟಕತ್ತ್ವದ ಕಲ್ಪನಾಭವನಕ್ಕೆ ಆಲೂರು ಕಳಸ ವಿಟ್ಟು ಕರ್ನಾಟಕ ಕುಲಪುರೋಹಿತರು ಎನ್ನಿಸಿಕೊಂಡವರಾದರೆ, ಆ ಕಲಶದಮೇಲೆ ಏಕೀಕೃತ ಕರ್ನಾಟಕ ನಕ್ಷೆಯ ಲಾಂಛನವುಳ್ಳ ಕನ್ನಡದ ಬಾವುಟವನ್ನು ಏರಿಸಿ ಹಾರಿಸಿ ದವರು ಬಿ.ಎಂ.ಶ್ರೀ—ಕನ್ನಡದ ಕಣ್ವ. ಆಲೂರರು ಕರ್ನಾಟಕ ಏಕೀಕರಣದ ಸಿದ್ಧಿಯನ್ನು ಕಂಡು ಕಣ್ಣು ಮುಚ್ಚಿದರು ; ರಾಜಸೇವಾಸಕ್ತರಾಗಿದ್ದ ಬಿ.ಎಂ.ಶ್ರೀ. ಭಾವೈಕ್ಯವನ್ನು ಸಾಧಿಸಲೆಂದೇ ತಮ್ಮ ಜರೀಪೇಟವನ್ನು ಬಿಸುಟು ಟೊಪ್ಪಿಗೆ ಧರಿಸಿ

ಧಾರವಾಡದಲ್ಲಿ ನೆಲಸಿ ಅಲ್ಲಿಯೇ ಕಣ್ಣು ಮುಚ್ಚಿದರು. ನಾವು ಬೇರೆ ನೀವು ಬೇರೆ ಎನ್ನುತ್ತಿದ್ದವರ ಕಣ್ಣು ತೆರೆಸಿದರು.

ಹೀಗೆ ಆಂತರಿಕವಾಗಿ ಭಾವೈಕ್ಯ ಸಿದ್ಧಿಯಾದದ್ದರಿಂದಹತ್ತು ಹಲವು ಕಡೆ ಹಂಚಿ ಹೋಗಿದ್ದ ಕನ್ನಡ ನಾಡು ರಾಜಕೀಯವಾಗಿ, ಭೌಗೋಳಿಕವಾಗಿ, ಒಂದುಗೂಡಲು ಈಗ ಸಾಧ್ಯವಾಯಿತು; ಶತಮಾನದ ಆದಿಯಿಂದ ಕನ್ನಡದ ಹಿರಿಯರು ಕಂಡ ಕನಸು 1956 ರಲ್ಲಿ ನನಸಾಯಿತು. ಕರ್ನಾಟಕ ಏಕೀಕರಣದ ಘೋಷಣೆಯನ್ನು 1856ರಲ್ಲಿ ಡೆಪ್ಯುಟಿ ಚೆನ್ನಬಸಪ್ಪನವರು ಮಾಡಿದ ಒಂದನೂರು ವರ್ಷಕ್ಕೆ ಸರಿಯಾಗಿ ಅದು ಫಲಿಸಿದ್ದು ಒಂದು ಆನಂದದ ಆಕಸ್ಮಿಕ. ಕರ್ನಾಟಕ ಏಕೀಕರಣ ಸಾಧನೆಗಾಗಿಯೇ ಒಂದು ಸಂಸ್ಥೆ ಜನ್ಮತಾಳಿ 1924ರಿಂದ ತೊಡಗಿ ಕರ್ನಾಟಕದ ಆಯಕಟ್ಟಿನ ಸ್ಥಳಗಳಲ್ಲಿ ಏಕೀಕರಣ ಸಮ್ಮೇಳನಗಳನ್ನು ನಡೆಸಿತು. ಈ ಸಮ್ಮೇಳನಗಳು ಏಕೀಕರಣದ ಅಗತ್ಯದ ಅರಿವನ್ನು ಮುಖ್ಯವಾಗಿ ಉತ್ತರ ಕರ್ನಾಟಕದ ಜನರಲ್ಲಿ ಮೂಡಿಸಿದುವು. ಪ್ರಗತಿ ಹೊಂದಿದ್ದ, ಮಾದರಿ ಸಂಸ್ಥಾನ ಎಂದು ಹೆಸರು ವಾಸಿಯಾಗಿದ್ದ ಮೈಸೂರು ಸಂಸ್ಥಾನಕ್ಕೆ ಹೋಲಿಸಿದರೆ ಉತ್ತರ ಕರ್ನಾಟಕದ ಜಿಲ್ಲೆಗಳು ವಿದ್ಯಾಭ್ಯಾಸ, ವ್ಯವಸಾಯ, ಕೈಗಾರಿಕೆ, ವಾಣಿಜ್ಯ, ಮುಂತಾಗಿ ಎಲ್ಲ ಕ್ಷೇತ್ರಗಳಲ್ಲೂ ಬಹಳ ಹಿಂದುಳಿದಿದ್ದುವು. ಅಲ್ಲಿಯ ಜನ ಏಕೀಕರಣವಾದರೆ ತಮ್ಮ ಬದುಕು ಭವ್ಯವಾಗುವುದು ಎಂಬ ಆಸೆ ಹೊಂದಿ, ಆ ಬಗ್ಗೆ ಅತ್ಯಂತ ಉತ್ಸುಕರಾಗಿದ್ದರು. ಆದರೆ, ಇತ್ತ ಮೈಸೂರು ಸಂಸ್ಥಾನದಲ್ಲಿ ಕನ್ನಡ ಸಾಹಿತಿಗಳು ಹೊರತಾಗಿ ಅನೇಕ ಗಣ್ಯರು ಏಕೀಕರಣದ ಬಗ್ಗೆ ಉತ್ಸಾಹ ರಹಿತರಾಗಿದ್ದುದು ಮಾತ್ರವಲ್ಲ, ಏಕೀಕರಣವಾದರೆ ಮೈಸೂರಿನ ಸಂಪತ್ತೆಲ್ಲ ಉತ್ತರಕ್ಕೆ ಹರಿದುಹೋಗಿ ಇಲ್ಲಿನ ಜನ ಆರ್ಥಿಕ ದುಃಸ್ಥಿತಿಗೆ ಒಳಗಾಗುತ್ತಾರೆ, ಪರಿಹರಿಸಲಾಗದ ಅನೇಕ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ ಎಂಬ ಶಂಕೆಯನ್ನು ಹೊಂದಿದ್ದರು. ಒಂದಿಬ್ಬರು ಗಣ್ಯರು ಏಕೀಕರಣವನ್ನು ಪ್ರಕಟವಾಗಿ ವಿರೋಧಿಸಿದ್ದೂ ಉಂಟು. ಏಕೀಕರಣವಾದ ತರುಣದಲ್ಲಿ ಬೊಂಬಾಯಿ, ಹೈದರಾಬಾದು ಮತ್ತು ಮದರಾಸು ಸರ್ಕಾರಿ ಸೇವಾ ಇಲಾಖೆಗಳಿಂದ ಮೈಸೂರು ಸೇವಾ ಇಲಾಖೆಗಳಿಗೆ ವರ್ಗಾವಣೆ ಪಡೆದಾಗ ಸೀನಿಯಾರಿಟಿ, ಬಡತಿ ಮುಂತಾದ ವಿಷಯಗಳಲ್ಲಿ ಅತ್ತಕಡೆಯವರಿಗೆ ಅನುಕೂಲವಾಗಿ ಇತ್ತ ಕಡೆಯವರಿಗೆ ಅನ್ಯಾಯವಾಯಿತು ಎಂಬ ಭಾವನೆ ಬೇರೂರಿತ್ತು. ಈ ಭಾವನೆ ತೀರ ನಿರಾಧಾರವಾದುದಾಗಿಯೂ ಆಗಿರಲಿಲ್ಲ. ಇಲ್ಲಿ ಹೀಗಾದರೆ ಅಲ್ಲಿ, ಏಕೀಕರಣವಾಗಿ ಹಲವು ವರ್ಷ ಸಂದರೂ ನಮ್ಮ ಕಡೆ ಅಭಿವೃದ್ಧಿಕಾರ್ಯ ಏನೂ ನಡೆದಿಲ್ಲ, ಯೋಜನೆಗಳ ಫಲವೆಲ್ಲ ತಿಂದುಂಡು ಸುಖವಾಗಿರುವ ಮೈಸೂರು ಪ್ರಾಂತದವರಿಗೇ ದಕ್ಕುತ್ತಿದೆ ಎಂಬ ದೂರು ಕೇಳಿಬರತೊಡಗಿತ್ತು. 1970ರಲ್ಲಿ, ಏಕೀಕರಣವಾದ 15 ವರ್ಷಗಳ ಮೇಲೆ, ಏಕೀಕರಣಕ್ಕಾಗಿ ಶ್ರಮಿಸಿದ ಮೈಸೂರು ಪ್ರಾಂತದ ಪ್ರಮುಖರಲ್ಲಿ ಒಬ್ಬರಾದ ಕೈ.ಬಿ. ಶಿವಮೂರ್ತಿ ಶಾಸ್ತ್ರಿಗಳು—"ಸುಮಾರು 500 ವರ್ಷಗಳ ಕಾಲ ಭಿನ್ನಭಿನ್ನ ಸರ್ಕಾರಗಳಿಗೆ ಅಧೀನವಾಗಿದ್ದ ಕನ್ನಡ ನಾಡಿನ ಭಾಗಗಳು ಬಹುಮಟ್ಟಿಗೂ ಈಗ ಒಂದಾಗಿರುವುದು

ಇದ್ದುವರಲ್ಲಿ ಸಮಾಧಾನದಸಂಗತಿ. ಆದರೂ ಇನ್ನೂ ಕನ್ನಡಿಗರಲ್ಲಿ ಭಾವೈಕ್ಯತೆ ಯುಂಟಾಗಿಲ್ಲವೆನ್ನಬಹುದು," ಎಂದು ಹೇಳಿದ್ದರಲ್ಲಿ (ಚಿನ್ನದ ಬೆಳಸು, 'ಕರ್ನಾಟಕ ಏಕೀಕರಣದ ಚರಿತ್ರೆ' ಪು. 6) ಸ್ವಲ್ಪ ಮಟ್ಟಿನ ನಿಜಾಂಶವಿತ್ತು. ಇದರಿಂದ ಹೊರ ಪಡುವ ಸಂಗತಿ ಇಷ್ಟು : ಏಕೀಕರಣದ ಗುರಿ ಸಾಧಿತವಾಗುವವರೆಗೂ ನಾಡುನುಡಿ ಗಳ ಪ್ರೇಮ ಆಂತರಿಕ ಭಾವೈಕ್ಯವನ್ನು ಸಾಧಿಸಲು ಸಾಕಾಗಿತ್ತು. ಆ ಗುರಿ ಸಾಧಿಸಿದ ಮೇಲೆ, ಕಣ್ಣಿಗೆ ಕಾಣುವಂತಹ ರೀತಿಯಲ್ಲಿ ಬಾಹ್ಯ ಸಾಧನಗಳ ಮೂಲಕ ಭಾವೈಕ್ಯ ಸ್ಥಿರಗೊಳ್ಳಲು ಘೋಷಣೆ ಅಗತ್ಯವಾಗಿತ್ತು. ಬ್ರಾಹ್ಮಣ-ಅಬ್ರಾಹ್ಮಣ ವಾದದ ಜೊತೆಗೆ ವೊಕ್ಕಲಿಗ-ಲಿಂಗಾಯತ ಭೇದಭಾವನೆಗೆ ಸಕಾರಣವಾಗಿಯೋ ನಿಷ್ಕಾರಣವಾಗಿಯೋ ಬೆಂಬಲದೊರಕಿತು. ಕರ್ನಾಟಕ ಏಕೀಕರಣವಾದ ಮೇಲೆ ರಾಜ್ಯ ಆಡಳಿತಸೂತ್ರ ಕಾಂಗ್ರೆಸ್-ಪಕ್ಷದ ಕೈಯಲ್ಲೆ ಇದ್ದು, ಪಕ್ಷದ ಹೈಕಮ್ಯಾಂಡು' ಅಲ್ಪಸಂಖ್ಯಾ ಕೋಮಿನ ನಾಯಕ ಒಬ್ಬರನ್ನು ಮುಖ್ಯಮಂತ್ರಿ ಮಾಡುವ ಸಮಯೋಪಾಯದಿಂದ ತಾತ್ಕಾಲಿಕ ಪರಿಹಾರವನ್ನು ಕಂಡುಕೊಂಡಂತಿದೆ. ಈ ಏರ್ಪಾಡಿನಿಂದಲಾಗಿಯೋ ಇಲ್ಲ, ಈಚಿನ ವರ್ಷಗಳಲ್ಲಿ ಉತ್ತರ ಕರ್ನಾಟಕ ಪ್ರಾಂತದ ಹಾಗೂ ದಕ್ಷಿಣ ಉತ್ತರ ಕನ್ನಡ ಪ್ರಾಂತಗಳ ಬಹುಮುಖ ಅಭಿವೃದ್ಧಿಗೆ ಕರ್ನಾಟಕ ಸರ್ಕಾರ ಗಮನಕೊಡುತ್ತಿರುವುದರಿಂದಲೋ ಅಂತೂ, ಭಾವೈಕ್ಯದ ಬಿರುಕು ಮುಚ್ಚಿ ಕೊಳ್ಳುವ ಸೂಚನೆಗಳಿವೆ. ಇದರ ಸಂಕೇತವೋ ಎಂಬಂತೆ ಮೈಸೂರುರಾಜ್ಯ ಎಂಬ ಹೆಸರು ಕರ್ನಾಟಕಕ್ಕೆ ದಾರಿಬಿಟ್ಟುಕೊಟ್ಟು ಭಾವೈಕ್ಯದ ಸಾಂಕೇತಿಕ ವಿಜಯವನ್ನು ಆಗಮಾಡಿಸಿತು ; ಕರ್ನಾಟಕ ಹೃದಯಶಿವ ಕನ್ನಡ ಡಿಂಡಿಮವನ್ನು ಬಾರಿಸಿತು.

ಏಕೀಕರಣ ಪೂರ್ವದಲ್ಲಿ ಭಾವೈಕ್ಯಕ್ಕೆ ಬರಹಗಾರರೂ ಪತ್ರಿಕಾಕರ್ತರೂ ಹೇಗೆ ಮೂಲಪ್ರೇರಕ ಶಕ್ತಿಗಳಾಗಿದ್ದವು ಎನ್ನುವುದನ್ನು ಈ ಮೊದಲೇ ಪ್ರಸ್ತಾಪಿಸಿದೆ. ಏಕೀಕರಣ ಪೂರ್ವದಲ್ಲಿ (1934ರಲ್ಲಿಯೇ) ಉತ್ತರ ಕರ್ನಾಟಕಕ್ಕೆ ಪ್ರತ್ಯೇಕವಾದ ಪರಿಷತ್ತಿನ ಶಾಖೆ ಏರ್ಪಡಬೇಕು ಎಂಬ ಸುಳಿಗಾಳಿಯನ್ನು ಆಲೂರು ವೆಂಕಟ ರಾಯರೇ ಎಬ್ಬಿಸಿದ್ದರು ! (ಈ ಸಂಗತಿ ಬಹುಶಃ ಅನೇಕರಿಗೆ ಗೊತ್ತಿರಲಾರದು.) ಅಖಂಡ ಕರ್ನಾಟಕ ಕಲ್ಪನೆಯ ಮಹಾ ಅಧ್ವರ್ಯುವಾದ ಆಲೂರರೇ ಈ ಭೇದ ವಾದ ದನಿ ಎತ್ತಿದ್ದು ಸೋಜಿಗದ ಸಂಗತಿ. ಸುಳಿಗಾಳಿ ಬಿರುಗಾಳಿಯಾಗುವ ಮೊದಲೇ ಅದು ತನ್ನಿಂದ ತಾನೇ ಅಡಗಿದ್ದು ನಾಡಿನ ಸುದೈವ. ಬಿ.ಎಂ.ಶ್ರೀಯವರು ಈ ಪ್ರವೃತ್ತಿ ಮತ್ತೆ ಕಾಣಿಸಿಕೊಳ್ಳದಂತೆ ಪರಿಷತ್ತಿನ ನಿಬಂಧನೆಯನ್ನು ತಿದ್ದುಪಡಿ ಮಾಡಿಸಿ, ಕರ್ನಾಟಕದ ನಾಲ್ಕು ಪ್ರಾಂತ ವಿಭಾಗಗಳಿಗೆ (ಮೈಸೂರು, ಮಂಗಳೂರು, ಉತ್ತರ ಕರ್ನಾಟಕ, ಹೈದರಾಬಾದು ಕರ್ನಾಟಕ) ನಾಲ್ಕು ಪ್ರಾಂತ ಸಮಿತಿಗಳನ್ನು ಏರ್ಪಡಿಸಿದರು ; ದಸರಾ ಕಾಲದಲ್ಲಿ ಉತ್ತರಕರ್ನಾಟಕದಲ್ಲಿ ಉತ್ಸಾಹದಿಂದ ನಡೆಯುತ್ತಿದ್ದ ನಾಡಹಬ್ಬವನ್ನು ಮೈಸೂರು ಕಡೆಯೂ ಅವರು ಚಾಲ್ತಿಗೆ ತಂದರು. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಭಾವೈಕ್ಯದ ಸಂಕೇತ ಎನ್ನುವುದನ್ನು 'ಕನ್ನಡ ಬಾವುಟ' ಗ್ರಂಥ ಪ್ರಕಟನೆಯ ಮೂಲಕ ದೃಢ ಪಡಿಸಿದರು. ಈಗ ಕರ್ನಾಟಕದ

19 ಜಿಲ್ಲಾ ಸಮಿತಿಗಳು ಏರ್ಪಟ್ಟು ಜಿಲ್ಲಾ ಸಾಹಿತ್ಯ ಸಮ್ಮೇಳನಗಳು ನಡೆಯುತ್ತಿವೆ. ಪ್ರತಿಯೊಂದು ಜಿಲ್ಲಾ ಸಮಿತಿಯೂ ಜಿಲ್ಲಾ ಸಾಹಿತ್ಯ ಭವನವನ್ನು ಪಡೆಯತಕ್ಕದೆಂಬ ಯೋಜನೆಯೂ ಸ್ವಾಗತಾರ್ಹ. ಒಟ್ಟಿನಲ್ಲಿ, ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾದಂದಿನಿಂದ ಕನ್ನಡಿಗರ ಭಾವೈಕ್ಯವನ್ನು ಬಹುಮುಖವಾಗಿ ಘೋಷಿಸಿಕೊಂಡು ಬಂದಿದೆ. ಕನ್ನಡ ಸಾಹಿತ್ಯ ಅಕಾಡೆಮಿ ಹಾಗೂ ಇತರ ಅಕಾಡೆಮಿಗಳ ಕಾರ್ಯಕಲಾಪಗಳು, ಸಂಸ್ಕೃತಿ ಇಲಾಖೆಯ ಮೂಲಕ ಸರ್ಕಾರ ಅಖಿಲ ಕರ್ನಾಟಕದ ಬರಹಗಾರರಿಗೂ ಕಲಾವಿದರಿಗೂ ಮಾಸಾಶನ ಕೊಡುವ ಏರ್ಪಾಡು, ಇವು ಕೂಡ ಭಾವೈಕ್ಯಕ್ಕೆ ಪೋಷಕ ವ್ಯವಸ್ಥೆಗಳೆ.

ಏಕೀಕರಣವಾದಮೇಲೆ, ಭಾವೈಕ್ಯ ಸಾಧನೆಯಲ್ಲಿ ರೇಡಿಯೋ ಘನವಾದ ಪಾತ್ರವಹಿಸುತ್ತಿದೆ. ಬೆಂಗಳೂರು ಧಾರವಾಡಗಳಿಗೆ ಮಾತ್ರ ವ್ಯವಸ್ಥೆಗೊಂಡ ರೇಡಿಯೋ ಪ್ರಸಾರ ನಿಲಯಗಳ ಜೊತೆಗೆ ಮೈಸೂರು, ಮಂಗಳೂರು, ಗುಲ್ಬರ್ಗ ಗಳಲ್ಲೂ ನಿಲಯಗಳು ಸ್ಥಾಪಿತವಾಗಿವೆ. ಶಿಷ್ಟಭಾಷೆಯ ಏಕರೂಪತೆಯನ್ನು ಸಾಧಿಸಿ, ಆಯಾ ಪ್ರಾಂತದ ದೇಸಿಯ ಸೊಬಗನ್ನು ಉಳಿಸಿ ಬೆಳೆಸಿಕೊಳ್ಳುವಲ್ಲಿ ಇವು ಸಹಾಯಕ ವಾಗಿವೆ. ರಾಜಕೀಯದಲ್ಲಿ ಏಕಮುಖತೆಯನ್ನು ರೂಢಿಸುವಲ್ಲಿ ಪತ್ರಿಕೆಗಳು ಪರಿಣಾಮಕಾರಿ ಪಾತ್ರವಹಿಸಿವೆ. ಪ್ರವಾಸೋದ್ಯಮ ಅಭಿವೃದ್ಧಿಗೊಳ್ಳುತ್ತಿದ್ದು, ಕನ್ನಡಿಗರು ಎಲ್ಲ ಕಡೆಯೂ ಹೊಕ್ಕುಬಳಸಿ ಬರಲು ಸಾಧ್ಯವಾಗಿದೆ ; ಕನ್ನಡದ ನಂಟಿನ ಜೊತೆಗೆ ಬೇರೆಬೇರೆ ಭಾಗಗಳಲ್ಲಿ ನೆತ್ತರುನಂಟು ಬೆಳೆಯಲು ಇಂಬು ದೊರೆತಿದೆ. ಹಿಂದೆ ಮೈಸೂರು ಅರಮನೆ ಮೈಸೂರಿಗೆ ಪ್ರಿಯವಾಗಿದ್ದಂತೆ, ವಿಧಾನಸೌಧ ಎಲ್ಲ ಕನ್ನಡಿಗರ ಆಕರ್ಷಕ ಕೇಂದ್ರ ಬಿಂದುವಾಗಿಪರಿಣಮಿಸಿದೆ. ವಿಧಾನಸಭೆಯ ಕಾರ್ಯಕಲಾಪಗಳು ಎಲ್ಲ ಕನ್ನಡಿಗರ ಆಶೋತ್ತರಗಳನ್ನು ಏಕತ್ರ ಪ್ರತಿಬಿಂಬಿಸುವಂತಾಗಿದೆ. ಶಿಕ್ಷಣವ್ಯವಸ್ಥೆಯಲ್ಲಿ ಏಕರೂಪತೆಯನ್ನು ತರುವ ಬಗೆ ಬಗೆಯ ಪ್ರಯತ್ನಗಳು, ಭಾವೈಕ್ಯ ಸಾಧನೆಯತ್ತ ಒಂದು ದೊಡ್ಡ ಹೆಜ್ಜೆ. ಬೆಂಗಳೂರಿನ ಕೈಗಾರಿಕೋದ್ಯಮದ ಕಾರ್ಖಾನೆಗಳು ಬೆಂಗಳೂರಿನವರ ಸ್ವತ್ತಲ್ಲ, ಎಲ್ಲ ಕನ್ನಡಿಗರದ್ದು (ಇಲ್ಲೆಲ್ಲ ಕನ್ನಡಿಗರಲ್ಲದವರೂ ಹೆಚ್ಚಿನ ಸಂಖ್ಯೆಯಲ್ಲಿ ನುಸುಳಿಕೊಂಡಿರುವ ಮಾತು ಬೇರೆ) ಎಂಬ ಭಾವನೆ ನೆಮ್ಮದಿಯನ್ನು ಎಲ್ಲ ಕನ್ನಡಿಗರಲ್ಲಿ ತಂದಿದೆ. ಉತ್ತರ ಕರ್ನಾಟಕದಲ್ಲಿ ಕೈಗೂಡುತ್ತಿರುವ ನೀರಾವರಿ ಯೋಜನೆಗಳು ಬೆಂಗಾಡು ಪ್ರದೇಶಗಳಿಗೆ ನೀರುಣಿಸಿ ಕನ್ನಡದ ಕಣಜವನ್ನು ಸಮೃದ್ಧಗೊಳಿಸಲು ಬಹಳಕಾಲ ಕಾಯಬೇಕಾಗಿಲ್ಲ. ಅಂತೂ, ಅಂತರಂಗನಿಷ್ಠವಾದ ಅಮೂರ್ತವಾದ ಭಾವೈಕ್ಯಕ್ಕೆ ಬಹಿರಂಗ ಜೀವನೋಪಕಾರಕ ಸಾಧನೋಪಕರಣಗಳು ಸಜ್ಜಾಗುತ್ತಿದ್ದು, ಒಳಗಿಂದುಮ್ಮಿಂದ ಏಕೀಭಾವ ಹೊರಗೆ ಮೂರ್ತವಾಗಿ ಹೂತು ಕಾತಿದೆ ; ಹಣ್ಣುಪಾಡಿಗೆ ಬಂದಿದೆ.

ಕರ್ನಾಟಕ ಎಂದಿನಿಂದಲೂ ಮತಧರ್ಮಗಳ, ಜಾತಿ ಪಂಥಗಳ, ದರ್ಶನ ಭೇದಗಳ, ಕೂಡಲ ಸಂಗಮ. ಎಷ್ಟೇ ಭೇದಗಳಿದ್ದರೂ ಕೂಡಿಬಾಳುವ ಹೊಣೆಗಾರಿಕೆ

ಹೂಡಬಲ್ಲ ಸಹಿಷ್ಣುತೆಯ, ಸಮನ್ವಯ ಬುದ್ಧಿಯ, ಮಂತ್ರೋಪದೇಶ ಮಾಡಿದ್ದಾರೆ ನಮ್ಮ ಕವಿವರೇಣ್ಯರು :

'ಕಸವರವೆಂಬುದು ನೆಱೆ ಸೈ—
ರಿಸಲಾರ್ಪೊಡೆ ಪರವಿಚಾರಮುಂ ಧರ್ಮಮುಮಂ'

—ಶ್ರೀವಿಜಯ

'ಮನುಷ್ಯಜಾತಿ ತಾನೊಂದೆ ವಲಂ'

—ಪಂಪ

'ದೇವನೊಬ್ಬ, ನಾಮಹಲವು',

—ಬಸವಣ್ಣ

ಅನೇಕತೆಯಲ್ಲಿ ಏಕತೆಯನ್ನು (ಇದೆ ನಿಜವಾದ ಭಾವೈಕ್ಯ) ಸಾಧಿಸುವ ಬಗೆಯನು ನುಡಿದು ನಡೆದು ಅಖಿಲ ಭಾರತಕ್ಕೇ ಬೋಧಿಸಬಲ್ಲ ಆಚಾರ್ಯ ಪೀಠವಲ್ಲಿದೆ ಕನ್ನಡ ನಾಡು.

ಕರ್ನಾಟಕ ರಾಜ್ಯದ ಆರ್ಥಿಕ ಪ್ರಗತಿ

ಟಿ. ಬಿ. ಚಂದ್ರಶೇಖರಯ್ಯ

[1. ಪೀಠಿಕೆ. 2. ಕನ್ನಡರಾಜ್ಯವು ಅಸ್ತಿತ್ವಕ್ಕೆ ಬಂದ ಕಾಲದ ಆರ್ಥಿಕಸ್ಥಿತಿ. 3. ಮೊದಲ ಹತ್ತುವರ್ಷಗಳ ಸಾಧನೆ—ಅಭಿವೃದ್ಧಿಗಾಗಿ ನೆಲಗಟ್ಟಿನ ನಿರ್ಮಾಣ 4. ನಾಲ್ಕನೆಯ ಮತ್ತು ಐದನೆಯ ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಸಾಧಿಸಿದ ಕ್ಷಿಪ್ರ ಪ್ರಗತಿ. 5 ಆರನೆಯ ಪಂಚವಾರ್ಷಿಕ ಯೋಜನೆಯ ಆರಂಭ—ಆಗಬೇಕಾದ ಅಭಿವೃದ್ಧಿಯ ಚಿತ್ರ.]

1.1. ಭಾರತದ ರಾಜ್ಯಗಳ ಪುನರ್ವಿಂಗಡಣೆ ಶಾಸನದ ಪ್ರಕಾರ 1956ರ ನವೆಂಬರ್ ಒಂದರಂದು ಅಸ್ತಿತ್ವಕ್ಕೆ ಬಂದ ಕನ್ನಡರಾಜ್ಯ ಕನ್ನಡ ಜನರ ಏಕೀಕರಣವೂ ಆಯಿತು. ಭಾರತಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ದೇಶವನ್ನು ಆಳುತ್ತಿದ್ದ ಬ್ರಿಟಿಷ್ ಸರಕಾರವು ರಾಜ್ಯಗಳನ್ನು ತನ್ನ ಅನುಕೂಲಕ್ಕೆ ತಕ್ಕಂತೆ ವಿಂಗಡಿಸಿತ್ತು. ತಮ್ಮದೇ ಆದ ಭಾಷೆ ಮತ್ತು ಸಂಸ್ಕೃತಿಗಳನ್ನು ಪಡೆದಿದ್ದ ಕನ್ನಡಿಗರು ಐದು ಬೇರೆ ಬೇರೆ ಆಡಳಿತಗಳಲ್ಲಿ ಚದುರಿಹೋಗಿದ್ದು ಅವರೆಲ್ಲರೂ ಒಂದು ರಾಜ್ಯವಾಗದೇ ತಮ್ಮ ಅಭಿವೃದ್ಧಿಯನ್ನು ಪೂರ್ಣವಾಗಿ ಸಾಧಿಸುವ ಭರವಸೆಯೇ ಇರಲಿಲ್ಲ. ಇತರ ಭಾಷೆಗಳನ್ನು ಆಡುವ ಜನರಿಗೆ ಪ್ರತ್ಯೇಕ ರಾಜ್ಯಗಳು ಬೇಕಿದ್ದವೋ ಇಲ್ಲವೋ ಕನ್ನಡಿಗರಿಗಂತೂ ಪ್ರತ್ಯೇಕ ರಾಜ್ಯದ ಸ್ಥಾಪನೆ ಅವರ ಅಳಿವು ಉಳಿವಿನ ಪ್ರಶ್ನೆಯಾಗಿತ್ತು. ಸ್ವತಂತ್ರ ಭಾರತದಲ್ಲಿ ಏಕತಂತ್ರ ಕರ್ನಾಟಕದ ಉದಯ, ಕನ್ನಡ ಜನರ ಬದುಕಿನ ವಿಕಾಸಕ್ಕೆ ನಾಂದಿಯಾಯಿತು.

1.2. ಹೊಸ ರಾಜ್ಯದಲ್ಲಿ ವಿಲೀನಗೊಂಡ ಪ್ರದೇಶಗಳ ವಿವರಗಳು ಹೀಗಿದ್ದವು.

ಪ್ರದೇಶ	ವಿಸ್ತೀರ್ಣ (ಚ.ಕಿ. ಮಿ. ಗಳಲ್ಲಿ)	ಜನಸಂಖ್ಯೆ (1951ರ ಗಣತಿ ಪ್ರಕಾರ ಲಕ್ಷಗಳಲ್ಲಿ)
1. 1956ರ ನವೆಂಬರ್ ಮುಂಚೆ ಇದ್ದ ಮೈಸೂರು ರಾಜ್ಯ (ಬಳ್ಳಾರಿ ಜಿಲ್ಲೆ ಸೇರಿ)	86,273	98.48
2. ರಾ.ಪು. ಶಾಸನದ ಪ್ರಕಾರ ಬೊಂಬಾಯಿ ರಾಜ್ಯದಿಂದ ವರ್ಗಾವಣೆಯಾದ ಪ್ರದೇಶ	54,464	51.35

3. ರಾ.ಪು. ಶಾಸನದ ಪ್ರಕಾರ ಹೈದರಾಬಾದ್ ರಾಜ್ಯದಿಂದ ವರ್ಗಾವಣೆಯಾದ ಪ್ರದೇಶ	35,687	27.18
4. ರಾ.ಪು. ಶಾಸನದ ಪ್ರಕಾರ ಮದ್ರಾಸ್ ರಾಜ್ಯದಿಂದ ವರ್ಗಾವಣೆಯಾದ ಪ್ರದೇಶ	11,223	14.70
5. ಕೊಡಗು ರಾಜ್ಯ	4,110	2.29

ರಾಜ್ಯದ ಒಟ್ಟು ವಿಸ್ತೀರ್ಣ 191,757 ಚ.ಕಿ.ಮೀ. ಗಳಾಗಿದ್ದು ಒಟ್ಟು ಜನಸಂಖ್ಯೆ 194 ಲಕ್ಷ ವಾಗಿತ್ತು (1.94 ಕೋಟಿ). ಆಡಳಿತದ ಅನುಕೂಲಕ್ಕಾಗಿ ಹೊಸರಾಜ್ಯವನ್ನು 19 ಜಿಲ್ಲೆಗಳಾಗಿಯೂ, ನಾಲ್ಕು ರೆವಿನ್ಯೂ ವಿಭಾಗಗಳನ್ನಾಗಿಯೂ ವಿಂಗಡಿಸಲಾಯಿತು. ಬೆಂಗಳೂರು ವಿಭಾಗಕ್ಕೆ ಬೆಂಗಳೂರು ಜಿಲ್ಲೆ, ಕೋಲಾರ, ತುಮಕೂರು, ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳು ಸೇರಿದ್ದು ಒಟ್ಟು 50 ತಾಲ್ಲೂಕುಗಳಿವೆ. ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಬೆಂಗಳೂರು ವಿಭಾಗದ್ದು ಶೇ. 25.1 ಭಾಗ. ಮೈಸೂರು ವಿಭಾಗಕ್ಕೆ ಮೈಸೂರು, ಮಂಡ್ಯ, ಕೊಡಗು. ಹಾಸನ, ದಕ್ಷಿಣ ಕನ್ನಡ, ಮತ್ತು ಚಿಕ್ಕಮಗಳೂರು ಜಿಲ್ಲೆಗಳು ಸೇರಿದ್ದು ಒಟ್ಟು 44 ತಾಲ್ಲೂಕುಗಳಿವೆ. ಈ ವಿಭಾಗವು ರಾಜ್ಯದ ಶೇ 22.7 ಭಾಗವನ್ನು ಹೊಂದಿದೆ. ಬೆಳಗಾಂ ವಿಭಾಗವು ರಾಜ್ಯದ ವಿಸ್ತೀರ್ಣದ ಶೇ 28.5 ಭಾಗವನ್ನು ಹೊಂದಿದ್ದು ಬೆಳಗಾಂ, ಬಿಜಾಪುರ, ಧಾರವಾಡ, ಉತ್ತರ ಕನ್ನಡ ಜಿಲ್ಲೆಗಳನ್ನು ಹೊಂದಿದ್ದು 49 ತಾಲ್ಲೂಕುಗಳನ್ನು ಪಡೆದಿದೆ. ಗುಲ್ಬರ್ಗಾ ವಿಭಾಗವು ರಾಜ್ಯದ ಶೇ 23.7ರಷ್ಟು ವಿಸ್ತೀರ್ಣವನ್ನು ಹೊಂದಿ ಗುಲ್ಬರ್ಗಾ, ರಾಯಚೂರ್, ಬೀದರ್ ಮತ್ತು ಬಳ್ಳಾರಿ ಜಿಲ್ಲೆಗಳನ್ನು ಹೊಂದಿದೆ. ಒಟ್ಟು 32 ತಾಲ್ಲೂಕುಗಳಿವೆ.

1.3. ಅಭಿವೃದ್ಧಿ ಕಾರ್ಯಗಳಿಗೆ ನೆರವಾಗುವ ಆಡಳಿತ ಸೌಲಭ್ಯಗಳನ್ನು. ಸೂಕ್ತವಾದ ಆಡಳಿತ ಯಂತ್ರವನ್ನು ಕ್ರಮೇಣವಾಗಿ ರೂಢಿಸಲಾಯಿತು. ಇಡೀ ಭಾರತದಲ್ಲಿ ಎರಡನೆಯ ಪಂಚವಾರ್ಷಿಕ ಯೋಜನೆ ಜಾರಿಗೆ ಬಂದ ಹಾಗೆಯೇ ಕರ್ನಾಟಕದಲ್ಲೂ ಯೋಜನೆ ಸಿದ್ಧವಾಗಬೇಕಾಯಿತು. ದೇಶದ ಎರಡನೆಯ ಯೋಜನೆ 1956ರ ಏಪ್ರಿಲ್‌ನಿಂದ ಪ್ರಾರಂಭವಾಗಿದ್ದು ಕನ್ನಡ ರಾಜ್ಯವು ಏಳುತಿಂಗಳ ನಂತರ ಅಸ್ತಿತ್ವಕ್ಕೆ ಬಂದುದರಿಂದ ರಾಜ್ಯಕ್ಕೆ ಸೇರಿದ ವಿವಿಧ ಪ್ರದೇಶಗಳ ಯೋಜನೆಗಳನ್ನು ಸಂಕೀರ್ಣಗೊಳಿಸುವುದು ಸ್ವಲ್ಪ ನಿಧಾನವಾಯಿತು. ಏಕೆಂದರೆ ಏಕೀಕೃತ ರಾಜ್ಯದ ಭೌಗೋಲಿಕ ಸ್ಥಿತಿ ಮತ್ತು ಜನಸಂಖ್ಯೆಗಳು ಬದಲಾಗಿದ್ದವು. ಪ್ರಕೃತಿದತ್ತ ಸಂಪನ್ಮೂಲಗಳು ಹೇರಳವಾಗಿದ್ದರೂ, ಅಭಿವೃದ್ಧಿಯ ಗತಿಯನ್ನು ನಿಧಾನಗೊಳಿಸುವ ಸನ್ನಿವೇಶಗಳೂ ಹುಟ್ಟಿಕೊಂಡವು. ಐದು ರೀತಿಯ ಕಾನೂನು ಪದ್ಧತಿಗಳೂ.

ಆಡಳಿತ ಪದ್ಧತಿಗಳೂ, ತೆರಿಗೆ ಹಾಗೂ ಶಿಕ್ಷಣ ಪದ್ಧತಿಗಳೂ ಇದ್ದು, ಒಂದುಗೂಡಿದ ರಾಜ್ಯದಲ್ಲಿ ಇವೆಲ್ಲ ಅಂಶಗಳಲ್ಲಿ ಏಕರೂಪತೆ ಬೇಕಾಯಿತು. ಬೇರೆ ಇನ್ನಾವುದೇ ರಾಜ್ಯಕ್ಕೂ ಉಂಟಾಗದಿದ್ದ ವಿಲಕ್ಷಣ ಅಡ್ಡಿಗಳನ್ನು ರಾಜ್ಯ ಎದುರಿಸಿದ ಕಾರಣದಿಂದ ರಾಜ್ಯದ ಎರಡನೆಯ ಯೋಜನೆಗೆ ಅಂತಿಮ ರೂಪವನ್ನು ಕೊಡಲು ಒಂದು ವರ್ಷವೇ ಬೇಕಾಯಿತು.

2.1. ಕರ್ನಾಟಕವು ಪ್ರಧಾನವಾಗಿ ವ್ಯವಸಾಯವನ್ನು ಅವಲಂಬಿಸಿದ ರಾಜ್ಯ. ಆದರೆ ಮಳೆಯ ಅಭಾವ ಅಥವಾ ಅನಿಶ್ಚಯತೆಯ ಕಾರಣದಿಂದ ರಾಜ್ಯದ ಕೆಲವು ಭಾಗಗಳು ಸಂಕಷ್ಟಕ್ಕೀಡಾಗುವುದು ಸಾಮಾನ್ಯ. ಆದರೆ ಕರ್ನಾಟಕದ ಅದೃಷ್ಟವೆಂಬಂತೆ ರಾಜ್ಯದ ಪಶ್ಚಿಮದಿಂದ ಪೂರ್ವಕ್ಕೆ ಹರಿಯುವ ಕೃಷ್ಣಾ, ಕಾವೇರಿ, ತುಂಗಭದ್ರಾ ಗಳಂಥಹ ಜೀವನದಿಗಳಿವೆ. ಈ ನದಿಗಳಿಗೆ ಸೇರಿದ ಹಲವಾರು ಉಪನದಿಗಳಿವೆ. ಭೂಮಿಮಟ್ಟಸವಾಗಿರುವ ಹಾಗೂ ತಕ್ಕ ಮಟ್ಟಿಗೆ ಮಳೆಬೀಳುವ ದಕ್ಷಿಣದ ಜಿಲ್ಲೆಗಳಲ್ಲಿ ಬಹಳಕಾಲದಿಂದ ನದೀನಾಲೆಗಳ ಮತ್ತು ಕೆರೆಗಳ ಮೂಲಕ ಬಹುಮಟ್ಟಿಗೆ ಸಣ್ಣ ನೀರಾವರಿ ಅಭಿವೃದ್ಧಿಯಾಗಿತ್ತು. ಅಭಾವಕ್ಕೆ ಒಳಗಾಗಿದ್ದ ಉತ್ತರದ ಜಿಲ್ಲೆಗಳಲ್ಲಿ ಎಲ್ಲೋ ಅಲ್ಲೊಂದು ಇಲ್ಲೊಂದು ಕೆರೆಯನ್ನು ಕಾಣಬಹುದಾಗಿತ್ತು. ಮಳೆಯ ಅನಿಶ್ಚಯತೆಗೆ ತುತ್ತಾಗುವ ಭೂಮಿಗೆ ಏಕಮಾತ್ರ ಪರಿಹಾರವೆಂದರೆ ನದಿಗಳ ನೀರನ್ನು ಜಲಾಶಯಗಳಲ್ಲಿ ಸಂಗ್ರಹಿಸಿ ಕಾಲುವೆಗಳ ಮೂಲಕ ಭೂಮಿಗೆ ಹರಿಸುವುದೇ ಆಗಿದೆ. ಸ್ವಾತಂತ್ರ್ಯಪೂರ್ವದ ವರ್ಷಗಳನ್ನು ಹಿಂದಿನ ಮೈಸೂರು ಸಂಸ್ಥಾನವು ನಿರ್ಮಿಸಿದ್ದ ಕೃಷ್ಣರಾಜಸಾಗರ ಮತ್ತು ವಾಣೀವಿಲಾಸ ಸಾಗರಗಳು ನೀರಾವರಿ ಸಾಧ್ಯತೆಯ ನಿದರ್ಶನಗಳಾಗಿದ್ದವು.

2.2. ಕರ್ನಾಟಕ ರಾಜ್ಯವು ಅಸ್ತಿತ್ವಕ್ಕೆ ಬಂದ ವರ್ಷದಲ್ಲಿ ರಾಜ್ಯದಲ್ಲಿ ಮೂರು ದೊಡ್ಡ ನೀರಾವರಿ ಯೋಜನೆಗಳೂ, ಎಂಟು ಮಧ್ಯಮ ಪ್ರಮಾಣದ ಯೋಜನೆಗಳು ಪ್ರಗತಿಯಲ್ಲಿದ್ದವು. ಮೂರು ದೊಡ್ಡ ಯೋಜನೆಗಳೆಂದರೆ, ಬಳ್ಳಾರಿ ಜಿಲ್ಲೆಯ ತುಂಗಾಭದ್ರಾ, ಬೆಳಗಾಂ ಜಿಲ್ಲೆಯ ಘಟಪ್ರಭಾ (ಮೊದಲ ಹಂತ) ಮತ್ತು ಚಿಕ್ಕಮಗಳೂರು ಜಿಲ್ಲೆಯ ಭದ್ರಾ. ಮಧ್ಯಮ ಪ್ರಮಾಣದ ಯೋಜನೆಗಳು ಶಿವಮೊಗ್ಗ ಜಿಲ್ಲೆಯ ತುಂಗಾ ಮತ್ತು ಅಂಬ್ಲಿಗೊಳ ಅಣೆಕಟ್ಟುಗಳು, ಮೈಸೂರು ಜಿಲ್ಲೆಯ ನುಗು ಜಲಾಶಯ, ರಾಯಚೂರು ಜಿಲ್ಲೆಯ ರಾಜೋಲಿಬಂಡ, ಬಿಜಾಪುರ ಜಿಲ್ಲೆಯ ರಾಮನಹಳ್ಳಿ, ಅರೆಶಂಕರ ಮತ್ತು ಕಳಸಕೊಪ್ಪ ಕೆರೆಗಳು, ಬೆಳಗಾಂ ಜಿಲ್ಲೆಯ ಕೊಳಚಿ ಅಣೆಕಟ್ಟು. ಈ ಎಲ್ಲ ಯೋಜನೆಗಳಿಂದ ಸುಮಾರು 1.15 ಲಕ್ಷ ಎಕರೆಗಳಿಗೆ ಆಗುವಷ್ಟು ನೀರಾವರಿ ಸಾಮರ್ಥ್ಯವನ್ನು ಕಲ್ಪಿಸಲಾಯಿತು. ಇವರಲ್ಲಿ 41,000 ಎಕರೆ ನೀರಾವರಿಗೆ ಒಳಪಟ್ಟಿತ್ತು.

2.3. ಆರ್ಥಿಕ ಪ್ರಗತಿಗೆ ಸಾಧನವಾಗುವ ಇನ್ನೊಂದು ಮುಖ್ಯ ಅಂಶ, ಶಕ್ತಿ. ಕರ್ನಾಟಕದಲ್ಲಿ ಶಕ್ತಿ ಉತ್ಪಾದನೆಗೆ ಬೇಕಾದ ಕಲ್ಲಿದ್ದಲಿನ ಅಥವಾ ತೈಲ ಸಂಪತ್ತಿನ

ನಿಕ್ಷೇಪಗಳಾವುವೂ ಇಲ್ಲ. ಆದರೆ ಈ ಕೊರತೆಯನ್ನು ತುಂಬುವಷ್ಟು ಸಮೃದ್ಧ ಜಲವಿದ್ಯುತ್ ಸಾಮರ್ಥ್ಯದ ನದಿಕಣಿವೆಗಳಿವೆ. ಸ್ವಾತಂತ್ರ್ಯ ಬರುವುದಕ್ಕೆ ಮುಂಚೆಯೇ ಹಿಂದಿನ ಮೈಸೂರು ಸಂಸ್ಥಾನ ವಿದ್ಯುತ್ ಉತ್ಪಾದನೆಯಲ್ಲಿ ಇಡೀ ದೇಶಕ್ಕೆ ಅಗ್ರಸ್ಥಾನದಲ್ಲಿತ್ತು. ಕೋಲಾರದ ಚಿನ್ನದ ಗಣಿಗಳಿಗೆ ವಿದ್ಯುತ್ತನ್ನು ಒದಗಿಸಲು 1902ರಲ್ಲೆ ಶಿವನಸಮುದ್ರದ ವಿದ್ಯುತ್ ಉತ್ಪಾದನಾ ಕೇಂದ್ರ ಸ್ಥಾಪಿತವಾಗಿತ್ತು. 1940ರಲ್ಲಿ ಶಿಂಷಾ ವಿದ್ಯುತ್ ಉತ್ಪಾದನಾ ಕೇಂದ್ರ ಸ್ಥಾಪಿತವಾಯಿತು. ಸ್ವಾತಂತ್ರ್ಯಾನಂತರದ ಮೈಸೂರಿನಲ್ಲಿ 1948ರಲ್ಲಿ ಜೋಗ್ ಬಳಿ ಮಹಾತ್ಮಾಗಾಂಧೀ ಜಲವಿದ್ಯುತ್ ಕೇಂದ್ರ ರೂಪುಗೊಂಡಿತು. ತುಂಗಾಭದ್ರಾ ಜಲಾಶಯದ ಜಲ ವಿದ್ಯುತ್ ಕೇಂದ್ರವೂ ಸಹ 1956ರ ಪೂರ್ವದ ಸಾಧನೆಗಳು. ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬಂದಕಾಲದಲ್ಲಿ ಇದ್ದ ಕೇಂದ್ರಗಳು ಮತ್ತು ಅವುಗಳ ಸಾಮರ್ಥ್ಯ ಹೀಗಿದ್ದವು—ಶಿವನಸಮುದ್ರ (45,500 ಕಿ. ವ್ಯಾ. ಸಾಮರ್ಥ್ಯ), ಶಿಂಷಾ (17,200 ಕಿ.ವ್ಯಾ.), ಮಹಾತ್ಮಾಗಾಂಧೀ ವಿದ್ಯುತ್ ಕೇಂದ್ರ (1,20,000 ಕಿ.ವ್ಯಾ.). ತುಂಗಾಭದ್ರಾ ಜಲಾಶಯದ ಎಡದಂಡೆಯಲ್ಲಿನ ಕೇಂದ್ರ (27,000 ಕಿ.ವ್ಯಾ.) ತುಂಗಾಭದ್ರಾ ಬಲದಂಡೆಯಲ್ಲಿ ಹಂಪಿನಾಲೆಗೆ ಕಟ್ಟಿರುವ ಕೇಂದ್ರಗಳ ಕರ್ನಾಟಕದ ಪಾಲು 14.400 ಕಿ.ವ್ಯಾ. ವಿದ್ಯುತ್ ಸೌಕರ್ಯದ ದೃಷ್ಟಿಯಿಂದ ಹಿಂದಿನ ಮೈಸೂರಿಗೆ ಹೋಲಿಸಿದರೆ ಬೆಳಗಾಂ ವಿಭಾಗ, ಗುಲ್ಬರ್ಗಾ ವಿಭಾಗಗಳ ಜಿಲ್ಲೆಗಳು ಬಹಳ ಹಿಂದುಳಿದಿದ್ದುವು. ಬಹುಮಟ್ಟಿಗೆ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳೂ ಸಹ. ಈ ಪ್ರದೇಶಗಳ ಮುಖ್ಯ ಪಟ್ಟಣಗಳಿಗೆ ಡೀಸಲ್ ಸೆಟ್ಟುಗಳ ಸಹಾಯದಿಂದ ವಿದ್ಯುತ್ತನ್ನು ಒದಗಿಸಲಾಗಿತ್ತು. (ಒಟ್ಟು ಸುಮಾರು 8,000 ಕಿ.ವ್ಯಾ. ನಷ್ಟು).

2.4. ಕೈಗಾರಿಕೆಗಳ ಅಭಿವೃದ್ಧಿ ದೃಷ್ಟಿಯಿಂದ ನೋಡಿದರೆ, ರಾಜ್ಯದಲ್ಲಿ ಇದ್ದ ಆಧುನಿಕ ಕೈಗಾರಿಕೆಗಳು ಬಹುವಾಗಿ ಹಿಂದಿನ ಮೈಸೂರು ರಾಜ್ಯದಲ್ಲೇ ಇದ್ದುವು. ವಿದ್ಯುತ್ ಸೌಲಭ್ಯ ಮತ್ತು ಶಿಕ್ಷಣ ಸೌಕರ್ಯಗಳೇ ಅಲ್ಲದೆ ಅಲ್ಲಿನ ಸರ್ಕಾರವು ಅನುಕರಿಸಿದ ಪ್ರಗತಿಪರ ಕೈಗಾರಿಕಾನೀತಿಯೇ ಇದಕ್ಕೆ ಕಾರಣಗಳು, ಖಾಸಗೀ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವುದರ ಜೊತೆಗೆ ಸರ್ಕಾರವೇ ಹಲವಾರು ರೀತಿಯ ಕೈಗಾರಿಕೆಗಳನ್ನು ಸ್ಥಾಪಿಸಿತ್ತು. ಖಾಸಗೀ ಕೈಗಾರಿಕೆಗಳಲ್ಲಿ ಕೋಲಾರದ ಚಿನ್ನದಗಣಿ, ಮೈಸೂರು ಸಕ್ಕರೆ ಕಂಪನಿ, ಮೈಸೂರು ಕಾಗದ ಕಾರ್ಖಾನೆ, ಬೆಳಗುಳದ ರಾಸಾಯನಿಕ ಮತ್ತು ಗೊಬ್ಬರ ಕಾರ್ಖಾನೆ, ಮೈಸೂರುಲ್ಯಾಂಪ್ಸ್, ಕಿರ್ಲೋಸ್ಕರ್ ಯಂತ್ರೋಪರಣಗಳು. ಹಲವಾರು ಹತ್ತಿ ಗಿರಣಿಗಳು, ವನಸ್ಪತಿ, ಕಾಫಿ ಮತ್ತು ಹೊಗೆಸೊಪ್ಪನ್ನು ಹದ ಮಾಡುವ ಕೇಂದ್ರಗಳು, ಭತ್ತದ ಮತ್ತು ಎಣ್ಣೆ ಗಿರಣಿಗಳು, ಮರಕೊಯ್ಯುವ ಕಾರ್ಖಾನೆಗಳು, ಮುದ್ರಣಾಲಯಗಳೂ ಮುಖ್ಯವಾದುವು. ನೇರವಾಗಿ ಸರ್ಕಾರದ ಮಾಲೀಕತ್ವದಲ್ಲಿ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಮೈಸೂರು ಸಾಬೂನು ಕಾರ್ಖಾನೆ, ವಿದ್ಯುತ್ ಉಪಕರಣಗಳ ಕಾರ್ಖಾನೆ, ಗಂಧವೆಣ್ಣೆ ಕಾರ್ಖಾನೆ, ರೇಷ್ಮೆನೇಯ್ಗೆ, ಸರ್ಕಾರೀ ಮುದ್ರಣಾಲಯ ಮುಖ್ಯವಾದುವು.

ಉಳಿದ ಕರ್ನಾಟಕದ ಜಿಲ್ಲೆಗಳಲ್ಲಿ ಇಷ್ಟು ಪ್ರಗತಿ ಕಂಡುಬಂದಿದ್ದರೂ, ಸ್ವಲ್ಪ ಮಟ್ಟಿನ ಕೈಗಾರಿಕಾಭಿವೃದ್ಧಿ ಉಂಟಾಗಿತ್ತು. ಗುಲ್ಬರ್ಗಾ, ಧಾರವಾಡ ಮತ್ತು ಬೆಳಗಾಂ ಜಿಲ್ಲೆಗಳ ಹತ್ತಿ ಗಿರಣಿಗಳು, ಗುಲ್ಬರ್ಗಾ ಜಿಲ್ಲೆಯ ಸಿಮೆಂಟು ಕಾರ್ಖಾನೆ, ಧಾರವಾಡ ಮತ್ತು ಬೆಳಗಾಂ ಜಿಲ್ಲೆಗಳ ಮರಕೊಯ್ಯುವ ಕಾರ್ಖಾನೆಗಳು, ಮಂಗಳೂರು ಬಳಿಯ ಹೆಂಚಿನ ಕಾರ್ಖಾನೆಗಳು, ಮುದ್ರಣಾಲಯಗಳೂ, ಹುಬ್ಬಳ್ಳಿಯ ರೈಲ್ವೇ ವರ್ಕ್‌ಷಾಪ್ ಮುಂತಾಗಿ. ಅಲ್ಲದೆ ವ್ಯಾಪಕವಾಗಿ ಸಣ್ಣ ಮತ್ತು ಗ್ರಾಮ ಕೈಗಾರಿಕೆಗಳೂ ವೃದ್ಧಿಯಾಗಿದ್ದವು. ಉದಾಹರಣೆಗೆ, ಕೈಮಗ್ಗದ ಉದ್ಯಮ, ಚರ್ಮಕೈಗಾರಿಕೆ, ವ್ಯವಸಾಯದ ಉಪಕರಣಗಳ ಕೈಗಾರಿಕೆ, ಎಣ್ಣೆ ಗಾಣಗಳು, ನಾರಿನ ಉದ್ಯಮ, ಚಿತ್ರದ ವಸ್ತುಗಳು, ಬೀದರ್ ಜಿಲ್ಲೆಯ ಬಿದ್ರಿ ಲೋಹದ ಕರಕುಶಲವಸ್ತುಗಳು. ಈ ಭಾಗದ ಅನೇಕ ಉದ್ಯಮಗಳು ವಿದ್ಯುಚ್ಛಕ್ತಿಯ ಅಭಾವದಿಂದ ವಿಕಾಸಗೊಳ್ಳದೇ ಉಳಿದಿದ್ದುವು.

2.5. ಹೊಸರಾಜ್ಯ ಸ್ಥಾಪನೆಯಾದಾಗ ಸಾರಿಗೆ ಸೌಲಭ್ಯಗಳಲ್ಲಿ ಮುಖ್ಯವಾದುವು, ರೈಲ್ವೆ ಮತ್ತು ರಸ್ತೆ ಸಾರಿಗೆಗಳು ರಾಜ್ಯದಲ್ಲಿ ಒಟ್ಟು 2,757 ಕಿ.ಮೀ. ಉದ್ದದ ರೈಲು ಮಾರ್ಗವಿತ್ತು. ಇದರಲ್ಲಿ ಬ್ರಾಡ್‌ಗೇಜ್ ಮಾರ್ಗ 483 ಕಿ.ಮೀ. (ಗುಲ್ಬರ್ಗಾ-ರಾಯಚೂರು ಜಿಲ್ಲೆಗಳಲ್ಲಿ ಹಾದು ಹೋಗುವ ಮದ್ರಾಸ್-ಬೊಂಬಾಯಿ ಮಾರ್ಗ, ಬೆಂಗಳೂರು-ಮದ್ರಾಸಿನ ಮಾರ್ಗದ ಸ್ವಲ್ಪ ಭಾಗ) ಉಳಿದ ಪ್ರಮುಖ ಮಾರ್ಗಗಳೆಲ್ಲ ಮೀಟರ್‌ಗೇಜಿನವು. ನ್ಯಾರೋಗೇಜ್ 164 ಕಿ.ಮೀ. ರಾಜ್ಯ ಪುನರ್ವಿಂಗಡಣೆ ಸಂದರ್ಭದಲ್ಲಿ ರಾಜ್ಯದಲ್ಲಿ ಒಟ್ಟು 4,344 ಕಿ.ಮೀ. ಉದ್ದದ ರಸ್ತೆಗಳಾದುವು. ಇವುಗಳಲ್ಲಿ ಸುಧಾರಿತ ರಸ್ತೆ 22,185ಕಿ.ಮೀ. ಕಚ್ಚಾರಸ್ತೆ 21,263 ಕಿ.ಮೀ.ಗಳು, ಅಧಿಕೃತ ದಾಖಲಾತಿ ಹೊಂದಿದ ಸರಕು ವಾಹನಗಳ ಸಂಖ್ಯೆ 7,487. ಬಸ್ಸುಗಳ ಸಂಖ್ಯೆ 2,843 ಮತ್ತು ಮೋಟಾರ್ ಕಾರುಗಳು 10,838. ರಾಷ್ಟ್ರೀಕೃತ ರಸ್ತೆ ಸಾರಿಗೆ ವ್ಯವಸ್ಥೆಯಲ್ಲಿ ಗುಲ್ಬರ್ಗಾ ಮತ್ತು ಬೆಳಗಾಂ ವಿಭಾಗಗಳ ಎಲ್ಲಾ ಮಾರ್ಗಗಳೂ, ಹಿಂದಿನ ಮೈಸೂರಿನ ಕೆಲವು ಮಾರ್ಗಗಳೂ, ಬೆಂಗಳೂರು ಮತ್ತು ಮೈಸೂರು ನಗರ ಸಾರಿಗೆಗಳೂ ಸೇರಿದ್ದವು.

2.6. ಶಿಕ್ಷಣದ ವಿಷಯದಲ್ಲಿ ಹಿಂದಿನ ಮೈಸೂರು ರಾಜ್ಯ, ಬೆಳಗಾಂ ವಿಭಾಗ, ದಕ್ಷಿಣ ಕನ್ನಡ ಮತ್ತು ಕೊಡಗು ಪ್ರದೇಶಗಳು ಸ್ವಲ್ಪಮಟ್ಟಿಗೆ ಮುಂದುವರಿದಿದ್ದರೂ ಹೈದರಾಬಾದ್ ರಾಜ್ಯದಿಂದ ಬಂದ ಪ್ರದೇಶಗಳು ಬಹಳ ಹಿಂದುಳಿದಿದ್ದವು. 1956–57ರಲ್ಲಿ ರಾಜ್ಯದಲ್ಲಿ ಒಟ್ಟು 22,803 ಪ್ರಾಥಮಿಕ ಶಾಲೆಗಳಲ್ಲಿ 1,727,248 ಮಕ್ಕಳೂ, 535 ಹೈಸ್ಕೂಲುಗಳಲ್ಲಿ 178,849ವಿದ್ಯಾರ್ಥಿಗಳೂ, 88 ಕಾಲೇಜುಗಳಲ್ಲಿ 30,490 ವಿದ್ಯಾರ್ಥಿಗಳೂ ಕಲಿಯುತ್ತಿದ್ದರು. ಅಲ್ಲದೆ ರಾಜ್ಯದಲ್ಲಿ 6 ಎಂಜಿನಿಯರಿಂಗ್ ಕಾಲೇಜುಗಳೂ, 2 ವೈದ್ಯಕೀಯ ಕಾಲೇಜುಗಳೂ, 2 ಕೃಷಿ ಕಾಲೇಜುಗಳೂ, 14 ಪಾಲಿಟೆಕ್ನಿಕ್‌ಗಳೂ ಇದ್ದುವು. ಆರೋಗ್ಯ ಸೇವೆಗಳು ಯಾವಾಗಲೂ ಕರ್ನಾಟಕದಲ್ಲಿ ಪ್ರಾಮುಖ್ಯ ಪಡೆದಿವೆ, ಪಟ್ಟಣಗಳಲ್ಲಿ ಅಲ್ಲದೆ ಗ್ರಾಮ ಪ್ರದೇಶಗಳಲ್ಲಿ ಸಹ

ನೂತನ ರಾಜ್ಯದಲ್ಲಿ ಒಟ್ಟು 619 ಔಷಧಾಲಯಗಳೂ, 157 ಆಸ್ಪತ್ರೆಗಳೂ ಇದ್ದುವು. ಔಷಧಾಲಯಗಳ ಪೈಕಿ 583 ಹಳೆಯ ಮೈಸೂರು ರಾಜ್ಯಕ್ಕೆ ಸೇರಿದ್ದವು. ಹೊಸ ರಾಜ್ಯದ ಜನಸಂಖ್ಯೆ ಹೆಚ್ಚು ಕಡಿಮೆ ದ್ವಿಗುಣಗೊಂಡಾಗ ಈ ಸೌಲಭ್ಯಗಳು ಏನೇನೂ ಸಾಲದಾದವು.

3.1. ಕನ್ನಡನಾಡಿನ ಜನರಿಗೆ ಉತ್ತಮ ಜೀವನದ ಅವಕಾಶಗಳನ್ನು ನಿರೀಕ್ಷಿಸುವ ಕಾರ್ಯದಲ್ಲಿ ಸರಕಾರವು ಕ್ರಿಯಾತ್ಮಕವಾದ ಮತ್ತು ನಿರ್ಣಾಯಕಪಾತ್ರವನ್ನು ವಹಿಸಬೇಕಾಯಿತು. ಆಗ ಸರಕಾರಕ್ಕೆ ಇದ್ದ ವಾರ್ಷಿಕ ಆದಾಯವು ಕೇವಲ 58.14 ಕೋಟಿ ರೂ.ಗಳಾಗಿದ್ದು ವೆಚ್ಚ 53.10 ಕೋಟಿರೂಗಳಾಗಿತ್ತು. ಅಭಿವೃದ್ಧಿಕಾರ್ಯಗಳಿಗೆ ಕೇವಲ ಐದು ಕೋಟಿ ರೂ.ಗಳ ಹೆಚ್ಚುವರಿ ಸಾಧ್ಯವಿತ್ತು. ಇದರ ಜೊತೆಗೆ ಸಾಲಗಳನ್ನು ಎತ್ತಿ ಸಂಗ್ರಹಿಸಿದ ಹಣವೂ ಸೇರಿ ಬಂಡವಾಳ ಧನವಾಗಬೇಕಾಗಿತ್ತು.

ರಾಜ್ಯದ ಮುಂದಿದ್ದ ಪ್ರಮುಖ ಆರ್ಥಿಕ ಸಮಸ್ಯೆಗಳೆಂದರೆ, (1) ಆಹಾರ ಮತ್ತು ಇತರ ಕೃಷಿ ಉತ್ಪನ್ನಗಳ ಹೆಚ್ಚು ಉತ್ಪಾದನೆ. (2) ಉದ್ಯೋಗದ ಅವಕಾಶಗಳನ್ನು ಹೆಚ್ಚಿಸಲು ಕೈಗಾರಿಕೆಗಳ ಅಭಿವೃದ್ಧಿ. (3) ರಾಜ್ಯದ ವಿವಿಧ ಪ್ರದೇಶಗಳ ಆರ್ಥಿಕ ಅಸಮತೆಯ ನಿವಾರಣೆ. ಈ ಗುರಿಗಳನ್ನು ಸಾಧಿಸಲು ಬೇಕಾದ ಆರ್ಥಿಕ ಸಾಮಾಜಿಕ ನೆಲಗಟ್ಟನ್ನು ರಚಿಸಲು ಯೋಜನೆಗಳಲ್ಲಿ ಪ್ರಾಶಸ್ತ್ಯ ನೀಡಲಾಯಿತು. ಈ ನೆಲಗಟ್ಟಿನ ಮುಖ್ಯ ಅಂಗಗಳು-ನೀರಾವರಿ ಸೌಕರ್ಯಗಳು, ವಿದ್ಯುಚ್ಛಕ್ತಿ ಉತ್ಪಾದನೆ ಸಾರಿಗೆಸಂಪರ್ಕಗಳು, ಶಿಕ್ಷಣ ಮತ್ತು ಆರೋಗ್ಯ ಸೇವೆಗಳು, ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಕಾಲದಲ್ಲೇ ಹಳೆಯ ಕ್ಷೇತ್ರಗಳನ್ನು ಹೆಚ್ಚು ದಕ್ಷತೆಯಿಂದಲೂ ವಿಸ್ತೃತ ಪ್ರಮಾಣದಲ್ಲೂ ಮುಂದುವರಿಸಬೇಕಾಯಿತು.

3.2. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಹಜವಾಗಿ ಆದ್ಯತೆ ಪಡೆದ ಕ್ಷೇತ್ರಗಳಿಗೆ ಹೆಚ್ಚು ಅಭಿವೃದ್ಧಿ ವೆಚ್ಚವನ್ನು ನಿಗದಿಮಾಡಲಾಯಿತು.

ಕೋಟಿ ರೂ.ಗಳಲ್ಲಿ

ಕ್ಷೇತ್ರ	ಅಂದಾಜು ವೆಚ್ಚ	ಒಟ್ಟು ಅಂದಾಜಿನ ಶೇ. ಪ್ರಮಾಣ	ವಾಸ್ತವ ವೆಚ್ಚ
1. ಕೃಷಿ ಮತ್ತು ಸಂಬಂಧ ಚಟುವಟಿಕೆಗಳು	20.08	13.84	18.85
2. ಸಮುದಾಯ ಅಭಿವೃದ್ಧಿ ಮತ್ತು ಸಹಕಾರ	10.22	7.04	10.58
3. ನೀರಾವರಿ	32.99	22.73	27.10

4. ವಿದ್ಯುಚ್ಛಕ್ತಿ	27.28	18.80	26.61
5. ಸಾರಿಗೆ ಮತ್ತು ಸಂಪರ್ಕ	10.02	6.90	14.87
6. ಶಿಕ್ಷಣ, ಆರೋಗ್ಯ ಮತ್ತು ಸಮಾಜ ಕಲ್ಯಾಣ	31.42	21.65	29.60
7. ಕೈಗಾರಿಕೆಗಳು	11.79	8.12	12.10
8. ಇತರ ವೆಚ್ಚಗಳು	1.33	0.92	0.56
	145.13	100.00	140.27

3.3. ಮಳೆಯನ್ನೇ ನಂಬಿ ಕೃಷಿಯಲ್ಲಿ ಯಶಸ್ಸು ಪಡೆಯುವುದು ಅದೃಷ್ಟದ ಮಾತಾಗಿತ್ತು. ವ್ಯವಸಾಯ ಕ್ಷೇತ್ರದಲ್ಲಿ ಭರವಸೆಯ ಫಲ ಪಡೆಯಬೇಕಾದರೆ ಶಾಶ್ವತ ನೀರಾವರಿಯ ಅಗತ್ಯ ಬಹಳವಾಗಿದೆ. ರಾಜ್ಯ ಅಸ್ತಿತ್ವಕ್ಕೆ ಬಂದಾಗಿನಿಂದ ಮೊದಲನೆಯ ಯೋಜನೆಯಲ್ಲಿ ಪ್ರಗತಿಯಲ್ಲಿದ್ದ ಹನ್ನೊಂದು ನೀರಾವರಿಯೋಜನೆಗಳ ಜೊತೆಗೆ ಎರಡನೆಯ ಯೋಜನೆಯ ಅವಧಿಯಲ್ಲಿ ಮೂರು ದೊಡ್ಡ ಯೋಜನೆಗಳನ್ನು, ಹನ್ನೊಂದು ಮಧ್ಯಮ ಪ್ರಮಾಣದ ಯೋಜನೆಗಳನ್ನು ಪ್ರಾರಂಭಿಸಲಾಯಿತು. ದೊಡ್ಡ ಯೋಜನೆಗಳು—ತುಂಗಭದ್ರಾ, ಮೇಲ್ಮಟ್ಟದನಾಲೆ (ಮೊದಲ ಹಂತ). ಘಟಪ್ರಭಾ (ಎರಡನೆ ಹಂತ) ಮತ್ತು ಮೈಸೂರು ಜಿಲ್ಲೆಯ ಕಬಿನಿ ಜಲಾಶಯ. ಮಧ್ಯಮ ಪ್ರಮಾಣದ ಯೋಜನೆಗಳು—ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ. ಚಿಕ್ಕಮಗಳೂರು ಜಿಲ್ಲೆಯ ಜಂಪದಹಳ್ಳಿ. ಗುಲ್ಬರ್ಗಾ ಜಿಲ್ಲೆಯ ಅತ್ತಿಕೊಳ್ಳ, ಉತ್ತರ ಕನ್ನಡ ಜಿಲ್ಲೆಯ ಧರ್ಮಾ. ಮೈಸೂರು ಜಿಲ್ಲೆಯ ಚಿಕ್ಕ ಹೊಳೆ ಮತ್ತು ಹೆಬ್ಬಳ್ಳ. ತುಮಕೂರು ಜಿಲ್ಲೆಯ ಮಂಗಳಾ, ರಾಯಚೂರು ಜಿಲ್ಲೆಯ ಕನಕನಾಲ, ಬಿಜಾಪುರ ಜಿಲ್ಲೆಯ ನಾಗತಾಣ. ಎರಡನೆಯ ಯೋಜನೆಯ ಅಂತ್ಯದ ವೇಳೆಗೆ ರಾಜ್ಯದ ದೊಡ್ಡ ಮತ್ತು ಪ್ರಮಾಣದ ಮಧ್ಯಮ ನೀರಾವರಿ ಯೋಜನೆಗಳಿಂದ ಕಲ್ಪಿಸಿದ ನೀರಾವರಿ ಸಾಮರ್ಥ್ಯ ಒಟ್ಟು 4.6 ಲಕ್ಷ ಎಕರೆಗಳು. ಇವರಲ್ಲಿ ವಾಸ್ತವವಾಗಿ ನೀರಾವರಿಗೆ ಒಳಪಟ್ಟ ಭೂಮಿ 2.91 ಲಕ್ಷ ಎಕರೆಗಳು.

3.4. ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ಕಾರ್ಯಕ್ರಮಗಳಲ್ಲಿ ನೀರಾವರಿ ಕಾಮಗಾರಿಗಳೇ ಅಲ್ಲದೆ. ಭೂ ಅಭಿವೃದ್ಧಿ ಸಾರಗೊಬ್ಬರಗಳ ಬಳಕೆ. ಸುಧಾರಿತ ಬೀಜಗಳ ಪೂರೈಕೆ. ಸಸ್ಯಸಂರಕ್ಷಣೆ ಮುಂತಾದ ತೀವ್ರ ಬೇಸಾಯಕ್ರಮಗಳನ್ನು ಕೈಗೊಳ್ಳಲಾಯಿತು. ವ್ಯವಸಾಯಕ್ಕೆ ಹೆಚ್ಚು ಜಮೀನನ್ನು ಒದಗಿಸಲು ತೀವ್ರಗತಿಯಲ್ಲಿ ಯಂತ್ರಗಳ ಉಪಯೋಗವಾಯಿತು. ರಾಸಾಯನಿಕ ಗೊಬ್ಬರಗಳನ್ನು ಬಳಕೆಗೆ ತರುವಂತೆ ರೈತರಲ್ಲಿ ವ್ಯವಸಾಯ ಇಲಾಖೆಯು ದೊಡ್ಡ ಪ್ರಚಾರವನ್ನು ಕೈಗೊಂಡಿತು.

ಎರಡನೆಯ ಯೋಜನೆಯ ಆರಂಭದಲ್ಲಿ ಇವುಗಳ ಉಪಯೋಗವು 20,242 ಟನ್ನುಗಳಷ್ಟಿದ್ದು, ಯೋಜನೆಯ ಅಂತ್ಯದ ವೇಳೆಗೆ 50,574 ಟನ್ನುಗಳಿಗೇರಿತು. ಗ್ರಾಮಾಂತರ ಕಾಂಪೋಸ್ಟ್ ಗೊಬ್ಬರದ ಸಂಗ್ರಹಣೆ ಮತ್ತು ಸರಬರಾಜು 625,000 ಟನ್ನುಗಳಿಂದ 31,11,145 ಟನ್ನುಗಳಷ್ಟಾಯಿತು. ಸುಧಾರಿತ ಶುದ್ಧ ಬೀಜಗಳನ್ನು ಒದಗಿಸಲು ಮತ್ತು ಉತ್ತಮ ಬೀಜಗಳ ಉತ್ಪಾದನೆಗೆ ವ್ಯಾಪಕ ಕಾರ್ಯಕ್ರಮಗಳು ಆರಂಭವಾದುವು

3.5. ಕೃಷಿ ಪ್ರಧಾನವಾದ ಅರ್ಥವ್ಯವಸ್ಥೆಯಲ್ಲಿ ಪಶುಸಂಪತ್ತಿನ ಪಾತ್ರ ಹಿರಿದಾದುರಿಂದ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ಕಾರ್ಯಗಳ ಜೊತೆಗೇ ಪಶು ಸಂಗೋಪನಾ ಇಲಾಖೆಯ ಕಾರ್ಯಕ್ರಮಗಳನ್ನು ವಿಸ್ತರಿಸಲಾಯಿತು. ಕರ್ನಾಟಕ ರಾಜ್ಯದಲ್ಲಿ ಪಶುಗಳ ತಳಿಸುಧಾರಣೆ, ಉತ್ತಮ ಮೇವು ಪೂರೈಕೆ, ರೋಗ ನಿಯಂತ್ರಣ ಕ್ರಮಗಳು ಅತ್ಯಂತ ಅವಶ್ಯಕವಾಗಿದ್ದವು. 1956ರಲ್ಲಿ ಹೆಸರುಘಟ್ಟದಲ್ಲಿ ಪಶು ಸಂವರ್ಧನೆ ಮತ್ತು ಸಂಶೋಧನಾ ಕೇಂದ್ರವನ್ನು, ಒಂದು ದೊಡ್ಡ ಕೋಳಿ ಸಾಕಣೆ ಕೇಂದ್ರವನ್ನೂ ಸ್ಥಾಪಿಸಲಾಯಿತು. ಕುರಿ, ಕೋಳಿ ಮತ್ತು ಹಂದಿ ಅಭಿವೃದ್ಧಿ ಯೋಜನೆಗಳನ್ನು ಪ್ರಾರಂಭಿಸಲಾಯಿತು. ಪಶುವೈದ್ಯ ಆಸ್ಪತ್ರೆಗಳ ಸಂಖ್ಯೆಯನ್ನು 226 ರಿಂದ 338ಕ್ಕೆ ಹೆಚ್ಚಿಸಿ, 1958–59ರಲ್ಲಿ ಬೆಂಗಳೂರಿನಲ್ಲಿ ಪಶುವೈದ್ಯ ಕಾಲೇಜನ್ನು ಆರಂಭಿಸಲಾಯಿತು.

3.6. ಮೊದಲನೆಯ ಯೋಜನೆಯಲ್ಲಿ ಪ್ರಗತಿಯಲ್ಲಿದ್ದ ವಿದ್ಯುತ್ ಉತ್ಪಾದನಾ ಕೇಂದ್ರಗಳ ನಿರ್ಮಾಣ ಕಾರ್ಯವನ್ನು ಮುಂದುವರಿಸಲು ಸುಮಾರು 26 ಕೋಟಿ ರೂ.ಗಳನ್ನು ಖರ್ಚು ಮಾಡಲಾಯಿತು. ಲಭ್ಯವಾದ ಹೆಚ್ಚುವರಿ ವಿದ್ಯುತ್ತಿನ ಕಾರಣದಿಂದ ಹೆಚ್ಚು ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಯಿತು. ರಾಜ್ಯ ಅಸ್ತಿತ್ವಕ್ಕೆ ಬಂದಾಗ 3,381 ಹಳ್ಳಿಗೆ ವಿದ್ಯುತ್ ಸೌಕರ್ಯವಿದ್ದು 1961ರ ವೇಳೆಗೆ ಈ ಸಂಖ್ಯೆ 4,068ಕ್ಕೆ ಏರಿತು. ಇದೇ ಅವಧಿಯಲ್ಲಿ ವಿದ್ಯುತ್ ಪಡೆದ ನೀರಾವರಿ ಪಂಪ್‌ಸೆಟ್ಟುಗಳ ಸಂಖ್ಯೆ 7,923 ರಿಂದ 16.819ಕ್ಕೆ ಏರಿತು.

3.7. ಎರಡನೆಯ ಯೋಜನೆಯ ಅವಧಿಯಲ್ಲಿ ವಿದ್ಯುಚ್ಛಕ್ತಿಯ ಅಭಾವ ಹೆಚ್ಚಾಗಿದ್ದುದರಿಂದ ಕೈಗಾರಿಕಾಭಿವೃದ್ಧಿಗೆ ಮಾಡಿದ ವೆಚ್ಚದಲ್ಲಿಸುಮಾರು 12 ಕೋಟಿ ರೂ. ಗಳಲ್ಲಿ ಮುಕ್ಕಾಲು ಭಾಗ ಗ್ರಾಮಾಂತರ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ವಿನಿಯೋಗವಾಯಿತು. ಈ ಅವಧಿಯಲ್ಲಿ ಹೊಸ ದೊಡ್ಡ ಕಾರ್ಖಾನೆಗಳ ಸ್ಥಾಪನೆಗೆ ವಿದ್ಯುತ್ ಮತ್ತು ಹಣದ ಕೊರತೆ ಉಂಟಾದುದರಿಂದ, ಆಗಲೇ ಅಸ್ತಿತ್ವದಲ್ಲಿದ್ದ ಸರ್ಕಾರಿ ಸಾಬೂನು ಕಾರ್ಖಾನೆ, ಗಂಧದೆಣ್ಣೆ ಕಾರ್ಖಾನೆ, ಕೃಷಿ ಉಪಕರಣಗಳ ಕಾರ್ಖಾನೆಯನ್ನು ವಿಸ್ತರಿಸಲಾಯಿತು. ಕಬ್ಬಿಣ ಮತ್ತು ಸಿಮೆಂಟ್ ಉತ್ಪಾದನೆಯನ್ನು ಹೆಚ್ಚಿಸುವ ಕಾರ್ಯಕ್ರಮಗಳು ಪೂರ್ಣಗೊಂಡವು ಮತ್ತು ಪಶ್ಚಿಮ ಜರ್ಮನಿಯ ಸಹಕಾರದೊಂದಿಗೆ ಹೊಸ ವಿದ್ಯುತ್ ಉಪಕರಣಗಳ ಕಾರ್ಖಾನೆಯನ್ನು ಬೆಂಗಳೂರಲ್ಲಿ

ಸ್ಥಾಪಿಸಲು ಎಲ್ಲ ಸಿದ್ಧತೆಗಳೂ ಆಗಿದ್ದವು. ಸಣ್ಣ ಕೈಗಾರಿಕೆಗಳ ತೀವ್ರ ಹಾಗೂ ಸಮನ್ವಯ ರೀತಿಯ ಅಭಿವೃದ್ಧಿಗಾಗಿ ಬೆಂಗಳೂರು, ಹುಬ್ಬಳ್ಳಿ, ರಾಮನಗರ, ಮೈಸೂರು, ಹರಿಹರ, ಬೆಳಗಾಂ, ಮಂಗಳೂರು, ಗುಲ್ಬರ್ಗಾಗಳಲ್ಲಿ ಕೈಗಾರಿಕಾ ಎಸ್ಟೇಟುಗಳನ್ನು ನಿರ್ಮಾಣ ಮಾಡಲಾಯಿತು. ಗ್ರಾಮಾಂತರ ಕಸಬುದಾರರಿಗೆ ತರಪೇತಿ ನೀಡಲು ಮಾದರೀ ಕೇಂದ್ರಗಳನ್ನು, ಸಣ್ಣ ಕೈಗಾರಿಕೆ ಉದ್ಯಮಗಳಿಗೆ ಸಾಲ ಒದಗಿಸಲು ಕೈಗಾರಿಕಾ ಹಣಕಾಸಿನ ನೆರವಿನ ಬ್ಯಾಂಕನ್ನೂ, ಕರಕುಶಲ ಕಸಬುಗಳ ಸಹಕಾರ ಸಂಘಗಳನ್ನೂ, 1960ರಲ್ಲಿ ಸಣ್ಣ ಕೈಗಾರಿಕೆ ಕಾರ್ಪೋರೇಷನ್ನನ್ನೂ ಸ್ಥಾಪಿಸಲಾಯಿತು. ಕೈಮಗ್ಗದ ಉದ್ಯಮವನ್ನು ವಿಕಾಸಗೊಳಿಸುವ ಉದ್ದೇಶದಿಂದ ನೇಕಾರರಿಗೆ ಬಂಡವಾಳ ಮತ್ತು ಕಚ್ಚಾಮಾಲುಗಳ ಪೂರೈಕೆಗೂ, ಸುಧಾರಿತ ಉಪಕರಣಗಳ ಪೂರೈಕೆಗೂ, ಹೊಸ ವಿನ್ಯಾಸ ಬಟ್ಟೆಗಳ ತಯಾರಿಗೂ, ಉತ್ಪನ್ನಗಳ ಮಾರಾಟಕ್ಕೂ ಏರ್ಪಾಡುಗಳನ್ನು ಮಾಡಲಾಯಿತು. ರಾಜ್ಯದ 210 ಕೈಮಗ್ಗದ ಸಹಕಾರ ಸಂಘಗಳಿಗೆ 2000 ವಿದ್ಯುತ್‌ಚಾಲಿತ ಮಗ್ಗಗಳನ್ನು ಒದಗಿಸಿ ಉತ್ಪಾದನೆ ಹೆಚ್ಚಿಸಲು ಅವಕಾಶಮಾಡಲಾಯಿತು. ರೇಷ್ಮೆ ಅಭಿವೃದ್ಧಿಯ ಕಾರ್ಯಕ್ರಮದ ಅಂಗವಾಗಿ ಹಿಪ್ಪುನೇರಳೆ ಬೆಳೆ ವಿಸ್ತರಣೆಯನ್ನು, ಅಧಿಕ ಕಚ್ಚಾರೇಷ್ಮೆಯ ಉತ್ಪಾದನೆಯನ್ನೂ ರೇಷ್ಮೆ ಗುಣ ಸುಧಾರಣೆಯನ್ನೂ ಪ್ರೋತ್ಸಾಹಿಸಲಾಯಿತು.

3.8. 1950–60ರ ಅವಧಿಯಲ್ಲಿ ಕೇಂದ್ರ ಸರ್ಕಾರವು ತನ್ನ ಮಾಲೀಕತ್ವದ ಕೆಲವು ಉದ್ಯಮಗಳನ್ನು ಕರ್ನಾಟಕದಲ್ಲಿ ಸ್ಥಾಪಿಸಿತು. ಮೊದಲೇ ಇದ್ದ ಹಿಂದೂಸ್ಥಾನ್ ವಿಮಾನ ಕಾರ್ಖಾನೆಯ ಜೊತೆಗೆ ಹಿಂದೂಸ್ಥಾನ್ ಮೇಷಿನ್‌ಟೂಲ್ಸ್, ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್, ಭಾರತ್ ಎಲೆಕ್ಟ್ರಾನಿಕ್ಸ್, ಭಾರತ್ ಅರ್ತ್‌ಮೂವರ್ಸ್ ಕಾರ್ಖಾನೆಗಳು ತಮ್ಮ ಮೊದಲ ಹಂತದ ಉತ್ಪಾದನೆಯನ್ನು ಆರಂಭಿಸಿದುವು. 1962ರಲ್ಲಿ ಕೇಂದ್ರ ಸರ್ಕಾರವು ಕರ್ನಾಟಕ ಸರ್ಕಾರಕ್ಕೆ ಸೇರಿದ್ದ ಕೋಲಾರ ಚಿನ್ನದ ಗಣಿಗಳನ್ನು ತಾನೇ ವಹಿಸಿಕೊಂಡು ಭಾರತ್ ಗೋಲ್ಡ್ ಮೈನ್ಸ್ ಎಂಬ ಹೆಸರನ್ನು ಕೊಟ್ಟಿತು. ಇದೇ ಅವಧಿಯ ಮುಖ್ಯ ಖಾಸಗೀ ಕೈಗಾರಿಕೆಗಳು—ಬೆಂಗಳೂರಿನ ಮೋಟಾರ್ ಇಂಡಸ್ಟ್ರೀಸ್ ಕಂಪನಿ (ಮೈಕೋ), ಬೆಳಗೊಳದ ಕಾಗದದ ಕಾರ್ಖಾನೆ, ದಾಂಡೇಲಿಯ ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಸ್, ಬೆಂಗಳೂರಿನ ಕಿರ್ಲೋಸ್ಕರ್ ಎಲೆಕ್ಟ್ರಿಕಲ್ಸ್, ಅಮ್ಮಸಂದ್ರದ ಸಿಮೆಂಟ್ ಕಾರ್ಖಾನೆಗಳು.

3.9. ರಸ್ತೆ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ರಸ್ತೆ ನಿರ್ಮಾಣ, ರಸ್ತೆ ಸುಧಾರಣೆ, ಸೇತುವೆಗಳ ನಿರ್ಮಾಣ, ರಸ್ತೆಗಳನ್ನು ಸಿಮೆಂಟು ಅಥವಾ ಟಾರು ಮಾಡುವಿಕೆ, ಗ್ರಾಮಾಂತರ ಸಂಪರ್ಕ ರಸ್ತೆಗಳೂ ಸೇರಿದವು. ಕೇಂದ್ರ ಸರ್ಕಾರದ ನೆರವಿನಿಂದ ಕೈಗೊಂಡ ಕಾಮಗಾರಿಗಳಲ್ಲಿ, ಅಂತರರಾಜ್ಯ ಪ್ರಾಮುಖ್ಯ ಇರುವ ರಸ್ತೆಗಳ ಅಭಿವೃದ್ಧಿ, ಕರಾವಳಿ ಭಾಗಕ್ಕೆ ಅದಿರನ್ನೂ, ಸಕ್ಕರೆ ಕಾರ್ಖಾನೆಗಳಿಗೆ ಕಬ್ಬನ್ನೂ ಸಾಗಿಸಲು ಸಹಾಯವಾಗುವ ರಸ್ತೆಗಳು ಮತ್ತು ಪಶ್ಚಿಮ ಕರಾವಳಿ ರಸ್ತೆಯ ನಿರ್ಮಾಣವು ಸೇರಿ

ದ್ದುವು. ಇದರ ಪರಿಣಾಮವಾಗಿ, 1956–57 ರಿಂದ 1960–61ರ ಅವಧಿಯಲ್ಲಿ ಸುಧಾರಿತ ರಸ್ತೆಗಳ ಉದ್ದ 22,185 ಕಿ.ಮೀ. ಗಳಿಂದ 27,315 ಕಿ.ಮೀ. ಗಳಲ್ಲಿಗೆ ಹೆಚ್ಚಿತು. ಮೋಟಾರು ಬಸ್ಸುಗಳ ಸಂಖ್ಯೆ 44.56ಕ್ಕೂ ಸರಕುವಾಹನಗಳ ಸಂಖ್ಯೆ 10,656ಕ್ಕೂ ಏರಿತು. ಇಡೀ ರಾಜ್ಯಕ್ಕೆ ಯೋಜಿತ ಹಾಗೂ ವ್ಯವಸ್ಥಿತ ರೀತಿಯಲ್ಲಿ ಸಾರಿಗೆ ಸೌಲಭ್ಯಗಳನ್ನು ಒದಗಿಸುವಲ್ಲಿ 1961 ರಲ್ಲಿರ ಸ್ಥಾಪಿತವಾದ ರಾಜ್ಯರಸ್ತೆ ಸಾರಿಗೆ ಸಂಸ್ಥೆ ಮುಖ್ಯ ಪಾತ್ರ ವಹಿಸಿತು. 1961ರಲ್ಲಿ ರಾಷ್ಟ್ರೀಕೃತ ರಸ್ತೆಸಾರಿಗೆ ಮಾರ್ಗಗಳ ಸಂಖ್ಯೆ 1,060 ಇದ್ದು ವಾಹನಗಳ ಸಂಖ್ಯೆ 1,600 ವಿನಿಯೋಗಿಸಿದ ಬಂಡವಾಳ 919 ಲಕ್ಷ ರೂಗಳು, ಸಿಬ್ಬಂದಿ 9,500 ಸಂಖ್ಯೆ ಆಗಿದ್ದವು.

3.10. ರಾಜ್ಯದ ಅಂಚೆ ಮತ್ತು ತಂತಿ ಕಛೇರಿಗಳ ಸಂಖ್ಯೆ 3,357ರಿಂದ 5,417ಕ್ಕೆರಿತು ರಾಜ್ಯಾದ್ಯಂತ ಶಿಕ್ಷಣದಲ್ಲಿ ಏಕರೂಪತೆಯನ್ನು ತರುವ ಅಂಗವಾಗಿ ಸಾರ್ವತ್ರಿಕ ಶಿಕ್ಷಣವನ್ನು ನರ್ಸರಿ ಶಿಕ್ಷಣ, ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಿಕ್ಷಣ ಮತ್ತು ವಿಶ್ವವಿದ್ಯಾಲಯ ಶಿಕ್ಷಣಗಳೆಂದು ವಿಂಗಡಿಸಲಾಯಿತು. ಶಿಕ್ಷಣದ ಮೇಲಿನ ವೆಚ್ಚ 1956ರಲ್ಲಿ 9.68 ಕೋಟಿ ರೂಗಳಿದ್ದುದು 1961ರಲ್ಲಿ 17.68 ಕೋಟಿ ರೂಗಳಾಯಿತು. ಆರೋಗ್ಯ ಸೌಲಭ್ಯಗಳನ್ನು ರಾಜ್ಯ ಅಸ್ತಿತ್ವಕ್ಕೆ ಬಂದ ವರ್ಷದಿಂದ ಒಂದೇ ಸಮನೆ ವಿಸ್ತರಿಸಲಾಯಿತು. ಈ ವಿಸ್ತರಣೆಯಲ್ಲಿ ಪಾಶ್ಚಾತ್ಯ ರೀತಿಯ ಔಷಧಿ ಪದ್ಧತಿಗಳ ಜೊತೆಯಲ್ಲಿ ಆಯುರ್ವೇದ ಮತ್ತು ಯುನಾನಿ ಪದ್ಧತಿಗಳಿಗೂ ಪ್ರೋತ್ಸಾಹ ನೀಡಲಾಯಿತು.

3.11. ಸಮಾಜದಲ್ಲಿನ ಹಿಂದುಳಿದ ವರ್ಗಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳಿಗೆ ಸೇರಿದ ಜನರ ಕ್ಷೇಮಾಭ್ಯುದಯ ಕಾರ್ಯಕ್ರಮಗಳನ್ನು ಜಾರಿಗೆ ತರಲು ಪ್ರತ್ಯೇಕ ಸಮಾಜ ಕಲ್ಯಾಣ ಇಲಾಖೆಯನ್ನು ಹೊಸರಾಜ್ಯದ ಮೊದಲ ವರ್ಷಗಳಲ್ಲೆ ಸ್ಥಾಪಿಸಲಾಯಿತು. ಈ ವರ್ಗಗಳ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣದ ಜೊತೆಗೆ ಉಚಿತ ವಿದ್ಯಾಲಯಗಳನ್ನು ತೆರೆಯಲಾಯಿತು. ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣದ ಜೊತೆಗೆ ವಿದ್ಯಾರ್ಥಿ ವೇತನಗಳನ್ನು ನೀಡಲಾಯಿತು. ಈ ವರ್ಗದ ಜನರು ತಮ್ಮ ಆದಾಯಗಳನ್ನು ಹೆಚ್ಚಿಸಿಕೊಳ್ಳಲು ಸಹಾಯಕವಾಗುವಂತೆ ಅವರಿಗೆ ಭೂಮಿಯನ್ನು ಹಂಚುವುದೇ ಅಲ್ಲದೆ, ವಸತಿ ಸೌಲಭ್ಯಗಳನ್ನೂ, ಕುಡಿಯುವ ನೀರಿನ ಸೌಕರ್ಯಗಳನ್ನು, ನೀರಾವರಿ ಭಾವಿಗಳನ್ನು ನಿರ್ಮಿಸಲು ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲದ ನೆರವನ್ನೂ ಒದಗಿಸಲಾಯಿತು.

3.12. ಎರಡನೇ ಯೋಜನೆಯ ಅಂತ್ಯದ ವೇಳೆಗೆ ರಾಜ್ಯದ ಒಟ್ಟು ವರಮಾನದಲ್ಲಿ ಈ ರೀತಿ ಬೆಳವಣಿಗೆ ಆಗಿತ್ತು.

		1956	1961
			ಕೋಟಿ ರೂ.ಗಳಲ್ಲಿ
1.	ವ್ಯವಸಾಯ, ಪಶುಪಾಲನೆ, ಅರಣ್ಯ ಮುಂತಾದುವು	304.57	407.51
2.	ಕಾರ್ಖಾನೆಗಳು, ಗಣಿ, ಚಿಕ್ಕ ಉದ್ದಿಮೆ	62.51	89.40
3.	ವಾಣಿಜ್ಯ, ಸಾರಿಗೆ, ಸಂಪರ್ಕ	57.87	78.82
4.	ಸಾರ್ವಜನಿಕ ಆಡಳಿತ, ಗೃಹ ಆಸ್ತಿ ಮುಂತಾದುವು	70.22	91.77
	ಒಟ್ಟು	495.17	667.50

ಜನಸಂಖ್ಯೆಯು 2.14 ಕೋಟಿಗಳಿಂದ 2.33 ಕೋಟಿಗಳಿಗೆ ಹೆಚ್ಚಿದುದರಿಂದ ತಲಾ ವರಮಾನ 230 ರೂ.ಗಳಿಂದ 285 ರೂ.ಗಳಿಗೆ ಮಾತ್ರ ಹೆಚ್ಚಿತು.

3.13. ಮೂರನೆಯ ಪಂಚವಾರ್ಷಿಕ ಯೋಜನೆಯ ವೆಚ್ಚ ಎರಡನೆಯ ಯೋಜನೆಯ ವೆಚ್ಚಕ್ಕಿಂತ ಹೆಚ್ಚಾಗಿತ್ತು.

	ತೃತೀಯ ಯೋಜನೆ 1961–66	ಕೋಟಿ ರೂ.ಗಳಲ್ಲಿ	
		ಅಂದಾಜು ವೆಚ್ಚ	ವಾಸ್ತವ ವೆಚ್ಚ
1.	ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳು	45.44	66.69
2.	ಸಹಕಾರ ಮತ್ತು ಸಮುದಾಯ ಅಭಿವೃದ್ಧಿ	21.22	17.68
3.	ನೀರಾವರಿ	33.10	30.86
4.	ವಿದ್ಯುಚ್ಛಕ್ತಿ	68.98	69.35
5.	ಕೈಗಾರಿಕೆ ಮತ್ತು ಗಣಿ	15.74	15.48
6.	ಸಾರಿಗೆ ಮತ್ತು ಸಂಪರ್ಕ	12.90	22.47
7.	ಸಾಮಾಜಿಕ ಸೇವೆಗಳು (ಶಿಕ್ಷಣ, ಆರೋಗ್ಯ)	48.28	41.09
8.	ಇತರ	0.56	0.52
	ಒಟ್ಟು	246.22	264.14

3.14. ರಾಜ್ಯದ ಪ್ರಮುಖ ಸಮಸ್ಯೆಗಳ ಪರಿಹಾರಕ್ಕೆ ಕೃಷಿ ಅಭಿವೃದ್ಧಿ, ನೀರಾವರಿ ಮತ್ತು ವಿದ್ಯುತ್ ಉತ್ಪಾದನಾ ಯೋಜನೆಗಳು, ಶಿಕ್ಷಣ ಮತ್ತು ಆರೋಗ್ಯ ಸೇವೆಗಳು ಎಂದಿನಂತೆ ಆದ್ಯತೆಗಳನ್ನು ಪಡೆದುವು.

ಮೂರನೆಯ ಯೋಜನೆಯ ಅವಧಿಯನ್ನು ಎರಡನೆ ಯೋಜನೆಯ ಅವಧಿಯಲ್ಲಿ ಕೈಗೊಂಡಿದ್ದ ಯೋಜನೆಗಳ ನಿರ್ಮಾಣವನ್ನು ಮುಂದುವರಿಸಲಾಯಿತು. ಮೊದಲ ಯೋಜನೆಯ ನೀರಾವರಿ ಕಾಮಗಾರಿಗಳು ಬಹುಭಾಗ ಪೂರ್ಣಗೊಂಡುವು. ಅಲ್ಲದೆ ನಾಲ್ಕು ದೊಡ್ಡ ಯೋಜನೆಗಳನ್ನು ಪ್ರಾರಂಭಿಸಲಾಯಿತು. ಇವು ಕೃಷ್ಣಾ· ಮೇಲ್ದಂಡೆ ಯೋಜನೆ (ಬಿಜಾಪುರ ಜಿಲ್ಲೆಯ ಆಲಮಟ್ಟಿ ಮತ್ತು ಗುಲ್ಬರ್ಗಾ ಜಿಲ್ಲೆಯ ನಾರಾಯಣಪುರ ಅಣೆಕಟ್ಟು ಸೇರಿದಂತೆ), ಬೆಳಗಾಂ ಜಿಲ್ಲೆಯ ಮಲಪ್ರಭಾ, ಕೊಡಗು ಜಿಲ್ಲೆಯ ಹಾರಂಗಿ, ಹಾಸನ ಜಿಲ್ಲೆಯ ಹೇಮಾವತಿ ಈ ಯೋಜನೆಯ ಕಾಲದಲ್ಲಿ ಆರಂಭವಾದ ಮಧ್ಯಮ ಪ್ರಮಾಣದ ಯೋಜನೆಗಳು-ಸುವರ್ಣಾವತಿ (ಮೈಸೂರು ಜಿಲ್ಲೆ), ಚಿಟವಾಡಗಿ (ಬಿಜಾಪುರ ಜಿಲ್ಲೆ), ಚಂದ್ರಪಳ್ಳಿ (ಗುಲ್ಬರ್ಗಾ) ಹರಿನಾಲಾ (ಬೆಳಗಾಂ). ನೀರಾವರಿ ಆಗುವ ಪ್ರದೇಶಗಳಲ್ಲಿ ಕಾಲುವೆಗಳ ಮತ್ತು ಸಂಪರ್ಕ ವ್ಯವಸ್ಥೆಗಳ ನಿರ್ಮಾಣ ಭಾರೀ ಪ್ರಮಾಣದಲ್ಲಿ ನಡೆಯಿತು. ಮೂರನೇ ಯೋಜನೆಯ ಅಂತ್ಯದ ವೇಳೆಗೆ ರಾಜ್ಯದ ನಾನಾ ನೀರಾವರಿ ಯೋಜನೆಗಳಿಗೆ 95 ಕೋಟಿ ರೂ.ಗಳು ಖರ್ಚಾಗಿತ್ತು. ಈ ಯೋಜನೆಯ ಅವಧಿಯೊಂದರಿಂದಲೇ ಕಲ್ಪಿಸಿದ ನೀರಾವರಿ ಸಾಮರ್ಥ್ಯ 4.40 ಲಕ್ಷ ಎಕರೆ ಒಟ್ಟು ರಾಜ್ಯದ ನೀರಾವರಿ ಸಾಮರ್ಥ್ಯ 1966 ವೇಳೆಗೆ 9.18 ಲಕ್ಷ ಎಕರೆಯಾಗಿತ್ತು. ಇದರಲ್ಲಿ ನೀರಾವರಿ ಒಳಪಟ್ಟು ಭೂಮಿ 6.95 ಲಕ್ಷ ಎಕರೆ. ಸಣ್ಣ ನೀರಾವರಿ ಕಾಮಗಾರಿಗಳಾದ ಭಾವಿ, ಕೆರೆಗಳ ದುರಸ್ತಿ ಮುಂತಾದುವುಗಳಾಗಿ ಯೋಜನೆಯ ಅಂತ್ಯದ ವೇಳೆಗೆ 25.02 ಕೋಟಿ ರೂ.ಗಳು ಖರ್ಚಾಗಿದ್ದವು ಮತ್ತು 7.12 ಲಕ್ಷ ಎಕರೆಗಳಿಗೆ ನೀರಾವರಿ ಸೌಲಭ್ಯವಿತ್ತು.

3.15. ಬೆಳೆಯುತ್ತಿದ್ದ ಜನಸಂಖ್ಯೆಯನ್ನು ಗಮನಿಸಿ ವ್ಯವಸಾಯದ ಅಭಿವೃದ್ಧಿಗಾಗಿ ವ್ಯಾಪಕವಾದ ಮತ್ತು ದೊಡ್ಡ ಕಾರ್ಯಕ್ರಮವನ್ನು ಅಳವಡಿಸುವುದು ಅನಿವಾರ್ಯವಾಯಿತು. ಅಧಿಕ ಆಹಾರದ ಉತ್ಪಾದನೆಯೇ ಅಲ್ಲದೆ ವಿಸ್ತರಿಸುತ್ತಿದ್ದ ಕೈಗಾರಿಕೆಗಳಿಗೆ ಇತರ ಕೃಷಿ ಉತ್ಪನ್ನಗಳ ಪೂರೈಕೆಯನ್ನೂ ಹೆಚ್ಚಿಸಿ ಕೊಳ್ಳಬೇಕಾಯಿತು. ಕೃಷಿ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ 1,544 ಲಕ್ಷ ರೂ.ಗಳನ್ನು ಒದಗಿಸಲಾಯಿತು. ರೈತರಿಗೆ ಟ್ರಾಕ್ಟರ್, ಪಂಪ್‌ಸೆಟ್ಟು ಮತ್ತು ಡೀಸಲ್ ಯಂತ್ರಗಳನ್ನು ಕಂತುಕೊಳ್ಳುವಿಕೆ ಆಧಾರದ ಮೇಲೆ ಒದಗಿಸಲು ವ್ಯಾಪಕ ಕಾರ್ಯಕ್ರಮಗಳನ್ನು ಆರಂಭಿಸಲಾಯಿತು. ರಸಗೊಬ್ಬರಗಳವಿತರಣೆ ಪ್ರಮಾಣ 1962ರಲ್ಲಿ 50,500 ಟನ್ನುಗಳಿದ್ದು 1966ರ ವೇಳೆಗೆ 120,110 ಟನ್ನುಗಳಿಗೆ ಏರಿತು. ಗ್ರಾಮಾಂತರಗಳಲ್ಲಿ ಕಾಂಪೋಸ್ಟ್ ಗೊಬ್ಬರದ ಬಳಕೆ ಸುಮಾರು 30 ಲಕ್ಷ ಟನ್ನುಗಳಷ್ಟಾಯಿತು. ಸುಧಾರಿತ ಬೀಜಗಳು ಬಹುಬೇಗ

ರೈತರ ಮೆಚ್ಚುಗೆಗೆ ಪಾತ್ರವಾದುವು. 1966–67 ಸಾಲಿನಲ್ಲಿ ಅಧಿಕ ಇಳುವರಿ ಕೊಡುವ ತಳಿಗಳನ್ನು 162,394 ಎಕರೆಗಳಲ್ಲಿ ಬೆಳೆಯಲಾಗಿತ್ತು. ನೀರಾವರಿ ಸೌಕರ್ಯಗಳು ಹೆಚ್ಚಿದಂತೆ ಹೊಸತಳಿಗಳ ಉಪಯೋಗವೂ ಹೆಚ್ಚಿತು. ಸಾಂದ್ರ ಬೇಸಾಯ ಕಾರ್ಯಕ್ರಮ ಜಾರಿಗೆ ಬಂದನಂತರ ಆಹಾರ ಧಾನ್ಯಗಳಉತ್ಪಾದನೆ 1956ರಲ್ಲಿ 38 ಲಕ್ಷ ಟನ್ನುಗಳಿಂದ 1966ರ ವೇಳೆಗೆ ಸುಮಾರು 50 ಲಕ್ಷಟನ್ನುಗಳಿಗೆ ಹೆಚ್ಚಿತು.

3.16. ಪಶುಸಂಗೋಪನಾ ಕಾರ್ಯಕ್ರಮಗಳೂ ವ್ಯಾಪಕವಾಗಿ ಜಾರಿಗೆ ಬಂದುವು. ಬೇಸಾಯಕ್ಕೆ ಉತ್ತಮ ರಾಸುಗಳನ್ನು ಒದಗಿಸುವುದು, ಉತ್ತಮ ಮೇವಿನ ಬೆಳೆಗಳನ್ನು ಬಳಕೆಗೆ ತರುವುದು, ಕೋಳಿ, ಕೋಳಿಮೊಟ್ಟೆಗಳ ಉತ್ಪಾದನೆಯನ್ನು ಹೆಚ್ಚಿಸುವುದು, ಹಾಲಿನ ಉತ್ಪಾದನೆಯನ್ನು ಪ್ರೋತ್ಸಾಹಿಸುವುದು, ಉತ್ತಮ ಉಣ್ಣೆ ಮತ್ತು ಹೆಚ್ಚು ಮಾಂಸಕ್ಕಾಗಿ ಕುರಿತಳಿಗಳನ್ನು ಸುಧಾರಿಸುವುದು ಮುಂತಾದುವು. 1965ರಲ್ಲಿ ವಿಶ್ವಸಂಸ್ಥೆ ಮಕ್ಕಳ ಕ್ಷೇಮ ನಿಧಿಯ ನೆರವಿನಿಂದ ಬೆಂಗಳೂರಿಗೆ ಹಾಲಿನ ಡೈರಿ ಅಸ್ತಿತ್ವಕ್ಕೆ ಬಂದಿತು. ಗ್ರಾಮಾಭಿವೃದ್ಧಿಯ ಅಂಗವಾಗಿ ಹೈನುಗಾರಿಕೆಗೆ ಪ್ರೋತ್ಸಾಹವನ್ನು ಹೆಚ್ಚಿಸಲಾಯಿತು.

3.17. ಅರಣ್ಯ ಉತ್ಪನ್ನಗಳಿಂದ ಬರುತ್ತಿದ್ದ ವರಮಾನವು ಮೂರನೇ ಯೋಜನೆ ಆರಂಭದಲ್ಲಿ 761ಲಕ್ಷ ರೂಗಳಾಗಿದ್ದು ಯೋಜನೆ ಅಂತ್ಯದ ವೇಳೆಗೆ 1,007 ಲಕ್ಷ ರೂಗಳಿಗೆ ಏರಿತು. ಮರಮುಟ್ಟುಗಳು, ಗಂಧದಮರ ಮತ್ತು ಬೊಂಬುಗಳ ಮಾರಾಟದಿಂದಲೂ, ಮರಕೊಯ್ಯುವ, ಮರ ಹದ ಮಾಡುವ, ಮರ ಸಂಸ್ಕರಿಸುವ ಮತ್ತು ವೃಕ್ಷಾಧಾರಿತ ಕೈಗಾರಿಕೆಗಳ ಸ್ಥಾಪನೆಯಿಂದ ಈ ಹೆಚ್ಚಿನ ವರಮಾನಗಳು ಸಾಧ್ಯವಾದುವು.

ಎರಡನೆಯ ಯೋಜನೆಯ ಅವಧಿಯಲ್ಲಿ ಕೈಗೊಂಡ ಮೀನುಗಾರಿಕೆ ಅಭಿವೃದ್ಧಿ ರಾಜ್ಯಗಳನ್ನು ವಿಸ್ತರಿಸಿ ಹೆಚ್ಚು ಮೀನು ಪಡೆಯುವ ಸಾಮರ್ಥ್ಯವನ್ನು ಪಡೆಯಲಾಯಿತು. ಮಂಗಳೂರಿನ ಮತ್ತು ಕಾರವಾರದ ಯಾಂತ್ರೀಕೃತ ದೋಣಿ ನಿರ್ಮಾಣಗಳಿಂದ ಮೀನುಗಾರಿಕೆಗೆ ದೋಣಿಗಳನ್ನು ಒದಗಿಸಲಾಯಿತು. ಈ ದೋಣಿಗಳನ್ನು ಪಡೆಯಲು ಮೀನುಗಾರರಿಗೆ ಸಾಲ ಸೌಲಭ್ಯಗಳನ್ನು ಕಲ್ಪಿಸಲಾಯಿತು. ಮೀನು ಸಂರಕ್ಷಣೆ ಮತ್ತು ಸಾಗಾಣಿಕೆ ಸೌಲಭ್ಯಗಳನ್ನು ವಿಸ್ತರಿಸಲಾಯಿತು. ಭಟ್ಕಳ, ಮರವಂತೆ, ಹಾಸನ ಮತ್ತು ಮಂಗಳೂರುಗಳಲ್ಲಿ ಶೀತಲ ಸಂಗ್ರಹಣ ಘಟಕಗಳು ಪೂರ್ಣಗೊಂಡುವು.

3.18. ಮೂರನೆಯ ಯೋಜನೆ ಅವಧಿಯಲ್ಲಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯ 4.5 ಲಕ್ಷ ಕಿ.ವ್ಯಾ.ಗಳಷ್ಟಾಯಿತು. ರಾಜ್ಯದ ಅತಿದೊಡ್ಡ ಯೋಜನೆ

ಯಾದ ಶರಾವತಿಯಿಂದ ಮೂರನೆಯ ಯೋಜನೆಯ ಅಂತ್ಯದ ವೇಳೆಗೆ ವಿದ್ಯುತ್ ಹರಿಯಲಾರಂಭಿಸಿತು. ಹೊಸ ಕೈಗಾರಿಕೆಗಳ ಸ್ಥಾಪನೆಗೂ, ಗ್ರಾಮಾಂತರ ಪ್ರದೇಶ ಗಳಿಗೆ ವಿದ್ಯುತ್ ಸೌಲಭ್ಯವನ್ನು ಒದಗಿಸಲೂ ಸಹಾಯವಾಯಿತು. ಕರ್ನಾಟಕ ಆರಂಭದ ಕಾಲದ ಕೈಗಾರಿಕೆ ಅಭಿವೃದ್ಧಿಗೆ ಕಾವೇರಿ ಜಲ ವಿದ್ಯುತ್ ಕೇಂದ್ರಗಳು ಕಾರಣವಾದರೆ, ಇತ್ತೀಚಿನ ಭಾರಿ ಪ್ರಮಾಣದ ಕೈಗಾರಿಕೆ ಅಭಿವೃದ್ಧಿಗೆ ಶರಾವತಿ ಯೋಜನೆ ಕಾರಣವಾಗಿದೆ. ಮುಂದಿನ ಕೈಗಾರಿಕಾಭಿವೃದ್ಧಿ ನೆರವಾಗಲು ಕಾಳೀ ಯೋಜನೆಯೂ ಸಿದ್ಧವಾಯಿತು. ಬಹುಕಾಲ ನಗರವಾಸಿಗಳಿಗೇ ದೊರಕಿದ್ದ ವಿದ್ಯುತ್ ಸೌಲಭ್ಯವು ಗ್ರಾಮಗಳಿಗೂ ಲಭಿಸಿತು. ಒಟ್ಟಿನಲ್ಲಿ ಈ ಸೌಲಭ್ಯ ಪಡೆದ ಪಟ್ಟಣ ಮತ್ತು ಗ್ರಾಮಗಳ ಸಂಖ್ಯೆ 1956ರಲ್ಲಿ 3,281 ಇದ್ದು, 1961ರಲ್ಲಿ 4,068, 1966ರಲ್ಲಿ 5,516 ಆದುವು. ವಿದ್ಯುತ್ ಸೌಲಭ್ಯ ಪಡೆದ ಸಂಪ್ ಸೆಟ್ಟುಗಳ ಸಂಖ್ಯೆ 1956ರಲ್ಲಿ 7,923, 1961ರಲ್ಲಿ 16,819, 1966ರಲ್ಲಿ 42,288 ಆದುವು.

3.19. ರಾಜ್ಯದ ಕೈಗಾರಿಕಾಭಿವೃದ್ಧಿಯಲ್ಲಿ ಮೂರನೆ ಯೋಜನೆಯ ಕಾಲವು ಒಂದು ಸಂಧಿಕಾಲವಾಯಿತು. 1965ರಲ್ಲಿ ಶರಾವತಿ ಕೇಂದ್ರ ಕಾರ್ಯಾರಂಭ ಮಾಡ ಲಾಗಿ, ರಾಜ್ಯದ ನಾನಾ ಭಾಗಗಳಲ್ಲಿ ದೊರೆಯುವ ಕೈಗಾರಿಕಾ ಸಂಪಲ್ಮೂಲಗಳನ್ನು ಕುರಿತು ಸಮೀಕ್ಷೆಗಳೂ ಅಧ್ಯಯನಗಳೂ ನಡೆದು ವರದಿಗಳು ಪ್ರಕಟವಾದುವು. ಸರ್ಕಾರೀ ಕ್ಷೇತ್ರದ ಹೊಸ ವಿದ್ಯುತ್ ಕಾರ್ಖಾನೆ 1964ರಲ್ಲಿ ಉತ್ಪಾದನೆ ಆರಂಭಿಸಿತು. ವಿದ್ಯುತ್ ಪೂರೈಕೆ ಕೇಂದ್ರಗಳಿಗೆ ಬೇಕಾಗುವ ಸಲಕರಣೆಗಳನ್ನು ಈ ಕಾರ್ಖಾನೆಯೂ, ವಿಸ್ತಾರಗೊಂಡ ಪಿಂಗಾಣೀ ಕಾರ್ಖಾನೆಯೂ ಬಹಳ ಮಟ್ಟಿಗೆ ಒದಗಿಸಬಲ್ಲವಾಗಿ ದ್ದುವು. ಸರ್ಕಾರೀ ರೇಷ್ಮೆ ನೆಯ್ಗೆ ಕಾರ್ಖಾನೆಯ ಸಾಮರ್ಥ್ಯವನ್ನು ವಿಸ್ತರಿಸಿ ಜಪಾನಿನ ಸಹಕಾರದೊಂದಿಗೆ ಆಧುನಿಕಗೊಳಿಸಲಾಯಿತು.ಅಂತೆಯೇ ಭದ್ರಾವತಿಯ ಉಕ್ಕು ಕಾರ್ಖಾನೆಯಲ್ಲಿ ವಿಶೇಷ, ಉಕ್ಕಿನ ಉತ್ಪಾದನೆಯನ್ನು ಆರಂಭಿಸಲಾಯಿತು. ಅಂತೆಯೇ ರಾಜ್ಯದ ಹತ್ತಿಬಟ್ಟೆ ಕಾರ್ಖಾನೆಗಳು ಸಕ್ಕರೆ ಕಾರ್ಖಾನೆಗಳೂ ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡವು. ಮಂಡ್ಯದಲ್ಲಿ ಅಸಿಟೇಟ್ ಮತ್ತು ಕೆಮಿಕಲ್ಸ್ ಕಂಪನಿಯೂ, ಬೆಂಗಳೂರಿನ ಮೈಸೂರು ಎಲೆಕ್ಟ್ರಿಕಲ್ಸ್, ಖಾಸಗೀ ಕಂಪನಿಗಳಲ್ಲಿ ಮುಖ್ಯವಾದುವು. ರಾಜ್ಯದ ಒಟ್ಟು ಕಾರ್ಖಾನೆಗಳ ಸಂಖ್ಯೆ 1956ರಲ್ಲಿ 1,635 ಇದ್ದುದು, 1966ರವೇಳೆಗೆ 2,956ಕ್ಕೆ ಹೆಚ್ಚಿತು. ಕಾರ್ಖಾನೆಗಳ ಕೆಲಸಗಾರರ ಸಂಖ್ಯೆ 1.72 ಲಕ್ಷದಿಂದ 2.36 ಲಕ್ಷ ಆಯಿತು.

3.20. ರಸ್ತೆಗಳ ಅಭಿವೃದ್ಧಿಯನ್ನು ವೀಕ್ಷಿಸುವಾಗ, 1966 ವೇಳೆಗೆ ಸುಧಾರಿತ ರಸ್ತೆಗಳ ಉದ್ದ 33,653 ಕಿ.ಮೀ. ಇದ್ದುವು. (1961 ರಲ್ಲಿ 27,315 ಕಿ.ಮೀ.) ಗ್ರಾಮದ ರಸ್ತೆಗಳು 21,716 ಕಿ.ಮೀ. ಇದ್ದುವು. ಬಸ್ಸುಗಳ

ಸಂಖ್ಯೆ 6,323ಕ್ಕೂ ಸರಕು ವಾಹನಗಳ ಸಂಖ್ಯೆ 15,179ಕ್ಕೂ ಮುಟ್ಟಿತು. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳ ಸಂಖ್ಯೆ 1969ರ ವೇಳೆಗೆ 2705 ಆಯಿತು. ಬಂಡವಾಳದ ಮೊಬಲಗು 23.76 ಕೋಟಿ ಆಯಿತು. ನೌಕರರ ಸಂಖ್ಯೆ 19,524 ಆಯಿತು.

ರಾಜ್ಯದ ಸುಮಾರು 290 ಕಿ.ಮೀ. ಉದ್ದದ ಕಡಲತೀರದಲ್ಲಿ 19 ಬಂದರುಗಳಿವೆ. ಇವುಗಳಲ್ಲಿ 5 ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ, 14 ಉತ್ತರ ಕನ್ನಡ ಜಿಲ್ಲೆಯಲ್ಲಿಯೂ ಇವೆ. ಇವುಗಳಲ್ಲಿ ಮಂಗಳೂರು ಮತ್ತು ಕಾರವಾರ ಮುಖ್ಯವಾದುವು. ರಾಜ್ಯಕ್ಕೆ ಒಂದು ದೊಡ್ಡ ಬಂದರಿನ ಅವಶ್ಯಕತೆಯನ್ನು ಅರಿತು ಮಂಗಳೂರು ಬಂದರಿನ ಯೋಜನೆಯನ್ನು ಕೇಂದ್ರ ಸರ್ಕಾರವ ಯೋಜನೆಯಾಗಿ ಮೂರನೇ ಯೋಜನೆಯಲ್ಲಿ ಸೇರಿಸಲಾಯಿತು.

ಬೆಂಗಳೂರು, ಮಂಗಳೂರು ಮತ್ತು ಬೆಳಗಾಂ ವಿಮಾನ ನಿಲ್ದಾಣಗಳನ್ನು ಉತ್ತಮ ಪಡಿಸುವ ಕಾಮಗಾರಿಗಳನ್ನೂ ಕೈಗೊಳ್ಳಲಾಯಿತು.

3.21. ಶಿಕ್ಷಣದ ಮೇಲಿನ ವಾರ್ಷಿಕ ವೆಚ್ಚ 1961ರಲ್ಲಿ 17.68 ಕೋಟಿ ಇದ್ದುದು, 1966ರ ವೇಳೆಗೆ 33.95 ಕೋಟಿ ರೂ.ಗಳಾಯಿತು. ಎರಡನೆಯ ಯೋಜನೆಯಲ್ಲಿ ಸೇರಿಸಿದ್ದ ಎಲ್ಲಾ ಕಾರ್ಯಕ್ರಮಗಳೂ ಪೂರ್ಣವಾಗಿ ಜಾರಿಗೆ ಬಂದದ್ದು ಮೂರನೇ ಯೋಜನೆಯ ಅವಧಿಯಲ್ಲೇ. ಈ ಯೋಜನೆ ಅವಧಿಯಲ್ಲಿ 281 ನರ್ಸರಿ ಶಾಲೆಗಳನ್ನು ಸ್ಥಾಪಿಸಿದ್ದರಿಂದ ಯೋಜನೆಯ ಅಂತ್ಯದ ವೇಳೆಗೆ 482 ನರ್ಸರಿ ಶಾಲೆಗಳಲ್ಲಿ 35,815 ಮಕ್ಕಳಿದ್ದರು. ಕಡ್ಡಾಯ ಪ್ರಾಥಮಿಕ ಶಿಕ್ಷಣ ಶಾಸನವನ್ನು 1961ರಲ್ಲಿ ಜಾರಿಗೆ ತರಲಾಯಿತು. ಇದಕ್ಕಾಗಿಯೇ 4,453 ಶಾಲೆಗಳು ಆರಂಭವಾದುವು. ಯೋಜನೆ ಅಂತ್ಯದ ವೇಳೆಗೆ 6ರಿಂದ 11 ವಯಸ್ಸಿನ ಶೇ. 95 ಭಾಗ ಮಕ್ಕಳು ಪ್ರಾಥಮಿಕ ಶಾಲಾ ಶಿಕ್ಷಣದ ವ್ಯಾಪ್ತಿಗೆ ಬರುವಂತಾಯಿತು. ಆದರೂ ಕಡ್ಡಾಯ ಪ್ರಾಥಮಿಕ ಕಾರ್ಯಕ್ರಮದ ವಿಸ್ತರಣೆ ನಿರೀಕ್ಷಿಸಿದಂತೆ ಆಗಲಿಲ್ಲ. ಎಲ್ಲಾ ಶಾಲೆಗಳಲ್ಲೂ ಏಳನೇ ತರಗತಿವರೆಗೆ ಶಿಕ್ಷಣ ಉಚಿತವಾಯಿತು. ಈ ಯೋಜನೆಯ ಅವಧಿಯಲ್ಲಿ ಹೊಸದಾಗಿ 500 ಮಾಧ್ಯಮಿಕ ಶಾಲೆಗಳು ಆರಂಭವಾದದ್ದು, 1964–65ರಲ್ಲಿ 50 ಪ್ರೌಢ ಶಾಲೆಗಳನ್ನು ಉನ್ನತ ಪ್ರೌಢಶಾಲೆಗಳಾಗಿ ಪರಿವರ್ತಿಸಲಾಯಿತು. ಇವುಗಳ ಸಂಖ್ಯೆ ಯೋಜನೆಯ ಅಂತ್ಯದ ವೇಳೆಗೆ 100 ಆಯಿತು.

ರಾಜ್ಯದಲ್ಲಿದ್ದ ಎರಡು ವಿಶ್ವವಿದ್ಯಾಲಯ ಜೊತೆಗೆ 1964ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಹೆಬ್ಬಾಳದ ಕೃಷಿವಿಜ್ಞಾನ ವಿಶ್ವವಿದ್ಯಾಲಯಗಳು ಆರಂಭವಾದುವು. ಕಾಲೇಜುಗಳ ಸಂಖ್ಯೆ 55 ರಿಂದ 87 ಆಯಿತು. ಕಾಲೇಜು ವಿದ್ಯಾರ್ಥಿ

ಗಳ ಸಂಖ್ಯೆ 34,324 ರಿಂದ 54,240 ಆಯಿತು. ಮೊದಲು ಇದ್ದ 10 ಎಂಜನಿಯರಿಂಗ್ ಕಾಲೇಜುಗಳ ಜೊತೆಗೆ ಮತ್ತೆ 6 ಎಂಜನಿಯರಿಂಗ್ ಕಾಲೇಜುಗಳು ಆರಂಭವಾದುವು.

ಮೂರನೆ ಯೋಜನೆಯ ಅವಧಿಯಲ್ಲಿ ಪ್ರಸ್ತುತ ಆಸ್ಪತ್ರೆಗಳು ಮತ್ತು ಔಷಧಾಲಯಗಳು ಸೇವೆಗಳನ್ನು ಸುಧಾರಿಸುವ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಬರಲಾಯಿತು. ವೈದ್ಯಕೀಯ ಶಿಕ್ಷಣವನ್ನು ವಿಸ್ತರಿಸಲು ಬಳ್ಳಾರಿಯಲ್ಲಿ ಒಂದು ವೈದ್ಯಕೀಯ ಶಿಕ್ಷಣ ಕಾಲೇಜನ್ನು ಆರಂಭಿಸಲಾಯಿತು. ಇದ್ದ ಕಾಲೇಜುಗಳಲ್ಲಿ 475 ಹೆಚ್ಚುವರಿ ವಿದ್ಯಾರ್ಥಿಗಳಿಗೆ ಶಿಕ್ಷಣ ಅವಕಾಶ ಕಲ್ಪಿಸಲಾಯಿತು.

ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕಾಗಿ ಜಾರಿಗೆ ತಂದಿದ್ದ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಬರಲಾಯಿತು.

3.22. ಮೂರನೆಯ ಯೋಜನೆಯ ಅಂತ್ಯದ ವೇಳೆಗೆ ರಾಜ್ಯದ ವರಮಾನವು ಈ ರೀತಿ ಹೆಚ್ಚಿತು :

		1961	1966
		ಕೋಟಿ ರೂ.ಗಳಲ್ಲಿ	
1.	ವ್ಯವಸಾಯ, ಅರಣ್ಯ, ಪಶುಪಾಲನೆ ಮುಂತಾದುವು	407.51	601.72
2.	ಕಾರ್ಖಾನೆಗಳು, ಗಣಿ, ಚಿಕ್ಕ ಉದ್ದಿಮೆ	89.40	155.48
3.	ವಾಣಿಜ್ಯ, ಸಾರಿಗೆ, ಸಂಪರ್ಕ	78.82	117.35
4.	ಸಾರ್ವಜನಿಕ ಆಡಳಿತ, ಗೃಹ ಆಸ್ತಿ ಮುಂತಾದುವು	91.77	137.26
	ಒಟ್ಟು	667.40	1011.81

ಜನಸಂಖ್ಯೆ 233 ಕೋಟಿಯಿಂದ 260 ಕೋಟಿಗೆ ಹೆಚ್ಚಿದ್ದು ತಲಾ ವರಮಾನವು 285 ರೂ.ಗಳಿಂದ 388 ರೂ.ಗಳಿಗೆ ಏರಿತು.

4.1. ಮುಂದೆ ನಾಲ್ಕನೆಯ ಯೋಜನೆಯ ರಚನೆಯನ್ನು ಮುಂದೂಡಬೇಕಾಯಿತು. ಇಡೀ ದೇಶದಲ್ಲಿ ಉಂಟಾದ ಕೆಲವು ವಿಶೇಷ ಪರಿಸ್ಥಿತಿಗಳ ಆಘಾತದಿಂದ ದೇಶದ ಆರ್ಥಿಕ ವ್ಯವಸ್ಥೆ ತತ್ತರಿಸಿ ಹೋಯಿತು. 1961ರ ಚೈನಾಯುದ್ಧ,

1965ರ ಪಾಕಿಸ್ತಾನ ಯುದ್ಧಗಳ ಪರಿಣಾಮವಾಗಿ ರಕ್ಷಣಾ ವೆಚ್ಚಗಳು ಹೆಚ್ಚಿ ಅಭಿವೃದ್ಧಿ ಕಾರ್ಯಗಳನ್ನು ನಿಧಾನಗೊಳಿಸಬೇಕಾಯಿತು. ಸಾಲದ್ದಕ್ಕೆ 1965–66 ವರ್ಷಗಳಲ್ಲಿ ಇಡೀ ದೇಶದಲ್ಲಿ ಮಳೆ ವಿಫಲಗೊಂಡು ಎಂದೂ ಕಾಣದ ಕಷ್ಟಗಳು ಹುಟ್ಟಿಕೊಂಡವು. ಇದರ ಪರಿಣಾಮ ಅಭಿವೃದ್ಧಿ ಯೋಜನೆಗಳ ಮೇಲೂ ಆಯಿತು. ಭಾರತ ಸರ್ಕಾರವು ಪಂಚವಾರ್ಷಿಕ ಯೋಜನೆಯನ್ನು ರೂಪಿಸುವ ಸ್ಥಿತಿಯಲ್ಲಿಲ್ಲದೆ 1966 ರಿಂದ 1969ರವರೆಗೆ ಮೂರು ವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದಿತು. ಕರ್ನಾಟಕದಲ್ಲೂ ಸಹ 1966–67, 67–68, 68–69ರ ಸಾಲಿಗಾಗಿ ಪ್ರತ್ಯೇಕ ವಾರ್ಷಿಕ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಯಿತು. ಇವುಗಳಲ್ಲಿ ವಿವಿಧ ಕ್ಷೇತ್ರಗಳಿಗೆ 164.64 ಕೋಟಿ ರೂಗಳ ಅಂದಾಜು ವೆಚ್ಚವಿದ್ದು,ವಾಸ್ತವವಾಗಿ 192.16 ಕೋಟಿ ಖರ್ಚಾದುವು. ಈ ಅವಧಿಯಲ್ಲಿ ಅತ್ಯಂತ ಪ್ರಮುಖ ಕ್ಷೇತ್ರ ಗಳಾದ ಕೃಷಿ ಉತ್ಪಾದನೆ, ನೀರಾವರಿ ಮತ್ತು ವಿದ್ಯುತ್ ಯೋಜನೆಗಳನ್ನು ಆದ್ಯತೆ ಕ್ಷೇತ್ರಗಳೆಂದು ಪರಿಗಣಿಸಿ ಅಭಿವೃದ್ಧಿಯನ್ನು ಮುಂದುವರಿಸಲಾಯಿತು. ವಾರ್ಷಿಕ ಯೋಜನೆಗಳು ಮುಗಿಯುವ ವೇಳೆಗೆ ರಾಜ್ಯದ ವರಮಾನವು 1011.81 ಕೋಟಿ ರೂಗಳಿಂದ 1359.29 ಕೋಟಿಗಳಿಗೆ ಹೆಚ್ಚಿತು. ತಲಾ ವರಮಾನವು 490 ರೂ. ಗಳಾಯಿತು. ರಾಜ್ಯದ ಒಟ್ಟು ವರಮಾನ ಹೆಚ್ಚಿದ ಹಾಗೆಲ್ಲಾ ರಾಜ್ಯ ಸರ್ಕಾರವು ಕ್ರಮವಾಗಿ ತನ್ನ ಆದಾಯಗಳನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಯಿತು. ಆದರೂ ರಾಜ್ಯ ಸ್ಥಾಪನೆಯಾದ ಮೊದಲ ಹತ್ತು ವರ್ಷಗಳು ಎಂತಹ ಕಷ್ಟದ ದಿನಗಳಾಗಿ ದ್ದುವು 'ಎಂಬುದನ್ನು ಮರೆಯುವಂತಿಲ್ಲ. ಹೆಚ್ಚು ಆದಾಯವನ್ನು ಪಡೆಯಲು ಪ್ರಾರಂಭಿಸಿದಾಗಲೇ ಸರ್ಕಾರವು ಹೆಚ್ಚು ಅಭಿವೃದ್ಧಿ ವೆಚ್ಚಗಳನ್ನು ಮಾಡಲು ಸಾಧ್ಯ ವಾಯಿತು. 1957–58ರ ಸಾಲಿನಲ್ಲಿ ಅಭಿವೃದ್ಧಿ ವೆಚ್ಚವು 38.30 ಕೋಟಿ ರೂ. ಗಳಿದ್ದುದು 1966ರ ಸಾಲಿನಲ್ಲಿ 84.98 ಕೋಟಿ ರೂಗಳಾಷ್ಟಾಯಿತು.

4.2. ವಾರ್ಷಿಕ ಯೋಜನೆಗಳು ಮುಗಿದ ನಂತರ ಕೇಂದ್ರ ಸರ್ಕಾರವು ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನು ಸಿದ್ಧಪಡಿಸಿತು. ಅದರಂತೆ ರಾಜ್ಯ ಸರ್ಕಾರವೂ ಸಹ ನಾಲ್ಕನೆಯ ಯೋಜನೆಯನ್ನು ರೂಪಿಸಿ ಜಾರಿಗೆ ತಂದಿತು.

ನಾಲ್ಕನೆಯ ಯೋಜನೆಯ ವೆಚ್ಚ (1969–74) ಕೋಟಿ ರೂಗಳಲ್ಲಿ

	ನಿಗದಿ	ವಾಸ್ತವ ವೆಚ್ಚ
1. ವ್ಯವಸಾಯ ಮತ್ತು ಸಂಬಂಧಿಸಿದ ಕಾರ್ಯಕ್ರಮಗಳು	79.65	75.77
2. ಸಹಕಾರ ಮತ್ತು ಸಮುದಾಯ ಅಭಿವೃದ್ಧಿ	11.25	18.88
3. ನೀರಾವರಿ	90.00	85.79

4.	ವಿದ್ಯುಚ್ಛಕ್ತಿ	87.50	79.58
5.	ಕೈಗಾರಿಕೆ, ಗಣಿ, ಚಿಕ್ಕ ಉದ್ದಿಮೆಗಳು	18.00	15.72
6.	ಸಾರಿಗೆ ಮತ್ತು ಸಂಪರ್ಕ	12.50	25.19
7.	ಶಿಕ್ಷಣ, ಆರೋಗ್ಯ ಮುಂತಾದುವು	50.00	75.48
8.	ಇತರ	1.10	377.52
		350.00	1.11

ನಾಲ್ಕನೆಯ ಯೋಜನೆಯ ಅವಧಿಯಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮವಾಗಿ ರಾಜ್ಯದ ವರಮಾನವು 1969ರಲ್ಲಿ 796.93 ಕೋಟಿ ರೂಗಳಿದ್ದುದು 1974ರಲ್ಲಿ 2,994 ಕೋಟಿ ರೂಗಳಷ್ಟಾಯಿತು. ಯೋಜನೆಯ ಕೊನೆಯ ವೇಳೆಗೆ ರಾಜ್ಯ ಸರ್ಕಾರದ ಆದಾಯವು 1969ರಲ್ಲಿ 223.90 ಕೋಟಿ ಇದ್ದುದು 1974–75 ರಲ್ಲಿ 413.10 ಕೋಟಿ ರೂಗಳಾಯಿತು.

4.3. 1974–79ರ ಐದನೆಯ ಯೋಜನೆ ನಾಲ್ಕನೇ ಯೋಜನೆಗಿಂತ ದೊಡ್ಡದಾಯಿತು. ಎಂದಿನಂತೆ ವ್ಯವಸಾಯ ಕ್ಷೇತ್ರದ ಅಭಿವೃದ್ಧಿ, ನೀರಾವರಿ ಮತ್ತು ವಿದ್ಯುಚ್ಛಕ್ತಿ ಯೋಜನೆಗಳಿಗೆ, ಮತ್ತು ಸಾಮಾಜಿಕ ಸೇವೆಗಳಿಗೆ ಆದ್ಯತೆ ದೊರೆಯಿತು. ಈ ಯೋಜನೆಗೆ ನಿಗದಿ ಮಾಡಿದ ಮತ್ತು ವಾಸ್ತವ ವೆಚ್ಚ ಈ ರೀತಿ ಇತ್ತು.

ಕೋಟಿ ರೂಗಳಲ್ಲಿ

	ಕ್ಷೇತ್ರ	ನಿಗದಿ	ವಾಸ್ತವ ವೆಚ್ಚ
1.	ವ್ಯವಸಾಯ ಮತ್ತು ಸಂಬಂಧಿಸಿದ ಕಾರ್ಯಕ್ರಮಗಳು	161.44	124.59
2.	ಸಹಕಾರ ಮತ್ತು ಸಮುದಾಯ ಅಭಿವೃದ್ಧಿ	24.70	26.33
3.	ನೀರಾವರಿ	187.18	135.34
4.	ವಿದ್ಯುಚ್ಛಕ್ತಿ	309.09	232.37
5.	ಕೈಗಾರಿಕೆ ಮತ್ತು ಗಣಿ ಅಭಿವೃದ್ಧಿ	42.69	39.14
6.	ಸಾರಿಗೆ ಮತ್ತು ಸಂಪರ್ಕ	64.04	44.69

7. ಸಾಮಾಜಿಕ ಸೇವೆಗಳು	187.97	163.59
8. ಇತರ	5.43 15.13	1.71 53.59
	997.67	826.35

ಐದನೆಯ ಯೋಜನೆಯಲ್ಲಿ ಅಳವಡಿಸಿದ್ದ ಕಾರ್ಯಕ್ರಮಗಳು ಪ್ರಗತಿಯಿಂದ ರಾಜ್ಯದ ಒಟ್ಟುವರಮಾನ 2,994 ಕೋಟಿರೂ.ಗಳಿಂದ (1974) 1978–79 ರಲ್ಲಿ 3,866 ಕೋಟಿ ರೂಗಳಾಯಿತು. ಇದೇ ಅವಧಿಯಲ್ಲಿ ತಲಾ ವರಮಾನವು 1,135 ರೂ.ಗಳಿಗೆ ಹೆಚ್ಚಿತು. ರಾಜ್ಯಸರ್ಕಾರದ ಆದಾಯವು 413ಕೋಟಿ ರೂ.ಗಳಿಂದ (1974) 688 ಕೋಟಿ ರೂಗಳಿಗೆ ಹೆಚ್ಚಿತು.

4.4. ನಾಲ್ಕನೆಯ ಮತ್ತು ಐದನೆಯ ಯೋಜನೆಗಳ ಅವಧಿಯಲ್ಲಿ ರಾಜ್ಯದ ಅಭಿವೃದ್ಧಿ ಕಾರ್ಯಕ್ರಮಗಳು ಬಹುತೀವ್ರಗತಿಯಿಂದ ನಡೆದುವು. ಇವಕ್ಕೆ ಹಿಂದಿನ 13 ವರ್ಷಗಳಲ್ಲಿ ನಿಧಾನವಾಗಿಯಾದರೂ ಭದ್ರವಾದ ನೆಲಗಟ್ಟನ್ನು ನಿರ್ಮಿಸಿದ್ದೇ ಕಾರಣ. ತಕ್ಕಮಟ್ಟಿಗೆ ನೀರಾವರಿ, ವಿದ್ಯುತ್, ಶಿಕ್ಷಣ ಕ್ಷೇತ್ರಗಳಲ್ಲಿ ವಿಸ್ತರಣೆಯಾಗಿದ್ದು ರಾಜ್ಯದ ಆಹಾರದ ಪರಿಸ್ಥಿತಿಯೂ ಉತ್ತಮಗೊಂಡಿತ್ತು.

ವ್ಯವಸಾಯ ಕ್ಷೇತ್ರದಲ್ಲಿ ಆದ ಕ್ರಾಂತಿಕಾರಕ ಬದಲಾವಣೆಗಳಿಗೆ ಹಲವಾರು ಅಂಶಗಳು ಕಾರಣವಾದುವು. ಎಲ್ಲಾ ವಿಧಾನಗಳಿಂದಲೂ ನೀರಾವರಿ ಸೌಲಭ್ಯವನ್ನು ಪಡೆದ ಭೂಮಿಯ ವಿಸ್ತಾರ ಸುಮಾರು 57 ಲಕ್ಷ ಎಕರೆಗಳು. ಇದರಲ್ಲಿ ಸಣ್ಣ ನೀರಾವರಿ ಸೌಕರ್ಯಗಳ ಭಾಗ ಶೇ. 60ರಷ್ಟು. ರಾಜ್ಯದಲ್ಲಿ ಒಟ್ಟು ಸಾಗುವಳಿಯಾದ ಪ್ರದೇಶದ ಶೇ. 13.7ರಷ್ಟಕ್ಕೆ ಮಾತ್ರ ನೀರಾವರಿ ದೊರೆತಂತಾಯಿತು. ರಾಜ್ಯ ಅಸ್ತಿತ್ವಕ್ಕೆ ಬಂದಾಗ ಇದ್ದ ಶೇ. 7ರಷ್ಟು ಭಾಗಕ್ಕೆ ಹೋಲಿಸಿದರೆ ಕಳೆದ 20 ವರ್ಷಗಳಲ್ಲಿ ನೀರಾವರಿ ಪ್ರದೇಶ ದ್ವಿಗುಣವಾಯಿತು. ಅಧಿಕ ಇಳುವರಿ ಕೊಡುವ ತಳಿಗಳನ್ನು ಬೆಳೆಯುವ ಭೂಮಿಯ ವಿಸ್ತಾರ 50 ಲಕ್ಷ ಎಕರೆಗೆ ವಿಸ್ತಾರಗೊಂಡಿತು. ಅಂದರೆ ಒಟ್ಟು ಬೆಳೆಯಿಡುವ ಪ್ರದೇಶದ ಶೇ. 19 ಪ್ರದೇಶದಲ್ಲಿ ಹೊಸ ತಾಂತ್ರಿಕ ಜ್ಞಾನವನ್ನು ಬಳಸಿದ ಸಾಂದ್ರ ಬೇಸಾಯ ಕ್ರಮಗಳ ಮೂಲಕ ಆಹಾರ ಧಾನ್ಯಗಳ ಉತ್ಪಾದನೆ 1976ರ ವೇಳೆಗೆ 65 ಲಕ್ಷ ಟನ್ನುಗಳಿಗೆ ಏರಲು ಸಾಧ್ಯವಾಯಿತು.

ಪ್ರಮುಖ ಬೆಳೆಗಳ ವಾರ್ಷಿಕ ಉತ್ಪಾದನೆ (ಲಕ್ಷ ಟನ್ನುಗಳಲ್ಲಿ)

ಬೆಳೆಗಳು	1956	1972	1970
1. ಅಕ್ಕಿ	11.84	21.03	14.40
2. ಗೋಧಿ	0.70	2.05	2.57

3. ಜೋಳ	9.50	14.69	11.80
4. ಮುಸುಕಿನ ಜೋಳ	0.12	2.43	3.93
5. ರಾಗಿ	9.03	10.53	7.25
6. ಕಬ್ಬು	31.11	91.80	88.02
7. ಹತ್ತಿ (ಲಕ್ಷ ಬೇಲುಗಳು)	3.01	5.82	4.60
8. ಎಣ್ಣೆ ಕಾಳುಗಳು	6.93	8.76	4.03
9. ಬೇಳೆಕಾಳುಗಳು	3.80	5.45	2.86

ಕಳೆದ ಐದುವರ್ಷಗಳಲ್ಲಿ ಮಳೆಯ ಅನಿಶ್ಚಯತೆಯ ಕಾರಣದಿಂದ, ಕೃಷಿ ಉತ್ಪಾದನೆಯಲ್ಲಿ ಬಹುಮಟ್ಟಿನ ಏರುಪೇರುಗಳು ಕಂಡುಬಂದಿವೆ.

ವ್ಯವಸಾಯ ಒಂದು ಅಂಗವಾದ ತೋಟಗಾರಿಕೆ ಇತ್ತೀಚಿನ ವರ್ಷಗಳಲ್ಲಿ ಜನಪ್ರಿಯವಾಗುತ್ತಿದ್ದು, ತೋಟಗಾರಿಕೆ ಕ್ಷೇತ್ರದ ವಿಸ್ತಾರ 1960ರಲ್ಲಿ 8.6ಲಕ್ಷ ಎಕರೆ ಇದ್ದು1975ರವೇಳೆಗೆ 16ಲಕ್ಷ ಎಕರೆಯಾಯಿತು. ತೆಂಗು, ಕಾಫಿ ಮತ್ತು ಅಡಿಕೆ ತೋಟಗಳು ಪ್ರಮುಖವಾಗಿದ್ದು, ಇತ್ತೀಚೆಗೆ ದ್ರಾಕ್ಷಿ, ಗೋಡಂಬಿ, ಕಿತ್ತಳೆ ಮತ್ತು ಇತರ ಹಣ್ಣುಗಳ ಬೆಳೆಗಳೂ ತರಕಾರೀ ವ್ಯವಸಾಯವೂ ಬಹುಮಟ್ಟಿಗೆ ಅಭಿವೃದ್ಧಿಯಾಗಿವೆ.

4.5. ಪಶುಸಂಗೋಪನಾ ಕ್ಷೇತ್ರದ ವಿಕಾಸದಿಂದ ರಾಜ್ಯದಲ್ಲಿ ರಾಸುಗಳ ಸಂಖ್ಯೆ 89 ಲಕ್ಷದಿಂದ (1956) 132 ಲಕ್ಷಕ್ಕೆ ಹೆಚ್ಚಿದೆ. ಇದೇ ಅವಧಿಯಲ್ಲಿ ಪಶುವೈದ್ಯ ಕೇಂದ್ರಗಳು 318 ರಿಂದ 1116 ಆಗಿವೆ. ಹಾಲಿನ ಉತ್ಪಾದನೆಯನ್ನು ಹೆಚ್ಚಿಸುವ ಕ್ರಮಗಳು ಗ್ರಾಮಾಭಿವೃದ್ಧಿ ಯೋಜನೆಯ ಮುಖ್ಯ ಅಂಗವಾಗುತ್ತಿವೆ. 1965ರಲ್ಲಿ ವಿಶ್ವಸಂಸ್ಥೆಯ ಮಕ್ಕಳ ಕ್ಷೇಮ ನಿಧಿಯ ನೆರವಿನಿಂದ ಸ್ಥಾಪಿತವಾದ ಬೆಂಗಳೂರು ಹಾಲಿನ ಡೈರಿ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿದೆ. ವಿಶ್ವಬ್ಯಾಂಕಿನ 24 ಕೋಟಿ ರೂಗಳ ನೆರವಿನಿಂದ 1974ರಲ್ಲಿ ಸರ್ಕಾರಿ ವಲಯದಲ್ಲಿ 51 ಕೋಟಿ ರೂ ಒಟ್ಟು ಬಂಡವಾಳದಿಂದ ಸ್ಥಾಪಿಸಲ್ಪಟ್ಟ ಕರ್ನಾಟಕ ಹೈನುಗಾರಿಕೆ ಅಭಿವೃದ್ಧಿ ನಿಗಮವು ರಾಜ್ಯದಲ್ಲಿ ಶ್ವೇತ ಕ್ರಾಂತಿಯನ್ನು ಸಾಧಿಸುವ ಗುರಿಹೊಂದಿದೆ. ನಿಗಮದ ಕಾರ್ಯಕ್ಷೇತ್ರ ರಾಜ್ಯದ 68 ತಾಲ್ಲೂಕುಗಳಿಗೆ ಹರಡಿದೆ. ಈಗಿರುವ ಡೈರಿಗಳ ಸಾಮರ್ಥ್ಯ ವಿಸ್ತರಣೆ, ಹೊಸ ಡೈರಿಗಳ ಸ್ಥಾಪನೆ, ಗ್ರಾಮಗಳಲ್ಲಿ ಹೈನುಗಾರಿಕೆ ಸಹಕಾರ ಸಂಘಗಳಿಗೆ ಪ್ರೋತ್ಸಾಹ, ಮಿಶ್ರತಳಿ ಜಾನುವಾರುಗಳ ಹಂಚಿಕೆ, ಮೇವಿನ ಅಭಿವೃದ್ಧಿ, ಪಶುವೈದ್ಯ ಸೇವೆಗಳು ನಿಗಮದ ಮುಖ್ಯ ಕಾರ್ಯಕ್ರಮಗಳು.

4.6. ಅರಣ್ಯಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಹೆಚ್ಚುಪ್ರದೇಶವನ್ನು ಅರಣ್ಯ ಕ್ಷೇತ್ರಕ್ಕೆ ಒಳಪಡಿಸಲು, ಇರುವ ಅರಣ್ಯಗಳಲ್ಲಿ ಉತ್ತಮರೀತಿಯಲ್ಲಿ ಬಳಸಿಕೊಳ್ಳಲು ಪ್ರಯತ್ನಿಸಲಾಗಿದೆ. ಅರಣ್ಯಾಭಿವೃದ್ಧಿಗಾಗಿ ಕರ್ನಾಟಕ ಅರಣ್ಯ ನಿಗಮ ಸ್ಥಾಪನೆಯಾಗಿದೆ. ಅರಣ್ಯಾಧಾರಿತ ಕೈಗಾರಿಕೆಗಳ ಬಗ್ಗೆ ಹೊಸ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ಮಂಡಳಿ ಸ್ಥಾಪನೆಯಾಗಿದೆ. ಸೌದೆಗಾಗಿ ಬೇಗ ಬೆಳೆಯುವ ಮರಗಳನ್ನೂ, ಬೆಂಕಿಕಡ್ಡಿಗಳ ತಯಾರಿಕೆಗೆ ಬೇಕಾಗುವ ಮೃದು ಮರಗಳನ್ನು, ಹೊಸದಾಗಿ ನೀಲಗಿರಿ ಮರಗಳನ್ನು ತೇಗದ ಮರಗಳನ್ನು ಬೆಳೆಸಲಾಗುತ್ತಿದೆ. ಅರಣ್ಯಗಳಿಂದ ಬರುವ ಆದಾಯ 1956ರಲ್ಲಿ 2.75 ಕೋಟಿ ರೂಗಳಿದ್ದುದು 1976ರ ವೇಳೆಗೆ 30 ಕೋಟಿ ರೂಗಳಷ್ಟಾಯಿತು. ಅರಣ್ಯ ಪ್ರದೇಶಗಳಲ್ಲಿ ಸುಂದರವಾದ ಸ್ಥಳಗಳನ್ನು ಆರಿಸಿ ಅವುಗಳನ್ನು ಪ್ರವಾಸೀ ಕ್ಷೇತ್ರಗಳಾಗಿ ಅಭಿವೃದ್ಧಿಗೊಳಿಸಲಾಗಿದೆ. ಇವುಗಳಲ್ಲಿ ಮುಖ್ಯವಾದುವು. ಬಂಡೀಪುರ. ನಾಗರಹೊಳೆ ಬನ್ನೇರುಘಟ್ಟ, ಬ್ರಹ್ಮಗಿರಿ, ಶರಾವತಿ, ಮೂಕಾಂಬಿಕಾ, ಮೇಲುಕೋಟೆ, ನುಗು ಮತ್ತು ರಂಗನ ತಿಟ್ಟು ಪಕ್ಷಿಧಾಮ.

ಕಡಲುತೀರದ ಮೀನುಗಾರಿಕೆ ಉದ್ಯಮದ ವಿಸ್ತರಣೆಗೆ ಉಪಯೋಗಿಸಲಾದ ಯಾಂತ್ರೀಕೃತ ದೋಣಿಗಳ ಸಂಖ್ಯೆ 1,100 ಆಗಿದೆ. ಇದರಿಂದಾಗಿ ಪ್ರತಿವರ್ಷ 25,000 ಟನ್ನುಗಳಷ್ಟು ಮೀನುಗಳನ್ನು ಹಿಡಿಯಲು ಸಾಧ್ಯವಾಗಿದೆ. ಒಳನಾಡು ಮೀನುಗಾರಿಕೆ ವೃದ್ಧಿಗಾಗಿ ಭದ್ರಾ ಮತ್ತು ವಾಣಿವಿಲಾಸ ಸಾಗರಗಳ ಬಳಿ ಎರಡು ದೊಡ್ಡ ಮೀನುಮರಿ ಉತ್ಪಾದನಾ ಕೇಂದ್ರಗಳನ್ನು ನಿರ್ಮಿಸಲಾಗಿದೆ.

4.7. ಶರಾವತಿ ಕಣಿವೆಯ ಲಿಂಗನಮಕ್ಕಿ ಜಲಾಶಯ ಮತ್ತು ಅದಕ್ಕೆ ಸೇರಿದ ವಿದ್ಯುತ್ ಕೇಂದ್ರಗಳ ಎಲ್ಲ ಕೆಲಸಗಳೂ 1974ರ ವೇಳೆಗೆ ಮುಗಿದಿದ್ದು ರಾಜ್ಯದಲ್ಲಿನ ಉತ್ಪಾದನೆ 9.67 ಲಕ್ಷ ಕಿ.ವ್ಯಾ.ಗೆ ಹೆಚ್ಚಿತು. 1971ರಲ್ಲಿ ಕಾಳೀನದಿ ಯೋಜನೆಯ ಕೆಲಸ ಆರಂಭವಾಯಿತು. ಕಾಳಿಯೋಜನೆಯೂ ಸೇರಿದಂತೆ ರಾಜ್ಯದ ಇತರ ಎಲ್ಲಾ ಯೋಜನೆಗಳ ಕಾರ್ಯವನ್ನು ಕರ್ನಾಟಕ ಪವರ್ ಕಾರ್ಪೊರೇಷನ್‌ಗೆ ವಹಿಸಲಾಯಿತು. ವಿದ್ಯುತ್ತಿನ ವಿತರಣೆ ಮಾತ್ರ ರಾಜ್ಯ ವಿದ್ಯುಚ್ಛಕ್ತಿ ಮಂಡಲಿಗೆ ಸೇರಿದೆ. ರಾಜ್ಯದಲ್ಲಿ ವಿದ್ಯುತ್ ಸೌಲಭ್ಯ ಪಡೆದ ಪಟ್ಟಣ ಮತ್ತು ಹಳ್ಳಿಗಳ ಸಂಖ್ಯೆ 15,960 ಆಗಿ ಶೇ. 60ರಷ್ಟು ಹಳ್ಳಿಗೆ ವಿದ್ಯುತ್ ದೊರೆತಂತಾಯಿತು. ವಿದ್ಯುತ್ ಪಡೆದ ಪಂಪ್‌ಸೆಟ್ಟುಗಳ ಸಂಖ್ಯೆ 1956ರಲ್ಲಿ 7923 ಇದ್ದುದು, 1979ರ ವೇಳೆಗೆ 2,80,000ಕ್ಕೆ ಏರಿತು. ಗ್ರಾಮ ಪ್ರದೇಶಗಳಲ್ಲಿ ನೀರಾವರಿ ಪಂಪುಗಳಿಗೆ ಅಲ್ಲದೆ, ಗೃಹಬಳಕೆಗೂ, ಗೃಹಕೈಗಾರಿಕೆಗಳಿಗೂ ವಿದ್ಯುತ್ತಿನ ಬಳಕೆಯಾಗುತ್ತಿದೆ. ವಿದ್ಯುತ್ತಿನ ಸಹಾಯದಿಂದ ನದೀ ದಡದಲ್ಲಿ ಬರುವ ಹಳ್ಳಿಗಳಿಗೆ ಬರಗಾಲದಲ್ಲಿ ನೀರೆತ್ತಿಕೊಂಡು ಕಷ್ಟ ಪರಿಸ್ಥಿತಿಯನ್ನು ಎದುರಿಸಲು ಸಾಧ್ಯವಾಗಿದೆ. ವಿದ್ಯುತ್ತಿನ ಉತ್ಪಾದನೆ ಹೆಚ್ಚಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ದೊಡ್ಡ ಮತ್ತು ಮಧ್ಯಮ

ಪ್ರಮಾಣದ ಕೈಗಾರಿಕೆಗಳು ವಿಸ್ತಾರಗೊಳ್ಳುವುದಕ್ಕೂ, ಹೊಸದಾಗಿ ಸ್ಥಾಪಿತವಾಗುವುದಕ್ಕೂ ಅವಕಾಶವಾಯಿತು. ರಾಜ್ಯದಲ್ಲಿ ಕಾರ್ಖಾನೆಗಳ ಸಂಖ್ಯೆ 1971ರಲ್ಲಿ 3,814 ಇದ್ದು 1979ರ ವೇಳೆಗೆ 8,500 ಮುಟ್ಟಿತು. ಕಾರ್ಮಿಕರ ಸಂಖ್ಯೆ 4.34 ಲಕ್ಷವಾಯಿತು.

4.8. ರಾಜ್ಯದಲ್ಲಿ ಕೈಗಾರಿಕಾ ಪ್ರಗತಿ ವೈವಿಧ್ಯದಿಂದ ಬೆಳೆಯಿತು. ಆದರೆ ಈ ಪ್ರಗತಿ ರಾಜ್ಯ ಎಲ್ಲ ಪ್ರದೇಶಗಳಿಗೂ ಸಮಾನವಾಗಿರಲಿಲ್ಲ. 1975ರಲ್ಲಿ ರಾಜ್ಯದಲ್ಲಿ ಇದ್ದ ಒಟ್ಟು 4,880 ರಿಜಿಸ್ಟರಾದ ಕಾರ್ಖಾನೆಗಳ ಪೈಕಿ 1,747 ಬೆಂಗಳೂರು ನಗರ ಮತ್ತು ಬೆಂಗಳೂರಿನ ಸುತ್ತಮುತ್ತವೇ ಇದ್ದವು. ಉಳಿದ ಜಿಲ್ಲೆಗಳ ಪೈಕಿ ಧಾರವಾಡ, ಬೆಳಗಾಂ, ದಕ್ಷಿಣಕನ್ನಡ ಸಾಕಷ್ಟು ಪ್ರಗತಿ ಸಾಧಿಸಿದ್ದುವು. ಈ ಅಸಮತೆಯನ್ನು ಹೋಗಲಾಡಿಸಲು ಸರ್ಕಾರವು ಕೈಗಾರಿಕಾ ದೃಷ್ಟಿಯಿಂದ ಹಿಂದುಳಿದ ಪ್ರದೇಶಗಳನ್ನು ಗುರುತಿಸಿ ಆ ಪ್ರದೇಶಗಳಲ್ಲಿ ಕೈಗಾರಿಕೆಗೆ ಯೋಗ್ಯವಾದ ಹಿಂದುಳಿದ ಸ್ಥಳಗಳನ್ನು ಅಭಿವೃದ್ಧಿ ಪಡಿಸಿದೆ. ಈ ಸ್ಥಳಗಳು-ಮೈಸೂರು-ಬೆಳಗುಳ, ಮೈಸೂರು-ನಂಜನಗೂಡು, ಹರಿಹರ-ದಾವಣಗೆರೆ, ಹುಬ್ಬಳ್ಳಿ ಧಾರವಾಡ, ಶಿವಮೊಗ್ಗ-ಭದ್ರಾವತಿ, ಬಳ್ಳಾರಿ-ಹೊಸಪೇಟೆ, ದಾಂಡೇಲಿ, ಬೆಳಗಾಂ, ಗುಲ್ಬರ್ಗಾ, ಮಂಗಳೂರು ಮತ್ತು ಬೆಂಗಳೂರಿನ ಸುತ್ತಮುತ್ತಲ ಸ್ಥಳಗಳು. ಈ ಸ್ಥಳಗಳಲ್ಲಿ ಸೂಕ್ತವಾದ ಉದ್ಯಮಗಳನ್ನು ಸ್ಥಾಪಿಸಲು ಮುಂದೆ ಬರುವ ರಾಜ್ಯದ ಮತ್ತು ಹೊರಗಿನ ಉದ್ಯಮಿಗಳಿಗೆ ಹಲವಾರು ರಿಯಾಯಿತಿಗಳನ್ನು ಸರ್ಕಾರ ಪ್ರಕಟಿಸಿತು. ಇಂತಹ ಉದ್ಯಮಗಳಿಗೆ ಕೇಂದ್ರ, ಹಿಂದುಳಿದ ಪ್ರದೇಶಗಳಿಗೆ ನೀಡುವ ಶೇ. 15ರಷ್ಟು ಬಂಡವಾಳ ಸಹಾಯ ಧನವೂ ಸಿಗುವುದು. ಈ ಪ್ರದೇಶಗಳಲ್ಲಿ ಹೊಸದಾಗಿ ಸಕ್ಕರೆ ಕಾರ್ಖಾನೆಗಳು, ಹತ್ತಿನೂಲಿನ ಗಿರಣಿಗಳೂ, ಕಾಗದ, ರಾಸಾಯನಿಕ ಗೊಬ್ಬರದ ಕಾರ್ಖಾನೆಗಳು ಬಹು ಸಂಖ್ಯೆಯಲ್ಲಿ ಸಣ್ಣಪ್ರಮಾಣದ ಕೈಗಾರಿಕೆಗಳೂ ತಲೆ ಎತ್ತಿವೆ.

1970ರ ದಶಕದಲ್ಲಿ ಕೇಂದ್ರ ಸರ್ಕಾರ ಉದ್ಯಮಗಳ ಸಂಖ್ಯೆಯೂ ಹೆಚ್ಚಿತು. ಇರಾನ್ ದೇಶದ ನೆರವಿನಿಂದ ಪೂರ್ಣಗೊಂಡ ಕುದುರೆಮುಖ ಕಬ್ಬಿಣದ ಗಣಿಉದ್ಯಮ, ತುಮಕೂರಿನ ಕೈಗಡಿಯಾರ ಕಾರ್ಖಾನೆ, ಭಾರತ್ ಹೆವಿ ಎಲಕ್ಟ್ರಿಕಲ್ ವಹಿಸಿಕೊಂಡ ರೆಮ್ಕೊ ಮತ್ತು ಪೋರ್ಸಲೀನ್ ಕಾರ್ಖಾನೆಗಳು, ಬೆಂಗಳೂರಿನ ಮಾಡರ್ನ್ ಬೇಕರೀಸ್, ರೈಲು ಗಾಲಿ ಮತ್ತು ಅಚ್ಚು ಕಾರ್ಖಾನೆ, ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೋರೇಷನ್ ವಹಿಸಿಕೊಂಡ ಮಿನರ್ವ ಮತ್ತು ಮೈಸೂರು ಸ್ಪಿನ್ನಿಂಗ್ ಅಂಡ್ ವೀವಿಂಗ್ ಮಿಲ್ಸ್, ಬೆಂಗಳೂರಿನ ಹೋಟೆಲ್ ಅಶೋಕಾ ಮುಂತಾದುವು ಮುಖ್ಯವಾಗಿವೆ. ರಾಜ್ಯದ ತನ್ನ ಎಲ್ಲಾ ಉದ್ಯಮಗಳಿಗೆ ಕೇಂದ್ರ ಸರ್ಕಾರ ಸುಮಾರು 700 ಕೋಟಿ ರೂ ಬಂಡವಾಳ ಹಾಕಿದೆ.

ಇದೇ ಅವಧಿಯಲ್ಲಿ ರಾಜ್ಯ ಸರ್ಕಾರವು ತನ್ನ ಮಾಲೀಕತ್ವದ ಸರ್ಕಾರೀ ಸಾಬೂನು ಕಾರ್ಖಾನೆಯನ್ನು ವಿಸ್ತರಿಸಿ ಸಾಬೂನು ಪುಡಿ (ಪಾಯಿಂಟ್) ಉತ್ಪಾದನೆಯನ್ನು

ಆರಂಭಿಸಿತು. ಕರ್ನಾಟಕ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮದ ನೆರವಿನಿಂದ ಮದ್ದೂರಿನ ಸ್ಕೂಟರ್ ಕಾರ್ಖಾನೆ, ಮೈಸೂರಿನ ವಿಕ್ರಾಂತ್ ಟೈರ್ಸ್ ಸ್ಥಾಪನೆಯಾಗಿ ಉತ್ಪಾದನೆಯನ್ನು ಆರಂಭಿಸಿದುವು. ಕರ್ನಾಟಕ ರಾಜ್ಯ ಹಣಕಾಸಿನ ನಿಗಮವು ಅನೇಕ ಸಣ್ಣ ಉದ್ದಿಮೆಗಳಿಗೆ ದೀರ್ಘಾವಧಿ ಸಾಲಗಳನ್ನು ನೀಡುವ ಮುಖಾಂತರ ರಾಜ್ಯದ ಕೈಗಾರಿಕೀಕರಣಕ್ಕೆ ಪ್ರೋತ್ಸಾಹವಿತ್ತಿದೆ. ಇದು ಸ್ಥಾಪನೆಯಾದಂದಿನಿಂದ 1978ರ ವರೆಗೆ 2511 ಸಾಲಗಳಿಗಾಗಿ 58.87 ಕೋಟಿ ರೂಗಳನ್ನು ಹಂಚಿದೆ. 1979 ಮತ್ತು 1980ರ ವರ್ಷಗಳಲ್ಲೇ ಕ್ರಮವಾಗಿ 10 ಕೋಟಿ ಮತ್ತು 15 ಕೋಟಿ ರೂ. ಸಾಲಗಳನ್ನು ನೀಡಲಾಗಿದೆ. ಇದಲ್ಲದೆ ಅಖಿಲ ಭಾರತ ಮಟ್ಟದ ಕೈಗಾರಿಕಾ ಹಣಕಾಸಿನ ನಿಗಮವು ಕಳೆದ ಎರಡು ದಶಕಗಳಲ್ಲಿ ಕರ್ನಾಟಕದ 102 ಸಂಸ್ಥೆಗಳಿಗೆ 94 ಕೋಟಿ ರೂಗಳ ನೆರವು ಕೊಟ್ಟಿದೆ.

ಈಗ ಕೈಗಾರಿಕಾ ಕ್ಷೇತ್ರದಲ್ಲಿ ಹತ್ತಿಬಟ್ಟೆ ಮತ್ತು ಉಡುಪುಗಳನ್ನು ತಯಾರಿಸುವ 769 ಕಾರ್ಖಾನೆಗಳಿವೆ. ವಿದ್ಯುತ್ ಯಂತ್ರಗಳು ಇತರ ಯಂತ್ರಗಳು ಸಾರಿಗೆ ವಾಹನ ಭಾಗಗಳನ್ನು ತಯಾರಿಸುವ ಎಲ್ಲಾ ಎಂಜನಿಯರಿಂಗ್ ಕಾರ್ಖಾನೆಗಳು 938. ಸಕ್ಕರೆ ಮುಂತಾದ ಆಹಾರ ಉತ್ಪನ್ನಗಳ ಕಾರ್ಖಾನೆಗಳು 773. ರಾಸಾಯನಿಕ ವಸ್ತುಗಳ ಕಾರ್ಖಾನೆಗಳು 195. ಲೋಹ ಉತ್ಪನ್ನಗಳ ಕಾರ್ಖಾನೆಗಳು 452 ಕಾಗದ ಮತ್ತು ಕಾಗದದ ಉತ್ಪನ್ನಗಳ ಕಾರ್ಖಾನೆಗಳು 246. ಉಣ್ಣೆ-ರೇಷ್ಮೆ ಮತ್ತು ಕೃತಕ ನೂಲು ಕಾರ್ಖಾನೆಗಳು 260, ಫರ್ನಿಚರ್ ಮತ್ತು ಇತರ ಜೋಡಣೆಗಳ ಕಾರ್ಖಾನೆಗಳು 419. ದುರಸ್ತಿಸೇವೆಗಳಿಗಾಗಿ 236. ಪಾನೀಯಗಳು ಮತ್ತು ತಂಬಾಕು ಉತ್ಪನ್ನಗಳಿಗಾಗಿ 112 ಕಾರ್ಖಾನೆಗಳೂ ಇವೆ. ಎಲ್ಲಾ ಕೈಗಾರಿಕೆಗಳಲ್ಲಿ ಸುಮಾರು 3.5 ಲಕ್ಷ ಕೆಲಸಗಾರರಿದ್ದಾರೆ.

ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ರಾಜ್ಯದ ಪಟ್ಟಣ ಮತ್ತು ಗ್ರಾಮ ಪ್ರದೇಶಗಳಲ್ಲಿ ಒಟ್ಟು 42 ಕೈಗಾರಿಕೆ ಎಸ್ಟೇಟುಗಳನ್ನು ಸ್ಥಾಪಿಸಿದೆ. ಇವುಗಳಲ್ಲಿ 9 ಎಸ್ಟೇಟುಗಳು ಪ್ರಮುಖ ಕೈಗಾರಿಕೆಗಳಿಗೆ ಸಹಾಯಕ ಘಟಕಗಳಾಗಿವೆ. ಈ ಎಸ್ಟೇಟುಗಳಿಗೆ ಸಂಬಂಧಿಸಿದ 1500 ಷೆಡ್ಡುಗಳಿವೆ. ಕೈಗಾರಿಕಾ ಎಸ್ಟೇಟುಗಳಲ್ಲಿ ಹಲವಾರು ಸೌಕರ್ಯಗಳನ್ನು ಒದಗಿಸಲಾಗಿದೆ. ವಿದ್ಯುತ್. ನೀರು. ಅಸಿದ್ಧ ವಸ್ತುಗಳ ಡಿಪೋಗಳು. ಪೋಸ್ಟ್ ಆಫೀಸು. ಬ್ಯಾಂಕು ಮುಂತಾಗಿ ನಿಗಮವು ಮರದ ಮತ್ತು ಉಕ್ಕಿನ ಫರ್ನಿಚರ್‌ಗಳು. ಅಸ್ಪತ್ರೆ ಸಾಧನಗಳು. ಪಾಲಿಥೀನ್ ಚೀಲಗಳು. ಹೆಲ್ಮೆಟ್‌ಗಳು. ಟಾರ್ಪಾಲಿನ್ ಮುಂತಾದುವುಗಳಲ್ಲಿ ಮಾರಾಟವನ್ನು ಕೈಗೊಂಡಿದೆ.

ಸರ್ಕಾರದ ಇತ್ತೀಚಿನ ನೀತಿಯೂ ಸಣ್ಣ ಮತ್ತು ಗ್ರಾಮ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುವುದೇ ಆಗಿದೆ. ನಿರುದ್ಯೋಗ ನಿವಾರಣೆ ಇದರ ಉದ್ದೇಶ. ಈ ಕೈಗಾರಿಕೆಗಳಿಗೆ ಹಣಕಾಸಿನ ನೆರವೇ ಅಲ್ಲದೆ, ಕಚ್ಚಾವಸ್ತುಗಳನ್ನೂ, ತಾಂತ್ರಿಕ ಸಲಹೆಯನ್ನೂ ನೀಡಲು ಮತ್ತು ಮಾರಾಟದ ವ್ಯವಸ್ಥೆಯನ್ನೂ ಏರ್ಪಡಿಸಲು ಸರ್ಕಾರ ತೀರ್ಮಾನಿಸಿದೆ.

ರಾಜ್ಯದ ಪ್ರಮುಖ ಉದ್ಯಮವಾದ ರೇಷ್ಮೆ ಕೈಗಾರಿಕೆಯನ್ನು ತೀವ್ರಗತಿಯಿಂದ ಅಭಿವೃದ್ಧಿಗೊಳಿಸಲು ಎಲ್ಲಾ ಕ್ರಮಗಳನ್ನೂ ಕೈಗೊಳ್ಳಲಾಗಿದೆ. ದೇಶದ ಒಟ್ಟು ರೇಷ್ಮೆ ಉತ್ಪಾದನೆಯ ಶೇ. 80 ರಷ್ಟು ಕರ್ನಾಟಕದಿಂದಲೇ ಬರುತ್ತಿದ್ದು, ಈ ಉದ್ಯಮ ದಿಂದ ಹೆಚ್ಚಿನ ಉದ್ಯೋಗಾವಕಾಶಗಳು ಮತ್ತು ರಫ್ತು ವ್ಯಾಪಾರದಗಳಿಕೆಯೂ ಸಾಧ್ಯವಿದೆ. ಉದ್ಯಮವನ್ನು ಶಕ್ತಿಯುತವಾಗಿ ಬೆಳೆಸಲು ವಿಶ್ವಬ್ಯಾಂಕಿನ ನೆರವನ್ನು ಪಡೆಯಲಾಗಿದೆ.

ರಾಜ್ಯದ ಕೈಗಾರಿಕೀಕರಣದಲ್ಲಿ ಸಹಕಾರ ಸಂಸ್ಥೆಗಳು ಹೆಚ್ಚು ಆಸಕ್ತಿ ತೋರಿಸು ತ್ತಿರುವುದು ಒಂದು ಆರೋಗ್ಯಕರ ಲಕ್ಷಣ ಕಳೆದ ಕೆಲವು ವರ್ಷಗಳಲ್ಲಿ ಕೈಗೊಂಡ ಪ್ರಯತ್ನಗಳ ಫಲವಾಗಿ ಸಹಕಾರೀ ಕ್ಷೇತ್ರದಲ್ಲಿ ಇಂದು 18 ಸಕ್ಕರೆ ಕಾರ್ಖಾನೆಗಳೂ, 8 ನೂಲಿನ ಗಿರಣಿಗಳೂ, 836 ನೇಕಾರರ ಸಂಘಗಳೂ, 11 ಹತ್ತಿ ಬೀಜ ತೆಗೆಯುವ ಮತ್ತು ಬೇಲು ಮಾಡುವ ಕೇಂದ್ರಗಳೂ, 40 ಇತರ ಸಂಸ್ಕರಣ ಸಂಘಗಳೂ, 1812 ನೇಕಾರರ ಸಂಘಗಳನ್ನು ಬಿಟ್ಟು ಉಳಿದ ಉತ್ಪದನಾ ಸಂಘಗಳೂ ಇವೆ.

4.9 ಸಾರಿಗೆ ಮತ್ತು ಸಂಪರ್ಕ ಕ್ಷೇತ್ರದಲ್ಲಿ ಎಂದಿನಂತೆ ರಸ್ತೆಗಳ ಸುಧಾರಣೆ ಕಾರ್ಯ ಮುಂದುವರಿಯಿತು. 1979 ರ ಮೇರೆಗೆ ಸುಧಾರಿತ ರಸ್ತೆಗಳ ಉದ್ದ 55,738 ಕಿ.ಮೀ. ಗಳಾಗಿದ್ದು, ಗ್ರಾಮ ರಸ್ತೆಗಳ ಉದ್ದ 39,625 ಕಿ.ಮೀ. ಆಯಿತು. ಒಟ್ಟು 1968 ಕಿ.ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿಗಳೂ, 8,000 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಗಳೂ ಇವೆ. ರಿಜಿಸ್ಟರಾದ ವಾಹನಗಳ ಸಂಖ್ಯೆಯೂ ಬಹುವಾಗಿ ಹೆಚ್ಚಿತು. 1979ರ ವೇಳೆಗೆ ಬಸ್ಸುಗಳ ಸಂಖ್ಯೆ 11,243, ಸರಕು ವಾಹನಗಳ ಸಂಖ್ಯೆ 29,657, ಕಾರುಗಳ ಸಂಖ್ಯೆ 58,094, ಮೋಟಾರ್ ಸೈಕಲ್ಲು ಮತ್ತು ಸ್ಕೂಟರ್‌ಗಳ ಸಂಖ್ಯೆ 176,574 ಆಯಿತು. ಅತ್ಯಂತ ಹೆಚ್ಚಿನ ವಾಹನಗಳು ರಿಜಿಸ್ಟರಾದ ಜಿಲ್ಲೆ ಬೆಂಗಳೂರು. ಇದೇ ವೇಳೆಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳ ಸಂಖ್ಯೆ 4660, ವಿನಿಯೋಗಿಸಿದ ಬಂಡವಾಳ 68.93 ಕೋಟಿ ರೂ.ಗಳು ಮತ್ತು ಸಿಬ್ಬಂದಿ ಸಂಖ್ಯೆ 31,372. ಬಸ್ ಮಾರ್ಗಗಳ ಸಂಖ್ಯೆ 4154 ಆಯಿತು. ಸಂಸ್ಥೆಯು ದೇಶದ ಪ್ರಮುಖ ಸಾರಿಗೆ ಸಂಸ್ಥೆಗಳಲ್ಲಿ ಒಂದಾಗಿದೆ. ಒಟ್ಟು ಬಂಡವಾಳದ ಅರ್ಧಪಾಲು ಆಂತರಿಕ ಸಂಪನ್ಮೂಲಗಳಿಂದಲೂ, ಉಳಿದ ಭಾಗ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ಒದಗಿಸಿದ ಬಂಡವಾಳದಿಂದಲೂ ಡಿಬೆಂಚರ್ ಮತ್ತು ಇತರ ಸಾಲಗಳಿಂದಲೂ ಬಂದಿದೆ.

ಪಶ್ಚಿಮದ ಕಡಲ ತೀರದ ಅಭಿವೃದ್ಧಿಯಲ್ಲಿ 1975 ರಲ್ಲಿ ಪೂರ್ಣಗೊಂಡ ನವ ಮಂಗಳೂರು ಬಂದರು ಒಂದು ಪ್ರಮುಖ ಸಾಧನೆ. ಈ ಬಂದರಿನ ಮೂಲಕ ಕರ್ನಾಟಕದ ಉತ್ಪನ್ನ ಗಳಾದ ಕಬ್ಬಿಣದ ಅದಿರು, ಕಾಫೀ, ಮೀನು, ಮರ ಮುಂತಾದು ವನ್ನು ವಿಲಂಬವಿಲ್ಲದೆ ಹೊರದೇಶಗಳಿಗೆ ಕಳುಹಿಸಲು ಸಾಧ್ಯವಾಗಿದೆ. ಅಲ್ಲದೆ

ಅತ್ಯಂತ ಕಡಿಮೆ ವೆಚ್ಚದಲ್ಲಿ ರಾಜ್ಯದ ಹೊರಗಿನಿಂದ ಪೆಟ್ರೋಲಿಯಂ ಉತ್ಪನ್ನಗಳನ್ನೂ ರಸಗೊಬ್ಬರ ಕಾರ್ಖಾನೆಗೆ ಬೇಕಾದ ಕಚ್ಚಾ ವಸ್ತುಗಳನ್ನು, ಕಲ್ಲಿದ್ದಲನ್ನೂ ತರಿಸಿಕೊಳ್ಳಲು ಸಾಧ್ಯವಾಗಿದೆ.

ರೈಲ್ವೆ ಸಾರಿಗೆ ಅಭಿವೃದ್ಧಿಯಲ್ಲಿ ಆಗಿರುವ ಸಾಧನೆಗಳು, 1970ರಲ್ಲಿ ಪೂರ್ಣಗೊಂಡ ಬೆಂಗಳೂರು-ಸೇಲಂ ರೈಲು ಮಾರ್ಗ ಮತ್ತು 1976 ರಲ್ಲಿ ಪೂರ್ಣಗೊಂಡ ಹಾಸನ-ಮಂಗಳೂರು ರೈಲ್ವೆ ಮಾರ್ಗ. ಮೀಟರ್ ಗೇಜ್ ಮಾರ್ಗಗಳನ್ನು ಬ್ರಾಡ್ ಗೇಜಿಗೆ ಪರಿವರ್ತಿಸುವ ಕಾರ್ಯಕ್ರಮಗಳ ಅಂಗವಾಗಿ ಬೆಂಗಳೂರು ಗುಂತಕಲ್ಲು ಮಾರ್ಗದ ಕೆಲಸ ನಡೆಯುತ್ತಿದೆ. ಮೈಸೂರು ಬೆಂಗಳೂರಿನ ಯೋಜನೆಗೆ ಅಂಗೀಕಾರ ದೊರೆತಿದೆ. ಬೆಂಗಳೂರು-ಮೀರಜ್‌ನ ಯೋಜನೆ ಪರಿಶೀಲನೆಯಲ್ಲಿದೆ.

ಈಗ ರಾಜ್ಯದಲ್ಲಿ 9390 ಅಂಚೆ ಕಛೇರಿಗಳಿವೆ (1957ರಲ್ಲಿ 3357) ತಂತಿ ಕಛೇರಿಗಳ ಸಂಖ್ಯೆ 1957ರಲ್ಲಿ 370 ಇದ್ದು ಈಗ 2329 ಆಗಿದೆ. 626 ಟೆಲಿಫೋನ್ ಎಕ್ಸ್‌ಛೇಂಜುಗಳಿವೆ, ಮತ್ತು 136,000 ಟೆಲಿಫೋನುಗಳಿವೆ. ಸುಮಾರು 14 ಲಕ್ಷ ರೇಡಿಯೋಗಳು ಉಪಯೋಗದಲ್ಲಿವೆ.

4.10 ಶಿಕ್ಷಣ ಕ್ಷೇತ್ರದಲ್ಲಿ ಬೆಳವಣಿಗೆಯು ಗಾತ್ರ ದೊಡ್ಡದಾಗಿಯೇ ಇದೆ. 1957 ರಿಂದ 1979ರ ಅವಧಿಯಲ್ಲಿ ಪ್ರಾಥಮಿಕ ಶಾಲೆಗಳ ಸಂಖ್ಯೆ 22,803 ರಿಂದ 34,442 ಆಯಿತು. ವಿದ್ಯಾರ್ಥಿಗಳ ಸಂಖ್ಯೆ 17.27 ಲಕ್ಷದಿಂದ 48.11 ಲಕ್ಷಕ್ಕೇರಿತು. ಇದೇ ಅವಧಿಯಲ್ಲಿ ಪ್ರೌಢ ಶಾಲೆಗಳ ಸಂಖ್ಯೆ 535 ರಿಂದ 2,400 ಆಗಿ ವಿದ್ಯಾರ್ಥಿಗಳ ಸಂಖ್ಯೆ 1.78 ಲಕ್ಷದಿಂದ 7.68 ಲಕ್ಷ ಆಯಿತು. ವಿಶ್ವವಿದ್ಯಾಲಯದ ಸಾಮಾನ್ಯ ಶಿಕ್ಷಣದ ಕಾಲೇಜುಗಳ ಸಂಖ್ಯೆ 42 ರಿಂದ 243ಕ್ಕೆ ಹೆಚ್ಚಿ, ವಿದ್ಯಾರ್ಥಿಗಳ ಸಂಖ್ಯೆ 30,490 ರಿಂದ 208,226 ಆಯಿತು. ಔದ್ಯೋಗಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ 1979ರ ವೇಳೆಗೆ 164 ಕಾಲೇಜುಗಳಾದುವು. ವಿದ್ಯಾರ್ಥಿಗಳ ಸಂಖ್ಯೆ 72,500 ಒಟ್ಟು ಕಾಲೇಜುಗಳ ಪೈಕಿ 18 ಎಂಜಿನಿಯರಿಂಗ್ ಕಾಲೇಜುಗಳೂ, 29 ಕಾನೂನು ಮತ್ತು 39 ವಾಣಿಜ್ಯ ಕಾಲೇಜುಗಳೂ, 29 ವೈದ್ಯಕೀಯ ಕಾಲೇಜುಗಳೂ, (ಪಾಶ್ಚಾತ್ಯ ಪದ್ಧತಿ, ಆಯುರ್ವೇದ, ಹೋಮಿಯೋಪತಿ, ದಂತಚಿಕಿತ್ಸೆ, ನರ್ಸಿಂಗ್ ಮತ್ತು ಫಾರ್ಮಸಿ ಸೇರಿ), 3 ಕೃಷಿ ವಿಜ್ಞಾನ ಕಾಲೇಜುಗಳೂ, 34 ಶಿಕ್ಷಣ ಕಾಲೇಜುಗಳು, 34 ಪಾಲಿಟೆಕ್ನಿಕ್‌ಗಳೂ ಇವೆ. ಇವೇ ಅಲ್ಲದೆ 104 ಕೈಗಾರಿಕೆ ತರಬೇತಿ ಸಂಸ್ಥೆಗಳೂ ಇವೆ.

ಆರೋಗ್ಯ ಕ್ಷೇತ್ರದಲ್ಲಿ ಆದ ವಿಸ್ತರಣೆಗಳಿಂದ ಇಂದು ರಾಜ್ಯದಲ್ಲಿ 233 ಆಸ್ಪತ್ರೆಗಳೂ 1152 ಔಷಧಾಲಯಗಳೂ, 269 ಪ್ರಾಥಮಿಕ ಆರೋಗ್ಯ ಕೇಂದ್ರಗಳೂ 215 ಪ್ರಾಥಮಿಕ ಆರೋಗ್ಯ ಘಟಕಗಳೂ ಕೆಲಸ ಮಾಡುತ್ತಿವೆ. ಆರೋಗ್ಯ ಸೇವೆಗಳ ವಿಸ್ತರಣೆಯಲ್ಲಿ ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿ

ಪದ್ಧತಿಗಳಿಗೂ ಪ್ರೋತ್ಸಾಹ ದೊರೆಯುತ್ತಿದೆ. ಕಣ್ಣಿನ ರೋಗಗಳ ಚಿಕಿತ್ಸೆ, ದಂತ ರೋಗ ಚಿಕಿತ್ಸೆ, ಕ್ಷಯರೋಗ ಚಿಕಿತ್ಸೆಗಳಿಗೂ ಹೆಚ್ಚಿನ ಗಮನ ನೀಡಲಾಗಿದೆ. ಪೌಷ್ಠಿಕಾಂಶ ಔಷಧಿಗಳ ವಿತರಣೆ ಕಾರ್ಯಕ್ರಮವೂ, ಕುಟುಂಬ ಕಲ್ಯಾಣ ಯೋಜನೆ, ಸಾರ್ವಜನಿಕ ಆರೋಗ್ಯ ಸೇವೆಗಳೂ, ಆರೋಗ್ಯ ಕ್ಷೇತ್ರದ ಮುಖ್ಯ ಕಾರ್ಯಕ್ರಮಗಳಾಗುತ್ತಿವೆ.

4.12 ಸಮಾಜ ಕಲ್ಯಾಣ ವಿಭಾಗದಲ್ಲಿ ಸಮಾಜದ ದುರ್ಬಲ ವರ್ಗಗಳಿಗೆ ನೀಡುತ್ತಿರುವ ಸೌಲಭ್ಯಗಳನ್ನು ಹೆಚ್ಚಿಸಲಾಗಿದೆ. ಈ ವರ್ಗದ ಜನರಿಗೆ ಕೃಷಿಯೇ ಪ್ರಧಾನ ಕಸುಬಾಗಿದ್ದು, ರಾಜ್ಯದ ಭೂ ಸುಧಾರಣೆ ಶಾಸನ ಜಾರಿಗೆ ಬಂದ ನಂತರ ದೊಡ್ಡ ಹಿಡುವಳಿದಾರರಿಂದ ಪಡೆದ ಹೆಚ್ಚುವಳಿ ಜಮೀನಿನ ಅರ್ಧದಷ್ಟನ್ನು ಪರಿಶಿಷ್ಟ ವರ್ಗದ ರೈತರಿಗೆ ಹಂಚಲಾಗಿದೆ. ಇಂತಹ ಒಟ್ಟು ಭೂಮಿ ಸುಮಾರು 5 ಲಕ್ಷ ಎಕರೆ. ಈ ವರ್ಗಗಳ ಜನರು ಕೃಷಿ ಸಹಕಾರ ಸಂಘಗಳಿಗೂ, ಭೂ ಅಭಿವೃದ್ಧಿ ಬ್ಯಾಂಕುಗಳಿಗೂ ಸದಸ್ಯರಾಗುವುದನ್ನು ಪ್ರೋತ್ಸಾಹಿಸಿ ತನ್ಮೂಲಕ ಸಾಲ ಸೌಲಭ್ಯಗಳನ್ನು ಪಡೆದು ನೀರಾವರಿ ಭೂಮಿಗಳನ್ನು, ಪಂಪ್ ಸೆಟ್ಟುಗಳನ್ನು ಹೊಂದುವುದನ್ನು ಸಾಧ್ಯಗೊಳಿಸಲಾಗಿದೆ. ಈ ಜನರು ತಮ್ಮ ಆದಾಯಗಳನ್ನು ಹೆಚ್ಚಿಸಿಕೊಳ್ಳಲು ಸಣ್ಣ ಕೈಗಾರಿಕೆಗಳನ್ನು, ಕೃಷಿಗೆ ಸಂಬಂಧಿಸಿದ ಉದ್ಯೋಗಗಳನ್ನು ಕೈಗೊಳ್ಳಲು ನೆರವುನೀಡಲಾಗುತ್ತಿದೆ. ಪರಿಶಿಷ್ಟವರ್ಗಗಳಿಗೆ ಗೃಹನಿವೇಶನಗಳನ್ನು ಒದಗಿಸುವ ಕಾರ್ಯ 1957 ರಲ್ಲೇ ಆರಂಭವಾಗಿದ್ದು 1978ರ ವೇಳೆಗೆ ಸುಮಾರು ಲಕ್ಷ ನಿವೇಶನಗಳನ್ನು ಹಂಚಲಾಗಿದೆ.

ಈ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಎಲ್ಲಾ ಮಟ್ಟದಲ್ಲೂ ಶಿಕ್ಷಣ ಉಚಿತವಾಗಿರುವುದಲ್ಲದೆ, ವಿದ್ಯಾರ್ಥಿ ವೇತನಗಳೂ, ವಿದ್ಯಾರ್ಥಿನಿಲಯ ಸೌಕರ್ಯಗಳೂ ಒದಗಿಸಲ್ಪಟ್ಟಿವೆ. ವಿದ್ಯಾವಂತ ಯುವಕರಿಗೆ ಸರ್ಕಾರದಲ್ಲಿ ಮತ್ತು ಸರ್ಕಾರಕ್ಕೆ ಸೇರಿದ ಉದ್ಯಮಗಳಲ್ಲಿ ಉದ್ಯೋಗ ಮೀಸಲಾತಿ ನಿಯಮವಿರುವುದರಿಂದ ವರ್ಷ ವರ್ಷವೂ ಹೆಚ್ಚು ಹೆಚ್ಚು ಯುವಕರು ಉದ್ಯೋಗಗಳನ್ನು ಪಡೆಯುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಸಾಮಾಜಿಕ ಸೇವೆಗಳನ್ನು ವಿಸ್ತರಿಸಿ 'ಕನಿಷ್ಠ ಅವಶ್ಯಕತೆಗಳ ಕಾರ್ಯಕ್ರಮವನ್ನು ನಾಲ್ಕನೆಯ ಯೋಜನೆಯ ಅವಧಿಯಲ್ಲಿ ಜಾರಿಗೆ ತರಲಾಯಿತು. ಪ್ರಾಥಮಿಕ ಹಂತದ ಶಿಕ್ಷಣ, ಪ್ರಾಥಮಿಕ ಆರೋಗ್ಯ ಕೇಂದ್ರ, ಕುಡಿಯುವ ನೀರಿನ ಏರ್ಪಾಡು, ರಸ್ತೆ ಮತ್ತು ಸಂಪರ್ಕ ವ್ಯವಸ್ಥೆ, ವಿದ್ಯುತ್ ಸೌಲಭ್ಯ, ಮನೆ ನಿವೇಶನಗಳು, ಪೌಷ್ಠಿಕಾಂಶ ಆಹಾರ ಪೂರೈಕೆ ಮುಂತಾದುವು ಈ ಕಾರ್ಯಕ್ರಮದ ಮುಖ್ಯ ಅಂಶಗಳು. ಈ ಕಾರ್ಯಕ್ರಮಕ್ಕಾಗಿ ಈಗ ವರ್ಷಕ್ಕೆ ಸುಮಾರು 12 ಕೋಟಿ ರೂ.ಗಳು ಖರ್ಚಾಗುತ್ತಿವೆ.

4.13. ನಾಲ್ಕನೆಯ ಯೋಜನೆಯ ಅವಧಿಯಲ್ಲಿ "ಸಾಮಾಜಿಕ ನ್ಯಾಯ ಸಾಧನೆಯೊಂದಿಗೆ ಅಭಿವೃದ್ಧಿ" ಉದ್ದೇಶದ ಅಡಿಯಲ್ಲಿ ಬರಗಾಲ ಪೀಡಿತ ಪ್ರದೇಶಗಳ

ಪರಿಹಾರ ಕಾರ್ಯಕ್ರಮವನ್ನೂ ಪ್ರಾರಂಭಿಸಲಾಯಿತು. ರಾಜ್ಯದ ಕೆಲವು ಜಿಲ್ಲೆಗಳು ಮಳೆಯ ಅನಿಶ್ಚಯತೆಯ ಕಾರಣದಿಂದ ಆಗಾಗ್ಗೆ ಬರಗಾಲಕ್ಕೆ ತುತ್ತಾಗುತ್ತಿವೆ. ಇಂತಹ ಬರಗಾಲ ಪೀಡಿತ ಪ್ರದೇಶಗಳು ಭಾರತದ ಅನೇಕ ಜಿಲ್ಲೆಗಳಲ್ಲಿದ್ದು, ಈ ಸಮಸ್ಯೆಗೆ ಪರಿಹಾರವನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಕಂಡು ಹಿಡಿದು ಜಾರಿಗೆ ತಂದುವು. ಬರಗಾಲ ಪರಿಹಾರ ಕಾರ್ಯಕ್ರಮದ ಅಂಗವಾಗಿ ಜಾರಿಗೆ ತರಲಾಗುವ ಕಾಮಗಾರಿಗಳಲ್ಲಿ ಸಣ್ಣ ಪ್ರಮಾಣದ ನೀರಾವರಿ ಯೋಜನೆ, ಭೂಸಾರ ರಕ್ಷಣೆ, ಹುಲ್ಲುಗಾವಲುಗಳ ನಿರ್ಮಾಣ, ಅರಣ್ಯಾಭಿವೃದ್ಧಿ ಮತ್ತು ರಸ್ತೆ ನಿರ್ಮಾಣ ಸೇರಿವೆ. ಜನರಿಗೆ ಉದ್ಯೋಗ ದೊರೆಯಬೇಕು, ಶಾಶ್ವತ ಅಭಿವೃದ್ಧಿ ಕೆಲಸ ಆಗ ಬೇಕು ಎಂಬುದೇ ಬರಗಾಲ ಪರಿಹಾರ ಯೋಜನೆಯ ಉದ್ದೇಶ. ಐದನೆಯ ಯೋಜನೆಯ ಅವಧಿಯಲ್ಲಿ ಈ ಯೋಜನೆಗೆ ಹೊಸ ತಿರುವು ಕೊಡಲಾಯಿತು. ಇದು ಕೇವಲ ಉದ್ಯೋಗ ಕಲ್ಪಿಸುವ ಯೋಜನೆಯಾಗದೆ, ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ಸಹಾಯಕವಾಗಬೇಕೆಂಬುದು ಹೊಸ ಅಂಶ. ಬರಗಾಲಕ್ಕೆ ತುತ್ತಾಗುವ ಪ್ರದೇಶಗಳಲ್ಲಿ ಭೂಮಿಯನ್ನು ಕೇವಲ ಧಾನ್ಯಗಳನ್ನು ಬೆಳೆಯುವ ಖುಷ್ಕಿ ವ್ಯವಸಾಯಕ್ಕೆ ಬಳಸದೆ, ಅಲ್ಪಸಂಖ್ಯೆ ನೀರಾವರಿ ಸೌಕರ್ಯಗಳನ್ನು ಬಳಸಿಕೊಂಡು ದನಕರು ಗಳಿಗೆ ಮೇವನ್ನು ಬೆಳೆಸಿ ಹೈನುಗಾರಿಕೆಯನ್ನು ಪ್ರಾರಂಭಿಸುವುದು ಮತ್ತು ಹಾಲನ್ನು ಉತ್ಪಾದಿಸಿ ಮಾರಾಟ ಮಾಡುವುದು ಉತ್ತಮ ವಿಧಾನವೆಂದು ಸರ್ಕಾರ ಒಪ್ಪಿ ಇದನ್ನು ಜಾರಿಗೆ ತರುತ್ತಿದೆ.

4.14. ರಾಜ್ಯದ ಸಮಗ್ರ ಅಭಿವೃದ್ಧಿಯ ಪರಿಣಾಮವಾಗಿ ಕರ್ನಾಟಕದ ವಿವಿಧ ಭಾಗಗಳಲ್ಲಿ ಇದ್ದ ಆರ್ಥಿಕ ಅಸಮತೆ ಬಹುಮಟ್ಟಿಗೆ ನಿವಾರಣೆಯಾಗಿದೆ. 1956ರಲ್ಲಿ ವಿದ್ಯುಚ್ಛಕ್ತಿ ಪಡೆದ ಪಟ್ಟಣ ಮತ್ತು ಗ್ರಾಮಗಳ ಸಂಖ್ಯೆ ಬಹಳಕಡಿಮೆ ಯಿದೆ. ಜಿಲ್ಲೆಗಳಲ್ಲಿ ಈ ಸೌಲಭ್ಯ ವಿಸ್ತರಣೆಯಾಗಿದೆ. ಉದಾಹರಣೆಗೆ ಗ್ರಾಮ ಮತ್ತು ಪಟ್ಟಣಗಳ ಸಂಖ್ಯೆ :

ಜಿಲ್ಲೆ	1956	1979
ಬೆಳಗಾಂ	8	592
ಬಿಜಾಪುರ	9	902
ಬಿದರೆ	2	579
ದಕ್ಷಿಣ ಕನ್ನಡ	69	627
ಗುಲ್ಬರ್ಗಾ	2	722
ರಾಯಚೂರು	8	711
ಉತ್ತರ ಕನ್ನಡ	2	522
ಧಾರವಾಡ	19	1043

ವಿದ್ಯುತ್ ಪಡೆದ ನೀರಾವರಿ ಪಂಪ್‌ಸೆಟ್ಟುಗಳ ಸಂಖ್ಯೆ

ಜಿಲ್ಲೆ	1956	1979
ಬೆಳಗಾಂ	ಇಲ್ಲ	22,381
ಬೀದರ್	,,	12.174
ಬಿಜಾಪುರ	,,	22,399
ಧಾರವಾಡ	,,	12,217
ಗುಲ್ಬರ್ಗಾ	,,	6,436
ಉತ್ತರ ಕನ್ನಡ	,,	3,578
ರಾಯಚೂರು	,,	8,757
ದಕ್ಷಿಣ ಕನ್ನಡ	,,	22,570

ನೀರಾವರಿ ಕಾಲುವೆಗಳ ಸಾಧ್ಯತೆಯನ್ನು ಹೊಂದಿಲ್ಲದ ಬೆಂಗಳೂರು ಜಿಲ್ಲೆ, ಕೋಲಾರ ಜಿಲ್ಲೆ ಮತ್ತು ತುಮಕೂರು ಜಿಲ್ಲೆಗಳಲ್ಲಿ ಹೆಚ್ಚು ಸಂಖ್ಯೆಯ ಸೆಟ್ಟುಗಳಾಗಿವೆ.

	1956	1979
ಬೆಂಗಳೂರು ಜಿಲ್ಲೆ	1,923	34,964
ಕೋಲಾರ	2,428	40.822
ತುಮಕೂರು	1,237	28,045

ವಿವಿಧ ಜಿಲ್ಲೆಗಳಲ್ಲಿ ಸಾಗುವಳಿ ಪ್ರದೇಶದ ಪೈಕಿ ನೀರಾವರಿ ಸೌಲಭ್ಯಗಳನ್ನು (ಕಾಲುವೆ, ಭಾವಿ, ಕೆರೆ ಎಲ್ಲಾ ಸೇರಿ) ಪಡೆದ ಶೇಕಡಾ ಪ್ರಮಾಣ.

ಜಿಲ್ಲೆ	1957	1979
ಬೆಂಗಳೂರು	10.74	18.42
ಬೆಳಗಾಂ	2.37	16.01
ಬಳ್ಳಾರಿ	3.16	16.92
ಬೀದರ್	3.01	6.84
ಬಿಜಾಪುರ	1.70	8.47
ಗುಲ್ಬರ್ಗಾ	1.41	2.31
ಧಾರವಾಡ	4.67	7.80
ರಾಯಚೂರು	1.06	13.14

ಕೊಡಗು	6.99	10.58
ಚಿತ್ರದುರ್ಗ	7.63	17.87
ಉತ್ತರ ಕನ್ನಡ	18.52	18.19
ಹಾಸನ	16.02	16.70
ದಕ್ಷಿಣ ಕನ್ನಡ	23.06	37.94
ತುಮಕೂರು	24.67	11.94
ಮಂಡ್ಯ	25.11	35.76
ಚಿಕ್ಕಮಗಳೂರು	34.27	11.65
ಶಿವಮೊಗ್ಗ	42.02	41.17

ಇವು ಕೆಲವು ಉದಾಹರಣೆಗಳು, ಪ್ರತಿ ಜಿಲ್ಲೆಯಲ್ಲಿಯೂ. ರಸ್ತೆಗಳು ಉದ್ದವಾಗಿವೆ, ಉತ್ತಮವಾಗಿವೆ. ಶಾಲೆ, ಕಾಲೇಜು, ಆಸ್ಪತ್ರೆ, ಅಂಚೆ ತಂತಿ ಕಛೇರಿಗಳ ಸಂಖ್ಯೆ ಬೆಳೆದಿದೆ. ಕೈಗಾರಿಕೆಗಳೂ ತಲೆ ಎತ್ತುತ್ತಿವೆ.

4.15. ವಿವಿಧ ಪ್ರದೇಶಗಳಲ್ಲಿನ ವ್ಯವಸಾಯ, ಕೈಗಾರಿಕೆ ಮತ್ತು ವಾಣಿಜ್ಯ ಅಭಿವೃದ್ಧಿಯನ್ನು ನಿರೀಕ್ಷಿಸಿಯೋ ಹಿಂಬಾಲಿಸಿಯೋ ಬ್ಯಾಂಕಿಂಗ್ ಉದ್ದಿಮೆ ಬೆಳೆದು ಬಂದಿತು. ಬ್ಯಾಂಕಿಂಗ್ ಉದ್ಯಮವು ಮುಂದುವರಿದ ರಾಜ್ಯಗಳಲ್ಲಿ ಕರ್ನಾಟಕವು ಪ್ರಮುಖ ಸ್ಥಾನವಲ್ಲಿದೆ. ಈಗ ರಾಜ್ಯದಲ್ಲೇ ಸ್ಥಾಪನೆಯಾದ ಏಳು ವಾಣಿಜ್ಯ ಬ್ಯಾಂಕುಗಳಿವೆ-ಕೆನರಾಬ್ಯಾಂಕ್, ಸ್ಟೇಟ್‌ಬ್ಯಾಂಕ್ ಆಫ್ ಮೈಸೂರು, ಸಿಂಡಿಕೇಟ್ ಬ್ಯಾಂಕ್, ವಿಜಯಾಬ್ಯಾಂಕ್, ಕರ್ನಾಟಕಬ್ಯಾಂಕ್, ಕಾರ್ಪೊರೇಷನ್‌ಬ್ಯಾಂಕ್ ಮತ್ತು ವೈಶ್ಯಬ್ಯಾಂಕ್. ಅಲ್ಲದೆ ಬೇರೆ ರಾಜ್ಯಗಳಲ್ಲಿ ಸ್ಥಾಪಿತವಾದ ಬ್ಯಾಂಕುಗಳೂ ಇವೆ. ಎಲ್ಲಾ ಬ್ಯಾಂಕುಗಳ ಕಾರ್ಯಶಾಖೆಗಳ ಸಂಖ್ಯೆ 1956ರಲ್ಲಿ 356 ಇದ್ದುದು 1980ರ ವೇಳೆಗೆ 2598 ಆಯಿತು. ಹೆಚ್ಚು ಸಂಖ್ಯೆಯ ಬ್ಯಾಂಕ್ ಕಛೇರಿಗಳನ್ನು ಹೊಂದಿರುವ ರಾಜ್ಯಗಳಲ್ಲಿ ಕರ್ನಾಟಕಕ್ಕೆ ನಾಲ್ಕನೆಯ ಸ್ಥಾನ (ಉತ್ತರ ಪ್ರದೇಶ 3369, ಮಹಾರಾಷ್ಟ್ರ 3113, ತಮಿಳುನಾಡು 2675), ವಿವಿಧ ಜಿಲ್ಲೆಗಳ ಪೈಕಿ ಅತ್ಯಂತ ಹೆಚ್ಚಿನ ಸಂಖ್ಯೆಯ ಕಛೇರಿಗಳಿರುವುದು ಬೆಂಗಳೂರು ಜಿಲ್ಲೆಯಲ್ಲಿ (514), ನಂತರ ದಕ್ಷಿಣ ಕನ್ನಡ (369), ಬೆಳಗಾಂ ಮತ್ತು ಧಾರವಾಡ (188ರಂತೆ), ಮೈಸೂರು (175). ಅತ್ಯಂತ ಕಡಿಮೆ ಸಂಖ್ಯೆಯ ಶಾಖೆಗಳಿಂದ ಜಿಲ್ಲೆ ಬೀದರ್ (34). ಒಟ್ಟು 2598 ಶಾಖೆಗಳ ಪೈಕಿ 1253 ಗ್ರಾಮಪ್ರದೇಶಗಳಲ್ಲೂ, 595 ಅರೆ-ನಗರ ಪ್ರದೇಶಗಳಲ್ಲೂ, 278 ಪಟ್ಟಣಗಳಲ್ಲೂ 472 ಪ್ರಮುಖ ನಗರಗಳಲ್ಲೂ ಇವೆ.

1961ರಲ್ಲಿ ಇದ್ದ 473 ಕಾರ್ಯಶಾಖೆಗಲ್ಲಿ, ಇದ್ದ ಠೇವಣಿಗಳ ಮೊತ್ತ 77.59 ಕೋಟಿ ರೂಗಳಾಗಿದ್ದು, 1972ರ ವೇಳೆಗೆ 1291 ಶಾಖೆಗಳು 366.16

ಕೋಟಿ ಠೇವಣಿಗಳೂ ಆದುವು. 1980ರ ವೇಳೆಗೆ ಶಾಖೆಗಳ ಸಂಖ್ಯೆ 2598 ಆದಾಗ ಠೇವಣಿಗಳ ಮೊತ್ತ 1341.26 ಕೋಟಿ ರೂಗಳಾಯಿತು.

ಆದ್ಯತೆ ಕ್ಷೇತ್ರಗಳಿಗೆ ಬ್ಯಾಂಕುಗಳಿಂದ ನೀಡಿದ ಸಾಲಗಳು 1977 ಮತ್ತು 1978ರಲ್ಲಿ

ಆದ್ಯತೆ ಕ್ಷೇತ್ರಗಳು	ಕೋಟಿ ಡಿಸೆಂಬರ್ 1977	ರೂಗಳಲ್ಲಿ ಡಿಸೆಂಬರ್ 1978
ವ್ಯವಸಾಯ	156.63	184.47
ಸಣ್ಣ ಪ್ರಮಾಣದ ಕೈಗಾರಿಕೆಗಳು	100.88	119.72
ಸಾರಿಗೆ	20.98	23.56
ಚಿಲ್ಲರೆ ವ್ಯಾಪಾರ ಮತ್ತು ಸಣ್ಣ ಉದ್ದಿಮೆ	30.52	38.94
ವೃತ್ತಿಗಳು ಮತ್ತು ಸ್ವಂತ ಉದ್ಯೋಗ	11.56	8.64
ವಿದ್ಯಾಭ್ಯಾಸ	1.25	1.33
ಒಟ್ಟು	321.82	376.66

ರಾಜ್ಯದ ಒಟ್ಟು 22,400 ಸಹಕಾರ ಸಂಘಗಳ ಪೈಕಿ 12,516 ಸಹಕಾರೀ ಬ್ಯಾಂಕುಗಳಾಗಿವೆ. ಇವು ರಾಜ್ಯದ 19 ಜಿಲ್ಲೆಗಳ ಕೇಂದ್ರ ಸಹಕಾರ ಬ್ಯಾಂಕುಗಳ ಕೆಳಗೆ ಕೆಲಸ ಮಾಡುತ್ತವೆ. ಪ್ರಾಥಮಿಕ ಸಂಘಗಳಲ್ಲಿ ಸಂಗ್ರಹವಾದ ಠೇವಣಿ 1998ರಲ್ಲಿ 74.97 ಕೋಟಿ ರೂಗಳು ರಿಸರ್ವ್ ಬ್ಯಾಂಕಿನಿಂದ ಸಾಲಪಡೆದು ಅಲ್ಲಿನ ವರೆಗೆ ಹಂಚಿದ ಒಟ್ಟು ಮೊಬಲಗು 158 ಕೋಟಿರೂಗಳು, ಇದರಲ್ಲಿ ಕರ್ನಾಟಕ ರಾಜ್ಯ ಸಹಕಾರೀ ಅಭಿವೃದ್ಧಿ ಬ್ಯಾಂಕು ನೀಡಿದ ನೆರವು ಸೇರಿರುವುದಿಲ್ಲ.

ರಾಜ್ಯದ ವಾಣಿಜ್ಯ ಬ್ಯಾಂಕುಗಳು ಕುಶಲ ಕರ್ಮಿಗಳಿಗೂ, ಸಣ್ಣರೈತರಿಗೂ, ಇತರ ದುರ್ಬಲ ವರ್ಗಗಳವರಿಗೂ ಸುಮಾರು ಶೇ 4 ರಷ್ಟು ಬಡ್ಡಿದರದಲ್ಲಿ ಸಾಲ ನೀಡುವ ಯೋಜನೆ ಜಾರಿಗೆ ಬಂದಿದೆ. ಈ ರಿಯಾಯತಿ ದರಕ್ಕೂ ಸಾಮಾನ್ಯವಾಗಿ ಬ್ಯಾಂಕು ವಿಧಿಸುವ ಬಡ್ಡಿದರಕ್ಕೂ ಇರುವ ವ್ಯತ್ಯಾಸವನ್ನು ಸರ್ಕಾರವೇ ಕಟ್ಟಿಕೊಡುತ್ತದೆ. ಈ ಯೋಜನೆಯ ಪ್ರಯೋಜನವನ್ನು ಸುಮಾರು ಎರಡುಲಕ್ಷ ಜನರು ಪಡೆದುಕೊಂಡಿದ್ದಾರೆ.

1979ರಲ್ಲಿ ಪ್ರಾರಂಭವಾದ 'ಭಾಗ್ಯಜ್ಯೋತಿ' ಯೋಜನೆಗೆ ಕರ್ನಾಟಕ ಸರ್ಕಾರವೂ, ಗ್ರಾಮೀಣ ವಿದ್ಯುದೀಕರಣ ನಿಗಮವೂ ಇತರ ಹಣಕಾಸಿನ ಸಂಸ್ಥೆಗಳೂ

ನೆರವಾಗುತ್ತಿವೆ. ಬಡಕುಟುಂಬಗಳಿಗೆ ಒಂದು ಬಲ್ಬು ಸೌಕರ್ಯ ಕಲ್ಪಿಸಲು ಆಗುವ ಖರ್ಚಿನ ಒಂದು ಭಾಗವನ್ನು ಸರ್ಕಾರವು ಸಹಾಯಧನ ರೂಪದಲ್ಲಿ ಕೊಟ್ಟು ಉಳಿದ ಭಾಗವನ್ನು ಸಾಲವೆಂದು ಪರಿಗಣಿಸಿ ಪ್ರಯೋಜನ ಪಡೆದವರಿಂದ 15 ವರ್ಷ ಗಳಲ್ಲಿ ಹಿಂದಕ್ಕೆ ಪಡೆಯುವುದು. ಈಗಾಗಲೇ ಸುಮಾರು 4.000 ಬಡಕುಟುಂಬ ಗಳು ಭಾಗ್ಯಜ್ಯೋತಿ ಪ್ರಯೋಜನ ಪಡೆದಿವೆ.

5.1 1980–85ರ ಅವಧಿಗೆಂದು ರಾಜ್ಯ ಸರ್ಕಾರವು ಆರನೆಯ ಪಂಚ ವಾರ್ಷಿಕ ಯೋಜನೆಯನ್ನು ಅನುಷ್ಠಾನಕ್ಕೆ ತಂದಿದೆ. ಈ ಯೋಜನೆಯ ಅಂದಾಜು ವೆಚ್ಚ 2,400 ಕೋಟಿ ರೂ.ಗಳು ರಾಜ್ಯದ ವರಮಾನದ ಹೆಚ್ಚಳವನ್ನು ಸಾಧಿಸುವುದೂ ವರಮಾನದ ಹಂಚಿಕೆಯಲ್ಲಿರುವ ಅಸಮಾನತೆಯನ್ನು ತಗ್ಗಿಸುವುದೂ, ಬಡತನದ ರೇಖೆಯ ಕೆಳಗಿರುವವರ ಜೀವನ ಸ್ಥಿತಿಯನ್ನು ಸುಧಾರಿಸುವುದೂ, ಪಟ್ಟಣ ಮತ್ತು ಗ್ರಾಮ ಜೀವನಗಳಲ್ಲಿನ ವ್ಯತ್ಯಾಸವನ್ನು ತಗ್ಗಿಸುವುದೂ ಈ ಯೋಜನೆಯ ಉದ್ದೇಶ. ಈ ಎಲ್ಲ ಉದ್ದೇಶಗಳ ಸಾಧನೆಗಾಗಿ ವ್ಯವಸಾಯ, ನೀರಾವರಿ, ವಿದ್ಯುಚ್ಛಕ್ತಿ, ಸಾಮಾಜಿಕ ಸೇವೆಗಳ ಕ್ಷೇತ್ರಗಳಿಗೆ ಎಂದಿನಂತೆ ಆದ್ಯತೆ. ನೀರಾವರಿ ಮತ್ತು ವಿದ್ಯುತ್ ಯೋಜನೆ ಗಳಿಗಾಗಿಯೇ 1,043 ಕೋಟಿ ರೂಗಳನ್ನು ವೆಚ್ಚಮಾಡಲು ಉದ್ದೇಶಿಸಲಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯನ್ನೂ, ಕಾಳೀ ಯೋಜನೆಯನ್ನೂ ತೀವ್ರಗತಿಯಿಂದ ಮುಂದುವರಿಸುವುದಲ್ಲದೆ, ಹೇಮಾವತಿ ಮತ್ತು ಹಾರಂಗಿ ಕಾಲುವೆ ಕಾರ್ಯಗಳನ್ನು ವಿಸ್ತರಿಸಲಾಗುತ್ತದೆ. ರಾಯಚೂರಿನ ಬಳಿ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರ ನಿರ್ಮಾಣವಾಗುತ್ತಿದೆ. ಈಗ ಇರುವ ಜಲವಿದ್ಯುತ್ ಉತ್ಪದನಾ ಸಾಮರ್ಥ್ಯ 13.34 ಲಕ್ಷ ಕಿ.ವ್ಯಾಗಳು.

5.2. ಸರ್ಕಾರೀ ಸಾಬೂನು ಮತ್ತು ಗಂಧದೆಣ್ಣೆ ಕಾರ್ಖಾನೆಗಳನ್ನು ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ಸ್ ಎಂಬುದಾಗಿ ಕರೆಯಲ್ಪಡುವ ಒಂದೇ ಸಂಸ್ಥೆಗೆ ವಹಿಸಲಾಗಿದೆ. ಟಾಯ್ಲೆಟ್ ಸಾಬೂನಿನ ಉತ್ಪಾದನೆಯನ್ನು ವಾರ್ಷಿಕ 6.000 ಟನ್ನುಗಳಿಂದ 26,000 ಟನ್ನುಗಳಿಗೆ ಹೆಚ್ಚಿಸಲಾಗುತ್ತದೆ. ಭದ್ರಾವತಿಯ ಕಾಗದ ಕಾರ್ಖಾನೆಯು ವರ್ಷಕ್ಕೆ 75.000 ಟನ್ನು ಪತ್ರಿಕಾ ಮುದ್ರಣ ಕಾಗದವನ್ನು ತಯಾರಿ ಸುವ ಹಂತವನ್ನು ಮುಟ್ಟಿದೆ. ಖಾಸಗೀ ಕ್ಷೇತ್ರವಲ್ಲಿ ಹೊಸದಾಗಿ 78 ಉದ್ಯಮಗಳ ಸ್ಥಾಪನೆಗೆ ಲೈಸೆನ್ಸ್ ನೀಡಲಾಗಿದೆ. ಕೈಮಗ್ಗ ಅಭಿವೃದ್ಧಿ ನಿಗಮ ಮತ್ತು ರೇಷ್ಮೆ ಕೈಗಾರಿಕೆಗಳ ಅಭಿವೃದ್ಧಿಗೆ ವಿಶೇಷ ಗಮನಕೊಡಲಾಗುತ್ತದೆ. ಯೋಜನೆಯ ಅವಧಿ ಹೊಸ ಹತ್ತಿ ನೂಲಿನ ಗಿರಣಿಗಳೂ, ಸಕ್ಕರೆ ಕಾರ್ಖಾನೆಗಳೂ, ಖಾಸಗೀ ಹಾಗೂ ಸಹಕಾರೀ ಕ್ಷೇತ್ರದಲ್ಲಿ ಸ್ಥಾಪಿತವಾಗಲಿವೆ.

5.3. ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ವಿಸ್ತರಣೆಯಾಗಿದೆ. ಮಂಗಳೂರು ಮತ್ತು ಗುಲ್ಬರ್ಗಾ ವಿಶ್ವವಿದ್ಯಾಲಯಗಳ ಸ್ಥಾಪನೆ ಆಗಿದೆ. ಅಲ್ಲದೆ 140 ಪ್ರೌಢಶಾಲೆಗಳು, 29 ಜೂನಿಯರ್ ಕಾಲೇಜುಗಳು, 51 ಪ್ರಥಮ ದರ್ಜೆ ಕಾಲೇಜುಗಳು, 11 ಶಿಕ್ಷಣ

ಕಾಲೇಜುಗಳು, 12 ಎಂಜನಿಯರಿಂಗ್ ಕಾಲೇಜುಗಳು, 9 ಪಾಲಿಟೆಕ್ನಿಕ್‌ಗಳು, 4 ವೈದ್ಯಕೀಯ ಮತ್ತು ಫಾರ್ಮಸಿ ಕಾಲೇಜುಗಳು ಮಂಜೂರಾತಿ ಪಡೆದುವು. ಈಗ ಸುಮಾರು 16 ಲಕ್ಷ ಮಕ್ಕಳಿಗೆ ಮಧ್ಯಾನ್ನದ ಉಪಾಹಾರ ವ್ಯವಸ್ಥೆ ಇದೆ. ಪರಿಶಿಷ್ಟ ವರ್ಗದವರ ಸರ್ವಾಂಗೀಣ ಅಭಿವೃದ್ಧಿಗಾಗಿ 64 ಕೋಟಿ ರೂಗಳ ಸಂಘಟಿತ ಯೋಜನೆ ಸಿದ್ಧವಾಗಿದೆ. ಬರಗಾಲ ಪೀಡಿತ ಪ್ರದೇಶಗಳಲ್ಲಿ 1980ರಲ್ಲಿ 2000 ಕುಡಿಯುವ ನೀರಿನ ಕೊಳವೆ ಭೂಮಿಗಳನ್ನು ನಿರ್ಮಿಸಲಾಯಿತು. ಇದೇ ವರ್ಷದಲ್ಲಿ ಹೊಸದಾಗಿ 1000 ಗ್ರಾಮಗಳಿಗೆ ವಿದ್ಯುತ್ ಒದಗಿಸಲಾಯಿತು. 20,000 ಪಂಪ್ ಸೆಟ್ಟುಗಳಿಗೆ ವಿದ್ಯುತ್ ಸೌಲಭ್ಯ ನೀಡಲಾಯಿತು.

5.4. 1980ರ ಸಾಲಿನಲ್ಲಿ ರೈತ ಸಮುದಾಯಕ್ಕೆ ಹರ್ಷ ತರುವಂತಹ ಕೆಲವು ಅಂಶಗಳನ್ನು ಪ್ರಕಟಿಸಲಾಯಿತು. ಮುಖ್ಯವಾಗಿ ಕೃಷಿ ಉತ್ಪನ್ನಗಳ ಬೆಂಬಲ ಬೆಲೆಯಲ್ಲಿ ಏರಿಕೆ, ಹತ್ತು ಎಕರೆಗಳವರೆಗೆ ಭೂ ಕಂದಾಯದಿಂದ ವಿನಾಯಿತಿ, ನೀರಾವರಿ ಭೂಮಿಯ ಮೇಲಿನ ಅಭಿವೃದ್ಧಿ ತೆರಿಗೆ ರದ್ದು, ಸಣ್ಣ ಮತ್ತು ಅತಿ ಸಣ್ಣ ರೈತರ ತಕಾವಿ ಸಾಲಗಳು ಮನ್ನಾ ಮುಂತಾದುವು. ಅಲ್ಲದೆ ಬಿಡುವಿನ ಹಂಗಾಮಿನಲ್ಲಿ ರೈತರಿಗೆ ಅಭಿವೃದ್ಧಿಕಾರ್ಯಗಳಲ್ಲಿ 100 ದಿನಗಳ ಉದ್ಯೋಗ ನೀಡುವ ಉದ್ಯೋಗ ದೃಢೀಕರಣ ಯೋಜನೆ ಸಹ ಜಾರಿಗೆ ಬಂದಿದೆ. ಇದು ಈಗ 99 ತಾಲ್ಲೂಕುಗಳಿಗೆ ವ್ಯಾಪಿಸಿದ್ದು ದುಡಿಯುವ ವ್ಯಕ್ತಿಗೆ ದಿನಕ್ಕೆ 5 ರೂಪಾಯಿ ಕೂಲಿ ದೊರೆಯುವುದು.

5.5. ಒಟ್ಟಿನಲ್ಲಿ ಕರ್ನಾಟಕ ಅಭಿವೃದ್ಧಿ ಕ್ರಮಬದ್ಧವಾಗಿ ಸಾಗಿದೆ. ಅಭಿವೃದ್ಧಿಯ ಮುಂಚಣಿಯಲ್ಲಿರುವ ಭಾರತದ ಐದು ರಾಜ್ಯಗಳಲ್ಲಿ ಕರ್ನಾಟಕ ಒಂದು. ಕನ್ನಡ ರಾಜ್ಯ ಸ್ಥಾಪನೆಗೆ ಶ್ರಮಿಸಿದ ಹಿರಿಯರ ಕನಸು ನನಸಾಗುತ್ತಿದೆ. ಆಗ ಬೇಕಾದ ಕೆಲಸ ಇನ್ನೂ ಬಹಳವಿದೆ. ಅಭಿವೃದ್ಧಿಯನ್ನು ಹೆಚ್ಚು ತೃಪ್ತಿಕರವಾಗಿ ಸಾಧಿಸಲು ಕನ್ನಡಿಗರು ಹೆಚ್ಚು ವಿಚಾರವಂತರೂ, ಪ್ರಜ್ಞಾವಂತರೂ, ಆಗಬೇಕಾದ ಕಾಲ ಬಂದಿದೆ.

ಪತ್ರಿಕೋದ್ಯಮ

ಸಿ. ವಿ. ರಾಜಗೋಪಾಲ

ಅಪ್ರಿಯವಾದ ಸತ್ಯಹೇಳದಿರುವುದು ಒಂದು ದೊಡ್ಡ ಗುಣವಂತೆ. ಇರಬಹುದು, ಬೇರೆ ವಿಷಯಗಳಲ್ಲಿ. ಆದರೆ ಕನ್ನಡ ಪತ್ರಿಕೋದ್ಯಮಕ್ಕೆ ಸಂಬಂಧಿಸಿದಂತೆ ಜನ ಸತ್ಯವನ್ನು ಎದುರಿಸದಿದ್ದರೆ ಆತ್ಮಘಾತಕವಾಗುತ್ತದೆ. ಬೂಟಾಟಿಕೆಯಾಗುತ್ತದೆ.

ಕರ್ನಾಟಕ ರಾಜ್ಯ ನಿರ್ಮಾಣದ ಮುಖ್ಯ ಉದ್ದೇಶ ಈ ರಾಜ್ಯವನ್ನು "ಸರ್ವಾಂಗ ಸುಂದರವನ್ನಾಗಿ" ಮಾಡುವುದು ಆಗಿತ್ತು. ಪತ್ರಿಕೋದ್ಯಮವನ್ನೂ ಒಂದು ಅಂಗವೆಂದು ಒಪ್ಪಿಕೊಂಡರೆ ಈ ಅಂಗ ಬೆಳೆಯ ಬೇಕಾದಷ್ಟು ಬೆಳೆಯಲಿಲ್ಲ. ಬೇರೆ ವಿಚಾರಗಳಲ್ಲಿಯೂ ಈ ನಾಡು ಬೆಳೆಯಬೇಕಾಗಿದ್ದಷ್ಟು ಬೆಳೆಯಲಿಲ್ಲವೆಂಬುದು ಪತ್ರಿಕಾ ಪ್ರಪಂಚಕ್ಕೆ ಸಮಾಧಾನ ತರಬೇಕಾದ್ದಿಲ್ಲ. ಕರ್ನಾಟಕದ ನೆರೆ ರಾಜ್ಯಗಳೂ ಎಲ್ಲ ವಿಚಾರಗಳಲ್ಲಿಯೂ ಈ ಇಪ್ಪತ್ತೈದು ವರ್ಷಗಳಲ್ಲಿ ಬೆಳೆಯಬೇಕಾದಷ್ಟು ಬೆಳೆದಿಲ್ಲ. ಆದರೆ ಆ ಭಾಷೆಗಳ ಪತ್ರಿಕಾ ಬಾಹುಳ್ಯದ ಬೆಳವಣಿಗೆ ಕಂಡು ಕನ್ನಡಿಗರು ನಾಚಿಕೆ ಪಡಬೇಕಾಗಿದೆ.

ಹೀಗೇಕೆ? ಕೆಲವು ವರ್ಷಗಳ ಹಿಂದೆ ಭಾವಿಸಲಾಗಿದ್ದಂತೆ ಕನ್ನಡಿಗರು ಇನ್ನೂ ಅಭಿಮಾನ ಶೂನ್ಯರೇ? ಹೌದೆನ್ನಲು ಸಂಕೋಚವಾಗಿದ್ದರೆ ಬೇರೆ ಉತ್ತರ ಏನಿದೆ? ಕನ್ನಡನಾಡಿನ ಉದಯ ಮತ್ತು ಕನ್ನಡ ಪತ್ರಿಕೋದ್ಯಮದ ಪರಸ್ಪರ ಸಂಬಂಧದಲ್ಲಿ ಎಂಥ ವಿಪರ್ಯಾಸವಿದೆ ಗೊತ್ತೆ? ವಿಶ್ವವನ್ನೇ ಕರ್ನಾಟಕವನ್ನಾಗಿ ಕಾಣಬಯಸಿದ್ದ ಒಂದು ಧೀರೋಧಾತ್ತ ಪತ್ರಿಕೆಗೆ ತನ್ನ ಜನ್ಮ ಭೂಮಿಯಲ್ಲಿಯೇ, ನಿರ್ಮಾಣವಾದ ಕರ್ನಾಟಕದಲ್ಲಿ ಬದುಕಿ. ಬಾಳುವ ಸೌಭಾಗ್ಯವಿರಲಿಲ್ಲ. ಮತ್ತೊಂದು ಪತ್ರಿಕೆ 'ತಾಯಿನಾಡು' ರಾಜ್ಯ ಉದಯವಾದಾಗಲೂ ಒಂದು ಪ್ರಮುಖ ಪತ್ರಿಕೆಯೇ ಆಗಿತ್ತು. ಆದರೆ ಅದರ ಅವಸಾನದ ದಿನವೂ ದೂರವಿರಲಿಲ್ಲ.

ನಿಜ, ನಾಟಕದ ಈ ಕಾಲು ಶತಮಾನ ಪತ್ರಿಕೆಗಳ ಬರೀ ಸಾವನ್ನೇ ಕಂಡಿಲ್ಲ. ಹುಟ್ಟನ್ನೂ ಕಂಡಿದೆ. ಸಾವನ್ನು ಸ್ಮರಿಸಿದ ಉದ್ದೇಶ ಒಂದು ಪ್ರವೃತ್ತಿಯನ್ನು ನೆನಪು ಮಾಡಿಕೊಡುವುದು. ಒಂದು ಮಿತಿಯಲ್ಲೇ ಬೆಳೆಯಬೇಕಾಗಿರುವ ಪ್ರವೃತ್ತಿಯದು. ಬೆಳವಣಿಗೆಯೇ ಆಗದೆ ಪ್ರಸಾರ ಬಾಹುಳ್ಯದ ದೃಷ್ಟಿಯಿಂದ ನಿಂತಲ್ಲೇ ನಿಂತಿದೆಯೆಂದೂ ಅಲ್ಲ. ಪತ್ರಿಕೆಗಳ ಪ್ರಸಾರ ಕೆಲಮಟ್ಟಿಗೆ ಬೆಳೆದೂ ಇದೆ. ಆದರೆ ಅದು ಹೇಳಿಕೊಳ್ಳುವ ಬೆಳವಣಿಗೆಯಲ್ಲ. ಈ ಸ್ಥಿತಿಗೆ ಸರಕಾರ ಮತ್ತು ಜನ ಇಬ್ಬರೂ ಕಾರಣ. ಕನ್ನಡದ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಜನಕೂಡ ಕನ್ನಡದ ಬಗೆಗೆ ಆಸ್ಥೆ

ತಳೆಯಲಿಲ್ಲ. ಇತ್ತೀಚಿನವರೆಗೆ ಕರ್ನಾಟಕದಲ್ಲಿ ಕನ್ನಡ ಆಡಳಿತ ಭಾಷೆಯಾಗಿರಲಿಲ್ಲ. ಈಗಲೂ ಅದು ಎಷ್ಟರ ಮಟ್ಟಿಗೆ ಆಡಳಿತ ಭಾಷೆಯಾಗಿದೆ ಎಂಬುದು ಸಂದೇಹ. ಮೂಲ ವಿಧೇಯಕಗಳ ಭಾಷೆಯಾಗುವ ಅರ್ಹತೆ ಕನ್ನಡಕ್ಕೆ ಇನ್ನೂ ಬಂದಿಲ್ಲ. ಆಯವ್ಯಯ ಕನ್ನಡದಲ್ಲಿ ಮಂಡನೆಯಾದರೆ ಅದು ಕರಾರುವಾಕ್ಕಾಗಲಾರದೆಂಬ ಸಂಶಯ ಅರ್ಥ ಮಂತ್ರಿಗಳಿಗಿದ್ದೇ ಇದೆ. ಆಯವ್ಯಯದ ಕೆಲವು ವಾಕ್ಯಗಳನ್ನಷ್ಟೇ ಕನ್ನಡವಲ್ಲಿ ಓದಿ ಇಂಗ್ಲೀಷಿನಲ್ಲಿ ಮುಂದುವರಿಸುವ ಪ್ರಹಸನ ನಡೆದೇ ಇದೆ. ರಾಜ್ಯವನ್ನು 'ಕರ್ನಾಟಕ' ಎಂದು ಕರೆಯಲು ಹದಿನೆಂಟು ವರ್ಷ ಬೇಕಾಯಿತೆಂದರೆ ಆಳಿದವರಲ್ಲಿ ಈ ರಾಜ್ಯದ ಸಾಂಸ್ಕೃತಿಕ ಬೆಳವಣಿಗೆ ಕುರಿತಂತೆ ಎಷ್ಟರಮಟ್ಟಿನ ಶ್ರದ್ಧೆ ಇತ್ತೆಂಬುದು ವೇದ್ಯ.

ವಾತಾವರಣ

ಕನ್ನಡ ಪತ್ರಿಕೆಗಳು ಬೆಳೆಯಲು ಸರಕಾರದ ಸಹಾಯ ಬೇಕಾಗಿತ್ತೆಂದು ವಾದಿಸುತ್ತಿಲ್ಲ. ಆದರೆ ಈ ರಾಜ್ಯದಲ್ಲಿ ವ್ಯಾಪಾರ, ಮಾಡಲು, ಕೈಗಾರಿಕೆ ನಡೆಸಲು, ನೌಕರಿ ಮಾಡಲು, ಅಧಿಕಾರ ಚಲಾಯಿಸಲು ಕನ್ನಡದ ಅಗತ್ಯವಿದೆ ಎಂಬ ವಾತಾವರಣವನ್ನು ಸರಕಾರ ನಿರ್ಮಿಸಬೇಕಾಗಿತ್ತು. ಅದರಲ್ಲಿ ಸರಕಾರ ವಿಫಲಗೊಂಡಿತು. ಕರ್ನಾಟಕದಲ್ಲಿರುವ ರಾಜಕೀಯ ಪಕ್ಷಗಳ ಧೋರಣೆ ಏನೂ ಸರಕಾರದ ಧೋರಣೆಗಿಂತ ತೀರ ಭಿನ್ನವಾಗಿರಲಿಲ್ಲ. ಬಹುತೇಕ ರಾಜಕೀಯ ಪಕ್ಷಗಳು ಪತ್ರಿಕಾಗೋಷ್ಠಿ ನಡೆಸುವುದು ಇಂಗ್ಲೀಷ್‌ನಲ್ಲಿ. ಆ ಪಕ್ಷಗಳು ಪತ್ರಿಕಾಲಯಗಳಿಗೆ ಕಳುಹಿಸುವ ಪ್ರಕಟಣೆಗಳೂ ಇಂಗ್ಲೀಷ್‌ನಲ್ಲೇ. ಇತ್ತೀಚಿನವರೆಗಂತೂ ಆ ಸ್ಥಿತಿ ಇತ್ತು. ಕೆಲವು ಸಂದರ್ಭಗಳಲ್ಲಿ ಅಂಥ ಪತ್ರಿಕಾಗೋಷ್ಠಿಗಳನ್ನು ಬಹಿಷ್ಕರಿಸುವ ಬೆದರಿಕೆಯನ್ನು ಕನ್ನಡದ ಪತ್ರಿಕೆಗಳ ಪ್ರತಿನಿಧಿಗಳು ಹಾಕಬೇಕಾಯಿತು.

ಜಾಹಿರಾತು ದರದಲ್ಲಿ ಸರಕಾರವೇ ಇಂಗ್ಲೀಷ್ ಮತ್ತು ಭಾಷಾ ಪತ್ರಿಕೆಗಳ ನಡುವೆ ಪಕ್ಷಪಾತ ಮಾಡುತ್ತಿತ್ತು. ಈಗತಾನೇ ಆ ಪಕ್ಷಪಾತ ಹೋಗಿದೆ. ಆದರೆ ವಾಣಿಜ್ಯಸಂಸ್ಥೆಗಳು ಇನ್ನೂ ಇಂಗ್ಲೀಷ್ ಪತ್ರಿಕೆಗಳಿಂದಲೇ ಮುಕ್ತಿ ಎಂದು ಭಾವಿಸಿವೆ. ಕನ್ನಡದ ಪತ್ರಿಕೆಯ ಪ್ರಸಾರ ಹೆಚ್ಚಿರಬಹುದು. ಆದರೆ ಕನ್ನಡ ಪತ್ರಿಕೆಗೆ ಇಂಗ್ಲಿಷ್ ಪತ್ರಿಕೆಗಳ ಜಾಹಿರಾತಿಗೆ ನೀಡುವುದರ ನೀಡಲು ಅನೇಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳು ಸಿದ್ಧವಿಲ್ಲ.ಇದರಲ್ಲಿ ಗಿರಾಕಿಗಳ 'ವರ್ಗ ದೃಷ್ಟಿ' ಇದೆ. ಜಾಹಿರಾತು ಪತ್ರಿಕೆಗಳ 'ವರ್ಗ' ಲಕ್ಷಣವನ್ನು ನಿರ್ಧರಿಸುತ್ತಿದೆ. ಹೀಗಾಗಿ ಕೆಲವು ಮಟ್ಟಿಗಾದರೂ ವಾಣಿಜ್ಯ ಮತ್ತು ಕೈಗಾರಿಕಾ ಕ್ಷೇತ್ರಗಳು ಭಾಷಾಪತ್ರಿಕೆಗಳ ಬೆಳವಣಿಗೆಯನ್ನು ನಿಯಂತ್ರಿಸುತ್ತಿವೆ. ಇದು ದುರದೃಷ್ಟಕರ.

ಹವ್ಯಾಸವಿಲ್ಲ

ಇನ್ನೂ ಹೆಚ್ಚಿನ ದುರದೃಷ್ಟವೆಂದರೆ ಜನರ ಧೋರಣೆ. ಪತ್ರಿಕೆಗಳನ್ನುಕೊಂಡು ಓದುವ ಹವ್ಯಾಸ ಕಡಿಮೆ. ಮೂರುವರೆ ಕೋಟಿ ಮೀರಿದ ಕನ್ನಡಿಗರಿದ್ದಾರೆ. ಅವರಲ್ಲಿ

ಮೂರನೇ ಒಂದು ಭಾಗದ ಜನ ಅಕ್ಷರಸ್ಥರು. ಒಂದು ಕೋಟಿಗೂ ಮೀರಿದ ಅಕ್ಷರಸ್ಥರಲ್ಲಿ ಕಾಲು ಭಾಗದಸಂಖ್ಯೆ ಜನಕ್ಕಾದರೂ ಕೊಳ್ಳುವ ಸಾಮರ್ಥ್ಯವಿದ್ದಿರಬೇಕು. ಇಡೀಕರ್ನಾಟಕದಲ್ಲಿ ಒಂದು ಲಕ್ಷ ಪ್ರಸಾರ ಸಂಖ್ಯೆಮೀರಿದ ದಿನಪತ್ರಿಕೆ ಕನ್ನಡದಲ್ಲಿ ಒಂದೇ, ವಾರಪತ್ರಿಕೆಗಳು ಎರಡೇ ಎಂದರೆ ಎಂಥ ಶೋಚನೀಯಸ್ಥಿತಿ. ಕೇರಳದಲ್ಲಿ ಪ್ರಜಾಸಂಖ್ಯೆ ಕರ್ನಾಟಕಕ್ಕಿಂತ ಕೋಟಿಯಷ್ಟುಕಡಿಮೆ. ಆದರೆ ಅಲ್ಲಿ ಹಲವಾರು ಮಲೆಯಾಳಂ ದಿನಪತ್ರಿಕೆಗಳ ಪ್ರಸಾರ ಎರಡು ಮೂರು ಲಕ್ಷ ಪ್ರತಿಗಳು. ಒಂದು ಕನ್ನಡ ದಿನ ಪತ್ರಿಕೆಯನ್ನು ಕೊಳ್ಳಲಾರದಷ್ಟು ದಾರಿದ್ರ್ಯವೆ ಕನ್ನಡಿಗರಿಗೆ? ಹಣದ ದಾರಿದ್ರ್ಯ ಒಂದೇ ಕಾರಣ ಎಲ್ಲ, ಅಭಿಮಾನ ದಾರಿದ್ರ್ಯವೂ ಇದೆ. ಬೆಂಗಳೂರಿನಲ್ಲಿ ಜನಸಂಖ್ಯೆ ಪ್ರಮಾಣಕ್ಕೆ ಹೋಲಿಸಿದರೆ ಭಾರತದ ಬೇರೆ ಯಾವ ಪಟ್ಟಣದಲ್ಲಿಯೂ ಇರದಷ್ಟು ಸಂಖ್ಯೆಯ ಚಲನಚಿತ್ರ ಮಂದಿರಗಳಿವೆ ಎಂದು ಹೇಳಲಾಗಿದೆ. ಇಷ್ಟೊಂದು ಚಿತ್ರಮಂದಿರಗಳನ್ನು ಪೋಷಿಸುವ ಆರ್ಥಿಕ ಸಾಮರ್ಥ್ಯ ಕನ್ನಡಿಗರಿಗಿದೆ ಅಂದಮೇಲೆ ಕನ್ನಡ ಪತ್ರಿಕೆಗಳನ್ನು ಕೊಳ್ಳದಿರುವುದಕ್ಕೆ ಹಣದ ದಾರಿದ್ರ್ಯವಷ್ಟೇ ಅಲ್ಲ ಕಾರಣ.

ಲಕ್ಷಣವಾದ ಮುಖ

ಕರ್ನಾಟಕ ಪತ್ರಿಕೋದ್ಯಮದ ಈ ಕಾಲು ಶತಮಾನದ ಪುಟ್ಟ ಇತಿಹಾಸದಲ್ಲಿ ಮತ್ತೊಂದು ಅಧ್ಯಾಯವಿದೆ. ಸೋಲನ್ನು ಹಿಂದೆ ಮಾಡಿ ಗೆಲುವನ್ನಷ್ಟೇ ಕೊಚ್ಚಿಕೊಳ್ಳುವುದು ಸಭ್ಯತೆ ಅಲ್ಲವಾದ್ದರಿಂದ ಹಿತಕರವಲ್ಲವಾದ್ದನ್ನು ಉದ್ದೇಶಪೂರ್ವಕವಾಗಿ ಮೊದಲೇ ಪ್ರಸ್ತಾಪಿಸಿದೆ. ಅಲ್ಲದೆ ಗಾತ್ರದ ದೃಷ್ಟಿಯಿಂದ, ಆರ್ಥಿಕ ದೃಷ್ಟಿಯಿಂದ ಈ ಬೆಳವಣಿಗೆಯ ಪ್ರಶ್ನೆ ಬಹುಮುಖ್ಯವಾದದ್ದು.

ಈ ಬೆಳವಣಿಗೆ ಮುಕ್ಕಾದರೆ ಭವಿಷ್ಯದ ದೃಷ್ಟಿಯಿಂದ ಆತಂಕಕಾರಿ. ಆದ್ದರಿಂದ ಅದನ್ನು ಕಡೆಗಾಣುವಂತಿಲ್ಲ. ಆದರೆ ಕನ್ನಡ ಪತ್ರಿಕೋದ್ಯಮದ ಮತ್ತೊಂದು ಅಧ್ಯಾಯ ವಿದೆ. ಹೆಮ್ಮೆ ಪಡುವಂಥ ಅಧ್ಯಾಯ. ಆ ಮುಖ ಹೆಚ್ಚು ಲಕ್ಷಣವಾದುದು.

ದಮನಕಾರಿ ಪ್ರಭುತ್ವದ ಅಗಾಧ ಶಕ್ತಿಯನ್ನು ಎದುರಿಸಬೇಕಾಗಿದ್ದ ತುರ್ತು ಪರಿಸ್ಥಿತಿಯ ದುರ್ದಿನಗಳನ್ನು ಬಿಟ್ಟರೆ ಕನ್ನಡ ಪತ್ರಿಕೆಗಳು ರಾಜಕೀಯ ಮತ್ತು ಆಡಳಿತ ಕ್ಷೇತ್ರಗಳಲ್ಲಿ ಭ್ರಷ್ಟಾಚಾರ, ಸಾಮಾಜಿಕ ಅನಿಷ್ಟಗಳು, ದುರ್ಬಲವರ್ಗಗಳಿಗೆ ಕಿರುಕುಳ, ರಾಜ್ಯಕ್ಕೆ ಅನ್ಯಾಯ, ಇವುಗಳ ವಿರುದ್ಧ ಹೋರಾಡಿವೆ. ಒಂದು ರೀತಿಯಲ್ಲಿ ಪ್ರಬಲ ವಿರೋಧ ಪಕ್ಷಗಳು ಮಾಡಬೇಕಾದ ಕಾರ್ಯವನ್ನು ಪತ್ರಿಕೆಗಳು ಮಾಡಿವೆ. ಈ ಸಂಬಂಧದಲ್ಲಿ ಒಂದು ಜಿಜ್ಞಾಸೆ ನಡೆದಿದೆ. ಬಹುಶಃ ಈ ವಿವಾದ ಎಂದೂ ಕೊನೆಗಾಣದು. ವೃತ್ತ ಪತ್ರಿಕೆಗಳು ಪ್ರಭುತ್ವದ ವಿರುದ್ಧ ವಿರೋಧ ಪಕ್ಷಗಳಂತೆಯೇ ಕೆಲಸ ಮಾಡಬೇಕಾದ್ದು ಅವುಗಳ ಧರ್ಮ ಎನ್ನುವ ಒಂದು ವಾದವಿದೆ. ಪ್ರಬಲವಾದ

ಸಿದ್ಧಾಂತ ನಿಷ್ಠ ವಿರೋಧ ಪಕ್ಷಗಳು ಇಲ್ಲದಿರುವ ಕರ್ನಾಟಕದಂಥ ರಾಜ್ಯಗಳಲ್ಲಂತೂ ಪತ್ರಿಕೆಗಳು ಅಂಥ ಪಾತ್ರವಹಿಸುವುದು ಅನಿವಾರ್ಯ ಎನ್ನುವುದು ಕೆಲವರ ನಿಲುವು. ಈ ಕಲ್ಪನೆಯೇ ಅಧಿಕಾರರೂಢರಿಗೆ ಮತ್ತು ಅವರ ಪಕ್ಷಪಾತಿಗಳಿಗೆ ಅಸಹನೀಯ. ಈ ವಿಪರೀತ ದೃಷ್ಟಿಕೋನಗಳಿಂದಾಗಿಯೇ ಪತ್ರಿಕೆಗಳು ಮತ್ತು ಪ್ರಭುತ್ವದ ನಡುವೆ ಘರ್ಷಣೆ ಇದ್ದೇ ಇದೆ. ಕೆಲವು ಪತ್ರಿಕೆಗಳು ಈ ಕಾರಣದಿಂದಲೇ ತುರ್ತು ಪರಿಸ್ಥಿತಿಗೆ ಮುಂಚಿತವಾಗಿಯೇ ಸರಕಾರದ ಕೋಪಕ್ಕೆ ತುತ್ತಾದುವು. ಜಾಹಿರಾತು ನಿಲುಗಡೆ ಯಿಂದ ನಷ್ಟವನ್ನು ಅನುಭವಿಸಿದವು. ಆದರೆ ಮಣಿಯಲಿಲ್ಲವೆಂಬುದು ಕನ್ನಡಿಗರು ಹೆಮ್ಮೆಪಡಬಹುದಾದ ಸಂಗತಿ. ನಂತರ ತುರ್ತ ಪರಿಸ್ಥಿತಿಯಲ್ಲಿ ಪತ್ರಿಕೆಗಳ ವಿರುದ್ಧ ಸರಕಾರದ ಗದಾ ಪ್ರಹಾರವನ್ನು ಖಂಡಿಸಿದವರೇ ತಮಗೆ ಸರಿ ಎನಿಸಿದ ಪತ್ರಿಕೆಗಳಿಗೆ ಜಾಹಿರಾತು ನಿಲ್ಲಿಸಿದ್ದರು, ಇಲ್ಲ ಕಡಿಮೆ ಮಾಡಿದ್ದರೆಂಬುದು ಗಮನಾರ್ಹ. ತುರ್ತು ಪರಿಸ್ಥಿತಿಯಲ್ಲಾದುದಕ್ಕೂ ಇದಕ್ಕೂ ಏನೇನೂ ಹೋಲಿಕೆಯಿಲ್ಲ.ತುರ್ತು ಪರಿಸ್ಥಿತಿ ಯಲ್ಲಾದ್ದುಕ್ಕೂ ಪತ್ರಿಕಾ ಸ್ವಾತಂತ್ರ್ಯದ ಪೂರ್ಣನಾಶ. ಆದರೆ ಅಧಿಕಾರದಲ್ಲಿರುವ ವರಲ್ಲಿ ಪತ್ರಿಕೆಗಳಬಗೆಗೆ ಅಸಹನೆ ಒಂದಲ್ಲ ಒಂದು ಪ್ರಮಾಣದಲ್ಲಿದ್ದೇ ಇರುತ್ತದೆ. ಈ ಅಸಹನೆಯ ಮೂಲ ಇತರ ಎಲ್ಲ ಇಲಾಖೆಗಳಂತೆ, ಉದ್ಯಮಗಳಂತೆ ಪತ್ರಿಕೆಗಳೂ ತಮ್ಮ ಅಧೀನವೆಂಬ ಕಲ್ಪನೆ. ಇದನ್ನು ಬಹಿರಂಗವಾಗಿ ಒಪ್ಪಿಕೊಳ್ಳುವುದಿಲ್ಲ ಅಷ್ಟೇ.

ಜನರ ಬಯಕೆ

ಸರಕಾರದಲ್ಲಿ ಹುಳುಕು ಹುಡುಕುವ ಕಾರ್ಯವನ್ನು ಪತ್ರಿಕೆಗಳು ಮಾಡುತ್ತವೆ. ಓದುಗರು ಅದನ್ನೆ ಪತ್ರಿಕೆಗಳಿಂದ ನಿರೀಕ್ಷಿಸುವುದು. ಅಪಾರ ಅಧಿಕಾರ ಪಡೆದಿರುವವರ ವಿಷಯದಲ್ಲಿ ಜನರಿಗೆ ಸದಾ ಸಂಶಯ. ಈ ಸಂಶಯಕ್ಕೆ ಆಧಾರವಿಲ್ಲದೆಯೂ ಇಲ್ಲ. ಆದ್ದರಿಂದಲೇ ಪತ್ರಿಕೆಗಳು ಜಾಗೃತವಾಗಿರಬೇಕೆಂದು ಜನ ಬಯಸುತ್ತಾರೆ. ಇದನು ಸರಕಾರ ನಡೆಸುವವರು ಸರಕಾರದ ವಿರೋಧಿ ನಿಲುವು ಎನ್ನುತ್ತಾರೆ. ಸದಾ ಸರಕಾರದ ಬೆಂಬಲಕ್ಕೆ ನಿಲ್ಲುವ ಪತ್ರಿಕೆಗಳು ಉಳಿಯುವುದೇ ಕಷ್ಟ ಎನ್ನುವುದ್ನು ಕರ್ನಾಟಕದಲ್ಲಿಯೂ ಅನುಭವಕ್ಕೆ ಬಂದಿದೆ. ಈ ಒಂದು ಹದ್ದಿನ ಕಣ್ಣಿನಿಂದಾಗಿ ಪತ್ರಿಕೆಗಳು ದೇವರಾಜ ಅರಸುರವರ ಕಾಲದಲ್ಲಿಯೂ ಟೀಕೆಗೊಳಗಾಗಿದ್ದವು. ಗುಂಡೂರಾವ್ ಅವರ ಕಾಲದಲ್ಲಂತೂ ಪತ್ರಿಕೆಗಳಿಗೆ 'ವಿಶೇಷ' ಗಮನ ನೀಡಲಾಗು ತ್ತಿದೆ. ಇಷ್ಟಾದರೂ ಕನ್ನಡ ಪತ್ರಿಕೆಗಳು ತಮ್ಮ ಸತ್ವ ಉಳಿಸಿಕೊಂಡಿವೆ. ಈಚಿನ ವರ್ಷಗಳಲ್ಲಿ ತನಿಖಾ (ಇನ್‌ವೆಸ್ಟಿಗೇಟಿವ್) ವರದಿಗಳು ಪತ್ರಿಕೆಗಳ ಘನತೆಯನ್ನಷ್ಟೇ ಅಲ್ಲ ಉಪಯುಕ್ತತೆಯನ್ನು ಹೆಚ್ಚಿಸಿವೆ. ಶುದ್ಧ ಆಡಳಿತ ನಡೆಸುವ ಪ್ರಾಮಾಣಿಕತೆ ಇದ್ದರೆ ಇಂಥ ವರದಿಗಳು ವಾಸ್ತವವಾಗಿ ಸರಕಾರಕ್ಕೇ ಹೆಚ್ಚು ಉಪಯುಕ್ತ. ಆದರೆ ಸರಕಾರದಲ್ಲಿ ಇನ್ನೂ ಆ ದೃಷ್ಟಿ ಕಂಡುಬಂದಿಲ್ಲ.

ರಾಜಕೀಯ ವಿಶ್ಲೇಷಣೆ, ವ್ಯಾಖ್ಯಾನ ಕನ್ನಡ ಪತ್ರಿಕೋದ್ಯಮದಲ್ಲಿ ಅಷ್ಟಾಗಿ ಬೆಳೆಯದಿದ್ದ ವಿಭಾಗ. ಹಿಂದೆ ರಾಜಕೀಯ ವಿರೋಧಿಗಳ ಪರಸ್ಪರ ಆರೋಪಗಳ

ಪ್ರಕಟಣೆಯಿಂದಷ್ಟೇ ಯಾವುದೇ ರಾಜಕೀಯ ಬೆಳವಣಿಗೆಯ ಸೂಚನೆ ಸಿಕ್ಕುತ್ತಿದ್ದುದು. ಈಗ ರಾಜಕೀಯ ವಿಶ್ಲೇಷಣೆ ಕನ್ನಡ ಪತ್ರಿಕೆಗಳಲ್ಲೂ ಪ್ರಧಾನವಾಗಿ ನಡೆಯುತ್ತಿದೆ. ಪರಿಸ್ಥಿತಿಯ ಆಳವಾದ ಅಧ್ಯಯನವನ್ನೂ ಈ ವಿಶ್ಲೇಷಣೆಯಲ್ಲಿ ಕಾಣಬಹುದು. ಈ ಹೊಸ ಪ್ರವೃತ್ತಿಯೂ ಅನೇಕ ರಾಜಕಾರಣಿಗಳಲ್ಲಿ ಕಿರಿಕಿರಿಯನ್ನುಂಟುಮಾಡುತ್ತಿದೆ. ವಿರೋಧಿಯೊಬ್ಬನ ಹೇಳಿಕೆಯನ್ನು 'ಎಷ್ಟಾದರೂ ವಿರೋಧಿ' ಎಂದು ತಳ್ಳಿಹಾಕಬಹುದು. ಆದರೆ ನಿಷ್ಪಕ್ಷಪಾತ ಪತ್ರಕರ್ತನೊಬ್ಬ ನಿರ್ದಿಷ್ಟ ಬೆಳವಣಿಗೆಯ ಹಿನ್ನಲೆ, ಭವಿಷ್ಯದಲ್ಲಿ ಅವರ ಪರಿಣಾಮವನ್ನು ವಿಶ್ಲೇಷಿಸಿದಾಗ, ನಿರಾಕರಿಸಲಾಗದ ಸಂಗತಿಗಳನ್ನು ಮುಖಕ್ಕೆ ಹಿಡಿದಾಗ ತಳ್ಳಿಹಾಕುವುದು ಕಷ್ಟ. ಆದ್ದರಿಂದಲೇ ರಾಜಕೀಯ ಲೇಖನಗಳನ್ನು ರಾಜಕಾರಣಿಗಳು (ಅವರ ವಿರೋಧಿಗಳನ್ನು ಸಂದಿಗ್ಧಕ್ಕೆ ಸಿಕ್ಕಿಸುವ ಲೇಖನಗಳು ಹೊರತು) ಸರ್ವೇಸಾಮಾನ್ಯವಾಗಿ ಸ್ವಾಗತಿಸುವುದಿಲ್ಲ. ಇದು ಬಹುಮಟ್ಟಿಗೆ ಅಧಿಕಾರದಲ್ಲಿರುವ ಪಕ್ಷಕ್ಕೆ ಪೇಚಾದರೂ ಅನೇಕಬಾರಿ ವಿರೋಧ ಪಕ್ಷಗಳವರೂ ಹೌಹಾರಿದ್ದಾರೆ. ಆದರೆ ಕರ್ನಾಟಕದಲ್ಲಿ ಆಡಳಿತ ಪಕ್ಷ ತಾನು ಇಷ್ಟಪಡದ ಪತ್ರಿಕೆಗಳ ವಿರುದ್ಧ ಈಚೆಗೆ ನಡೆದುಕೊಂಡಿರುವ ರೀತಿ ಪ್ರಜಾಪ್ರಭುತ್ವ ಪ್ರೇಮಿಗಳೆಲ್ಲಾ ತಲೆತಗ್ಗಿಸಬೇಕಾದಂಥದ್ದು. ಪತ್ರಿಕಾಲಯಗಳಿಗೆ ಬೀಗ ಹಾಕುವ ಬೆದರಿಸುವ ಗೂಂಡಾಗಿರಿ ಒಂದು ಹೊಸ ಬೆಳವಣಿಗೆ. ಇಷ್ಟೆಲ್ಲಾ ಕಿರುಕುಳವಾದರೂ ಪತ್ರಿಕೆಗಳು ಈ ರಾಕ್ಷಸೀ ಶಕ್ತಿಗಳಿಗೆ ಮಣಿಯಲಿಲ್ಲವೆಂಬುದು, ಧಟ್ಟಿಂಗಿತನಕ್ಕೆ ಳಿಯಲಿಲ್ಲವೆಂಬುದು ಕನ್ನಡನಾಡಿನ ಪತ್ರಿಕೆಗಳ ವಿಷಯದಲ್ಲಿ ಓದುಗರು ಹೆಮ್ಮೆ ಪಡಬಹುದಾದ ಸಂಗತಿ.

ತಾಂತ್ರಿಕ ಬೆಳವಣಿಗೆಯ ದೃಷ್ಟಿಯಿಂದಲೂ ಕನ್ನಡದ ಪತ್ರಿಕೆಗಳು ಹಿಂದುಳಿದಿಲ್ಲ. 'ಪ್ರಜಾವಾಣಿ' ಎರಡು ದಶಕಗಳಿಗೂ ಹಿಂದೆಯೇ ಉತ್ತಮ ಮುದ್ರಣ ಮತ್ತು ವಿನ್ಯಾಸಕ್ಕಾಗಿ ರಾಷ್ಟ್ರೀಯ ಪ್ರಶಸ್ತಿ ಪಡೆಯಿತು. ಒಂದಲ್ಲ, ಹಲವುಬಾರಿ. ಈಚೆಗೆ ಮಣಿಪಾಲದ 'ಉದಯವಾಣಿ'ಯೂ ಈ ಗೌರವಕ್ಕೆ ಪಾತ್ರವಾಯಿತು. ಈಗಾಗಲೇ ಕೆಲವು ಭಾರಿ ಪತ್ರಿಕೆಗಳು ಪಡೆದಿರುವ ಅತ್ಯಾಧುನಿಕ ಮುದ್ರಣ ವ್ಯವಸ್ಥೆಯನ್ನು ಕೆಲವು ಕನ್ನಡ ಪತ್ರಿಕೆಗಳೂ ಪಡೆಯುವ ಸಿದ್ಧತೆಯಲ್ಲಿವೆ.

ದಿನಪತ್ರಿಕೆಗಳಲ್ಲಿ ರಾಜಕೀಯ ಪ್ರಧಾನವಾಗಿದೆ. ಇಂದಿನ ಸ್ಥಿತಿಯಲ್ಲಿ ಅದು ಅನಿವಾರ್ಯ. ಇಂದು ರಾಜಕಾರಣ ಸರ್ವವ್ಯಾಪಿ. ವಾಸ್ತವವಾಗಿ ರಾಜಕಾರಣವೇ ಜನಜೀವನವನ್ನು ರೂಪಿಸುತ್ತಿರುವುದು. ದೇಶದ ಆಗುಹೋಗುಗಳ ಮೇಲೆ ರಾಜಕಾರಣಿಗಳ ಹಿಡಿತ ಬಲವಾಗಿದೆ. ಇನ್ನೂ ಹಲವಾರು ವರ್ಷ ರಾಜ್ಯಜೀವನದಲ್ಲಿ ರಾಷ್ಟ್ರಜೀವನದಲ್ಲಿ ರಾಜಕಾರಣವೇ ಪ್ರಧಾನವಾಗಿರುತ್ತದೆ. ಅಂದಮೇಲೆ ಇದನ್ನೆಲ್ಲಾ ಪ್ರತಿಬಿಂಬಿಸುವ ಪತ್ರಿಕೆಗಳಲ್ಲಿ ಬೇರೆ ಇರಲು ಸಾಧ್ಯವಿಲ್ಲ. ದಿನಪತ್ರಿಕೆಗಳಲ್ಲಿ ರಾಜಕೀಯ ಪ್ರಧಾನವಾಗಿದ್ದರೂ ಅರ್ಥಿಕ, ವಿಜ್ಞಾನ, ವಿಷಯಗಳು ಸಾಹಿತ್ಯ, ಸಂಸ್ಕೃತಿ,

ಕ್ರೀಡೆ ಇವುಗಳೂ ಕ್ರಮೇಣ ಹೆಚ್ಚು ಹೆಚ್ಚು ಪ್ರಾಮುಖ್ಯ ಪಡೆಯುತ್ತಿವೆ ಎಂಬುದನ್ನು ಓದುಗರು ಗಮನಿಸಿರಲೇಬೇಕು. ಆದರೆ ಕನ್ನಡದ ವಾರಪತ್ರಿಕೆಗಳು, ದಿನಪತ್ರಿಕೆಗಳ ವಾರದ ಪುರವಣಿಗಳೂ ಇತ್ತ ಹೆಚ್ಚು ಶ್ರಮಿಸುತ್ತಿವೆ.

ಜಿಲ್ಲಾ ಪತ್ರಿಕೆಗಳು ಮೊದಲೇ ಇದ್ದವು. ಈ ಇಪ್ಪತ್ತೈದು ವರ್ಷಗಳಲ್ಲಿ ಅವುಗಳ ಸಂಖ್ಯೆ ಹೆಚ್ಚಿತೆಂಬುದು ಸಂತೋಷದ ಸಂಗತಿ. ದಿವಂಗತ ಶೇಷಪ್ಪನವರ ನಿರ್ಭೀತ 'ಕಿಡಿ' ಈಗಿಲ್ಲ. ಆದರೆ ಲಂಕೇಶರ 'ಲಂಕೇಶ್ ಪತ್ರಿಕೆ' ಅದೇ ಪ್ರವೃತ್ತಿಯನ್ನು ಹೆಚ್ಚು ವೈವಿಧ್ಯಮಯಗೊಳಿಸಿದೆ.

ಕನ್ನಡ ಪತ್ರಿಕೋದ್ಯಮದ ಬಗ್ಗೆ ಬರೆಯುವಾಗ ಬೆಂಗಳೂರು ನಗರದ ಪ್ರತಿ ಕ್ರಿಯೆ ಬಗ್ಗೆ ಬರೆಯದಿರಲು ಸಾಧ್ಯವಿಲ್ಲ. ರಾಜ್ಯ ರಚನೆಯಾದ ಮೇಲೆ ತಮಗೆ ಒಳ್ಳೆಯ ಭವಿಷ್ಯವಿದೆಯೆಂದು ಹುಬ್ಬಳ್ಳಿಯ ಕೆಲವು ಪತ್ರಿಕೆಗಳು ತಮ್ಮ ಪ್ರಕಟಣೆ ಯನ್ನು ಬೆಂಗಳೂರಿನಲ್ಲಿಯೂ ಆರಂಭಿಸಿ ಕೈಸುಟ್ಟುಕೊಂಡವು. ಮದರಾಸಿನ ಎರಡು ಇಂಗ್ಲಿಷ್ ಪತ್ರಿಕೆಗಳು ಇದೇ ಅವಧಿಯಲ್ಲಿ ಬೆಂಗಳೂರು ಆವೃತ್ತಿಗಳನ್ನು ಆವೃತ್ತಿಗಳನ್ನು ಆರಂಭಿಸಿ ಯಶಸ್ವಿಯಾಗಿ ನಡೆದಿವೆ. ತಮಿಳು ಪತ್ರಿಕೆಗಳಿಗೂ ಆಶ್ರಯ ದೊರಕಿದೆ. ಕರ್ನಾಟಕದ ರಾಜಧಾನಿಯ ಪ್ರಜಾಸಂಖ್ಯೆ ಮೂವತ್ತು ಲಕ್ಷ ! ಈ ಇಪ್ಪತ್ತೈದು ವರ್ಷಗಳಲ್ಲಿ 'ಸುಧಾ' 'ಕನ್ನಡಪ್ರಭ', 'ಲೋಕವಾಣಿ' ಬೆಂಗಳೂರಿನಲ್ಲಿ ಹುಟ್ಟಿ ಬೆಳೆದಿವೆ. ಇಷ್ಟೇ ಸಾಕೆ?

ಈ ಲೇಖನ ಕಳೆದ ಕಾಲು ಶತಮಾನದ ಕನ್ನಡ ಪತ್ರಿಕೋದ್ಯಮದ ಸಮೀಕ್ಷೆ ಯಲ್ಲ. ಎಲ್ಲ ಪತ್ರಿಕೆಗಳ ಪ್ರಸ್ತಾಪವಲ್ಲ. ಸ್ಥೂಲವಾಗಿ ಕನ್ನಡ ಪತ್ರಿಕೋದ್ಯಮದ ಸುಖ, ದುಃಖದ ನಿರೂಪಣೆ. ಅದರಲ್ಲಿಯೂ ನಾಕಂಡ ಕೆಲವು ಹೆಗ್ಗುರುತುಗಳು. ಒಂದರ್ಥದಲ್ಲಿ ಬೆಳೆ ಸಾಲದು, ಇನ್ನೊಂದು ಅರ್ಥದಲ್ಲಿ ಸಂತೃಪ್ತಿತರುವ ಬೆಳವಣಿಗೆ. ಅನೇಕ ಮಂದಿ ಪ್ರತಿಭಾವಂತರು ಕಣ್ಣು ಮುಚ್ಚಿದ್ದಾರೆ. ಉದ್ಯಮ ಹೊಸ ಪ್ರತಿಭೆ ಕಂಡುಕೊಂಡಿದೆ.

ಒಂದು ಕೊರಗಂತೂ ಇದ್ದೇ ಇದೆ, ಕನ್ನಡಿಗರು ಹಿತ್ತಲ ಗಿಡವೂ ಮದ್ದಾಗ ಬಲ್ಲದೆಂಬುದನ್ನು ಇನ್ನೂ ಕಂಡುಕೊಳ್ಳಬೇಕಾಗಿದೆ. ಇದನ್ನು ನೆನಪುಮಾಡಿಕೊಡ ಬೇಕಾಗಿದೆ ಎಂಬುದೇ ಒಂದು ದುರಂತ.

ಕರ್ನಾಟಕದಲ್ಲಿ ಲಲಿತಕಲೆಗಳ ಬೆಳವಣಿಗೆ

ಬಿ. ವಿ. ಕೆ. ಶಾಸ್ತ್ರಿ

25 ವರುಷಗಳ ಹಿಂದೆ ಹಂಚಿಹೋಗಿದ್ದ ಕರ್ನಾಟಕದ ಬೇರೆ ಬೇರೆ ಭೂಭಾಗಗಳೆಲ್ಲಾ ಒಟ್ಟುಗೂಡಿ ಹೊಸ ರಾಜ್ಯಸ್ಥಾಪನೆಯಾದ ಸಂದರ್ಭದಲ್ಲಿ ಕರ್ನಾಟಕದ ಹಿರಿಮೆಯ ಬಗೆಗೆ ಅನೇಕ ಲೇಖನಗಳೂ ಪುಸ್ತಕಗಳೂ ಪ್ರಕಟವಾದುವು. ಅವುಗಳಲ್ಲಿ ಕರ್ನಾಟಕದ ನೆಲ, ಇತಿಹಾಸ, ಧರ್ಮ, ಸಂಪ್ರದಾಯ, ಜನಜೀವನದ ಕಲೆ ಮುಂತಾದುವುಗಳ ಬಗೆಗೆ ಸಾಕಷ್ಟು ವಿಸ್ತಾರವಾದ ವಿವರಗಳಿದ್ದುವು. ಆಯಾ ವಿಭಾಗಕೆ ಸಂಬಂಧಪಟ್ಟ ಹಾಗೆ ಕರ್ನಾಟಕದ ಸಾಧನೆ, ಆ ದಿವ್ಯ ಪರಂಪರೆ, ಅದರ ವಿಶೇಷ ಗುಣಗಳೇ ಮುಂತಾದುವನ್ನು ಎತ್ತಿ ಸಾರಿದುವು. ಲೇಖನಗಳೆಲ್ಲಾ ಪ್ರಾಯಶಃ ಹಿಂದಿನವರ ಹೆಚ್ಚುಗಾರಿಕೆಯನ್ನೇ ಎತ್ತಿ ಹೇಳುವಂತಹವು. ಕೆಲವು ಲೇಖನಗಳಲ್ಲಿ ಮುಂದೆ ಆಗಬೇಕಾದುದನ್ನೂ ಮುಟ್ಟಿಬಿಟ್ಟಿದ್ದರು. 25 ವರುಷಗಳಾದ ನಂತರ ಆ ಲೇಖನಗಳು ಈಗ ನೆನಪಿಗೆ ಬರುವುದು ಸಹಜವೇ. ಈ ಅಂತರದಲ್ಲಿ ಬೇರೆ ಪ್ರಕಾರಗಳಂತಿರಲಿ, ಲಲಿತ ಕಲೆಗಳಲ್ಲಿ ಅಂದರೆ ಸಂಗೀತ, ನೃತ್ಯ, ಶಿಲ್ಪ, ಚಿತ್ರ ಮುಂತಾದ ಕಲೆಗಳಲ್ಲಿ ಕರ್ನಾಟಕದ ಸಾಧನೆ ಏನು, ಅದರ ಆಕಾರ ಪ್ರಮಾಣವೆಂತಹುದು. ಮುಂದಿನ ಪೀಳಿಗೆಯಲ್ಲಿ ಈ ಕಲೆಗಳ ಅಭಿವೃದ್ಧಿಗೆ ಅವು ಯಾವರೀತಿ ದಾರಿ ತೋರಿವೆ ಎಂಬ ಪ್ರಶ್ನೆಗಳೂ ಮನಸ್ಸಿಗೆ ತೋರಿಬರುವುದು ಸಹಜವೇ.

ಈ 25 ವರುಷಗಳಲ್ಲಿ ಕರ್ನಾಟಕದ ಲಲಿತಕಲೆಗಳ ಅಭಿವೃದ್ಧಿಯನ್ನು ಮೂರು ದೃಷ್ಟಿಯಿಂದ ಪರಿಶೀಲಿಸಬೇಕು. 1. ರಾಜ್ಯಮಟ್ಟದಲ್ಲಿ ಅವುಗಳ ಪಾತ್ರವೇನು ? 2. ರಾಷ್ಟ್ರಮಟ್ಟದಲ್ಲಿ ಕರ್ನಾಟಕದ ಪಾತ್ರವೇನು ? 3. ಸೃಜನಾತ್ಮಕ ಪ್ರವೃತ್ತಿ ಬೆಳೆದಿದೆಯೇ ? ಅಥವಾ ಹಳೆಯ ಜಾಡಿನಲ್ಲಿಯೇ ಹೋಗುತ್ತಿದೆಯೇ? ರಾಜ್ಯಮಟ್ಟದಲ್ಲಿ ಪರಿಶೀಲಿಸಿದರೆ ಈ ಕಲೆಗಳ ಅಭಿವೃದ್ಧಿ ಏಕಮುಖವಾಗಿ ಆಗಿಲ್ಲವೆನ್ನಬೇಕು. ಸಂಗೀತದ ವಿಷಯದಲ್ಲಿ ಹೇಳಬೇಕಾದರೆ ಹಿಂದಿನ ಎರಡು ದಶಕಗಳಿಗಿಂತಲೂ ಇಂದು ಪ್ರೊತ್ಸಾಹವು ಹೆಚ್ಚಿದೆ. ಇದು ಸರಕಾರ ಮತ್ತು ಸಾರ್ವಜನಿಕವಾಗಿ ಎರಡು ಭಾಗದಿಂದಲೂ ನಡೆಯುತ್ತಿದೆ. ಸರಕಾರದಿಂದ ಈ ಕಲೆಯ ಶಿಕ್ಷಣ ಮತ್ತು ಪ್ರದರ್ಶನ ಎರಡೂ ಭಾಗದಲ್ಲಿಯೇ ಹಿಂದಿಗಿಂತಲೂ ಹೆಚ್ಚು ಪ್ರಮಾಣದ ಪ್ರೋತ್ಸಾಹ ದೊರೆತಿದೆ. ಆದರೆ ಈ ಪ್ರೋತ್ಸಾಹಕ್ಕನುಗುಣವಾಗಿ ಕಲೆಯು ಬೆಳೆದಿದೆಯೇ ? ಅದರ ಮಟ್ಟವು ಹೆಚ್ಚಿದೆಯೇ ಹೇಳಲು ಕಷ್ಟ. ಏನೋ ಒಂದು ಜಾಡಿನಲ್ಲಿ ಹೋಗುತ್ತಿದೆ ಅಷ್ಟೆ.

ಇನ್ನು ನೃತ್ಯಕಲೆ; ಇಲ್ಲಿ ಇನ್ನೂ ಅನಿಶ್ಚಯ ಸ್ಥಿತಿ. ಸಂಗೀತಕ್ಕಿಂತ ಇದರ ವ್ಯಾಪ್ತಿ ಕಡಿಮೆ. ಎಲ್ಲಿಯೋ ಬೆಂಗಳೂರು, ಮೈಸೂರು, ಅಥವಾ ಮಂಗಳೂರು ಮುಂತಾದ ಮೂರು ನಾಲ್ಕು ನಗರಗಳಿಗೆ ಸೀಮಿತಗೊಂಡಿದೆ. ಇಲ್ಲಿಯೇ ಅದೇ ಹಳೆಯ ಒಂದು ಜಾಡು. ಅದನ್ನೇ ಹಿಡಿದು ಹೋಗುತ್ತಿದೆ. ಕಲೆಯನ್ನೇ ವೃತ್ತಿ ಮಾಡಿಕೊಂಡು ಮುಂದುವರೆಸುವವರ ಸಂಖ್ಯೆಯಲ್ಲಿ ಕಡಿಮೆ. ಒಂದೆ ಮದುವೆಗೆ ಬೆಳೆದುನಿಂತ ಹೆಣ್ಣಿಗೆ ಸಂಗೀತವು ಒಂದು ಅವಶ್ಯಕ ಅರ್ಹತೆಯಾಗಿದ್ದಿತು. ಈಗ ಸಂಗೀತದ ಜಾಗಕ್ಕೆ ನೃತ್ಯ ಬಂದಿದೆ ಅಷ್ಟೇ.

ಇದಾದ ನಂತರ ಚಿತ್ರ ಶಿಲ್ಪ ಕಲೆಗಳು. ಹೊಸ ರಾಜ್ಯ ವಾದ ಮೇಲೆ ಹಲವಾರು ವರುಷಗಳು ಹಳೆಯ ಜಾಡಿನಲ್ಲಿಯೇ ನಡೆದು ಬಂದವು. ಈಗ ಸುಮಾರು ಒಂದು ದಶಕದಿಂದ ಈ ಕ್ಷೇತ್ರದಲ್ಲಿ ಹೊಸಗಾಳಿ ಬೀಸಲಾರಂಭವಾಗಿದೆ. ಕಲೆಯಲ್ಲಿಯೂ ಹೊಸಹೊಸ ಕಲ್ಪನೆಗಳು ಹೊಸಹೊಸ ಶೈಲಿಗಳು ಮೂಡಿ ಬರಲಾರಂಭವಾಗಿದೆ. ಹೊಸ ದೃಷ್ಟಿಯಿಂದ ಕೆಲಸ ಮಾಡುತ್ತಿರುವ ಒಂದು ಹೊಸ ಪೀಳಿಗೆಯ ಕಲಾವಿದರೂ ತಯಾರಾಗುತ್ತಿದ್ದಾರೆ.

ರಾಷ್ಟ್ರ ಮಟ್ಟದಲ್ಲಿ ಕರ್ನಾಟಕದ ಸ್ಥಾನವೇನು -ಎಂಬುದನ್ನು ಪರಿಶೀಲಿಸಿದಾಗ ನಮಗೆ ಸ್ವಲ್ಪ ನಿರಾಸೆಯಾಗುತ್ತದೆ. ಸಂಗೀತ ಭಾಗದಲ್ಲಿ ಕೆಲವು ಕಲಾವಿದರಾದರೂ ರಾಷ್ಟ್ರಮಟ್ಟದಲ್ಲಿ ಪ್ರಸಿದ್ಧಿಯಾಗಿದ್ದಾರೆ. ಆದರೆ ಅವರೆಲ್ಲಾ ಹಳೆಯ ಪೀಳಿಗೆ ಯವರೇ. ಮನ್ಸೂರರಾಗಲೀ, ಗಂಗೂಬಾಯಿಯವರಾಗಲೀ, ದೊರೆಸಾಮಯ್ಯಂಗಾ ರ್ಯರಾಗಲೀ, ಹೊಸ ರಾಜ್ಯವಾದ ಮೇಲೆ ಪ್ರಸಿದ್ಧಿಗೆ ಬಂದವರಲ್ಲ. ಅದಕ್ಕೆ ಹಿಂದೆಯೇ ರಾಷ್ಟ್ರಮಟ್ಟದಲ್ಲಿ ಮಾನಿತರಾಗಿದ್ದವರು. ಹೊಸ ಪೀಳಿಗೆಯಲ್ಲಿ ರಾಷ್ಟ್ರ ಮಟ್ಟಕ್ಕೆ ಏರಲು ಕೆಲವರೆತ್ನಿಸುತ್ತಿದ್ದಾರೆ. ಇದು ಕರ್ನಾಟಕ ಸಂಗೀತ ಭಾಗದಲ್ಲಿ ಹೆಚ್ಚು ಕಾಣಬರುತ್ತಿದೆ.

ಇನ್ನು ನೃತ್ಯ ಕಲೆಯ ಬಗೆಗೆ ಸ್ಥಿತಿ ಶೋಚನೀಯ. ಚಿತ್ರ ಶಿಲ್ಪಗಳಲ್ಲಿ ಸ್ವಲ್ಪ ಉತ್ತಮ ರಾಷ್ಟ್ರಮಟ್ಟದಲ್ಲಿ ಬಹುಮಾನ ದೊರೆಯದಿದ್ದರೂ ಕಲಾಪ್ರದರ್ಶನಗಳ ನ್ನಾದರೂ ಮಾಡಿ ಪ್ರಶಂಸೆ ಪಡೆದವರ ಸಂಖ್ಯೆ ಕ್ರಮೇಣ ಹೆಚ್ಚುತ್ತಿದೆ. ಒಟ್ಟಿನಲ್ಲಿ ಹೇಳಬೇಕಾದರೆ ಕಲೆಯಲ್ಲಿ ಇಂದು ಕರ್ನಾಟಕವು ಸ್ವಲ್ಪ ಕುಂಟುತ್ತಾ ನಡೆದಿದೆ. ಚಿತ್ರ-ಶಿಲ್ಪಗಳ ಸ್ಥಿತಿ ಆಶಾದಾಯಕವಾಗಿದೆ. ಸಂಗೀತ ಭಾಗವೂ ಸ್ವಲ್ಪ ಮಟ್ಟಿಗೆ ಪರ ವಾಗಿಲ್ಲ ಎನ್ನಬಹುದು. ನೃತ್ಯ ಕಲೆಯ ಸ್ಥಿತಿ ಸಮರ್ಪಕವಾಗಿಲ್ಲ.

ಈ ಪರಿಸ್ಥಿತಿಗೆ ಕಾರಣಗಳೇನು ಎಂಬುದನ್ನೂ ಪರಿಶೀಲಿಸುವುದು ಅವಶ್ಯಕ ಹೊಸ ರಾಜ್ಯಸ್ಥಾಪನೆಯಾದಾಗ ಈ ನಾನಾ ಕಲೆಗಳ ಸ್ಥಿತಿ ಹೇಗಿದ್ದಿತು ? ಸಂಗೀತ ಭಾಗದಲ್ಲಿ ಹೇಳಬೇಕಾದರೆ ರಾಜ್ಯದ ಉತ್ತರಾರ್ಧದಲ್ಲಿ ಹಿಂದೂಸ್ಥಾನೀ ಸಂಗೀತವೂ ದಕ್ಷಿಣಾರ್ಧದಲ್ಲಿ ಕರ್ನಾಟಕ ಸಂಗೀತವೂ ಪ್ರಚಾರದಲ್ಲಿದ್ದುವು. ಬರೇ ಪ್ರಚಾರವಲ್ಲ.

ರಾಷ್ಟ್ರಮಟ್ಟದಲ್ಲಿ ಖ್ಯಾತಿಗಳಿಸಿದ ಕಲಾವಿದರನ್ನೂ ನಿರ್ಮಿಸಿದ್ದುವು. ಇದು ಕರ್ನಾಟಕದ ವೈಶಿಷ್ಟ್ಯ. ಭಾರತದ ಯಾವ ರಾಜ್ಯದಲ್ಲಿಯೂ ಈ ಎರಡೂ ಸಂಗೀತ ಪದ್ಧತಿಗಳೂ ಇಷ್ಟು ಹುಲುಸಾಗಿ ಬೆಳೆದು ಬಂದಿಲ್ಲ. ಇದ್ದರೆ ಒಂದೊಂದೇ ಪದ್ಧತಿ ಅಷ್ಟೇ. ಚಿತ್ರಕಲೆಯಲ್ಲಿ ದಕ್ಷಿಣಾರ್ಧ ಭಾಗದಲ್ಲಿ ಹಿಂದಿನ ಸಾಂಪ್ರದಾಯಿಕ ಶೈಲಿ ಮತ್ತು ಇಂದಿನ ಪಾಶ್ಚಿಮಾತ್ಯ ಶೈಲಿ ಎರಡೂ ವ್ಯವಹಾರದಲ್ಲಿದ್ದುವು. ಉತ್ತರಾರ್ಧದಲ್ಲಿ ಪ್ರಾಯಶಃ ಪಾಶ್ಚಾತ್ಯ ಶೈಲಿಯೇ ಹೆಚ್ಚು ಪ್ರಚಾರದಲ್ಲಿದ್ದಿತು. ಈ ತಳಹದಿಯ ಮೇಲೆ ಕರ್ನಾಟಕದ ಮುಂದಿನ ಕಲೆಗಳ ಕಟ್ಟಡವನ್ನು ಕಟ್ಟಬೇಕಾಗಿದ್ದಿತು. ಇದನ್ನು ಕೈಗೊಳ್ಳುವ ಮೊದಲು ಸಂಬಂಧಪಟ್ಟವರು ಚಿಂತಿಸಬೇಕಾದ್ದ ಅಂಶಗಳು 1. ಕರ್ನಾಟಕ ಹಾಗೂ ಅದರ ಕಲಾ ಪರಂಪರೆಯ ಸಮಗ್ರಸ್ವರೂಪದ ಅರಿವು 2. ಈ ಕ್ಷೇತ್ರದಲ್ಲಿ ವಿವಿಧ ಭಾಗಗಳಿಂದ ಬಂದ ಕಲಾವಿದರಲ್ಲಿ ಭಾವೈಕ್ಯಕ್ಕೆ ಕೊಡಬೇಕಾದ ಅವಶ್ಯಕತೆ. 3. ಹಿಂದಿನ ಭವ್ಯತೆ ಹಸಿದ್ದರೂ ಮುಂದೆ ಬೆಳೆಯಬೇಕಾದ ಕಲಾಕ್ಷೇತ್ರದ ಬಗೆಗೆ ಸ್ಥೂಲಕಲ್ಪನೆ. 4. ಈ ಕಲ್ಪನೆಗಳು ಕಾರ್ಯಗತವಾಗುವಂತಹ ಕಾರ್ಯಕ್ರಮ ಮತ್ತು ಯೋಜನೆಗಳು.

ಮೊದಲನೆಯ ಅಂಶವನ್ನು ಕುರಿತು ಹೇಳಬೇಕಾದರೆ ಸಮಗ್ರ ಸ್ವರೂಪದ ಅರಿವು ಸಾಹಿತ್ಯಕ್ಷೇತ್ರದಷ್ಟು ಲಲಿತ ಕಲೆಗಳಲ್ಲಿ ಆಗಿಲ್ಲವೆನ್ನಬಹುದು. ಈ ಸಮಗ್ರ ಸ್ವರೂಪದ ಬಗೆಗೆ ಸಾಕಷ್ಟು ಪ್ರಚಾರವಾಗಿದೆ. ಆದರೆ ನೇರವಾಗಿ ಸಂಬಂಧಪಟ್ಟವರಲ್ಲಿ ಅದರಲ್ಲಿಯೂ ಕಲಾವಿದರಲ್ಲಿ ಇದರ ಅರಿವು ಉಂಟಾಗಿಲ್ಲ. ಹಳೆಯ ಮೈಸೂರಿನವರಿಗೆ ಉತ್ತರ ಕರ್ನಾಟಕದ ಸಂಗೀತ ಮೊದಲಾದ ಕಲೆಗಳ ಸ್ಥಿತಿಯೇ ಆಗಲೀ ಅಲ್ಲಿನ ಕಲಾವಿದರೇನು ಎಂತು ಎಂಬ ವಿಷಯವಾಗಲೀ ಅಸ್ಪಷ್ಟ. ಅಲ್ಲಿನವರಿಗೆ ಮೈಸೂರಿನ ಬಗೆಗೆ ಅಷ್ಟೇ ತಿಳುವಳಿಕೆ ಇದೆ. ಇವರಿಬ್ಬರಿಗೆ ಕರಾವಳಿ ಪ್ರದೇಶದ ಕಲೆಗಳೇನು ಎಂತು ತಿಳಿಯದು. ಇಲ್ಲಿಯವರಿಗೆ ನಿಜವಾದ ಕರ್ನಾಟಕದ ಕಲೆಗಳ ಪರಿಸ್ಥಿತಿ ಏನು ಎಂಬುದರ ಅರಿವಿಲ್ಲ. ಸಾರ್ವಜನಿಕವಾಗಿ ಈ ಸ್ಥಿತಿ ಇರುವಲ್ಲಿ ಸರಕಾರದಲ್ಲಿ ಎಂತು? ಅಮೇರಿಕಾದಿಂದ ಯಾರೋ ಕರ್ನಾಟಕದ ರಾಜ್ಯದಲ್ಲಿ ಇಂದು ಚೆನ್ನಾಗಿ ಬೆಳೆದು ಬಂದ ಮತ್ತು ಅದಕ್ಕೆ ವಿಶಿಷ್ಟವಾದ ಕಲಾಪ್ರಕಾರಗಳೇನು ? ಕಲಾವಿದರು ಯಾರು ಯಾರು ಹಾಗೂ ಸಂಸ್ಥೆಗಳ ವಿವರಗಳನ್ನು ಅಪೇಕ್ಷಿಸಿ ಕಾಗದ ಬರೆದಿದ್ದರು. ಇದನ್ನು ಪಡೆಯಲು ಪ್ರಯತ್ನಿಸಿದಾಗ ಆದದ್ದು ವಿಚಿತ್ರ ಅನುಭವ. ಸಂಬಂಧಪಟ್ಟ ಯಾವ ಇಲಾಖೆಯೇ ಆಗಲಿ (ಅಂದರೆ ವಾರ್ತಾ, ಪ್ರವಾಸೀ, ಶಿಕ್ಷಣ ಮುಂತಾದುವು) ಅಥವಾ ಅಕಾಡಮಿಗಳಲ್ಲಾಗಲೀ ಎಲ್ಲಿಯೂ ದೊರೆಯದು. ಇಂದೂ ಸ್ಥಿತಿ ಬದಲಾವಣೆ ಆಗಿಲ್ಲ.

ಕಲಾಪರಂಪರೆಯ ಒಟ್ಟು ಸ್ವರೂಪದ ಅರಿವೇ ಆಗದೇ ಭಾವೈಕ್ಯ ಹೇಗೆ ಬರಬೇಕು? ಭಾವೈಕ್ಯಕ್ಕೆ ಈ ಅರಿವಿನ ಜೊತೆಗೆ ಈ ನಾಲ್ಕು ಭಾಗದವರಲ್ಲಿಯೂ ಪರಸ್ಪರ ಸಂಪರ್ಕ ಹೆಚ್ಚಬೇಕು. ಇದು ಉಂಟಾಗಲು ಕಾಲುಶತಮಾನ ಸಾಕಷ್ಟು

ಕಾಲವೆನ್ನಬಹುದು. ಆದರೆ ಸೂಕ್ಷ್ಮವಾಗಿ ನೋಡಿದರೆ ಇದು ಆಗಬೇಕಾದಷ್ಟು ಪ್ರಮಾಣದಲ್ಲಿ ಆಗಿಲ್ಲ. ಇದನ್ನು ಅರಿಯಬೇಕಾದರೆ ಬೆಂಗಳೂರು ಡೆಲ್ಲಿ ಮುಂತಾದ ನಗರಗಳಲ್ಲಿ ನಡೆವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೇ ತೆಗೆದುಕೊಳ್ಳಬಹುದು. ನಿದರ್ಶನವಾಗಿ ಮಲ್ಲಿಕಾರ್ಜುನ ಮನ್ಸೂರರ ಗಾಯನವಾದರೆ ನೆರೆಯುವವರಲ್ಲಿ ಬಹುಪಾಲು ಉತ್ತರ ಕರ್ನಾಟಕದವರು. ಯಕ್ಷಗಾನವಾದರೆ ಉಡುಪಿ, ಮಂಗಳೂರು ಮುಂತಾದ ಕರಾವಳಿ ಪ್ರದೇಶದವರು. ಕರ್ನಾಟಕ ಸಂಗೀತವಾದರೆ ಹಳೇ ಮೈಸೂರಿನವರ ಸಂಖ್ಯೆಯೇ ಹೆಚ್ಚು. ಈ ರೀತಿ ಕಲೆಯಮಟ್ಟಿಗಾದರೂ ಈ ನಾಲ್ಕು ಭಾಗದವರ ಒಟ್ಟುಗೂಡದಿದ್ದರೆ ಭಾವೈಕ್ಯ ಹೇಗೆ ಬರಬೇಕು? ಜನಗಳಲ್ಲಿ ಹೊಸ ಜಾಗ್ರತಿ ಹೇಗೆ ಉಂಟಾಗಬೇಕು?

ಜನಗಳ ಸ್ಥಿತಿ ಹೀಗಾದರೆ ಅವರಿಗೆ ತಿಳುವಳಿಕೆ ಉಂಟುಮಾಡಿ ಜಾಗ್ರತಿ ಉಂಟು ಮಾಡಬೇಕಾದ ಕಲಾವಿದರ ಸ್ಥಿತಿ ಹೇಗಿದೆ? ಇದು ಸ್ವಲ್ಪ ತೊಡಕಾದ ಪ್ರಶ್ನೆಯೇ. ಏಕೆಂದರೆ ಬಹುಮಂದಿ ಕಲಾವಿದರು ವೃತ್ತಿಮಾಂದ್ಯಕ್ಕೆ ಗುರಿಯಾಗಿದ್ದಾರೆ. ಕಲೆಯನ್ನು ವಿದ್ಯೆಗಿಂತ ವೃತ್ತಿಯಾಗಿ ಭಾವಿಸಿದ್ದಾರೆ. ಆದುದರಿಂದ ಕಲೆಯ ಪ್ರಗತಿಗೆ ಮಾಡುವ ಯಾವ ಕಾರ್ಯಕ್ರಮವನ್ನೇ ಆಗಲೀ ವೃತ್ತಿಯ ದೃಷ್ಟಿಯಿಂದಲೇ ನೋಡುವರು. ಕಲೆಗೂ ಸಮಾಜಕ್ಕೂ ಇರುವ ಸಂಬಂಧ ಅದನ್ನು ಬೆಳೆಸಬೇಕಾದಲ್ಲಿ ತಮ್ಮ ಮತ್ತು ಸಮಾಜದ ಪಾತ್ರ. ಸಮಾಜದಲ್ಲಿ ಕಲೆಯ ಬಗೆಗೆ ಉತ್ತಮ ಜಾಗ್ರತಿ ಮತ್ತು ಅಭಿರುಚಿ ಬೆಳೆಸಲು ಮಾಡಬೇಕಾದ ಕೆಲಸ, ಮುಂದಿನ ಪೀಳಿಗೆಗಳಲ್ಲಿ ಕಲೆ ಅಭಿವೃದ್ಧಿಯಾಗಬೇಕಾದ ಮಾರ್ಗ. ಹೊಸತನ್ನು ಸಾಧಿಸಬೇಕೆಂಬ ಆಸೆ, ಸೃಜನಶೀಲತೆ ರಾಷ್ಟ್ರಮಟ್ಟದಲ್ಲಿ ಕರ್ನಾಟಕದ ಕಲೆಗೆ ಯೋಗ್ಯಸ್ಥಾನಗಳಿಸಬೇಕಾದ ಕರ್ತವ್ಯ ಮುಂತಾದ ವಿಷಯಗಳೆಲ್ಲಾ ಪ್ರಾಯಶಃ ಅವರ ಕಲ್ಪನೆಗೂ ಬಾರದು. ಅವರ ಆಸೆ ಅಪೇಕ್ಷೆಗಳೆಲ್ಲಾ ತಾತ್ಕಾಲಿಕ ಕಲೆಯೆಂಬ ಕಾಮಧೇನುವಿನಿಂದ ಏನು ಎಷ್ಟು ಪ್ರಯೋಜನ ಪಡೆಯಬಹುದೆಂದು.

ಕರ್ನಾಟಕದಲ್ಲಿ ಲಲಿತ ಕಲೆಗಳು ಇಂದು ಸಂದಿಗ್ಧಸ್ಥಿತಿಯಲ್ಲಿವೆ. ಅವುಗಳ ಗುರಿಯೂ ಅಸ್ಪಷ್ಟವಾಗಿದೆ. ಕಲೆಯಲ್ಲಿ ಒಂದು ಹೊಸ ಹುರುಪು ಬರಬೇಕಾದರೆ, ಒಂದು ಹೊಸಗಾಳಿ ಒಂದು ಚೈತನ್ಯ ಉಂಟುಮಾಡಬೇಕಾದರೆ, ಕಲಾವಿದರಲ್ಲಿ ಚಿಂತನ ಮತ್ತು ಸೃಜನಶೀಲತೆ ಉಂಟಾಗಬೇಕು. ಈಗ ಅದಕ್ಕೆ ಸೂಕ್ತವಾದ ವಾತವರಣವೇ ನಿರ್ಮಿತವಾಗಿಲ್ಲ. ಸಂಗೀತದಲ್ಲಿ ಹಳೆಯ ಪರಿಪಾಠವೇ ನಡೆದುಕೊಂಡು ಬಂದಿದೆ. ಹಿಂದಿನಿಂದ ಏನು ನಡೆದು ಬಂದಿತೋ ಅದನ್ನು ಪುನರಾವೃತ್ತಿ ಮಾಡುವುದೇ ಪದ್ಧತಿಯಾಗಿದೆ. ಸಂಗೀತವಲ್ಲಿ ಕರ್ನಾಟಕದ ಪರಂಪರೆಯೇನು? ಬೆಳೆದು ಬಂದ ವಸ್ತು ಪ್ರಕಾರಗಳೆಂತಹವು? ರಚನಕಾರರಾರು? ಮುಂತಾದ ಐತಿಹಾಸಿಕ ಪ್ರಜ್ಞೆ ಇಲ್ಲ. ಹೊಸ ವಸ್ತುರಚನೆ ಏನಿದ್ದರೂ ನಡೆದಿರುವುದು ಹಳೆಯ ಚೌಕಟ್ಟಿನಲ್ಲಿಯೇ. ಇನ್ನು ಸ್ಫೂರ್ತಿಯ ವಿಷಯದಲ್ಲಿ ಉತ್ತರ ಕರ್ನಾಟಕದ ಅಂದರೆ

ಹಿಂದೂಸ್ತಾನಿ ವಿಭಾಗದ ದೃಷ್ಟಿ ಮಹಾರಾಷ್ಟ್ರದ ಕಡೆಗೆ. ಕರ್ನಾಟಕ ಸಂಗೀತ ವಿಭಾಗದ ದೃಷ್ಟಿ-ಮದರಾಸಿನ ಕಡೆಗೆ. ಸ್ವಂತ ಚಿಂತನಾಶಕ್ತಿ ಬೆಳೆದು ಬಂದಿಲ್ಲ. ಹಿಂದೂಸ್ತಾನೀ ಸಂಗೀತವೆಂದರೆ ಬಡಾಖ್ಯಾಲ್, ಚೋಟಾಖ್ಯಾಲ್ ಭಜನ್. ಅಷ್ಟಿತಷ್ಟಿ, ತರಾನಾ. ಕರ್ನಾಟಕ ಸಂಗೀತವೆಂದರೆ ವರ್ಣ, ಕೃತಿ, ಪದ, ಜಾವಳಿ, ತಿಲ್ಲಾನ ಮುಂಗಳ ಈ ರೀತಿ ಮೊಗಚ್ಚಿದ್ದನ್ನು ಪುನಃ ಮೊಗಚುತ್ತಿರುವುದು. ಈ ಚೌಕಟ್ಟಿನಿಂದ ಹೊರಗೆ ಏನು ಸಂಗೀತವಿದೆ. ಏನು ಪ್ರಕಾರಗಳಿವೆ. ಅವುಗಳ ಅಂದವೇನು. ಮೌಲ್ಯವೇನು ಎಂಬ ವಿಷಯಗಳು ನಮ್ಮ ಸಂಗೀತಗಾರರ ಮನಸ್ಸಿಗೆ ಹೊಳೆದಿಲ್ಲ. ಹೊಳೆದರೂ ಅಷ್ಟಾಗಿ ಹಚ್ಚಿಕೊಳ್ಳಲು. ತಮ್ಮ ಚೌಕಟ್ಟಿನಿಂದ ಆಚೆಗೆ ಇರುವುದೆಲ್ಲಾ ಅವರ ದೃಷ್ಟಿಯಲ್ಲಿ ಮೈಲಿಗೆ. ಇದರ ಫಲವಾಗಿ ಶಾಸ್ತ್ರೀಯ ಸಂಗೀತಕ್ಕೂ ಜನತೆಗೂ ಅಂತರವು ಹೆಚ್ಚಾಗುತ್ತಿದೆ.

ಈ ಪರಿಸ್ಥಿತಿಗೆ ಕಾರಣವಿಲ್ಲದಿಲ್ಲ. ಇಂದು ಪ್ರಚಲಿತವಿರುವ ಸಂಗೀತ ಪ್ರಕಾರಗಳು (ಹಿಂದೂಸ್ತಾನಿ-ಕರ್ನಾಟಕ) ರೂಪಿತವಾದುದು ಸುಮಾರು 150-200 ವರುಷಗಳ ಒಳಗೇ. ಇದಕ್ಕೆ ಭವ್ಯ ಹಿನ್ನಲೆ ಇರಬಹುದು. ಆದರೆ ಪ್ರಚಲಿತವಿರುವ ಅತಿ ಹಳೆಯ ಖ್ಯಾಲ್‌ಗಳು ಸದಾರಾಗ ಅದಾರಂಗಾರದು. ಠುಮ್ರಿಗಳು ಅವಕ್ಕೂ ಈಚಿನವಷ್ಟೆ ಕರ್ನಾಟಕ ಸಂಗೀತದ ಅತಿ ಹಳೆಯ ವರ್ಣ ಪಚ್ಚಿಮಿರಿಯಂ ಆದಪ್ಪಯ್ಯ ನವರದು. ಕೀರ್ತನೆಗಳೆಲ್ಲಾ ತ್ಯಾಗರಾಜ, ದೀಕ್ಷಿತ, ಶ್ಯಾಮ ಶಾಸ್ತ್ರಿಗಳದು. ಜಾವಳಿ ತಿಲ್ಲಾನಗಳು ಅವಕ್ಕೂ ಈಚಿನವು. ಮೆಹಫಿಲ್ ಅಥವಾ ಕಛೇರಿಯಲ್ಲಿ ಅವುಗಳು ನಿರೂಪಿತವಾಗುವ ವಿಧಾನವೂ ಅಷ್ಟೇ ಹಳೆಯದು. ಈ ಸಂಗೀತವು ನಿರ್ಮಿತವಾದ ಪರಿಸರವೂ ಬೇರೆ, ವಾತಾವರಣವೂ ಬೇರೆ.ಅದು ಹುಟ್ಟಿ ಬೆಳೆದು ಬಂದುದು ಧರ್ಮದ ಆಸರೆಯಲ್ಲಿ ಗುಡಿಗಳಲ್ಲಿ. ಅರಮನೆಗಳಲ್ಲಿ. ಹೀಗೆ ಬೇರೆಯುಗದಲ್ಲಿ ಅಂದರೆ 17–18ನೆಯ ಶತಮಾನದಲ್ಲಿ ಹುಟ್ಟಿದ ಕಲೆ 20–21ನೆಯ ಶತಮಾನದ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಧರ್ಮದ ಚೌಕಟ್ಟಿನಲ್ಲಿ ರೂಪಿತವಾದ ಕಲೆಯ ವಸ್ತುವಿಶೇಷಗಳು, ಆ ಕತೆಗಳು, ಅವುಗಳ ಹಿನ್ನಲೆ, ತತ್ವ ಮುಂತಾದುವು ಇಂದಿನ ಜನತೆಗೆಅಸ್ಪಷ್ಟ. ಇಂದು ಧರ್ಮ ಕೇವಲ ಒಂದು ಅಭ್ಯಾಸ ಅಷ್ಟೇ. ಆದುದರಿಂದ ಈ ಸಂಗೀತಕಲೆ ಜನತೆಯ ಮೇಲೆ ಪರಿಣಾಮ ಮಾಡದಿದ್ದರೆ ಆಶ್ಚರ್ಯವಿಲ್ಲ. ಸ್ಥಿತಿಯನ್ನು ಅರಿತು ಸರಿಪಡಿಸಬೇಕಾದ ಸಂಗೀತ ಕಲಾವಿದರ ಸ್ಥಿತಿಯಲ್ಲಿ ಅಂತಹ ಉತ್ತಮವೇನಿಲ್ಲ. ಅವರು ಜೀವಿಸಿರುವುದು 20ನೆಯ ಶತಮಾನದಲ್ಲಿ ಆದರೆ ಅವರ ಮನೋಧರ್ಮವಿರುವುದು, 18ನೆಯ ಶತಮಾನದಲ್ಲಿ.

ನಿದರ್ಶನವಾಗಿ ಇಂದು ಹಾಡಲಾಗುವ ಕೃತಿ ಪ್ರಕಾರಗಳನ್ನೇ ಹೇಳಬಹುದು. ಹಿಂದೂಸ್ತಾನೀ ಸಂಗೀತದಲ್ಲಿ ಹಾಡಲಾಗುವ ಕೃತಿಗಳು ರಚಿತವಾಗಿರುವುದು ಬಹುತೇಕ ಬ್ರಜಭಾಷೆಯಲ್ಲಿ. ಕರ್ನಾಟಕ ಸಂಗೀತದಲ್ಲಿ ಹಾಡಲಾಗುತ್ತಿರುವ ಕೃತಿಪ್ರಕಾರಗಳು ರಚಿತವಾಗಿರುವುದು ಬಹುತೇಕ ತೆಲುಗು ಮತ್ತು ಸಂಸ್ಕೃತದಲ್ಲಿ. ಈ ಪರಿಸ್ಥಿತಿಗೆ

ಐತಿಹಾಸಿಕ ಹಿನ್ನಲೆ ಇದೆ ನಿಜ. ಅಲ್ಲದೆ ಸಂಗೀತದಲ್ಲಿ ನಾದಲಯ ಮತ್ತು ಭಾವ ಪ್ರಧಾನಗುಣಗಳು ಎಂಬ ವಿಷಯವೂ ನಿಜ. ಆದರೆ ಭಾರತೀಯ ಸಂಗೀತವು ಗೇಯ ಪ್ರಧಾನವಾದುದು. ಅಂದರೆ ಹಾಡುಗಾರಿಕೆಯ ಶೈಲಿಯಿಂದ ರೂಪಿತ ವಾದುದು. ಹಾಡುಗಾರಿಕೆ ಎಂದ ಮೇಲೆ ಸಾಹಿತ್ಯಕ್ಕೆ ಸ್ಥಾನವಿದೆ. ಭಾಷೆಗೂ ಸ್ಥಾನವಿದೆ. ಹಿಂದೆ ಶಾಸ್ತ್ರೀಯ ಸಂಗೀತ ಗೋಷ್ಠಿಗಳಿಗೆ ಬರುವವರಿಗೆ ಕಲೆಯ ರೂಪರೇಷೆಗಳ ಸಾಧಾರಣ ಪರಿಚಯವಾದರೂ ಇದ್ದಿತು. ಅಲ್ಲದೆ ಈ ಭಾಷೆಗಳ ಸ್ಥೂಲ ಪರಿಚಯವಾದರೂ ಇದ್ದಿತು. ಅದಿಲ್ಲದವರು ಸಂಗೀತವನ್ನು ಒಂದು ಆಧ್ಯಾತ್ಮಿಕ ಅನುಭವವಾಗಿ ಪರಿಗಣಿಸುತ್ತಿದ್ದರು. ಆದರೆ ಇಂದು ಪರಿಸ್ಥಿತಿ ಬದಲಿಸಿದೆ. ಆ ರೀತಿಯ ಪ್ರೌಢ ರಸಿಕರ ಸಂಖ್ಯೆ ಇಳಿದಿದೆ. ಜನತೆಗೆ ಸಂಗೀತದ ರುಚಿ ಹತ್ತ ಬೇಕಾದರೆ ಅವರಿಗೆ ಅರ್ಥವಾಗುವ ಭಾಷಾಸಾಹಿತ್ಯದ ಮಿಲನವಾಗಿ ಆಗಬೇಕು. ಈ ಅಂಶವು ನಮ್ಮ ಸಂಗೀತ ವಿದ್ವಾಂಸರ ಮನಸ್ಸಿಗೆ ತಾಕಿಲ್ಲ. ಕನ್ನಡದಲ್ಲಿ ಹಾಡುವು ದೆಂದರೆ ಅವರಿಗೆ ಹೀನಾಯ. ಸಂಗೀತವನ್ನು ಆಧ್ಯಾತ್ಮಿಕ ಸಾಧನ ಅಥವಾ ಅನುಭವಕ್ಕಿಂತ ಕಲೆಯಾಗಿ ಅಭ್ಯಾಸ ಮಾಡಬೇಕಾದ ಸಂದರ್ಭ ಒದಗಿದೆ.

ಇದು ಕಾರ್ಯಗತವಾಗಬೇಕಾದರೆ ಸೂಕ್ತ ಮಾರ್ಗದರ್ಶನ ಮತ್ತು ಶಿಕ್ಷಣ ಅವಶ್ಯಕ. ಕಾಲಕ್ಕೆ ಅವಶ್ಯಕವಾದ ದೃಷ್ಟಿ ಚಿಂತನ, ಅಧ್ಯಯನ ಮತ್ತು ಪ್ರಯೋಗಗಳ ಮೂಲಕ ಕಲೆಗೆ ಹೊಸರೂಪ ಕೊಡಬೇಕು. ಇದು ಹಳೆಯ ಗುರುಕುಲ ರೀತಿಯ ಸಂಗೀತ ಶಿಕ್ಷಣದ ಮೂಲಕವಾಗಿ ಸಾಧ್ಯವಿಲ್ಲ. ಸಂಗೀತವನ್ನು ಧರ್ಮದ ಚೌಕಟ್ಟಿನಿಂದ ಹೊರತಂದು ಅದನ್ನು ಒಂದು ವಿದ್ಯೆಯಾಗಿ, ಕಲೆಯಾಗಿ, ವಿಜ್ಞಾನವಾಗಿ ಕಲಿಸಬಲ್ಲ ಸಂಸ್ಥೆಗಳಿಂದ ಆಗಬೇಕು. ಅವು ವಿಶ್ವವಿದ್ಯಾಲಯಗಳು.

ರಾಜ್ಯದ ಮೂರೂ ವಿಶ್ವವಿದ್ಯಾಲಯಗಳಲ್ಲಿಯೂ ಸಂಗೀತ ವಿಭಾಗಗಳಿವೆ. ಆದರೆ ಅವುಗಳು ನಡೆಯುತಿರುವ ರೀತಿ ನಿರಾಶಾದಾಯಕವಾಗಿದೆ. ಅವುಗಳ ಕಾರ್ಯವಿಧಾನವೆಲ್ಲಾ ಹಳೆಯ ಜಾಡಿನಲ್ಲಿಯೇ ಸಾಗಿದೆ. ಸಂಗೀತವೆಂದರೆ ಮೆಹ್‌ಫಿಲ್ ಅಥವಾ ಕಚೇರಿಗಳಲ್ಲಿ ಪ್ರದರ್ಶಿತವಾಗುವ ಸಂಗೀತ ಮಾತ್ರ, ಅದೇ ನಿಜವಾದ ಸಂಗೀತ ಎಂಬ ಭಾವನೆಯಿಂದ ಅವರ ಶಿಕ್ಷಣ ಕ್ರಮವು ರೂಪಿತವಾಗಿದೆ. ಈ ಕಲೆ ಬೆಳೆದು ಬಂದ ದಾರಿ, ಅದರ ವಿವಿಧ ಮುಖಗಳು ಅದರ ಭೌತಿಕ ಮತ್ತು ಮಾನಸಿಕ ಮೌಲ್ಯಗಳು, ಸಮಾಜಕ್ಕೂ ಸಂಗೀತಕ್ಕೂ ಇರಬೇಕಾದ ಸಂಬಂಧ, ಅದರಲ್ಲಿಯೂ ಈ ವಿಜ್ಞಾನ ಯುಗದ ಸಮಾಜದಲ್ಲಿ ಅದರ ಪಾತ್ರ ಇವೆಲ್ಲಾ ಈ ಶಿಕ್ಷಣ ಕ್ರಮಕ್ಕೆ ಹೊರ ತಾದವು. ಪ್ರಯೋಗ ಮತ್ತು ಪರಿಶೋಧನೆ ಈ ಶಿಕ್ಷಣ ಕ್ರಮದ ಕಲ್ಪನೆಗೆ ಬಂದಿಲ್ಲ. ನಡೆವ ರಿಸರ್ಚ್ ಅಥವಾ ಪರಿಶೋಧನೆ ಪುರಂದರದಾಸರ ಪದಗಳಲ್ಲಿ ಕೃಷ್ಣಲೀಲೆ ತ್ಯಾಗರಾಜ ಕೃತಿಗಳಲ್ಲಿ ನವವಿಧ ಭಕ್ತಿ ಹೀಗೆ. ಇದರ ಫಲವಾಗಿ ಅಲ್ಲಿ ಶಿಕ್ಷತರಾದ ವಿದ್ಯಾರ್ಥಿಗಳಿಗೆ ಚಿಂತನ ಮತ್ತು ಕ್ರಿಯಾಶೀಲತೆಯಾಗಲೀ ಅಥವಾ ಆಕರ್ಷಣೆಯವಾಗಿ ಕಚೇರಿ ಮಾಡುವ ಶಕ್ತಿಯಾಗಲೀ ಎರಡೂ ಬಾರದಾಗಿವೆ. ಬೇರೆ ವಿಭಾಗಗಳಲ್ಲಿ

ಸ್ಥಳ ದೊರೆಯದೇ ಸುಲಭವಾಗಿ ಡಿಗ್ರಿ ದೊರೆಯಬಹುದಾದ ವಿಭಾಗವೆಂದರೆ ಸಂಗೀತ ಎಂಬ ಭಾವನೆ ಸಾರ್ವತ್ರಿಕವಾಗಿದೆ.

ಜನತೆಗೂ ಸಂಗೀತ ಸಾಹಿತ್ಯಗಳಿಗೂ ಸಂಪರ್ಕವಾಗಿದ್ದಂತಹ ಕಲೆ-ಗಮಕ, ಇದು ಹಿಂದೆ ಬೀಳುತ್ತಿದೆ. ಆದರೆ ಇವರ ಜಾಗಕ್ಕೆ ಸುಗಮ ಸಂಗೀತ ಅಥವಾ ಭಾವಗೀತೆಗಳ ಗಾಯನ ಬಂದಿದೆ. ಆಂಧ್ರ ಮತ್ತು ಮಹಾರಾಷ್ಟ್ರ ಗಳಷ್ಟು ನಮ್ಮಲ್ಲಿ ಭಾವಗೀತೆಗಳು ಜನಪ್ರಿಯವಾಗಿ ಬೆಳೆದು ಬಂದಿಲ್ಲವೆಂದರೂ ಈ ಎರಡು ದಶಕಗಳಲ್ಲಿ ಸಾಕಷ್ಟು ಮುಂದುವರೆದಿದೆ. ಚಲಚ್ಚಿತ್ರ ಮಾಧ್ಯಮದಲ್ಲಿ ನಮ್ಮ ಹೆಸರಾಂತ ಕವಿಗಳ ಭಾವಗೀತೆಗಳನ್ನು ಉಪಯೋಗಿಸಿದಲ್ಲಿ ಅವುಗಳ ಜನ ಪ್ರಿಯತೆ ಇನ್ನೂ ಹೆಚ್ಚುವುದು. ಭಾವಗೀತೆಗಳಲ್ಲಿ ಕರ್ನಾಟಕಕ್ಕೆ ಒಂದು ವಿಶಿಷ್ಟ ಶೈಲಿ ಬೆಳೆದು ಬರುವುದೂ ಸಾಧ್ಯ.

ಸಂಗೀತದ ಸ್ಥಿತಿ ಇಂತಾದರೆ ನೃತ್ಯಕಲೆ ಹೇಗೆ ? ಬಹು ಶೋಚನೀಯವಾಗಿದೆ. ಅದೂ ಸಂಗೀತದ ಜಾಡಿನಲ್ಲಿಯೇ ನಡೆದಿದೆ. ಪೂರಾ ತಂಜಾವೂರು ಸಂಪ್ರದಾಯ ವನ್ನೇ ಆಶ್ರಯಿಸಿದೆ. ಒಂದು ಕಾಲದಲ್ಲಿ ದೇವದಾಸಿ ನರ್ತಕಿಯರು ಕರ್ನಾಟಕದ ಪ್ರಸಿದ್ಧ ದೇವಾಲಯಗಳಲ್ಲಿ ನೃತ್ಯಾರಾಧನೆ ಮಾಡುತಿದ್ದುದೇ ಅಲ್ಲದೇ ಕರ್ನಾಟಕದ ಹೊರಗಿನ ಗೋವಾ ಮುಂತಾದ ಸ್ಥಳಗಳಲ್ಲಿಯೂ ಈ ಸೇವೆ ಸಲ್ಲಿಸುತ್ತಿದ್ದರು. ಆಯಾ ಊರುಗಳು ನೃತ್ಯಕಲೆಯ ಮುಖ್ಯಕೇಂದ್ರಗಳೆನಿಸಿಕೊಂಡಿದ್ದವು. ಹಾಗೆಯೇ ರಾಜಾಸ್ಥಾನಗಳು. ಇಲ್ಲಿ ಪ್ರಚಲಿತವಿದ್ದ ನೃತ್ಯ ಕಲೆ ಏನು? ಎಂತಹುದು? ಎಂಬ ಅರಿವೇ ಇಲ್ಲ ನಮ್ಮ ನೃತ್ಯ ಕಲಾವಿದರಿಗೆ. ಕರ್ನಾಟಕದಲ್ಲಿ ಪ್ರಾಯಶಃ ಪ್ರಚಲಿತವಿರು ವುದು ಭರತನಾಟ್ಯವೆಂದು ಕರೆಯಲಾಗುವ ನೃತ್ಯ ಪ್ರಕಾರ. ಇದು ಪುನಃ ಧಾರ್ಮಿಕ ಚೌಕಟ್ಟಿನಲ್ಲಿಯೇ ಅಡಗಿರುವುದು. ಶಿವನ ನಾನಾ ತಾಂಡವಗಳು ಕೃಷ್ಣನ ಲೀಲೆಗಳು, ಪ್ರಣಯ ಪ್ರಹಸನಗಳು ಅಥವಾ ಯಾವನಾದರೂ ರಾಜನ ಗುಣಕಥನಗಳು ಇವೇ ಮುಖ್ಯ ಕಥಾ ವಸ್ತುಗಳು. ಭರತನಾಟ್ಯಕ್ಕೆ ಕರ್ನಾಟಕ ಸಂಗೀತವು ಆಸರೆ. ಆದುದ ರಿಂದಲೆ ಕರ್ನಾಟಕದಲ್ಲಿ ಭರತನಾಟ್ಯವೆಲ್ಲಾ ದಕ್ಷಿಣಾರ್ಧಕ್ಕೇ ಸೀಮಿತವಾಗಿದೆ, ಕಥಕ್ ನೃತ್ಯಕ್ಕೆ ಹಿಂದೂಸ್ಥಾನೀ ಸಂಗೀತವೂ ಆಸರೆ. ಆದರೆ ಉತ್ತರ ಕರ್ನಾಟಕದಲ್ಲಿ ಕಥಕ್ ನೃತ್ಯಕಲೆ ಬೇರೂರಲಿಲ್ಲ. ಕಥಕ್ ನೃತ್ಯದ ಶ್ರೇಷ್ಠ ಪ್ರತಿಪಾದಕರೆಂದು ರಾಷ್ಟ್ರ ಮಟ್ಟದಲ್ಲಿ ಪ್ರಸಿದ್ಧರಾದ ಇಬ್ಬರು ಕರ್ನಾಟಕ ಕಲಾವಿದರಿದ್ದರೂ ಅವರನ್ನು ಸದುಪ ಯೋಗ ಮಾಡಿಕೊಂಡು ಕಥಕ್ ಕಲೆಯನ್ನು ರಾಜ್ಯದಲ್ಲಿ ಬೆಳೆಸುವ ಯೋಚನೆ ಯಾರಿಗೂ ಬಂದಿಲ್ಲ. ಕರ್ನಾಟಕದ ಸಂಗೀತ ನೃತ್ಯ ಕ್ಷೇತ್ರಗಳಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಬೇಕಾದರೆ ರವೀಂದ್ರನಾಥ ಠಾಕೂರರಂತಹವರೊಬ್ಬರು ಹುಟ್ಟಿ ಬರಬೇಕೇನೋ ?

ಆದರೆ ಚಿತ್ರ ಮತ್ತು ಶಿಲ್ಪಕಲೆಗಳ ಸ್ಥಿತಿ ಬೇರೆಯಾಗಿದೆ. ಸಂಗೀತ ನೃತ್ಯ ಗಳಿಗಿಂತ ಪ್ರಗತಿಪರವಾಗಿದೆ. ಕರ್ನಾಟಕದ ಸಾಂಪ್ರದಾಯಿಕ ಕಲೆ ಧಾರ್ಮಿಕ

ಚೌಕಟ್ಟಿನಲ್ಲಿಯೇ ಬೆಳೆದು ಬಂದುದು. ಪಾಶ್ಚಾತ್ಯ ಕಲಾ ಶಿಕ್ಷಣದ ಪ್ರಭಾವವಾಗಿ ಕೇವಲ ದೇವದೇವತೆಗಳ ಪಟಗಳು, ಪುರಾಣ ಕಥಾ ಪ್ರಸಂಗಗಳು ಮುಂತಾದ ವಸ್ತುಗಳಿಂದಲೇ ಕೂಡಿದ್ದು ಚಿತ್ರಕಲೆಯಲ್ಲಿ ಕ್ರಮೇಣ ಭಾವಚಿತ್ರಗಳು ನಿಸರ್ಗದೃಶ್ಯಗಳೇ ಮುಂತಾದ ಧಾರ್ಮಿಕ ಪ್ರಕಾರದ ಹೊರಗಿನ ವಸ್ತುಗಳೂ ನಿರೂಪಿತವಾಗಲು ಪ್ರಾರಂಭವಾಯಿತು. ಇಲ್ಲಿಯೇ ಕೆಲವು ಕಾಲ ತಟಸ್ಥವಾಗಿದ್ದ ಕಲೆ ಈಗ ಸುಮಾರು ಒಂದು ದಶಕದಿಂದ ಹೊಸರೂಪ, ಹೊಸ ಚೈತನ್ಯಗಳಿಂದ ವೃದ್ಧಿಯಾಗುತ್ತಿದೆ. ಕರ್ನಾಟಕದ ಕಲಾವಿದರು, ಅದರಲ್ಲಿಯೂ ತರುಣ ಕಲಾವಿದರಲ್ಲಿ ಹೊಸಚಿಂತನ ಮೂಡಿಬಂದಿದೆ. ಹೊಸ ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಹೊಸ ಮಾಧ್ಯಮಗಳನ್ನು ಕರಗತ ಮಾಡಿಕೊಳ್ಳುತ್ತಿದ್ದಾರೆ. ಶಿಲ್ಪ ಮತ್ತು ಗ್ರಾಫಿಕ್ ವಿಭಾಗಗಳಲ್ಲಿ ಬಹು ಮುಂದುವರಿದಿದ್ದಾರೆ. ರಾಜ್ಯವೇ ಅಲ್ಲದೇ ರಾಷ್ಟ್ರಮಟ್ಟದಲ್ಲಿಯೇ ಮಾನಿತರಾಗಿದ್ದಾರೆ. ರಾಷ್ಟ್ರಮಟ್ಟದಲ್ಲಿ ಕಲಾ ಪ್ರದರ್ಶನ ಮಾಡುತ್ತಿರುವ ಕಲಾವಿದರ ಸಂಖ್ಯೆ ಹೆಚ್ಚಾಗುತ್ತಿದೆ.

ಒಟ್ಟಿನಲ್ಲಿ ಕಳೆದ ಈ 25 ವರುಷಗಳಲ್ಲಿ ಕರ್ನಾಟಕದಲ್ಲಿ ಲಲಿತಕಲಾಕ್ಷೇತ್ರದಲ್ಲಿ ಆದ ಬೆಳವಣಿಗೆಯನ್ನು ಪರಿಶೀಲಿಸಿದಲ್ಲಿ ಅನುಭವವಾಗುವ ಅಂಶಗಳು–1. ಕರ್ನಾಟಕದ ಕಲೆಯ ಪರಂಪರೆ ಮತ್ತು ಅದರ ಸಮಗ್ರ ಸ್ವರೂಪದ ಬಗೆಗೆ ತಿಳುವಳಿಕೆ ಇನ್ನೂ ಬೆಳೆಯಬೇಕಾಗಿದೆ. 2. ವಿವಿಧ ಭಾಗದ ಕಲಾವಿದರಲ್ಲಿ ಪರಸ್ಪರ ಸಂಪರ್ಕ, ಅರಿವು, ಬೆಳೆಯುವುದಲ್ಲದೆ, ರಾಜ್ಯದ ಕಲೆಯ ಬಗೆಗೆ ಹೆಮ್ಮೆ, ಹೊಸದನ್ನು ಸಾಧಿಸಬೇಕೆಂಬ ಹಂಬಲ ಮತ್ತು ಕೆಚ್ಚು ಬೆಳೆಯಬೇಕಾಗಿದೆ. ಈ ರೀತಿಯ ಚಿಂತನವು ಕಲೆಯ ಅಭಿವೃದ್ಧಿ ಮತ್ತು ಪೋಷಣೆಯ ಜವಾಬುದಾರಿ ಹೊತ್ತ ಸರ್ಕಾರ ಹಾಗೂ ಸಂಘ ಸಂಸ್ಥೆಗಳಲ್ಲಿಯೂ ಉಂಟಾಗಬೇಕಾಗಿದೆ. 3. ಕಲಾಕ್ಷೇತ್ರದಲ್ಲಿ ಹೊಸ ಚೈತನ್ಯ ಬಂದು ಕಲಾವಿದರ ಕಲ್ಪನಾಪ್ರತಿಭೆ ಮತ್ತು ಸೃಜನ ಶೀಲತೆ ಬೆಳೆಯಬೇಕಾದರೆ ಅದಕ್ಕೆ ಸೂಕ್ತ ಮತ್ತು ಪ್ರಗತಿಪರ ಶಿಕ್ಷಣ ಕ್ರಮವೂ ಅಗತ್ಯ. ಅದಿನ್ನೂ ಆಗಿಲ್ಲ. 4. ಸೃಜನಶೀಲತೆ ಮತ್ತು ರಾಷ್ಟ್ರಮಟ್ಟದ ಮಾನ್ಯತೆಯ ದೃಷ್ಟಿಯಿಂದ ಚಿತ್ರ-ಶಿಲ್ಪ ಕಲೆಗಳು ಪ್ರಗತಿಪಥದಲ್ಲಿವೆ. ಸಂಗೀತ-ನೃತ್ಯ ಕಲೆಗಳು ಅರ್ಧಶತಮಾನದಷ್ಟು ಹಿಂದೆ ಬಿದ್ದಿವೆ. 5. ಪ್ರೋತ್ಸಾಹ ಮತ್ತು ಪೋಷಣೆಯ ದೃಷ್ಟಿಯಿಂದ ಕರ್ನಾಟಕವು ಭಾರತದ ಅನೇಕ ರಾಜ್ಯಗಳಿಗಿಂತ ಮುಂದಿದೆ. ಸರ್ಕಾರದಿಂದ ಲಲಿತಕಲೆಗಳಿಗಾಗಿ ಕರ್ನಾಟಕದಷ್ಟು ಬೇರೆ ರಾಜ್ಯಗಳಲ್ಲಿ ಹಣ ವೆಚ್ಚ ಮಾಡುತ್ತಿಲ್ಲ. ಅಲ್ಲದೆ ಕಲಾವಿದರ ಮಾಸಾಶನ ಮತ್ತು ಗೌರವಧನ ಈ ದೃಷ್ಟಿಯಿಂದಲೂ ಕರ್ನಾಟಕವು ಇತರ ರಾಜ್ಯಗಳಿಗಿಂತ ಮುಂದಿದೆ. ಈ ಪ್ರಮಾಣದಲ್ಲಿ ಬೇರೆ ಯಾವ ರಾಜ್ಯಗಳಲ್ಲಿಯೂ ಕೊಟ್ಟಿಲ್ಲ. ಇಷ್ಟೆಲ್ಲಾ ಆದರೂ ಲಲಿತ ಕಲೆಗಳು ಅದಕ್ಕೆ ಸಮ ಪ್ರಮಾಣದಲ್ಲಿ ವೃದ್ಧಿಯಾಗಿಲ್ಲವೆನ್ನಬಹುದು.

ಇನ್ನು ಕರ್ನಾಟಕಕ್ಕೆ ಸಂಬಂಧಪಟ್ಟ ಹಾಗೆ ಒಂದು ವಿಶೇಷ ಸಂಗತಿ ಇದೆ. ಇಂದು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ನೃತ್ಯ, ಚಿತ್ರ, ಶಿಲ್ಪ ಮುಂತಾದ

ಕಲೆಗಳಲ್ಲಿ ಬಹು ಪ್ರಸಿದ್ಧರಾದ ಕರ್ನಾಟಕ ಕಲಾವಿದರನೇಕರು ಇದ್ದಾರೆ. ಇವರು ಗಳು ಹುಟ್ಟಿದ್ದು ಕರ್ನಾಟಕವಲ್ಲಿ. ಆದರೆ ಸೌಕರ್ಯಗಳಿಲ್ಲದೆ ಹೊರಗೆ ಶಿಕ್ಷಣ ಪಡೆದು ಸ್ವಂತ ಪ್ರತಿಭೆ ಮತ್ತು ಪ್ರಯತ್ನಗಳಿಂದ ಈ ಸ್ಥಾನಗಳನ್ನು ಗಳಿಸಿ ಭಾರತದ ಬೇರೆ ರಾಜ್ಯಗಳಲ್ಲಿ ನೆಲೆಸಿದ್ದಾರೆ. ಕರ್ನಾಟಕದ ಹಿರಿಮೆಯ ಜಾಗಟೆ ಹೊಡೆವಾಗ ಇವರನ್ನು ನೆನೆಯುವುದೂ ಕರೆಯುವುದೂ ಸತ್ಕರಿಸುವುದೂ ಅವರ ಪ್ರಘೆಯಲ್ಲಿ ಕಾಣಿಸಿ ಕೊಳ್ಳುವುದೂ ಧಾರಾಳವಾಗಿ ನಡೆಯುತ್ತಿದೆ. ಆದರೆ, ಅವರನ್ನು ರಾಜ್ಯದ ಕಲಾ ಪ್ರಾಕಾರದೊಳಕ್ಕೆ ತಂದು ಅವರುಗಳ ಸಲಹೆ ಮತ್ತು ಸಹಾಯ ಪಡೆದು ಕರ್ನಾಟಕದ ಕಲೆಗಳನ್ನು ಪ್ರಗತಿ ಪಥದಲ್ಲಿ ಕೊಂಡೊಯ್ಯುವ ಕೆಲಸ ಮಾಡಿಲ್ಲ. ಸಂಬಂಧಪಟ್ಟವರಿಗೆ ಅದು ಬೇಕಾಗಿಯೂ ಇಲ್ಲ. ಇಂತಹ ವಿಪರೀತ ಪರಿಸ್ಥಿತಿ ಇದೆ.

ಸೃಜನ ಸಾಹಿತ್ಯ ಪ್ರಗತಿ

ಕೆ. ವಿ. ನಾರಾಯಣ

1956 ಕರ್ನಾಟಕ ಏಕೀಕರಣಕ್ಕೂ ಆ ಮುಂದಿನ ಇಪ್ಪತ್ತೈದು ವರ್ಷಗಳ ಸೃಜನ ಸಾಹಿತ್ಯ ಪ್ರಗತಿಗೂ ನೇರವಾದ ಸಂಬಂಧ ಕಲ್ಪಿಸುವುದು ಕೇವಲ ಔಪಚಾರಿಕ. ಏಕೀಕರಣಕ್ಕೂ ಮೊದಲು ಕನ್ನಡದ ನೆಲದಲ್ಲಿ, ಅದು ಯಾವುದೇ ಪ್ರಾಂತ್ಯದಲ್ಲಿದ್ದರೂ, ಈ ಶತಮಾನದ ನವೋದಯ ಸಾಹಿತ್ಯ ಚಟುವಟಿಕೆ ಎಡೆಬಿಡದೆ ನಡೆಯುತ್ತಲೇ ಇತ್ತು. 1959ರಲ್ಲಿ ಯೋಜಿತವಾಗಿ ಪ್ರಕಟವಾದ ಮನೋಹರಗ್ರಂಥಮಾಲೆಯ ರಜತ ವರ್ಷದ ಸಂಪುಟಗಳನ್ನು ('ನಡೆದು ಬಂದ ದಾರಿ') ನೋಡಿದರೆ ಆವರೆಗಿನ ಸಾಹಿತ್ಯ ಪ್ರಗತಿಯ ಸ್ವರೂಪ ಸಾಕಷ್ಟು ಸ್ಪಷ್ಟಗೊಳ್ಳುತ್ತದೆ. ಏಕೀಕರಣವಾಗಬೇಕೆಂಬ ಅನಿಸಿಕೆಯೊಂದು ಆಗಾಗ ಸಾಹಿತ್ಯಕೃತಿಗಳಿಗೂ ವಸ್ತುವಾದದ್ದಷ್ಟೇ ನೇರವಾದ ವ್ಯತ್ಯಾಸವಿದ್ದೀತು. ಆದರೆ ಏಕೀಕರಣದ ಅನಂತರದ ಸಾಂಸ್ಕೃತಿಕ ಬದಲಾವಣೆಗಳು ಪರೋಕ್ಷವಾಗಿ ಸೃಜನ ಸಾಹಿತ್ಯದ ಪ್ರೇರಣೆಗಳಾಗಿವೆ ಎನ್ನುವುದು ಸರಿಯಾದ ಮಾತು. ಕಳೆದ ಇಪ್ಪತ್ತೈದು ವರ್ಷಗಳ ಸಾಹಿತ್ಯ ಪ್ರಗತಿಯ ಸಮೀಕ್ಷೆಯು ಇನ್ನೂ ಒಂದು ದೃಷ್ಟಿಯಿಂದ ಔಪಚಾರಿಕ. ಯಾವುದೇ ಸಾಹಿತ್ಯವನ್ನು ಕುರಿತಂತೆ, ಒಂದು ನಿರ್ದಿಷ್ಟ ಅವಧಿಗೆ ಸೀಮಿತಗೊಳಿಸಿಕೊಂಡು ನಡೆಸುವ ಸಮೀಕ್ಷೆಯು ಕೆಲವು ಮಿತಿಗಳಿಗೆ ಒಳಗಾಗುವುದು ಅನಿವಾರ್ಯ. ಎಡೆಬಿಡದೆ ಮುನ್ನಡೆಯುವ ಸಾಹಿತ್ಯ ಪರಂಪರೆಯಲ್ಲಿ ಒಂದು ಭಾಗವನ್ನು ಮಾತ್ರ ಬೇರೆ ಮಾಡಿ ಅದನ್ನು ಕುರಿತಂತೆ ಆಡುವ ಮಾತುಗಳು ಆಚೀಚಿನ ಕಾಲದ ಸಾಹಿತ್ಯದ ಪ್ರಭಾವ, ಪರಿಣಾಮಗಳನ್ನೂ ಗಮನಿಸಬೇಕು. ಇಲ್ಲದಿದ್ದರೆ ಆ ಮಾತುಗಳು ಯಾವ ಮಹತ್ವವನ್ನು ಪಡೆಯಲಾರವು. ಅಲ್ಲದೆ ಸಮೀಕ್ಷಕನಿಗೆ ಕಾಲದ ದೃಷ್ಟಿಯಿಂದ ನಿಕಟವಾದ ಅವಧಿಯಲ್ಲಿನ ಸಾಹಿತ್ಯ ಸಮೀಕ್ಷೆಯಂತೂ ಇನ್ನೂ ಹಲವು ಇಕ್ಕಟ್ಟುಗಳಿಗೆ ಒಳಗಾಗುವುದು. ಪ್ರಗತಿಶೀಲ ಚಳುವಳಿಯಿಂದ ಪ್ರಾರಂಭವಾದ ಈ ಸಮೀಕ್ಷಾ ಸಾಹಿತ್ಯ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಬಲವಾಗಿಯೇ ಬೆಳೆದು ನಿಂತಿದೆ. ಹಲವಾರು ಸಾಹಿತ್ಯಸಮ್ಮೇಳನಗಳು, ಸಾಹಿತ್ಯ ಗೋಷ್ಠಿಗಳು, ವಿಚಾರ ಸಂಕಿರಣಗಳು, ಅಲ್ಲದೆ ಸ್ವಾತಂತ್ರ್ಯದ ಬೆಳ್ಳಿಹಬ್ಬ, ಮೈಸೂರು ವಿಶ್ವವಿದ್ಯಾಲಯದ ಚಿನ್ನದ ಹಬ್ಬ, ಎಪ್ಪತ್ತನೆ ದಶಕದ ಸಾಹಿತ್ಯದ ಸಮೀಕ್ಷೆ ಇವೇ ಮೊದಲಾದ ಸಂದರ್ಭಗಳಲ್ಲಿ ಒಂದಿಲ್ಲೊಂದು ಬಗೆಯ ಸಾಹಿತ್ಯ ಸಮೀಕ್ಷೆಯು ನಡೆಯುತ್ತಲೇ ಬಂದಿದೆ. ಕಳೆದ ಹತ್ತು ವರ್ಷಗಳಿಂದಂತೂ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ ಆಯಾ ವರ್ಷದ ಸಾಹಿತ್ಯವನ್ನು ಸಮೀಕ್ಷಿಸಿ ಪ್ರಕಟಿಸುವ ಒಂದು ಹೊಣೆಗಾರಿಕೆಯ ಯೋಜನೆಯನ್ನು ನಿರ್ವಹಿಸುತ್ತ

ಬಂದಿದೆ. ಹೀಗಾಗಿ ಸಮೀಕ್ಷೆಯ ವಿಧಾನವೊಂದು ಸುಮಾರಾಗಿ ಒಪ್ಪಿತವಾಗಿ ಬಳಕೆಯಾಗುತ್ತಿದೆ. ಇದರಂತೆ ಒಂದು ನಿರ್ದಿಷ್ಟ ಅವಧಿಯ ಕೃತಿಗಳ ಪ್ರತ್ಯೇಕ ಸಮೀಕ್ಷೆ ಒಂದು ಬಗೆಯಾದರೆ ಒಟ್ಟು ಸಾಹಿತ್ಯದ ಹಿಂದಿನ ಪ್ರೇರಣೆಗಳ ಅವಲೋಕನ ಇನ್ನೊಂದು ಬಗೆ. ಈ ಲೇಖನದಲ್ಲಿ ಎರಡನೇ ವಿಧಾನವನ್ನು ಅನುಸರಿಸಲಾಗಿದೆ.

ನವೋದಯ ಮತ್ತು ಪ್ರಗತಿಶೀಲ ಸಾಹಿತ್ಯ ಮಾರ್ಗಗಳ ಜೊತೆಗೆ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಮೊದಲಾಗಿ ಅನಂತರ ಬೆಳೆದ ನವ್ಯ ಸಾಹಿತ್ಯಮಾರ್ಗ ಇವು ಮೂರು ಈ ಇಪ್ಪತ್ತೈದು ವರ್ಷಗಳಲ್ಲಿ ಒಡಗೂಡಿ ಸಾಹಿತ್ಯವನ್ನು ಸೃಷ್ಟಿಸಿವೆ. ಮೇಲುನೋಟಕ್ಕೆ ಇವು ಒಂದಾದಮೇಲೊಂದರಂತೆ ಉಗಮಗೊಂಡಂತೆ ತೋರಿದರೂ ಯಾವ ಸಾಹಿತ್ಯ ಮಾರ್ಗವೂ ತನ್ನ ಸಾಧ್ಯತೆಯನ್ನು ಪೂರ್ಣವಾಗಿ ಕಳೆದುಕೊಂಡಂತೆ ಕಾಣುವುದಿಲ್ಲ. ಕರ್ನಾಟಕ ನವೋದಯದೊಡನೆ ನಾಡಿನ ವಿವಿಧ ಸಾಂಸ್ಕೃತಿಕ ಕೇಂದ್ರಗಳಲ್ಲಿ ಗರಿಗಟ್ಟಿಕೊಂಡು ಬೆಳೆದ ನವೋದಯ ಸಾಹಿತ್ಯ ಮಾರ್ಗದ ಸಾಧನೆ ಅಗಾಧವಾದುದು. ಪ್ರಗತಿಶೀಲರು ಅದರ ವಿರುದ್ಧ ಹೂಡಿದ ಚಳುವಳಿಯು ಹೆಚ್ಚು ತಾತ್ವಿಕ ಸ್ವರೂಪದ್ದು ಮಾತ್ರವಾಗಿರುವಂತೆ ಈಗ ಕಾಣುತ್ತದೆ. ನವ್ಯ ಸಾಹಿತ್ಯದ ಉಗಮ ಯಾವ ಕಾರಣದಿಂದೇ ಆಗಿರಲಿ, ಅದೂ ಕೂಡ ನವೋದಯದ ಸತ್ವ ತೀರಿತೆಂಬ ಸಂಗತಿಯನ್ನು ಚಿಂತನೆಯಾಗಿ ಮಂಡಿಸಲು ಸಾಧ್ಯವಾಯಿತೇ ಹೊರತು ವಸ್ತುಸ್ಥಿತಿಯಲ್ಲಿ ಆ ನವೋದಯ ಮಾರ್ಗ ತನ್ನ ಅದಮ್ಯ ಕ್ರಿಯಾಶೀಲತೆಯನ್ನು ಪ್ರಕಟಿಸುತ್ತಲೇ ಬಂದಿದೆ. ಸಾಹಿತ್ಯ ಕೃತಿಯು ಜೀವನದ ವಿಸ್ತರಣವೆಂದು ತಿಳಿಯುವ ಈ ಮಾರ್ಗದ ಬರೆಹಗಾರರು ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಮೌಲಿಕವಾದ ಬರೆಹಗಳನ್ನು ನೀಡಿದ್ದಾರೆ.

ಪ್ರಗತಿಶೀಲರ ಸಾಮಾಜಿಕ ಕಾಳಜಿಗಳು ಸಾಹಿತ್ಯಕೃತಿಗಳಲ್ಲಿ ಅಭಿವ್ಯಕ್ತವಾಗುವ ಕ್ರಮವು ನವ್ಯ ಸಾಹಿತ್ಯ ಮಾರ್ಗದಿಂದ ಟೀಕೆಗೆ ಒಳಗಾಗಿತ್ತು. ಅವರ ಕಾದಂಬರಿಗಳು ಸಾಮಾಜಿಕ ಸಮಸ್ಯೆಗಳನ್ನು ತೀರಾ ಸರಳಗೊಳಿಸಿ ಅಥವಾ ಅತಿರಂಜಿತಗೊಳಿಸಿ ನೋಡುತ್ತವೆ ಎಂಬ ಮಾತು ಕೇಳಿಬಂದಿತ್ತು. ಪ್ರಗತಿಶೀಲ ಬರೆಹಗಾರರ ಮಾರ್ಗವು ತಾತ್ಕಾಲಿಕವಾಗಿ ನಿರಾಕರಣೆಗೊಂಡರೂ ಅವರು ರೂಪಿಸಿಕೊಟ್ಟ ಕಥಾ ನಿರೂಪಣಾ ಕ್ರಮ, ಸಂಭಾಷಣಾ ರಚನೆಯ ಬಗೆ ಮಾತ್ರ ಈ ದಿನಗಳವರೆಗೂ ಹಲವು ಬರೆಹಗಾರರಿಗೆ ಮಾದರಿಗಳನ್ನು ಒದಗಿಸಿವೆ. ಅದರಲ್ಲೂ ಸಮೂಹ ಮಾಧ್ಯಮಗಳಲ್ಲಿ ಕೆಲಸ ಮಾಡುವ ಬರೆಹಗಾರರಿಗೆ ಪ್ರಗತಿಶೀಲರ ಮಾದರಿ ಅನುಕರಣೀಯವಾಗಿ ಕಂಡಿದೆ. ಇದೂ ಅಲ್ಲದೆ 1975ರ ಸುಮಾರಿಗೆ ಮತ್ತೊಮ್ಮೆ ಪ್ರಗತಿಶೀಲ ಸಾಹಿತ್ಯ ಮಾರ್ಗದ ಪುನರುತ್ಥಾನದ ಮಾತು ಬಲವಾಯಿತು. ಸಾಮಾಜಿಕ ವೈರುಧ್ಯಗಳು ಬಲಗೊಂಡು ನಿಂತು, ಆ ವೇಳೆಯಲ್ಲಿ ಪ್ರಗತಿಶೀಲರು ಸಾಹಿತ್ಯದ ಜವಾಬ್ದಾರಿಯನ್ನು ಕುರಿತು ಮರುಚಿಂತನ ನಡೆಸಿದರು. ಈ ಚಿಂತನೆಯ ಪರಿಣಾಮವೂ ಪೂರಕವಾಗಿ ಒಟ್ಟಾರೆ ಸಾಹಿತ್ಯಕ ಸನ್ನಿವೇಶದಲ್ಲಿ ದಮನಗೊಂಡು ಸಾಮಾಜಿಕ ಸ್ವರದ ಅಭಿವ್ಯಕ್ತಿಗೆ ಮನ್ನಣೆ

ದೊರಕಿತು. ಹೀಗಿದ್ದರೂ ಈ ಹೊಸ ಆಕಾರದ ಪ್ರಗತಿಶೀಲತೆಯಲ್ಲಿ ಸಾಹಿತ್ಯ ತಾನು ಚಿತ್ರಿಸುವ ಸಮಸ್ಯೆಯನ್ನು ಅನುಭವದ ತುಣುಕಾಗಿ ನೀಡುವ ಯತ್ನ ಮಾತ್ರ ಮುಖ್ಯವಾಗಿ ಕಾಣುತ್ತಿದೆ. ಈ ಚಿತ್ರಣ ಜೀವನದ ಭಾಗವಾಗಿ ಕಾಣುವುದಿಲ್ಲ. ಅಂದರೆ ಸಾಹಿತಿಯು ಆಯ್ದುಕೊಳ್ಳುವ ಮಾರ್ಗವೆಂದರೆ ತನ್ನ ವ್ಯಕ್ತಿತ್ವವನ್ನು ನಿರ್ಲಿಪ್ತಗೊಳಿಸಿಕೊಂಡು ಸಮಸ್ಯೆಯ ವಿವರಗಳನ್ನು ಮಂಡಿಸುತ್ತಾ ಹೋಗುವುದು. ಇದರಿಂದ ನಿರೂಪಕನಿಗೆ ದೊರಕುವ ಪ್ರಯೋಜನಗಳೇನೆ ಇರಲಿ, ಸಮಸ್ಯೆಯ ಚಿತ್ರಣ ಮಾತ್ರ ಅಧಿಕೃತವಾಗುತ್ತಿಲ್ಲ. ಜೊತೆಗೆ ಇಡೀ ಸಮಸ್ಯೆಯನ್ನು ವ್ಯಕ್ತಿತ್ವದ ಮೂಲಕ ಕಾಣುವ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವಂತಿದೆ. ಭಾಷಣ ಮತ್ತು ಸಾಹಿತ್ಯಕೃತಿಗಳ ನಡುವೆ ಅಂತರ ಕಡಿಮೆಯಾಗುತ್ತಿದೆ. ಈ ಬರೆಹಗಳು ತಾತ್ಕಾಲಿಕ ವಾದ ಉದ್ವೇಗಗಳಿಗೆ ಕಾರಣವಾಗಬಹುದಾದರೂ ಓದುಗ ಸಮುದಾಯದ ಪ್ರಜ್ಞೆ ಯನ್ನು ಕಲಕಬಲ್ಲ, ಬೆಳೆಸಬಲ್ಲ ಸಾಮರ್ಥ್ಯಗಳನ್ನು ಪಡೆದಿಲ್ಲ.

ನವ್ಯಸಾಹಿತ್ಯ ಮಾರ್ಗದ ಕಳೆದ ಇಪ್ಪತ್ತೈದು ವರ್ಷದಲ್ಲಿ ಸಾಹಿತ್ಯಕ ವಾಗ್ವಾದ ಗಳಲ್ಲಿ ಮುಂಚೂಣಿಯಲ್ಲಿದೆ. ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಸೃಜನಶೀಲತೆಯನ್ನು ಪ್ರಕಟಿಸುತ್ತಲೇ ಬಂದ ಈ ಮಾರ್ಗದ ಪರ ಹಾಗೂ ವಿರುದ್ಧವಾದ ಪಂಥಗಳು ಹಲವು ವೇದಿಕೆಗಳಲ್ಲಿ ಮುಖಾಮುಖಿಯಾಗಿವೆ. ಸಾಹಿತ್ಯ ರಚನೆಯನ್ನು ಬುದ್ಧಿ ಪೂರ್ವಕ ಚಟುವಟಿಕೆ ಎಂದು ತಿಳಿಯುವ ಈ ನವ್ಯ ಮಾರ್ಗ, ಸಾಹಿತ್ಯ ರೂಪದಲ್ಲಿ ಮೂಡಿಸಿದ ಖಾಚಿತ್ಯ ಗಮನಾರ್ಹ. ಧ್ಯಾನಿತ ಕ್ರಿಯೆಯಾಗಿ ಕೃತಿಯೊಂದು ಮೂಡು ವುದರಿಂದ ಅದರ ಭಾಷಿಕ ವಿವರಗಳನ್ನು ಒಟ್ಟು ಪರಿಣಾಮಕ್ಕೆ ತಕ್ಕಂತೆ ರೂಪಿಸುವಲ್ಲಿ ಯತ್ನ ಸ್ಪಷ್ಟವಿದೆ. ಕೃತಿಯು ಭಾವಾನುಭವಕ್ಕೆ ಪ್ರಚೋದಕವಾಗುವ ಬದಲು ಚಿಂತನಾತರಂಗಗಳಿಗೆ ಕಾರಣವಾಗುವುದೇ ಹೆಚ್ಚು ಸಂಭವನೀಯ. ಹೀಗಾಗಿ ಓದುಗ ಕೃತಿಯು ನೀಡುವ ಅನುಭವವನ್ನು ಪಡೆಯುವ ಬಗೆ ಇಲ್ಲಿ ಬೇರೆ. ಬುದ್ಧಿ, ತರ್ಕ ಗಳಿಗೆ ದಕ್ಕದಿದ್ದರೂ ಅದನ್ನು ದಾಟಿ ಚಿತ್ತವನ್ನು ತನ್ನಡೆಗೆ ಕೃತಿಯು ಎಳೆದುಕೊಳ್ಳುವ ಅನುಭವಕ್ಕಿಂತ ಇಲ್ಲಿ ಅತ್ಯಂತ ಎಚ್ಚರದ ಸ್ಥಿತಿಯಲ್ಲಿ ಪ್ರಚೋದಿತ ಆಲೋಚನಾ ತರಂಗಗಳನ್ನು ಸ್ವೀಕರಿಸುವುದು ಮುಖ್ಯವಾಗುತ್ತದೆ. ಇದರ ಪರಿಣಾಮಗಳು ಈಗಾಗಲೇ ಸಾಕಷ್ಟು ಚರ್ಚಿತವಾಗಿವೆ.

ನವ್ಯಸಾಹಿತ್ಯ ಮಾರ್ಗ ಎದುರಿಸಿದ ಇನ್ನೊಂದು ಸಮಸ್ಯೆ : ಸುತ್ತಲೂ ನೂರಕ್ಕೆ ಎಪ್ಪತ್ತು ಮಂದಿ ಅಕ್ಷರ ತಿಳಿಯದವರು ಇದ್ದು, ಅಕ್ಷರ ತಿಳಿದವರಲ್ಲೂ ಓದುವ ಹಾಗೂ ಓದುವ ಆಸಕ್ತಿಯ ಜನರು ಕೆಲವಾರು ಸಾವಿರವನ್ನೂ ದಾಟಲಾರದು. ಹೀಗಿರುವಾಗ ಸಂವಹನದ ಮಾತು ನಿರರ್ಥಕವಾಗುತ್ತದೆ. ಇಂಥಲ್ಲಿ ಸಾಹಿತ್ಯದ ಹೊಸ ಜವಾಬ್ದಾರಿಯನ್ನು ಕುರಿತ ಚಿಂತನೆಗಳು ಹಲವು ದಿಕ್ಕನ್ನು ಹಿಡಿಯಬಹುದು. ನವ್ಯಸಾಹಿತ್ಯ ಮಾರ್ಗ ಅನುಸರಿಸಿದ ವಿಚಾರ ಸರಣಿ ಇದು : ಸಾಹಿತ್ಯಕ್ಕೆ,

ಸಾಮಾಜಿಕ ಸ್ತರಗಳ ನಡುವಣ ಅಂತರವು ಅಗಾಧವಾಗಿರುವ ವಾಸ್ತವ ಸ್ಥಿತಿಯನ್ನು ಕೇವಲ ಕೃತಿರಚನೆಯ ಮೂಲಕ ನಿರಾಕರಿಸುವುದು ಸಾಧ್ಯವಿಲ್ಲ. ಎಂದರೆ ಓದುಗ ಸಮುದಾಯದ ವಿಸ್ತರಣೆ ಸಾಹಿತಿಯ ಹಿಡಿತವನ್ನು ಮೀರಿದ ಸಂಗತಿ. ಹೀಗಾಗಿ ಓದ ಬಲ್ಲವರಲ್ಲೇ ತನ್ನ ಆಸಕ್ತಿಯ ವಲಯವನ್ನು ರೂಪಿಸಿಕೊಳ್ಳುವುದು ಯೋಗ್ಯವಾದ ಸಂಗತಿ. ಈ ನಿಲುವು ಮುಂದೆ ಟೀಕೆಗೆ ಒಳಗಾಯಿತೆಂಬುದನ್ನು ನಾವು ಗಮನಿಸ ಬೇಕು. ಕೃತಿರಚನೆಯ ಮೂಲಕವೇ ತಾತ್ವಿಕವಾದ ಚಿಂತನೆಗಳ ಆಕಾರವನ್ನು ಗ್ರಹಿಸಲು ನವ್ಯಸಾಹಿತ್ಯ ಮಾರ್ಗ ಬರೆಹಗಾರರಿಗೆ ಅನುವು ಮಾಡಿಕೊಟ್ಟುದರಿಂದ ಕೃತಿರಚನೆಯ ಅನಂತರದ ಸಮಸ್ಯೆಗಳ ಬಗ್ಗೆ ಬರೆಯುವವರು ಹೆಚ್ಚು ನಿರಾಸಕ್ತರಾಗು ವುದು ಸಾಧ್ಯವಾಯಿತು. ಎಂದರೆ ಬರಹಗಾರ ಮತ್ತು ಬರವಣಿಗೆಯ ಸಂಬಂಧವೇ ಸಾಹಿತ್ಯ ಕೃತಿಯ ರೂಪಣ ಕ್ರಿಯೆಯಲ್ಲಿ ಮುಖ್ಯ ಪಾತ್ರವಹಿಸತೊಡಗಿತು. ಇದರಿಂದ ಬರಹಗಾರನಿಗೆ ದೊರೆತ ಅಸೀಮ ಸಾಧ್ಯತೆಗಳು ನವ್ಯ ಮಾರ್ಗದ ಸಾಧನೆಗಳಲ್ಲಿ ಒಂದಾಗಿದೆ. ಆ ಮಾರ್ಗದ ಮುಂದುವರೆದ ಹಂತದಲ್ಲಿ ಹಾಗೂ ಬದಲಾದ ಹಂತ ದಲ್ಲಿ ಈ ಸಾಧ್ಯತೆಗಳನ್ನು ಪಡೆಕೊಂಡ ಬರಹಗಾರರೇ ಕ್ರಿಯಾಶೀಲರಾಗಿರುವುದನ್ನು ಕಾಣುತ್ತೇವೆ.

ಈ ಅವಧಿಯ ಕೊನೆಯ ಐದಾರು ವರ್ಷಗಳಲ್ಲಿ ಸಾಹಿತ್ಯಕ ಸನ್ನಿವೇಶ ಹೆಚ್ಚು ತಾತ್ತ್ವಿಕ ಗೊಂದಲಗಳಲ್ಲಿ ತುಂಬಿದ್ದು ಕಾಣುತ್ತದೆ. ಸಾಹಿತ್ಯ ಮಾರ್ಗಗಳು ಮುಖಾಮುಖಿಯಾಗಿ ಪರಸ್ಪರ ವಾಗ್ವಾದಗಳಲ್ಲಿ ತೊಡಗಿದ್ದು, ಸೃಜನಶೀಲ ವಾತಾವರಣವಲ್ಲಿಯೂ ತನ್ನ ಪರಿಣಾಮವನ್ನು ಬೀರಿತು. ಇದಲ್ಲದೆ ಕೃತಿ, ಕೃತಿಕಾರ ಇವರ ಸಂಬಂಧವಲ್ಲಿ ಕೃತಿಕಾರನ ಚಿಂತನೆಗಳು (ಚರ್ಚೆಯ ಮಟ್ಟಿಗೆ ಕೃತಿಯ ಚಿಂತನೆ ಗಳು) ಎಷ್ಟರ ಮಟ್ಟಿಗೆ ಸಾಮಾಜಿಕವಾಗಿ ಸಾಧುವಾಗಿವೆ: ಪ್ರಸ್ತುತವಾಗಿವೆ ಎಂಬ ಪ್ರಶ್ನೆ ಮುಖ್ಯವಾಗಿ, ಒಂದೇ ಸಮನೆ ತಮ್ಮ ದೃಷ್ಟಿಕೋನದ ಒಳಗೆ ಬರದ ಲೇಖಕರನ್ನು ಅವರ ಬರಹಗಳನ್ನು ನಿರಾಕರಿಸುವ ಪ್ರವೃತ್ತಿಯೊಂದು ಬೆಳೆಯುತ್ತಾ ಹೋಯಿತು. ಸೃಜನಶೀಲತೆಯ ಮೇಲೆ ಹೀಗೆ ಅವ್ಯಾಹತವಾಗಿ ನಡೆದ ಧಾಳಿಯಿಂದಾಗಿ ಹಲವು ಲೇಖಕರ ಆತ್ಮಪ್ರತ್ಯಯವೇ ಕುಗ್ಗಿಹೋಗಿದ್ದರೆ ಅದರಲ್ಲಿ ಆಶ್ಚರ್ಯವಿಲ್ಲ. ಆದರೆ ಒಟ್ಟಾರೆ ಪರಿಸ್ಥಿತಿ ಬೇರೆಯ ತಿರುವನ್ನು ಪಡೆದದ್ದನ್ನು ನಾವು ಮುಂದೆ ನೋಡುತ್ತೇವೆ. ಲೇಖಕನು ಕೃತಿಯಲ್ಲಿ ಅಪ್ರಸ್ತುತ ಚಿಂತನೆಯನ್ನು ಮಂಡಿಸುತ್ತಾನೆಂದು ವಾದಿಸಿ ಟೀಕಿಸುವುದೇ ಒಂದು ನಿಟ್ಟಿನಲ್ಲಿ ಪ್ರಶ್ನಾರ್ಹ ನಿಲುವು. ಏಕೆಂದರೆ ಶ್ರೇಷ್ಠ ಕೃತಿಯ ನಿಲುವು ನಾವು ತಿಳಿಯುವ ಹಾಗೆ ಏಕಾತ್ಮಕವಾಗಿರುವುದಿಲ್ಲ. ಬಹುಮುಖಿಯಾದ ಪರಿಣಾಮ ಸಾಧ್ಯವಿರುವ ಕೃತಿಯನ್ನು ಅದರ ಒಂದು ಸಾಧ್ಯತೆಗಾಗಿ ನಿರಾಕರಿಸುವುದು ಸಾಧ್ಯವಿಲ್ಲ. ಅಲ್ಲದೆ ಅಪ್ರಸ್ತುತ ಚಿಂತನೆಗಳಿರುವ ಕೃತಿಯೂ ಕೂಡ ನಮ್ಮ ವಾಸ್ತವದ ಒಂದು ಭಾಗವೆಂದೇ ನಾವು ಗ್ರಹಿಸಬಾರದೇಕೆ? ಮತ್ತೂ ಹೇಳುವುದಾದರೆ ಹೀಗೆ ಅಪ್ರಸ್ತುತ ಚಿಂತನೆಗಳ ಕೃತಿಗಳ ಪ್ರತಿಗಾಮಿಯಾಗಿ ಸಮಾಜವನ್ನು ಹಿಮ್ಮೊಗ

ಚಲನೆಗೆ ಹಚ್ಚುತ್ತವೆ ಎಂದು ಭಾವಿಸುವುದು ಸದ್ಯದಲ್ಲಿ ಸಾಹಿತ್ಯ ಮತ್ತು ಅದರ ಸಾಮಾಜಿಕ ಪರಿಣಾಮಗಳನ್ನು ಕುರಿತಂತೆ ಸರಿಯಾದ ತಿಳಿವಳಿಕೆ ಇಲ್ಲದ ಮಾತು. ಅದೇನೆ ಇರಲಿ ; ಲೇಖಕನ ಕೃತಿಗಳನ್ನು ಅವುಗಳ ಮೌಲ್ಯಗಳಿಗಾಗಿ ಸಮರ್ಥಿಸುವ ಹಾಗೂ ಖಂಡಿಸುವ ಪ್ರವೃತ್ತಿ ಬಲವಾಗಿದೆ. ಈ ಪ್ರವೃತ್ತಿಯಿಂದಾಗಿ ಒಂದು ಕಡೆ ಅಸಹನೀಯ ಪರಿಭಾಷೆಯ ವಿಮರ್ಶೆಗಳು ಹುಟ್ಟುತ್ತಿದ್ದರೆ ಇನ್ನೊಂದು ಕಡೆ ಅಳತೆಗೆ ತಕ್ಕ ಬರೆಹಗಾರರು ಕೃತಿ ರಚಿಸುತ್ತಿದ್ದಾರೆ. ಈ ಪರಿಸ್ಥಿತಿಯನ್ನು ಇಕ್ಕಿ ಮೆಟ್ಟುವಂತೆ ನಮ್ಮ ನಿಜವಾದ ಸೃಜನಶೀಲ ಲೇಖಕರು ಎಚ್ಚರವನ್ನು ಉಳಿಸಿ ಕೊಂಡಿದ್ದಾರೆಂಬುದೇ ನಮಗೆ ನಿರಾಳವನ್ನು ತರುವ ಸಂಗತಿ.

ಪ್ರಸಾರಮಾಧ್ಯಮ ಮತ್ತು ಸಮೂಹ ಮಾಧ್ಯಮಗಳ ಬೆಳವಣಿಗೆ :

ಕನ್ನಡ ಸಾಹಿತ್ಯ ಕಳೆದ ಇಪ್ಪತ್ತೈದು ವರ್ಷದಲ್ಲಿ ಹಿಂದೆಂದು ಕಾಣದ ಕೆಲವು ಹೊಸ ಸಮಸ್ಯೆಗಳನ್ನು ಎದುರಿಸಿದೆ. ಆ ಸಮಸ್ಯೆಗಳ ಸ್ವರೂಪ ಕೊಂಚ ಮಾತ್ರ ಈಗ ತಿಳಿಯತೊಡಗಿದೆ. ಮುಂದಿನ ದಿನಗಳಲ್ಲಿ ಅದೇ ಸಾಹಿತ್ಯ ಕ್ಷೇತ್ರದ ಮುಖ್ಯ ಸಮಸ್ಯೆಯಾಗಲಿದೆ. ಸಾಮಾಜಿಕ ಪ್ರಗತಿಯ ಪರಿಣಾಮವಾಗಿ ಪ್ರಸಾರ ಮತ್ತು ಸಮೂಹ ಮಾಧ್ಯಮಗಳು ಬಲವಾಗಿ ಬೇರುಬಿಡತೊಡಗಿವೆಯಷ್ಟೆ. ಮುದ್ರಣ ಹೊಸ ಸಂಗತಿಯಲ್ಲವಾದರೂ ಅದರ ಆಧುನಿಕ ಸ್ವರೂಪದಿಂದಾಗಿ ಪತ್ರಿಕೆಗಳು ತಮ್ಮ ಜಾಲವನ್ನು ದೊಡ್ಡದಾಗಿಸಲು ಸಾಧ್ಯವಾಗಿದೆ. ಜೊತೆಗೆ ರೇಡಿಯೊ ಮತ್ತು ಸಿನಿಮಾಗಳು ಸಮೂಹ ರಂಜನೆ ಮತ್ತು ಸಾಮುದಾಯಿಕ ಶಿಕ್ಷಣದ ಮಾಧ್ಯಮ ಗಳಾಗಿ ಅನಕ್ಷರಸ್ಥರನ್ನು ತಮ್ಮ ಹಿಡಿತದೊಳಗೆ ತೆಗೆದುಕೊಳ್ಳುವುದು ಸಾಧ್ಯವಾಗಿದೆ. ಈ ಮಾಧ್ಯಮಗಳು ಒಂದು ಕಡೆ ಸಾಹಿತ್ಯದ ಬೆಳವಣಿಗೆಗೆ ನೆರವಾಗುವ ಬಗೆಯನ್ನು ತೋರಿದರೆ ಇನ್ನೊಂದು ಕಡೆ ತಮ್ಮ ಆಂತರಿಕ ಸ್ವರೂಪದಿಂದ ಸಾಹಿತ್ಯವೆಂಬ ಅಭಿವ್ಯಕ್ತಿ ಮಾಧ್ಯಮವು ಭ್ರಷ್ಟಗೊಳ್ಳಲು ಕೂಡ ಕಾರಣವಾಗಿವೆ. ಪರಸ್ಪರ ವಿರುದ್ಧ ವಾದ ಈ ಎರಡೂ ಪ್ರಭಾವಗಳನ್ನು ನಾವು ಈ ವರ್ಷಗಳಲ್ಲಿ ಕಾಣುತ್ತಾ ಬಂದಿದ್ದೇವೆ.

ಪತ್ರಿಕೆಗಳು ತಮ್ಮ ಚೌಕಟ್ಟಿನಲ್ಲಿ ಸಾಹಿತ್ಯದ ಪ್ರಸಾರಕ್ಕೆ ನೆರವಾದವು. ಆದರೆ ಅದೇ ಚೌಕಟ್ಟಿನಲ್ಲಿ ತನ್ನ ಅವಶ್ಯಕತೆಗಳಿಗೆ ಅನುಗುಣವಾದ ಸಾಹಿತ್ಯದ ಬೆಳವಣಿಗೆಗೆ ಮಾತ್ರ ಕಾರಣವಾದವು. ಈಚಿನ ದಿನಗಳಲ್ಲಿ ಇಂಥ, ಪತ್ರಿಕೆಯ ಅವಶ್ಯಕತೆಗಳಿಂದ ಪ್ರೇರಿತವಾಗಿ ಹಾಗೂ ಆ ಮಾದರಿಗಳನ್ನು ಅನುಸರಿಸಿ ಬರೆದ ಕೃತಿಗಳನ್ನು ಜನಪ್ರಿಯ ಸಾಹಿತ್ಯ ಎಂದು ವರ್ಗೀಕರಿಸಲಾಗುತ್ತಿದೆ. ಕಳೆದ ಎರಡು ದಶಕಗಳಲ್ಲಿ ಈ ಬಗೆಯ ಸಾಹಿತ್ಯ ಅಗಾಧ ಪ್ರಮಾಣದಲ್ಲಿ ಬೆಳೆಯುತ್ತಾ ಬಂದಿರುವುದನ್ನು ಯಾರಾದರೂ ಗಮನಿಸಬಹುದಾಗಿದೆ. ಜನಪ್ರಿಯ ಸಾಹಿತ್ಯ ತನ್ನ ಸಂವಹನಶೀಲತೆಯಿಂದ ಅಧಿಕ ಪ್ರಸಾರವನ್ನು ಪಡೆದುಕೊಂಡದ್ದು ನಿಜ. ಪ್ರಸಾರವೇ ಮುಖ್ಯವಾಗಿರುವ ಪತ್ರಿಕೆಗಳೂ ಇದಕ್ಕೆ ಪೂರಕವಾಗಿವೆ. ಆದರೆ ಈ ಬಗೆಯ ಸಾಹಿತ್ಯ, ಆಶಯ ಮತ್ತು

ಅಭಿವ್ಯಕ್ತಿಗಳೆರಡರಲ್ಲೂ ತಾತ್ಕಾಲಿಕವಾದ ಹಾಗೂ ರಂಜನಾ ಪ್ರಧಾನವಾದ ಪರಿಣಾಮ ಗಳಿಗೆ ಮಾತ್ರ ತನ್ನ ಉದ್ದೇಶವನ್ನು ಸೀಮಿತಗೊಳಿಸಿಕೊಂಡಿತು. ಈ ಬರೆಹಗಳನ್ನು ನೋಡಲು ನಮಗೆ ಬೇರೆಯದೆ ಆದ ವಿಮರ್ಶಾ ಮೌಲ್ಯಗಳು ಬೇಕಾಗಿವೆ. ನಮ್ಮ ಸಾಮಾಜಿಕ ಪರಿಸ್ಥಿತಿಯ ಹಲವಾರು ವೈರುಧ್ಯಗಳನ್ನು ಕುರಿತಂತೆ ಒಂದು ಸ್ತರದ ಚಿಂತನೆಗಳು ಬರೆಹಗಾರರ ಅರಿವಿಗೂ ಬರದಂತೆ ಮೂಡಿರುತ್ತವೆ. ಅದಕ್ಕಿಂತ ನಮಗಿಲ್ಲಿ ಮುಖ್ಯವಾದ ಸಂಗತಿ ಎಂದರೆ ಈ ಬಗೆಯ ಬರೆಹಗಳು ನಿಜವಾದ ಸೃಜನಶೀಲ ಕೃತಿಗಳಿಗೆ ಸವಾಲಾಗಿ ಬೆಳೆದದ್ದು. ಎಂದರೆ ಶ್ರೇಷ್ಠವಾದದ್ದು ಮತ್ತು ಆಕರ್ಷಣೀಯವಾದದ್ದು ಇವೆರಡರ ನಡುವೆ ಇರುವ ವ್ಯತ್ಯಾಸವನ್ನು ಗುರುತಿಸಲು ಓದುಗನಿಗೆ ಸಾಧ್ಯವಾಗದ ಪರಿಸ್ಥಿತಿಯೊಂದು ಈಗ ನಿರ್ಮಾಣವಾಗಿದೆ. ಹುಸಿ ಅಧಿಕೃತತೆಯನ್ನು ಪ್ರಕಟಿಸುವ ಜನಪ್ರಿಯ ಸಾಹಿತ್ಯಕೃತಿಗಳು ತಮ್ಮ ಆಕಾರದ ಸರಳತೆ ಹಾಗೂ ವಿನ್ಯಾಸದ ಸೌಲಭ್ಯದಿಂದಾಗಿ ಹೆಚ್ಚು ಓದುಗರನ್ನು ಸೆಳೆದುಕೊಳ್ಳು ವುವೇ ಅಲ್ಲದೆ, ಆ ಬಗೆಯ ಓದಿಗೆ ಮರುಳಾದ ಓದುಗರು ನಿಧಾನವಾಗಿ ಉತ್ತಮ ಕೃತಿಗಳಲ್ಲೂ ಆ ಮಾದರಿಗಳನ್ನೇ ಬಯಸತೊಡಗುತ್ತಾರೆ. ಕನ್ನಡದ ಹಲವು ಬರೆಹಗಾರರೂ ಅದರಲ್ಲೂ ನವ್ಯ ಪಂಥದವರು ಈಚಿನ ದಿನಗಳಲ್ಲಿ ಈ ಜನಪ್ರಿಯ ಮಾದರಿಗಳೊಡನೆ ಪ್ರಯೋಗ ನಡೆಸಲು ಯತ್ನಿಸಿದ್ದಾರೆ. ಆದರೆ ಇದು ಯಶಸ್ವಿ ಯಾಗದ ಪ್ರಯೋಗ.

ಪತ್ರಿಕೆ, ಸಿನಿಮಾ ಮತ್ತು ರೇಡಿಯೋಗಳು ಪೋಷಿಸಿರುವ ಜನಪ್ರಿಯ ಸಾಹಿತ್ಯದ ಮಾದರಿಗಳು ತಂದೊಡ್ಡಿರುವ ಸವಾಲುಗಳನ್ನು ನಮ್ಮ ಸೃಜನಶೀಲ ಲೇಖಕರಲ್ಲಿ ಹಲವರು ಸರಿಯಾಗಿಯೇ ಗ್ರಹಿಸಿದ್ದಾರೆ ಮಾತ್ರವಲ್ಲ, ಆ ಸವಾಲುಗಳನ್ನು ಎದುರಿಸಲು ತಕ್ಕಂತೆ ಕೃತಿರಚನೆಯನ್ನೂ ನಡೆಸಿದ್ದಾರೆ. ಮಾಧ್ಯಮಗಳನ್ನು ಭ್ರಷ್ಟಗೊಳಿಸಿಕೊಳ್ಳದೆ ಸೃಜನಶೀಲತೆಯ ಸಾಮರ್ಥ್ಯವನ್ನು ಪ್ರಕಟಿಸಿದ ಹಲವಾರು ಕೃತಿಗಳು ಎಲ್ಲ ಪ್ರಕಾರ ಗಳಲ್ಲೂ ಕಳೆದ ನಾಲ್ಕು ವರ್ಷಗಳಲ್ಲಿ ಮೂಡಿರುವುದು ಒಂದು ಗಣನೀಯ ಸಂಗತಿ ಯಾಗಿದೆ.

ವಿವಿಧ ಸಾಹಿತ್ಯ ಪ್ರಕಾರಗಳ ಸಾಧನೆ :

ಕಾವ್ಯ : ನವ್ಯಕಾವ್ಯದ ಸ್ವರೂಪವನ್ನು ಕುರಿತು 1956ರ ವೇಳೆಗಾಗಲೇ ಮುಖ್ಯವಾದ ಚರ್ಚೆಗಳು ಹಾಗೂ ಪ್ರಯೋಗಗಳು ನಡೆದಿದ್ದುವು. ನವೋದಯ ಮಾರ್ಗವನ್ನು ನಿರಾಕರಿಸುವ ನೆಲೆಗಳಿಂದ ತನ್ನ ಉಗಮವನ್ನು ಕಂಡುಕೊಂಡು ಬೆಳೆದ ನವ್ಯಕಾವ್ಯ ಸುಮಾರು ಒಂದೂವರೆ ದಶಕಗಳವರೆಗೆ ತನ್ನ ಸಾಮರ್ಥ್ಯವನ್ನು ಪ್ರಕಟಿಸುತ್ತಲೇ ಬಂದಿತು. ಈ ಎರಡೂ ಕಾವ್ಯ ಮಾರ್ಗಗಳ ಕಾವ್ಯ ಸ್ವರೂಪವನ್ನು ಕುರಿತಂತೆ ಹಾಗೂ ಸಂಬಂಧಾಂತರಗಳನ್ನು ಕುರಿತಂತೆ ಈಗ ಮತ್ತೆ ಚರ್ಚಿಸುವುದು ಅನವಶ್ಯಕ. ನವ್ಯಕಾವ್ಯ ಮತ್ತು ಅದನ್ನು ಕುರಿತ ವಿಮರ್ಶೆ ಇವೆರಡೂ ಒಂದನ್ನೊಂದು ಅವಲಂಬಿಸಿದ್ದು ಒಂದು ಗಮನಾರ್ಹ ಸಂಗತಿ. ವಿಚಾರ ಅಥವಾ ತತ್ತ್ವಗಳನ್ನು

ಮೂರ್ತಾನುಭವದ ರೂಪಕಗಳಲ್ಲಿ ಕಾವ್ಯಭಾಷೆಗೆ ರವಾನಿಸುವ ನವ್ಯಕಾವ್ಯದ ಒಂದು ಬಗೆ ಸಹಜವಾಗಿಯೇ ಕಾವ್ಯಚರ್ಚೆಯನ್ನು ಬಯಸುವಂಥದೇ. ನೇರವಾದ ಭಾವಾನುಭವದ ಹಂತದ ಸಂವಹನವನ್ನು ಅದು ನಿರೀಕ್ಷಿಸುವುದಿಲ್ಲವಾಗಿ ಕಾವ್ಯದ ಓದು ಒಂದು ಬೌದ್ಧಿಕ ಕ್ರಿಯೆಯಾಗುವುದು ಅನಿವಾರ್ಯ. ಆದರೆ ನವ್ಯಕಾವ್ಯದಲ್ಲಿ ಹಲವು ಮಾದರಿಗಳಿವೆ. ಒಂದು ಮಾದರಿಯನ್ನು ಕುರಿತಂತೆ ನಿರೂಪಿಸಿದ ಲಕ್ಷಣ ಗಳನ್ನು, ಅದಕ್ಕೆ ಹೊಂದದ ಇತರ ಮಾದರಿಗಳಿಗೂ ಅನ್ವಯಿಸಲು ವಿಮರ್ಶಕರು ತೊಡಗಿದರು. ಈ ದೃಷ್ಟಿಯಲ್ಲಿ ನವ್ಯಕಾವ್ಯ ತೋರಿದಷ್ಟು ವ್ಯಾಪಕತೆಯನ್ನು ನವ್ಯ ವಿಮರ್ಶೆ ತೋರಲಿಲ್ಲ. ಕಾವ್ಯದ ಇತರ ಸಾಧ್ಯತೆಗಳನ್ನು ನಿರಾಕರಿಸಿತೇನೋ ಎಂಬಂತೆ ಇಕ್ಕಟ್ಟಿನ ಮಾನದಂಡಗಳನ್ನು ಅನ್ವಯಿಸಿ ನವ್ಯಕಾವ್ಯದ ಬಹುಮುಖತ್ವವನ್ನು ಅಲ್ಲಗಳೆಯಲಾಯಿತು. ಇದರಿಂದಾಗಿಯೇ ಕಾವ್ಯದ ಆಶಯ ಮತ್ತು ಭಾಷೆಗಳಲ್ಲಿ ವಿಮರ್ಶಕರಿಗೆ ಏಕತಾನತೆ ಕಂಡುಬಂದದ್ದರಲ್ಲಿ ಆಶ್ಚರ್ಯವಿಲ್ಲ. ಶಿಷ್ಟ ಕನ್ನಡದ ಐದು ಮಾತ್ರೆಯ ಲಯ ಹಾಗೂ ಮಿತ ವಿನ್ಯಾಸದ ವಾಕ್ಯರಚನೆ ಹಾಗೂ ಸಿದ್ಧಕಾವ್ಯ ಭಾಷೆ ಇವಿಷ್ಟಿರುವ ಕಾವ್ಯರೂಪೀ ರಚನೆಗಳು ಮೂಡಿಬರತೊಡಗಿದವು. ಆದರೆ ಆಡುಮಾತಿನ ಲಯಗಳ ಬೀಸನ್ನು, ಕನ್ನಡದ ವಿವಿಧ ಉಪಭಾಷೆಗಳ ರಾಚನಿಕ ವೈಶಿಷ್ಟ್ಯವನ್ನು ಕಾವ್ಯಭಾಷೆಗೆ ತರುವ ಪ್ರಯತ್ನಗಳು ನಡೆಯುತೊಡಗಿದ್ದಕ್ಕೆ ನಿದರ್ಶನ ಗಳಿವೆ. ವೈಚಾರಿಕ ಆಕೃತಿಗಳನ್ನು ಹಾಗೂ ವೈಯುಕ್ತಿಕ ಜಗತ್ತನ್ನು ವಸ್ತುವಾಗಿಸಿ ಕಾವ್ಯವನ್ನು ರಚಿಸುವ ಬಗೆಯೊಡನೆ, ಹಾಗೂ ಕೆಲವೊಮ್ಮೆ ಅದನ್ನು ವಿರೋಧಿಸಿ, ಹೊಸ ಬಗೆಯ ಕಾವ್ಯಪ್ರಯೋಗಗಳು ನಡೆದವು. ಇದೆಲ್ಲವೂ ಆದದ್ದು ಎಪ್ಪತ್ತರ ದಶಕದ ನಡುಭಾಗದಲ್ಲಿ ಇವುಗಳಲ್ಲಿ ಕೆಲವು ಈಗಾಗಲೇ ಇದ್ದ ನವ್ಯಕಾವ್ಯದ ಇತರ ಬಗೆಗಳ ಮುಂದುವರಿಕೆ ಹಾಗೂ ಹೊಸ ಸಾಧ್ಯತೆಗಳಾಗಿ ಕಂಡರೆ ಮತ್ತೆ ಕೆಲವು ಕಾವ್ಯವನ್ನು ಸಾಮಾಜಿಕ ವೈಷಮ್ಯಗಳನ್ನು ಜನತೆಗೆ ತಿಳಿಸಿಹೇಳಲು, ಅವರಲ್ಲಿ ಎಚ್ಚರ ವನ್ನು ಉಂಟುಮಾಡಲು ಬಳಸಬೇಕೆಂಬ ಆಸಕ್ತಿಯಿಂದ ಹುಟ್ಟಿದ್ದವು. ಇವರಲ್ಲಿ ಮೊದಲ ಬಗೆಯ ಪ್ರಯೋಗಗಳು ಕನ್ನಡ ಕಾವ್ಯಪರಂಪರೆಯ ಜೊತೆಗೆ ತಮ್ಮ ಸಂಬಂಧವನ್ನು ದಾಖಲು ಪಡಿಸಿಕೊಂಡು ಮೆಲುದನಿಯ ಕಾವ್ಯವನ್ನು ನೀಡುತ್ತಿವೆ. ಸಾಮಾಜಿಕ ಪ್ರತಿಭಟನೆಯನ್ನು ಹೊರಹಾಕುವ ಬಯಕೆಯ ಬಂಡಾಯಕಾವ್ಯ ಅಭಿವ್ಯಕ್ತಿ ಕಾಣದ ಜನಜೀವನದ ಮುಖಗಳನ್ನು 'ಎಚ್ಚರ'ದ ಸ್ಥಿತಿಯಿಂದ ಗ್ರಹಿಸಿ ಪ್ರಕಟಿಸುವ ಹಾದಿ ಹಿಡಿದಿದೆ. ಇದರ ಅಪರಿಚಿತ ಲಯಗಳು, ತಟ್ಟನೆ ಮುಜುಗರ ವನ್ನುಂಟುಮಾಡುವ ಮಾತಿನ ವರಸೆಗಳು ಕಾವ್ಯ ಮತ್ತು ಪ್ರತಿಭಟನೆಯನ್ನು ವಸ್ತುವಾಗುಳ್ಳ ಗದ್ಯದ ಅಂತರವನ್ನು ಕಡಿಮೆ ಮಾಡಿವೆ. ನವ್ಯಕಾವ್ಯದ ಬೆಳವಣಿಗೆ ಯಕ್ರಮದ ಪರಿಣಾಮವಾಗಿ ರೂಪಗೊಂಡ ಈ ಪ್ರಯೋಗಗಳು ಕೆಲವು ಕಡೆ ಮತ್ತೆ ಕಾವ್ಯದ ಪಾರಂಪರಿಕ ಆಕಾರವನ್ನೇ ಅವಲಂಬಿಸುವ ಆಸಕ್ತಿಯನ್ನು ಪ್ರಕಟಿಸುತ್ತಿರು ವುದು ಇನ್ನೊಂದು ಗಮನಾರ್ಹ ಸಂಗತಿ. ಹೀಗೆಂದಾಗ ಮತ್ತೆ ನವೋದಯ ಭಾವಗೀತೆಗಳ ಕಾಲ ಬಂದಿತೆಂದಲ್ಲ. ಆದರೆ ಕವನ ಮಂಡನೆಯ ಕ್ರಮದಲ್ಲಿ ಹೊರಗಿನ ರಾಚನಿಕ ಶಿಸ್ತನ್ನು ಮತ್ತೆ ಒಪ್ಪಿಕೊಳ್ಳುತ್ತಿರುವುದನ್ನು ನಾವೀಗ ಕಾಣುತ್ತಿದ್ದೇವೆ.

ನಾಟಕ : ಆರನೆಯ ದಶಕದಲ್ಲಿ ಹವ್ಯಾಸಿ ರಂಗಭೂಮಿ ರಾಜ್ಯದ ರಾಜಧಾನಿಯಲ್ಲಿ ಬಲವಾದ ಬೇರುಗಳನ್ನು ಬಿಡುತ್ತಾ ಹೋದಂತೆ ವೃತ್ತಿರಂಗಭೂಮಿಯ ಸ್ವರೂಪದಲ್ಲಿ ಬದಲಾವಣೆಗಳು ಕಾಣುತ್ತಾ ಹೋದವು. ನಾವಿಲ್ಲಿ ರಂಗಭೂಮಿಯನ್ನು ಕುರಿತಂತೆ ಹೆಚ್ಚು ಚರ್ಚೆ ಮಾಡಬೇಕಿಲ್ಲ. ಆದರೆ ಈ ಬದಲಾವಣೆಯ ಪರಿಣಾಮವಾಗಿ ಕನ್ನಡ ನಾಟಕರಚನೆಯ ಮೇಲೆ ಉಂಟಾದ ಪರಿಣಾಮಗಳ ಮಾತ್ರ ನಮ್ಮ ಗಮನಕ್ಕೆ ಬರತಕ್ಕದಾಗಿದೆ. ಹವ್ಯಾಸಿ ರಂಗಭೂಮಿಯ ಬೆಳವಣಿಗೆಯೊಡನೆ ಪ್ರಯೋಗ ಸಾಧ್ಯತೆಗಳಿರುವ ನಾಟಕರಚನೆ ಮುಂದಾಯಿತು. ಓದು ನಾಟಕಗಳಷ್ಟಕ್ಕೇ ತೃಪ್ತರಾಗದೇ ದೃಶ್ಯರೂಪದಲ್ಲಿ ವಿಸ್ತರಿಸಲು ಸಾಧ್ಯವಿದ್ದ ಕೃತಿಗಳನ್ನು ರಂಗಭೂಮಿಗಾಗಿ ರಚಿಸಿದರು. ನವ್ಯ ಸಾಹಿತ್ಯದ ಮುಖ್ಯ ಬರೆಹಗಾರರು ಹಲವರು ಸಾಹಿತ್ಯದ ವಿವಿಧ ಪ್ರಕಾರಗಳ ನಡುವಣ ಸಂಬಂಧ ಹಾಗೂ ವ್ಯತ್ಯಾಸಗಳ ಬಗ್ಗೆ ಹೊಂದಿದ್ದ ನಿಲುವುಗಳೂ ಕೂಡ ಇದರಿಂದಾಗಿ ಹೊರಬರಲು ಕಾರಣವಾಯಿತು. ಪ್ರಕಾರಗಳ ನಡುವಣ ಗೆರೆಯನ್ನು ತೊಡೆಯಲು ತಮ್ಮ ಯತ್ನಗಳನ್ನು ಹಲವರು ಕೇಂದ್ರೀಕರಿಸಿದಂತೆ ತೋರುತ್ತದೆ. ಅಥವಾ ತಮ್ಮ ಅಭಿವ್ಯಕ್ತಿಗೆ ತಕ್ಕ ಪ್ರಕಾರಗಳನ್ನು ನಿರಂತರವಾಗಿ ಹುಡುಕುತ್ತಿರುವಂತೆಯೂ ಇವನ್ನು ವ್ಯಾಖ್ಯಾನಿಸಬಹುದು. ನವೋದಯ ಸಾಹಿತಿಗಳೂ ಎಲ್ಲ ಪ್ರಕಾರಗಳಲ್ಲಿಯೂ ಕೃತಿರಚನೆ ನಡೆಸಿದ್ದರಾದರೂ ಅದು ಅವರ ಅಭಿವ್ಯಕ್ತಿ ಸಾಧ್ಯತೆಯ ಅದಮ್ಯತೆಯಿಂದ ಮೂಡಿದ್ದಾಗಿತ್ತು. ಆದರೆ ನವ್ಯ ಸಾಹಿತಿಗಳು ಹೆಚ್ಚು ಸಂವಹನಶೀಲ ಪ್ರಕಾರದ ಶೋಧನೆಯಲ್ಲಿ ಇದ್ದುದರಿಂದ ಅವರ ಗಮನ ನಾಟಕದತ್ತ ಹೊರಳಿದ್ದು ಸಹಜವೇ ಆಗಿದೆ. ಅದಕ್ಕಾಗಿಯೇ ಅರವತ್ತರ ದಶಕದಲ್ಲಿ ಮೊದಲಾದ ರಂಗಭೂಮಿಯ ಬೆಳವಣಿಗೆಯ ಮುಂಚೂಣಿಯಲ್ಲಿ ನವ್ಯ ಸಾಹಿತಿಗಳೇ ಇದ್ದರು.

ನಾಟಕ ರಚನೆಯಲ್ಲಿ ಸಂಸ, ಕೈಲಾಸಂ ಮೊದಲಾದವರ ಮಾದರಿಗಳನ್ನು ಬಿಟ್ಟು ಹೊಸ ತಾತ್ತ್ವಿಕ ನೆಲೆಗಟ್ಟಿನ ಕೃತಿಗಳನ್ನು ರಚಿಸಲಾಯಿತು. ಪಾಶ್ಚಾತ್ಯ ರಂಗಭೂಮಿಯ ಹೊಸತಂತ್ರಗಳನ್ನು ಅಳವಡಿಸಿಕೊಂಡುದೂ ಇದಕ್ಕೆ ನೆರವಾಯಿತು. ಸಿಟ್ಟಿನ, ಏಕಾಂಗಿತನದ ನಾಯಕ ರಂಗದ ಮೇಲೆ ಬಂದ. ಇವನ ಚಹರೆಗಳು ಬೌದ್ಧಿಕವಾದ ವಿವರಗಳಲ್ಲಿ ಯೋಗ್ಯವೇ ಆಗಿದ್ದವು. ಆದರೆ ಸಮಸ್ಯೆ ಇದ್ದುದು ನಾಟಕದ ಪ್ರೇಕ್ಷಕರಲ್ಲಿ. ಅವರಿನ್ನೂ ಯೋಚಿಸುತ್ತಿದ್ದ ಹಾಗೂ ಗ್ರಹಿಸುತ್ತಿದ್ದ ನೆಲೆಗಳು ವಾಸ್ತವವಾದಿ ಹಂತವನ್ನೇ ಮುಟ್ಟಿರಲಿಲ್ಲ. ಅದನ್ನೂ ದಾಟಿ ವ್ಯಂಗ್ಯದ ನೆಲೆಯ, ಸ್ವಪರೀಕ್ಷಾಲೋಲುಪ ಯುವಕನನ್ನು ಪ್ರೇಕ್ಷಕರು ಸಂದೇಹಗಳಿಂದಲೇ ನೋಡಿದರು. ಹೊಸಬಗೆಯ ನಾಟಕ ರಚನೆಯ ಸುಮಾರು ಒಂದು ದಶಕ ಕಳೆಯುವ ಹೊತ್ತಿಗೆ ಈ ಅಂಶಗಳು ರಾಚತೊಡಗಿದವು. ಹೀಗಿದ್ದರೂ ಸಾಹಿತ್ಯಕ ಮೌಲ್ಯಗಳ ದೃಷ್ಟಿಯಿಂದ ಈ ಅವಧಿಯ ನಾಟಕಗಳು ಗಣನೀಯವಾದ ಸಾಧನೆಗಳೇ ಆಗಿದ್ದವು. ಹಾಗೆ ನೋಡಿದರೆ ಎಷ್ಟೋ ಮಹಾನ್ ನಾಟಕಕಾರರು ಸಾಹಿತ್ಯಕ ಮೌಲ್ಯಗಳುಳ್ಳ ನಾಟಕಗಳಿಂದಾಗಿಯೇ ತಮ್ಮ ಕಾಲವನ್ನೂ ದಾಟಿ ಬಂದಿದ್ದಾರಷ್ಟೇ. ಈ ಇಪ್ಪತ್ತೈದು

ವರ್ಷಗಳ ಮೊದಲ ಹದಿನೈದು ವರ್ಷಗಳಲ್ಲಿ ಬಂದ ನವ್ಯ ನಾಟಕಗಳಿಗೂ ಇಂಥದೇ ಮಹತ್ತ್ವವಿದೆ. ಇದರಿಂದ ಅವುಗಳ ದೃಶ್ಯ ಮೌಲ್ಯವನ್ನೂ ಅಲ್ಲಗಳೆದಂತೆ ಅಲ್ಲ. ಆದರೆ ರಂಗಭೂಮಿಯ ಚಿಂತನೆಯ ಸ್ವರೂಪವಿನ್ನೂ ವ್ಯಕ್ತಿ ಕೇಂದ್ರಿತವಾಗಿಲ್ಲದೇ ಇರುವುದರಿಂದ ಬಹುಮಟ್ಟಿಗೆ ಆ ನಾಟಕಗಳು ಒಟ್ಟು ರಂಗಭೂಮಿಯ ಬೆಳವಣಿಗೆಗೆ ಪೂರಕವಾಗಲಾರವು.

ಏಳನೆಯ ದಶಕದ ಮೊದಲ ಭಾಗದಲ್ಲೇ ನಾಟಕಗಳ ಸ್ವರೂಪ ಮತ್ತು ಪ್ರದರ್ಶನಗಳ ಬಗ್ಗೆ ಒಂದು ವಾಗ್ವಾದ ಪ್ರಾರಂಭವಾಯಿತು. ಆಸಕ್ತರು ವಿವಿಧ ವೇದಿಕೆಗಳಲ್ಲಿ ಈ ಅಂಶವನ್ನು ಚರ್ಚಿಸಿದರು. ಪ್ರದರ್ಶಕ ಕಲೆಗಳ ಸಾಮಾಜಿಕ ಹೊಣೆಗಾರಿಕೆಯನ್ನು ಕುರಿತಂತೆ ಹೊಸಬರು ಮಾತನಾಡತೊಡಗಿದರು. ಈ ಹೊತ್ತಿಗೆ ಕನ್ನಡ ನಾಟಕಗಳಲ್ಲಿದ್ದ ದ್ವಂದ್ವ ಮುಖಾಮುಖಿಯಾಗಿ ಎರಡು ವಿರುದ್ಧ ದಿಕ್ಕಿನಲ್ಲಿ ಪ್ರಯಾಣ ಮೊದಲಾಯಿತು. ಒಂದುಕಡೆ ಅಖಿಲಭಾರತೀಯ ವ್ಯಾಪ್ತಿಗೆ, ರಾಷ್ಟ್ರೀಯ ರಂಗಭೂಮಿಯ ಆಕಾರಕ್ಕೆ ಕನ್ನಡ ರಂಗಭೂಮಿಯನ್ನು ಹೊಂದಿಸುವ ಪ್ರಯತ್ನದಲ್ಲಿ ನಾಟಕಗಳನ್ನು ರಚಿಸಿ ಪ್ರದರ್ಶಿಸಲಾಯಿತು. ಇನ್ನೊಂದು ಕಡೆ ಕನ್ನಡ ಜನತೆಯ ಜೀವನದ ಮೂಲಕವೇ ತನ್ನ ಗ್ರಹಿಕೆ ಮತ್ತು ಅಭಿವ್ಯಕ್ತಿಗಳನ್ನು ರೂಪಿಸಿ ಕೊಂಡ ನಾಟಕಗಳನ್ನು ಬರೆದು ಜನರ ನಡುವೆ ಆಡುವ ಬಗೆಯೊಂದು ಬೆಳೆಯ ತೊಡಗಿತು. ಎರಡನೆ ಬಗೆಯ ನಾಟಕಗಳು ಸಮಕಾಲೀನ ಆಸಕ್ತಿಗಳಿಗೆ ಗಮನ ಹರಿಸುವುದರಿಂದ ಅವುಗಳು ಸಾಹಿತ್ಯಕ ಸಾಧನೆಯ ದೃಷ್ಟಿಯಿಂದ ಎಷ್ಟೋ ಅಂಶ ಗಳನ್ನು ಬಿಟ್ಟುಕೊಟ್ಟಿವೆ. ಈ ನಾಟಕವು ನೇರವಾಗಿ ರಂಗಪ್ರದರ್ಶನಕ್ಕಾಗಿ ಬರೆದವು. ಹಾಗಾಗಿ ಪ್ರದರ್ಶನದಲ್ಲಿಯೇ ತಮ್ಮ ಪರಿಪೂರ್ಣ ಆಕಾರವನ್ನು ತೋರಬಲ್ಲವು.

ಜನಪದ ರಂಗಭೂಮಿಯ ತಾತ್ತ್ವಿಕ ನೆಲೆಗಳು ಹಾಗೂ ತಾಂತ್ರಿಕ ವಿವರಗಳು ಕಳೆದ ಹತ್ತು ವರ್ಷಗಳಲ್ಲಿ ಕನ್ನಡ ನಾಟಕಗಳನ್ನು ಪ್ರಭಾವಿಸಿವೆ. ಈ ನಾಟಕಗಳ ಸ್ವರೂಪ ಹಾಗೂ ಉದ್ದೇಶಗಳೇನೇ ಇರಲಿ, ನೋಟಕರಲ್ಲಿ ಸುಪ್ತವಾಗಿರುವ ಗ್ರಾಮೀಣ ನೆನಪುಗಳನ್ನು ಕೆರಳಿಸುವ ಮೂಲಕ ರಂಜನೆಯನ್ನು ನೀಡುವುದರಲ್ಲಿ ಯಶಸ್ವಿಯಾಗಿವೆ. ಈ ಬಗೆಯ ನಾಟಕಗಳು ಕೇವಲ ಮಾತನ್ನು ಮಾತ್ರವೇ ಅಲ್ಲದೆ ನಾದ ಹಾಗೂ ಕುಣಿತಗಳನ್ನು ಪ್ರತ್ಯೇಕ ಭಾಷೆಗಳನ್ನಾಗಿ ರೂಪಿಸಿಕೊಂಡು ಆ ಮೂಲಕ ಒಟ್ಟು ಪರಿಣಾಮವನ್ನು ಸಾಧಿಸುತ್ತವೆ.

ಈಚಿನ ದಿನಗಳಲ್ಲಿ ಇತರ ಸಾಹಿತ್ಯ ಪ್ರಕಾರಗಳ ಕೃತಿಗಳನ್ನು–ಅದರಲ್ಲೂ ಕಥಾ ಸಾಹಿತ್ಯವನ್ನು ದೃಶ್ಯಾನುಭವವನ್ನಾಗಿ ರೂಪಿಸುವ ಪ್ರವೃತ್ತಿ ಬಲವಾಗುತ್ತಿದೆ (ಕನ್ನಡದ ಮಟ್ಟಿಗೆ ಈ ಪ್ರಕಾರಾಂತರ ಹೊಸ ವಿಚಾರವೇನೂ ಅಲ್ಲ) ಹೊಸ ನಾಟಕಗಳ ಬದಲು ಪ್ರಕಟಿತ ಕಾದಂಬರಿ, ಕತೆಗಳನ್ನು ಬೇರೆಬೇರೆ ತಂತ್ರಗಳನ್ನು ಬಳಸಿ ನಾಟಕ

ಗಳನ್ನಾಗಿ ಬರೆದು ಪ್ರದರ್ಶಿಸಲಾಗುತ್ತಿದೆ. ಮೂಲ ಕೃತಿ ಹಾಗೂ ದೃಶ್ಯರೂಪಗಳು ಬೀರುವ ಪರಿಣಾಮಗಳು ಬೇರೆಬೇರೆಯಾಗಿರುವ ಸಂದರ್ಭಗಳೇ ಹೆಚ್ಚು. ಇದೇನೂ ಆಕ್ಷೇಪಾರ್ಹವಾದುದೇನೂ ಅಲ್ಲವಷ್ಟೆ.

ಕಥಾಸಾಹಿತ್ಯ : ಸಣ್ಣ ಕಥೆ ಮತ್ತು ಕಾದಂಬರಿ ಪ್ರಕಾರಗಳಲ್ಲಿ ಈ ಇಪ್ಪತ್ತೈದು ವರ್ಷಗಳಲ್ಲಿ ಅತ್ಯಧಿಕ ಪ್ರಮಾಣದ ಸಾಹಿತ್ಯ ಸೃಷ್ಟಿಯಾಗಿದೆ. ಇದಕ್ಕೆ ಕಾರಣಗಳನ್ನು ಈ ಹಿಂದೆಯೇ ಹೇಳಲಾಗಿದೆ. ಈ ಪ್ರಕಾರಗಳ ಸ್ವರೂಪದ ಬಗ್ಗೆ ಇರುವ ಸಾಮಾನ್ಯ ತಿಳುವಳಿಕೆಯಿಂದಾಗಿ ಬರೆವಣಿಗೆ ಬಲ್ಲವರೆಲ್ಲರೂ ಕಥೆ ಬರೆಯಬಹುದೆಂಬ ಅಭಿಪ್ರಾಯವಿರುವಂತೆ ತೋರುತ್ತದೆ. ಪ್ರಸಾರ ಮಾಧ್ಯಮಗಳು ಈ ದಿಕ್ಕಿನಲ್ಲಿ ಏನು ಪರಿಣಾಮ ಬೀರಿದುವು ಎಂಬುದನ್ನು ಗಮನಿಸಲಾಯಿತಷ್ಟೆ.

ನವೋದಯ ಮಾರ್ಗದ ಕಥನಕ್ರಮ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಹಿರಿಯ ಸಾಹಿತಿಗಳಿಂದ ಬಳಕೆಯಾಗುತ್ತಿದ್ದರೂ, ನವ್ಯಮಾರ್ಗದವರಿಂದ ನಿರಾಕರಣೆಗೆ ಒಳಗಾಗಿತ್ತು. ಆದರೆ ಆ ಬಗೆಯ ಸಾಮರ್ಥ್ಯವಿನ್ನೂ ತೀರಿಲ್ಲವೆಂದೇ ತೋರುತ್ತದೆ. ಮತ್ತೆ ಆ ಹಾದಿಯನ್ನೇ ಈಚಿನ ಲೇಖಕರು ಆಯ್ದುಕೊಳ್ಳುತ್ತಿರುವುದನ್ನೂ ಕಾಣುತ್ತೇವೆ. ಸಣ್ಣ ಕಥೆಯಲ್ಲಿ ನವ್ಯ ಮಾರ್ಗದ ಸಾಹಿತಿಗಳು ಹೊಸಶೈಲಿಯೊಂದನ್ನು ರೂಢಿಸಿದರು. ಕಥೆಗೂ ಕಥೆಗಾರನಿಗೂ ನಡುವೆ ನಿರ್ಲಿಪ್ತತೆಯ ಪಾರದರ್ಶಕ ಗೋಡೆಯೊಂದು ನಿರ್ಮಾಣವಾಗುವುದನ್ನು ಕೈಬಿಟ್ಟು, ಕಥೆಯಲ್ಲಿನ ಮೌಲ್ಯಸಂಘರ್ಷದ ನೈತಿಕಬಿಕ್ಕಟ್ಟುಗಳನ್ನು ಸ್ವಂತದ್ದೆಂಬಂತೆ ನಿರ್ವಹಿಸತೊಡಗಿದರು. ಇದರಿಂದಾಗಿ ಅವರು ಯಾವ ವಿಚಾರವನ್ನು ಕುರಿತಾದರೂ ಕಥೆ ಬರೆಯಬಹುದೆಂಬ ನಿಲುವನ್ನು ಕೈಬಿಡಬೇಕಾಗಿ ಬಂತು. ನೆನಪು, ಅನುಭವಗಳ ಅಧಿಕೃತ ಪುನರಭಿನಯಕ್ಕಿಂತ (ಅಥವಾ ಅದಕ್ಕೆ ಬದಲಾಗಿ) ಅವುಗಳು ಜೀವನದ ಇನ್ನೊಂದು ಹಂತದಲ್ಲಿ ಉಂಟುಮಾಡುತ್ತಿರುವ ಮೌಲ್ಯಾತ್ಮಕ ಪರಿಣಾಮಗಳನ್ನು ಗ್ರಹಿಸುವುದು ಮುಖ್ಯವಾಯಿತು. ಎಂದರೆ ನವ್ಯಕತೆಗಾರರು ಜೀವನ ಗ್ರಹಿಕೆಗಾಗಿ ಆಯ್ದುಕೊಂಡ ಸ್ತರ ವ್ಯಕ್ತಿಕೇಂದ್ರಿತ. ಈ ವ್ಯಕ್ತಿಬದ್ಧ ಗ್ರಹಿಕೆಯಿಂದ ವಾಸ್ತವವು ಸೀಮಿತ ವ್ಯಾಪ್ತಿಯಲ್ಲಿ ಮಾತ್ರ ಅಭಿವ್ಯಕ್ತವಾದರೂ, ಅದೇ ಅಧಿಕೃತವೆಂಬ ನಿಲುವು ಮುಖ್ಯವಾಯಿತು.

ವಸ್ತು ವಿನ್ಯಾಸ ಮತ್ತು ನಿರೂಪಣಾಕ್ರಮದಲ್ಲಿಯೂ ನವ್ಯಮಾರ್ಗದ ಕಥೆಗಳು ಅತ್ಯಂತ ಎಚ್ಚರದ ರಚನೆಗಳಾಗಿವೆ. ಈ ಸಾಧನೆಯು ಸಾಹಿತ್ಯಕ ದೃಷ್ಟಿಯಿಂದ ಗಣನೀಯವಾದರೂ ಕೃತಿ ಮತ್ತು ಸಮಾಜ ಸಂಬಂಧದಲ್ಲಿ ಕೆಲವು ಹೊಸ ಪ್ರಶ್ನೆಗಳು ಉದಯವಾದವು. ಕಥೆಗಾರ ತನ್ನ ಐಂದ್ರಿಯಿಕ ಗ್ರಹಿಕೆಗೆ ಮಾತ್ರ ಬದ್ಧನಾಗಿ, ಘಟನೆಗಳ ನಡುವೆ ತರ್ಕಬದ್ಧ ಸಂಬಂಧಗಳನ್ನು ನಿರ್ಮಿಸುತ್ತಾ ಹೋಗುವುದರಿಂದ ತನ್ನಷ್ಟಕ್ಕೆ ತಾನು ಒಂದು ಮಿತಿಯನ್ನು ಹಾಕಿಕೊಳ್ಳುತ್ತಿದ್ದಾನೆಂಬ ಇನ್ನೊಂದು

ಚಿಂತನೆಯೂ ಮಂಡಿತವಾಯಿತು. ಈ ಸನ್ನಿವೇಶದಿಂದಾಗಿ ಕಳೆದ ದಶಕದಲ್ಲಿ ಸಣ್ಣ ಕತೆಯ ಸ್ವರೂಪದಲ್ಲಿ ಹಲವು ಬದಲಾವಣೆಗಳಾದುವು. ಅವುಗಳಲ್ಲಿ ಪ್ರಧಾನವಾದ ಎರಡು ಅಂಶಗಳನ್ನು ಗಮನಿಸಬಹುದು.

1. ವ್ಯಕ್ತಿಕೇಂದ್ರಿತ ಗ್ರಹಿಕೆಯ ಮಿತಿಗಳನ್ನು ಕಂಡುಕೊಂಡು ಸಾಮಾಜಿಕ ವೈರುಧ್ಯಗಳ ಹಿನ್ನಲೆಯಲ್ಲಿ ಜೀವನವನ್ನು ನೋಡುವ ದೃಷ್ಟಿಯನ್ನು ರೂಢಿಸಿಕೊಳ್ಳಲಾಯಿತು. ಇದರಿಂದಾಗಿ ಸಣ್ಣಕತೆ ಸಾಮಾಜಿಕ ಮೌಲ್ಯಗಳನ್ನು ಕುರಿತು ಚರ್ಚೆಯನ್ನು ನೆಮ್ಮತೊಡಗಿದೆ. ಬಹುಮಂದಿ ಕಥೆಗಾರರಿಗೆ ಇದು ಸರಳಗೊಳಿಸಿದ ಹಾದಿಯಾಗಿ ತೋರಿದೆ. ಪತ್ರಿಕೆಯ ಹುಸಿ ಅಧಿಕೃತ ಧೋರಣೆಯಲ್ಲೇ ಸಮಾಜವನ್ನು ವಿವರಿಸುವ ಜವಾಬ್ದಾರಿಯನ್ನು, ಇಂಥ ಕಥೆಗಾರರು ನಿರ್ವಹಿಸುತ್ತಿದ್ದಾರೆ. ಆದರೆ ಸಾಮಾಜಿಕವೆನಿಸುವ ವಸ್ತುವನ್ನು ನಿರ್ದಿಷ್ಟ ಸಾಮಾಜಿಕ ಚಿಂತನೆಯ ಮೂಲಕ ಗ್ರಹಿಸದೆ ಆ ವಸ್ತುವಿನ ಆಂತರಿಕ ದ್ವಂದ್ವಗಳನ್ನು, ಅದರ ಪರಿಣಾಮವಾಗಿ ಅದರ ಜೀವಂತ ಸ್ವರೂಪವನ್ನು ನಮ್ಮ ಕೆಲವು ಕಥೆಗಾರರು ಚಿತ್ರಿಸಲು ತೊಡಗಿದ್ದಾರೆ, ಈ ದಿಕ್ಕಿನ ಬದಲಾವಣೆ ಇಂಥ ಕಥೆಗಾರರಿಂದ ಅರ್ಥ ಪೂರ್ಣವಾಗಿದೆ.

2. ಇನ್ನೊಂದು ಬದಲಾವಣೆ : ನವ್ಯಕಥೆಯ ವ್ಯಕ್ತಿಕೇಂದ್ರಿತ ದೃಷ್ಟಿಯನ್ನು ಬಿಟ್ಟುಕೊಡದೆ, ಆ ವ್ಯಕ್ತಿಯನ್ನೇ ವಿಸ್ತರಿಸುವ ಯತ್ನಗಳನ್ನು ಕೆಲವು ಕಥೆಗಾರರು ಯೋಜಿಸಿದ್ದಾರೆ. ವ್ಯಕ್ತಿ ಮತ್ತು ಸಮಾಜದ ಸಂಬಂಧದ ವಿವಿಧ ಮುಖಗಳನ್ನು ಗ್ರಹಿಸಬಲ್ಲ ಕಥೆಯ ಕೇಂದ್ರಪ್ರಜ್ಞೆ ಕೇವಲ ಸ್ವಂತವನ್ನ ಮಾತ್ರ ಕಾಣುವ ವ್ಯಕ್ತಿಗೆ ಮಿತಗೊಳ್ಳಲು ಸಾಧ್ಯವಿಲ್ಲ. ವೈಯುಕ್ತಿಕ ಬದುಕನ್ನು ಅದರ ಬೆಳವಣಿಗೆಯನ್ನು ಮೂಲ ಸಾಮಗ್ರಿಯನ್ನಾಗಿ ಮಾಡಿಕೊಂಡು, ಈ ಸಾಮಗ್ರಿಯ ನೆರವಿನಿಂದ ಸಾಮಾಜಿಕ ವ್ಯಕ್ತಿಯ ಚಹರೆಗಳನ್ನು ಕಾಣುವ ನೆಲೆಯನ್ನು ಆಶ್ರಯಿಸಲಾಗುತ್ತಿದೆ. ಈ ಪ್ರಯೋಗ ಕನ್ನಡ ಸಣ್ಣ ಕತೆಗೆ ಹೊಸ ಜವಾಬ್ದಾರಿಯನ್ನು ತಂದುಕೊಟ್ಟಿದೆ.

ಕಾದಂಬರಿ ಪ್ರಕಾರಕ್ಕೆ ಮೇಲೆ ಹೇಳಿದ ಮಾತುಗಳೇ ಬಹುಮಟ್ಟಿಗೆ ಅನ್ವಯವಾಗುತ್ತವೆ. ನವೋದಯ ಮತ್ತು ಪ್ರಗತಿಶೀಲಮಾರ್ಗದ ಕೆಲವು ಬರೆಹಗಾರರು ಈ ಅವಧಿಯಲ್ಲಿ ತಮ್ಮ ಕಾದಂಬರಿಗಳನ್ನೂ ರಚಿಸಿದ್ದಾರೆ. ಅವುಗಳಲ್ಲಿ ಕೆಲವು ಶ್ರೇಷ್ಠಕೃತಿಗಳಾಗಿ ಮನ್ನಣೆಯನ್ನು ಪಡೆದಿವೆ. ಹೀಗಿದ್ದರೂ ಈ ಪ್ರಕಾರದಲ್ಲಿ ಸಾಕಷ್ಟು ಪ್ರಯೋಗಗಳು ನಡೆಯುತ್ತಲೇ ಬಂದಿವೆ. ನವ್ಯ ಕಾದಂಬರಿಗಳ ಸಂಖ್ಯೆ ಅಗಾಧವಾದುದೇನೂ ಅಲ್ಲ. ಬಹುಮಟ್ಟಿಗೆ ಅವರ ಕಥೆಗಳ ವಿಸ್ತರಣಗೊಂಡ ರೂಪಗಳಂತೆ ತೋರುವ ಈ ಕೃತಿಗಳು, ಮತ್ತೆ ವೈಯುಕ್ತಿಕ ಜಗತ್ತಿನ ಅಧಿಕೃತ ದಾಖಲುಗಳಾಗಲು ಯತ್ನ ನಡೆಸಿವೆ. ಇದು ಸಾಧನೆ ಹಾಗೂ ಮಿತಿಯೂ ಹೌದು. ಕಾದಂಬರಿಯಂಥ ಶಕ್ತ, ಮಹಾಕಾವ್ಯದ ಬೀಸನ್ನು ಹೊಂದಿದ ಪ್ರಕಾರದ ಸಾಮರ್ಥ್ಯವನ್ನು ನವ್ಯಕಾದಂಬರಿ ತೀರಾ ಇಕ್ಕಟ್ಟಿನಲ್ಲಿ ಮಾತ್ರ ಬಳಸಿದೆ. ತಮಗೆ ತಾವು ಈ ಕೃತಿಗಳು

ಯೋಗ್ಯ ಸಾಧನೆಗಳನ್ನು ಪಡೆದಿವೆಯಾದರೂ ಕಾದಂಬರಿ ಪ್ರಕಾರವನ್ನು ಗ್ರಹಿಸುವಲ್ಲಿ ಮಾತ್ರ ಮಿತವ್ಯಾಪ್ತಿಯನ್ನು ಪ್ರಕಟಿಸಿವೆ. ಪ್ರಜ್ಞಾವಂತ ನಾಯಕನಿಗೂ ಅವನ ಪರಿಸರಕ್ಕೂ ಇರುವ ಅಂತರವನ್ನು ವಿವಿಧ ದೃಷ್ಟಿಕೋನಗಳಿಂದ ಈ ಕಾದಂಬರಿಗಳು ಮಂಡಿಸುತ್ತವೆ. ಈ ಬಗೆಯಲ್ಲಿ ಆದ ಮುಖ್ಯ ಬದಲಾವಣೆ ಎಂದರೆ ನಾಯಕ ತನ್ನ ಸಾಮಾಜಿಕ ನಂಬಿಕೆ ಹಾಗೂ ಆಶೋತ್ತರಗಳಿಗೂ, ಸಾಮಾಜಿಕ ಪರಿಸರಕ್ಕೆ ಇರುವ ಅಂತರವನ್ನು ಕಾಣತೊಡಗಿದ್ದಾನೆ. ಈ ಬದಲಾವಣೆ ಪರಿಸ್ಥಿತಿಯಲ್ಲಿ ಬಹು ಪಾಲು ಕಾದಂಬರಿಗಳು ನಾಯಕನನ್ನು ಹುತಾತ್ಮನಂತೆ ಚಿತ್ರಿಸಲು ತೊಡಗಿವೆ. ಗ್ರಾಮೀಣ ಜೀವನದಲ್ಲಿ ಬದಲನ್ನುಂಟು ಮಾಡಲು ಯೋಜಿಸುವ ಕಲಿತ ನಾಯಕನನ್ನು ಕೇಂದ್ರದಲ್ಲಿ ಹೊಂದಿದ ಬಹುಪಾಲು ಕಾದಂಬರಿಗಳ ಸ್ವರೂಪವನ್ನು ಗಮನಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ. ನವ್ಯಕಾದಂಬರಿ ರೂಪಿಸಿದ ಮಾದರಿಗಳು ಈ ಗುರಿಯನ್ನು ತಲುಪುವ ಉದ್ದೇಶವನ್ನು ಹೊಂದಿರಲಿಲ್ಲವೆಂದು ತಿಳಿಯಬಹುದು.

ಜನಪ್ರಿಯ ಸಾಹಿತ್ಯ ರೂಪಿಸಿರುವ ಸಡಿಲ ಬಂಧಗಳ ಆಕರ್ಷಣೆಯಿಂದ ಮುಕ್ತರಾಗಿ, ಕಾದಂಬರಿಯ ಮೂಲಕ ಜೀವನದ ತಾತ್ತ್ವಿಕ ಅರ್ಥಗಳನ್ನು ಗ್ರಹಿಸಲು ಬೇಕಾದ ಸಿದ್ಧತೆಗಳನ್ನು ಇತ್ತೀಚಿನ ಕೆಲವು ಕಾದಂಬರಿಗಳು ತೋರಿಸಿಕೊಟ್ಟಿವೆ. ವಾಸ್ತವವಾದಿ ನೆಲೆಗಟ್ಟಿನಲ್ಲಿ ಜೀವನ ವಿಶ್ಲೇಷಣೆಯಲ್ಲಿ ತೊಡಗುವ ನವೋದಯ ಮಾರ್ಗದ ಕಾದಂಬರಿಗಳ ಸ್ವರೂಪ ಈ ಅವಧಿಯಲ್ಲಿ ಗಮನಾರ್ಹ ಬದಲಾವಣೆಗಳನ್ನು ಪ್ರದರ್ಶಿಸಿಲ್ಲ. ಆದರೆ ಆ ಮಾರ್ಗದ ಸಾಧ್ಯತೆಗಳು ಮಾತ್ರ ಆಕರ್ಷಣೀಯವಾಗಿವೆ. ತಲೆಮಾರುಗಳನ್ನು ದಾಟಿಯೂ ಓದುಗರನ್ನು ಪಡೆಯಬಲ್ಲ ಈ ಮಾರ್ಗದ ಕಾದಂಬರಿಗಳು ನಿಜವಾದ ಅರ್ಥದಲ್ಲಿ ನಮ್ಮ ಸಮುದಾಯದ ಕಲಾನುಭವದ ಸ್ವರೂಪಕ್ಕೆ ನಿಕಟವಾಗಿರಬೇಕೆಂಬ ಅನಿಸಿಕೆ ಈಗ ಪ್ರಬಲವಾಗತೊಡಗಿದೆ. ಹೀಗಾಗಿ ಈ ಪ್ರಕಾರದ ಬೆಳವಣಿಗೆ ಕುತೂಹಲಕಾರಿ ಹಂತದಲ್ಲಿವೆ ಎನ್ನಬಹುದು.

ಸಾಹಿತ್ಯಕ ವಾಗ್ವಾದಗಳು :

ಕಳೆದ ಇಪ್ಪತ್ತೈದು ವರ್ಷಗಳಲ್ಲಿ ನಡೆದ ಸಾಹಿತ್ಯಕ ವಾಗ್ವಾದಗಳು ಗಮನಾರ್ಹವಾದವು. ಏಕೆಂದರೆ ಅವುಗಳ ಪರಿಚಯದ ಮೂಲಕ ಸೃಜನಶೀಲತೆಯು ಎದುರಿಸಿದ ಸವಾಲು ಮತ್ತು ಪಡೆದ ಹೊಸ ದಾರಿಗಳ ಅರಿವಾಗುವುದು. ಈ ವಾಗ್ವಾದಗಳು ಸಾಹಿತ್ಯೇತರವಾದ (ಅಸಾಹಿತ್ಯಕವಲ್ಲ) ಪ್ರೇರಣೆಗಳನ್ನು ಹೊಂದಿರುವುದನ್ನು ಗಮನಿಸಿದರೂ, ಅವುಗಳ ಮಹತ್ತ್ವಕ್ಕೇನೂ ಕುಂದಿಲ್ಲ. ಆದರೆ ವಾಗ್ವಾದಗಳು ಮತ್ತು ಸೃಜನಶೀಲ ಸಾಹಿತ್ಯದ ಸಂಬಂಧ ಮಾತ್ರ ಎಲ್ಲ ಸಂದರ್ಭಗಳಲ್ಲೂ ಪೂರಕವಾಗಿಲ್ಲ. ಬದಲಿಗೆ ಒಂದು ಇನ್ನೊಂದರ ಎದುರಾಳಿ ಎಂಬಂತೆ ನಿಂತಿರುವ ಪ್ರಸಂಗಗಳನ್ನು ಕೂಡ ನಾವು ಕಾಣುತ್ತೇವೆ.

ಶೂದ್ರ—ಬ್ರಾಹ್ಮಣ : ಕರ್ನಾಟಕದ ರಾಜಕೀಯ ಚರಿತ್ರೆಯ ಕಳೆದ ಆರೇಳು ದಶಕಗಳನ್ನು ಅಭ್ಯಾಸ ಮಾಡಿದವರಿಗೆ 'ಬ್ರಾಹ್ಮಣ—ಬ್ರಾಹ್ಮಣೇತರ'ವೆಂಬ ಅಂಶ ವೊಂದು ಹಲವಾರು ನಿರ್ಣಾಯಕ ತಿರುವುಗಳಲ್ಲಿ ಮುಖ್ಯ ಪಾತ್ರವಹಿಸಿರುವುದು ಗೋಚರಿಸುವುದು. ಇದರ ಪರಿಣಾಮಗಳು, ಸಹಜವಾಗಿಯೇ ಸಂಸ್ಕೃತಿಯ ವಿವಿಧ ವಲಯಗಳಲ್ಲಿ ಕಂಡುಬಂದಿದೆ. ಸೃಜನಸಾಹಿತ್ಯದ ಚರ್ಚೆಯಲ್ಲಿಯೂ ಸಾಹಿತ್ಯೇತರ ವಾದ ಪ್ರೇರಣೆಗಳು ನವೋದಯ ವಿಮರ್ಶೆಗೆ ಹೊಸದೇನೂ ಅಲ್ಲವಾದರೂ, ಸಮಕಾಲೀನ ಸಾಹಿತ್ಯದ ಚರ್ಚೆಯಲ್ಲಿ ಮಾತ್ರ ಸರ್ವಮಾನ್ಯವಾದ ಮಾನವತಾವಾದ ಮತ್ತು ಧರ್ಮನಿರಪೇಕ್ಷತೆಗಳನ್ನು ಮಾನ್ಯಮಾಡಲಾಗಿತ್ತು. ಆದರೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸಾಮಾಜಿಕ ವೈರುಧ್ಯಗಳು ಮುಖಾಮುಖಿಯಾಗಿ, ಚಿಂತನೆಗೆ ಹೊಸ ನೆಲೆಗಳನ್ನು ಒದಗಿಸಿದವು. ಇದರ ಪರಿಣಾಮವಾಗಿಯೇ ನವ್ಯಸಾಹಿತ್ಯದ ಉತ್ಕೃಷ್ಟಕೃತಿಗಳು ಹೊರಬರುತ್ತಿದ್ದ ಕಾಲದಲ್ಲಿ ಕೃತಿಕಾರನ ಸಾಮಾಜಿಕ ಶ್ರೇಣಿಗೂ ಕೃತಿಯ ಸ್ವರೂಪಕ್ಕೂ ಇರುವ ಸಂಬಂಧಗಳು ಚರ್ಚೆಗೆ ಬಂದವು. ಅತ್ಯಂತ ವೈಯಕ್ತಿಕ ನೆಲೆಯಲ್ಲಿ ಕೃತಿಯ ತಾತ್ತ್ವಿಕನೆಲೆಗಳು ರೂಪುಗೊಳ್ಳುತ್ತವೆ ಹಾಗೂ ಕೃತಿಯಲ್ಲಿ ಅಭಿವ್ಯಕ್ತಗೊಳ್ಳುತ್ತವೆ ಎಂದು ನಂಬಿದ್ದ ನವ್ಯಸಾಹಿತ್ಯ ಮಾರ್ಗಗೊಳಗಿನಿಂದಲೇ ಈ ಹೊಸ ಚಿಂತನೆಗಳು ಮೂಡಿದವು. ಮೊದಮೊದಲು, ಆರನೆ ದಶಕದ ನಡುಭಾಗ ದಲ್ಲಿ ಸಾಹಿತ್ಯದಲ್ಲಿ ಶೂದ್ರ, ಬ್ರಾಹ್ಮಣ ಪ್ರೇರಣೆಗಳನ್ನು ಸಾಮಾಜಿಕ ಶ್ರೇಣಿಗಳ ನೆಲೆಯಲ್ಲಿ ವ್ಯಾಖ್ಯಾನಿಸಲಿಲ್ಲವೆಂಬುದನ್ನು ಎಚ್ಚರಿಕೆಯಿಂದ ಗಮನಿಸಬೇಕು. ಮೂರ್ತ, ಅಧಿಕೃತ ಹಾಗೂ ಜೀವನ ನೈಕಟ್ಯ ಇವುಗಳಿಂದ ಉಂಟಾಗುವ ಪ್ರೇರಣೆಗಳನ್ನು ಒತ್ತಟ್ಟಿಗೂ, ಅಮೂರ್ತ ಹಾಗೂ ಬೌದ್ಧಿಕ ದೊರೆತ ಗ್ರಹಿಕೆಗಳಿಂದ ಪ್ರೇರಣೆಗಳನ್ನು ಇನ್ನೊಂದು ಕಡೆಗೂ ಇಟ್ಟು ನೋಡಲಾಯಿತು. ಕೃತಿಯ ಹಿಂದಿನ ಗತಿತರ್ಕವಾಗಿ ಈ ಎರಡೂ ಅಂಶಗಳೂ ಪ್ರವೃತ್ತವಾಗಿರುತ್ತವೆ ಎಂಬುದು ಮುಖ್ಯವಾಗಿ ಸಾಹಿತ್ಯ ತತ್ತ್ವವೊಂದನ್ನು ಹೊಸ ಪರಿಭಾಷೆಯಲ್ಲಿ ನಿರೂಪಿಸುವ ಯತ್ನವಾಗಿತ್ತು. ಆದರೆ ಬಳಸಲಾದ ಪರಿಭಾಷೆಗೆ ಇದ್ದ ಇತರ ಸಾಮಾಜಿಕ ವ್ಯಾಪ್ತಿಯು ನಿರುಪಯುಕ್ತ ವಾಗದೇ ಆ ಮುಂದಿನ ದಿನಗಳಲ್ಲಿ ಸಾಹಿತ್ಯವನ್ನು ನೋಡುವ ದೃಷ್ಟಿಯನ್ನು ಬದಲಾಯಿ ಸಲು ಶಕ್ತವಾಯಿತು ಇದರಿಂದಾಗಿ, ಶ್ರೇಣೀಕೃತ ಸಂಸ್ಕೃತಿಯ ವಿವಿಧ ಸ್ತರಗಳಿಂದ ಹಾಗೂ ಹಿನ್ನಲೆಗಳಿಂದ ಬಂದ ಲೇಖಕನ ಗ್ರಹಿಕೆ ಮತ್ತು ಅಭಿವ್ಯಕ್ತಿಗಳು ಅವನ ಪರಿಸರ ಹಾಗೂ ಹಿನ್ನಲೆಗಳಿಂದ ನಿಯಂತ್ರಿತ ಮತ್ತು ನಿರ್ದೇಶಿತವಾಗಿರುತ್ತವೆ ಎಂಬ ವಾದ ಜಾರಿಗೆ ಬಂತು. ಕೃತಿಯ ವಿಶ್ಲೇಷಣೆಗಳು, ಕೃತಿಕಾರನ ಪಾರಂಪರಿಕ ಹಿನ್ನೆಲೆಯ ಶೋಧನೆಯತ್ತ ಮುಖ ಮಾಡಿ ವಿವರಣೆ ಹಾಗೂ ಸಮರ್ಥನೆಯ ಹಾದಿ ಹಿಡಿದವು, ನವೋದಯದ ಕೃತಿಕಾರರು ಮರುವ್ಯಾಖ್ಯಾನಗಳಿಗೆ ಒಳಗಾದರು. ಈ ಚರ್ಚೆಯ ನೆಲೆಯ ಉಪಯುಕ್ತತೆ, ಈಗಿರುವುದಕ್ಕಿಂತಲೂ ಹೆಚ್ಚಾಗಬಹುದಿತ್ತು. ಅನುಭವದ ಗ್ರಹಿಕೆ ಮತ್ತು ಅಭಿವ್ಯಕ್ತಿಗಳ ನಿಯಂತ್ರಣ ಬಿಂದುಗಳು ಹಾಗೂ ಅವುಗಳ ಸ್ವರೂಪ ವನ್ನು ಕುರಿತಂತೆ ಆಳವಾದ ಹಾಗೂ ಖಚಿತವಾದ ಚಿಂತನೆಗಳು ಅಪೇಕ್ಷಿತವಾಗಿವೆ. ಕೃತಿ ಸಮರ್ಥನೆ ಹಾಗೂ ಖಂಡನೆಗಳಿಗಾಗಿ ಈ ಅಂಶವನ್ನು ಬಳಸಿಕೊಂಡದ್ದೇ ಹೆಚ್ಚಾಗಿ

ಬಿಟ್ಟಿತ್ತು. ಸಾಕಷ್ಟು ಗಮನ ಹರಿಯದೇ ಹೋದ ಅಂಶವೆಂದರೆ ಸಾಂಸ್ಕೃತಿಕ ಶ್ರೇಣೀಕರಣದ ಪ್ರೇರಣೆಗಳು ಲೇಖಕನದಲ್ಲಿ ಎಚ್ಚರದಿಂದ ಮೂಡಿಬರುವುದಕ್ಕೂ ಸಮಷ್ಟಿ ಸುಪ್ತಪ್ರಜ್ಞೆಯಿಂದ ಪ್ರಕಟವಾಗುವುದಕ್ಕೂ ಇರುವ ವ್ಯತ್ಯಾಸ.ಇದು ಸಾಹಿತ್ಯ ಕೃತಿಯನ್ನು ನಾವು ನೋಡುವ ದೃಷ್ಟಿಯನ್ನು ಖಚಿತಗೊಳಿಸಿಕೊಳ್ಳಲು ನೆರವಾಗುವ ವರ್ಗೀಕರಣ. ಎಚ್ಚರದಿಂದ ಉಂಟಾದ ಸಾಹಿತ್ಯ ಸೃಷ್ಟಿ ಧ್ಯಾನಿತ; ಹಾಗಿಲ್ಲದೆ ಲೇಖಕನ ಮೂಲಕ ಅವನಿಗೆ ಅರಿವಿಲ್ಲದೆ ವ್ಯಕ್ತವಾಗುವಾಗ ಉಂಟಾದ ಕೃತಿ ಧ್ಯಾನ್ಯ ಪೂರ್ವ ಸ್ಥಿತಿಯದ್ದು. ಈ ಬಗ್ಗೆ ಹೆಚ್ಚು ಚರ್ಚೆಯನ್ನು ಬೆಳೆಸಲು ಇದು ಸೂಕ್ತ ಅವಕಾಶವಲ್ಲ. ಒಂದು ಅಂಶದೊಡನೆ ಈ ಸಂಗತಿಯನ್ನು ಸ್ಪಷ್ಟಪಡಿಸುತ್ತೇನೆ.

ಸಾಹಿತ್ಯದ ಹಿಂದಿನ ಪ್ರೇರಣೆಗಳನ್ನು ಶೂದ್ರ ಬ್ರಾಹ್ಮಣ ಎಂದು ವರ್ಗೀಕರಿಸಿ ಚರ್ಚೆ ನಡೆಸಲು ಮೊದಲಾಗಿ ಸುಮಾರು ಒಂದು ದಶಕ ಕಳೆಯುವ ಹೊತ್ತಿಗೆ ಈ ಚಿಂತನೆಗೆ ಇನ್ನೊಂದು ಮುಖ ಮೂಡಿ ಬಂತು. ಸಾಮಾಜಿಕ ಸ್ತರೀಕರಣದ ಗಾಢವಾದ ವಿವರಗಳು ಗೋಚರವಾಗುತ್ತಾಹೋದಂತೆ 'ದಲಿತ'ಎಂಬ, ಶೂದ್ರ, ಬ್ರಾಹ್ಮಣವಲ್ಲದ ಪರಿಕಲ್ಪನೆಯೊಂದನ್ನು ಗುರುತಿಸುವುದು ಮೊದಲಾಯಿತು. ಇದನ್ನು ಸರಳಗೊಳಿಸಿ ಹೇಳಿದಂತೆ ತೋರಿದರೂ ಅದು ಹಾಗಲ್ಲ. ಸಮಾಜದ ಅತ್ಯಂತ ದೀನಸ್ಥಿತಿಯ ಸ್ತರದಿಂದ ಬಂದು, ಪ್ರಜ್ಞೆಯೊಡನೆ ಸಾಹಿತ್ಯ ರಚಿಸಿದ ಹಲವರಿಗೆ ಸಾಮಾಜಿಕವೈಷಮ್ಯದ ಒತ್ತಾಯಗಳು ದಿನನಿತ್ಯದ ವಿವರಗಳಾಗಿದ್ದವು. ಹಾಗಾಗಿ ಪ್ರತಿ ಘಟನೆಯೇ ಸ್ಥಾಯಿಯಾದ ಸಾಹಿತ್ಯ ರಚನೆಗಳು ಮೂಡಿಬಂದವು. ಈ ಸಂಗತಿಯಿಂದ ಸ್ಪಷ್ಟವಾಗುವುದಿಷ್ಟು : ಈ ಹಂತದಲ್ಲಿ ಸಾಮಾಜಿಕ ವೈರುಧ್ಯಗಳು ಸಾಹಿತ್ಯಕ್ಕೆ ಒದಗಿಸಿದ ಪ್ರೇರಣೆ ಬರೆಹಗಾರನ ಎಚ್ಚರದ ಸ್ಥಿತಿಯಲ್ಲಿ ದೊರಕಿದ್ದು. ಆದರೆ ಈ ಚರ್ಚೆ ಪ್ರಾರಂಭವಾದ ಮೊದಮೊದಲು ಹಂತಗಳಲ್ಲಿ ಕೃತಿಕಾರನಿಗೆ ಅರಿವಿಗೆ ಬರದಂತೆ ಹೊರಬರುವ ವೈರುಧ್ಯ ಪ್ರಕಟನೆಗಳ ಬಗ್ಗೆ ಚಿಂತನೆ ಸಾಧ್ಯವಿತ್ತು.

2. ದಲಿತ-ಬಂಡಾಯ : ಸಾಹಿತ್ಯದಲ್ಲಿ ಅಭಿವ್ಯಕ್ತಿ ಪಡೆಯದ, ಸಮಾಜದ ಕೆಳಸ್ತರದ ದನಿಗಳನ್ನು ಇನ್ನೊಂದು ಸ್ತರದ ಲೇಖಕ ಪ್ರತಿನಿಧಿಸಲಾರ ಎಂಬ ವಾದವೊಂದು ಕಳೆದ ಕೆಲವು ವರ್ಷಗಳಿಂದ ಮಂಡಿತವಾಗುತ್ತಿದೆ. ಹಾಗೆ ತನ್ನ ವರ್ಗ-ಇಲ್ಲವೇ ವರ್ಣದ್ದಲ್ಲದ ಅನುಭವವನ್ನು ಚಿತ್ರಿಸುವ ಲೇಖಕನ ಕೃತಿಯಲ್ಲಿ ಅಧಿಕೃತತೆ ಕಾಣುವುದಿಲ್ಲವೆಂದೂ ಹೇಳಲಾಯಿತು. ಮುಂದುವರೆದು ಹೀಗೆ ಕೆಳಸ್ತರದ ದನಿಗಳನ್ನು ದಲಿತರೇ ಮಂಡಿಸುತ್ತಾ ಹೋಗುವುದು ಕೇವಲ ಆ ಸ್ತರವನ್ನು ಸಾಹಿತ್ಯಕವಾಗಿ ದಾಖಲು ಮಾಡುವುದಕ್ಕಾಗಿ ಅಲ್ಲ ; ಬದಲಿಗೆ ಸಾಮಾಜಿಕ ಅನ್ಯಾಯದ ವಿರುದ್ಧ ಪ್ರತಿಭಟನೆಯನ್ನು ವ್ಯಕ್ತಪಡಿಸುವುದಕ್ಕಾಗಿ ಎಂದೂ ವಾದಿಸಲಾಗಿದೆ. ಸಾಹಿತ್ಯ ರಚನೆಯ ಬಗ್ಗೆ ತಾತ್ತ್ವಿಕವಾಗಿ ಬೇರೆಯದೇ ಆದ ನಿಲುವುಗಳನ್ನು ಹೊಂದಿರುವ ಈ ವಾದವನ್ನು ಕುರಿತಂತೆ ಚರ್ಚೆಗಳು ನಡೆಯುತ್ತಿವೆ.

ಪ್ರತಿಭಟನೆಯ ಸಾಹಿತ್ಯವನ್ನು ರಚಿಸುತ್ತಿರುವವರಲ್ಲೂ ಕೂಡ ಎಲ್ಲರೂ ತಮ್ಮ ಸಾಮಾಜಿಕಸ್ತರದೊಡನೆ ಒಂದಾಗಿ ಸಮಸ್ಯೆಯನ್ನು ಚಿತ್ರಿಸಲು ಶಕ್ತರಾಗಿಲ್ಲ. ತಾವು ಪಡೆದುಕೊಂಡ ಪ್ರಜ್ಞೆಯ ದೆಸೆಯಿಂದಾಗಿಯೇ ಒಬ್ಬಂಟತನವನ್ನು ಅನುಭವಿಸುವುದು ಕಾಣುತ್ತಿದೆ. ಇದು ಮನುಷ್ಯನ ಅಸ್ತಿತ್ವದ ಒಂದು ಮುಖ್ಯ ಸತ್ಯವಷ್ಟೆ. ಇದೇನೆ ಇರಲಿ ; ಈ ಮಾರ್ಗದ ಸಾಹಿತ್ಯದ ಸ್ವರೂಪ ಹಾಗೂ ಪ್ರಭಾವಗಳನ್ನು ಮುಂದಿನ ದಿನಗಳು ಮಾತ್ರ ನಿಚ್ಚಳಗೊಳಿಸಬಲ್ಲವು.

ಅನುಬಂಧ :

ಮಹಿಳಾ ಬರೆಹಗಾರರು : ಸಾಹಿತಿಗಳನ್ನು ಗಂಡಸರು, ಹೆಂಗಸರು ಎಂದು ಬೇರೆ ಮಾಡಿ ನೋಡುವುದನ್ನು ವಿರೋಧಿಸಲಾಗುತ್ತಿದೆ. ಆದರೂ ಮೇಲಿಂದ ಮೇಲೆ ಮಹಿಳೆಯರು ಬರೆಹಗಳನ್ನು ಒಂದು ಕಡೆ ಇರಿಸಿ ಸಮೀಕ್ಷಿಸುವ ಪ್ರವೃತ್ತಿಯಂತೂ ಇದ್ದೆ ಇದೆ. ಈ ಲೇಖನದಲ್ಲಿ ಹಾಗೆ ಅವರ ಬರೆಹಗಳನ್ನು ಪ್ರತ್ಯೇಕವಾಗಿ ಪರಿಗಣಿಸಿಲ್ಲ. ಒಂದು ಮುಖ್ಯ ಅಂಶದ ಕಡೆಗೆ ಗಮನ ಸೆಳೆಯಲೆಂದು ಈ ಭಾಗವನ್ನು ಬರೆಯಲಾಗಿದೆ.

ಕಳೆದ ಒಂದೂವರೆ ದಶಕದಲ್ಲಿ ಎಂದಿಗಿಂತ ಹೆಚ್ಚು ಸಂಖ್ಯೆಯ ಬರೆಹಗಾರ್ತಿಯರು ಕಂಡುಬಂದಿದ್ದಾರೆ. ಕಥಾ ಸಾಹಿತ್ಯದಲ್ಲಿ ಅವರ ಕೃಷಿ ಹೆಚ್ಚಾಗಿದೆಯಾದರೂ ಕಾವ್ಯವನ್ನೂ ತಮ್ಮ ಅಭಿವ್ಯಕ್ತಿ ಪ್ರಕಾರವನ್ನಾಗಿ ಆರಿಸಿಕೊಂಡು ಗಮನಾರ್ಹ ಸಾಧನೆಯನ್ನು ಮಾಡಿದವರಿದ್ದಾರೆ. ಈ ಎರಡೂ ಪ್ರಕಾರಗಳ ಆಯ್ಕೆಯಲ್ಲಿಯೇ ಮಹಿಳಾ ಜಗತ್ತಿನ ಮೌಲ್ಯಗಳ ದ್ವಂದ್ವಕೂಡ ಪ್ರಕಟವಾಗಿದೆ. ಬಹುಮಟ್ಟಿಗೆ ಕುಟುಂಬ ಕೇಂದ್ರಿತ ಜೀವನವನ್ನು ಆಧರಿಸಿ ತಮ್ಮ ಗ್ರಹಿಕೆಯನ್ನು ರೂಪಿಸಿಕೊಂಡ ಬರೆಹಗಾರ್ತಿಯರು ಕಥಾ ಸಾಹಿತ್ಯವನ್ನು ಹಾಗೂ ಯಥಾಸ್ಥಿತಿವಾದಿ ದೃಷ್ಟಿಕೋನವನ್ನು ಆರಿಸಿದ್ದಾರೆ. (ಒಂದೆರಡು ವಿನಾಯಿತಿಗಳಿರಲೂ ಸಾಧ್ಯ). ವ್ಯಕ್ತಿಕೇಂದ್ರಿತ ಜೀವನವನ್ನು ಆಧರಿಸಿ ಗ್ರಹಿಕೆಯನ್ನು ರೂಪಿಸಿಕೊಂಡವರು ಕಾವ್ಯವನ್ನು ರಚಿಸಿದ್ದಾರೆ. ಬರೆಯುವ ಮಹಿಳೆಯರು ಬಹುಮಟ್ಟಿಗೆ ವಿದ್ಯಾವಂತ ಮಧ್ಯಮ ವರ್ಗಕ್ಕೆ ಸೇರಿದವರಾಗಿದ್ದು, ಈ ಮೌಲ್ಯ ದ್ವಂದ್ವ ಆ ವರ್ಗಕ್ಕೆ ಸಹಜವಾದದ್ದೇ ಆಗಿದೆ. ಆದರೆ ಪುರುಷ ಪ್ರಧಾನ ಸಮಾಜದಲ್ಲಿ 'ಶೋಷಿತಳಾದ' ಮಹಿಳೆಯ ಗ್ರಹಿಕೆಯ ಜಗತ್ತು ಅಧಿಕೃತವಾಗಿ ಶೋಧಿತವಾಗಿಲ್ಲ ; ದಾಖಲಾಗಿಲ್ಲ. ಮೇಲಿಂದ ಮೇಲೆ ಸಾಹಿತ್ಯಕ ಚರ್ಚೆಗಳಲ್ಲಿ ಮಾತ್ರ ಮಹಿಳೆಯರ ಸಾಹಿತ್ಯವನ್ನು ಗೇಲಿ ಮಾಡುತ್ತಲೇ ಇನ್ನೊಂದು ಕಡೆ ಅವರ ಗ್ರಹಿಕೆ ಅಭಿವ್ಯಕ್ತಿಗೆ ಇರುವ ಅಡ್ಡಿ ಆತಂಕಗಳನ್ನು ಕುರಿತು ಮಾತನಾಡುವುದನ್ನು ಕಾಣುತ್ತೇವೆ. ಈ ಆತಂಕಗಳು ಪರಿಸರ ನಿರ್ಮಿತವಾದದ್ದೇ ಆಗಿರುವುದಾದರೆ ಮುಂದಿನ ದಿನಗಳಲ್ಲಿ ಮಹಿಳೆಯರು ರಚಿಸುವ ಸಾಹಿತ್ಯ ಈಗಿರುವುದಕ್ಕಿಂತ ಬೇರೆಯಾಗುವುದು ಸಾಧ್ಯ.

ಕೊನೆಯ ಮಾತು :

ಈ ಸಮೀಕ್ಷೆಯಲ್ಲಿ ಇಪ್ಪತ್ತೈದು ವರ್ಷಗಳಲ್ಲಿ ಬಂದ ಯಾವ ಕೃತಿಯನ್ನೂ ಉಲ್ಲೇಖಿಸಿಲ್ಲ. ಸಾಹಿತ್ಯದ ಪ್ರೇರಣೆಗಳನ್ನು ಗುರುತಿಸುವುದೇ ಮುಖ್ಯ ಉದ್ದೇಶವಾಗಿದ್ದುದರಿಂದ ಈ ಮಾರ್ಗವನ್ನು ಅನುಸರಿಸಲಾಗಿದೆ. ಈ ಬಗೆಯ ಸಮೀಕ್ಷೆಗಳಿಗೆ ಇದೇ ಸರಿಯಾದ ಮಾರ್ಗವೆಂಬುದು ಇರಲಾರದೆಂಬುದೇ ಈ ಸಮೀಕ್ಷಕನ ನಿಲುವು.

ಕರ್ನಾಟಕ ಇತಿಹಾಸ ಸಂಶೋಧನೆ

ಎಸ್. ಚಂದ್ರಶೇಖರ್

ಈ ಲೇಖನದಲ್ಲಿ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ನಡೆದಿರುವ "ಕರ್ನಾಟಕದ ಇತಿಹಾಸ ಸಂಶೋಧನೆ" ಬಗ್ಗೆ ಒಂದು ವಿಮರ್ಶಾ ಚಿತ್ರಣವನ್ನು ಕೊಡುವ ಪ್ರಯತ್ನ ಮಾಡಿದ್ದೇನೆ. ಈ ಸಂಶೋಧನೆಗಳ ತಾತ್ವಿಕ ನೆಲೆಗಳನ್ನು, ಪ್ರೇರಣೆಗಳನ್ನುಗುರುತಿಸುವ ಯತ್ನವನ್ನು ನನ್ನ ಮಿತ್ರರೂ, ಕನ್ನಡ ಅಧ್ಯಾಪಕರೂ ಆದ ಶ್ರೀ ಬಸವರಾಜ ಕಲ್ಗುಡಿ ಯವರು ಯಶಸ್ವಿಯಾಗಿ ಮಾಡಿರುತ್ತಾರೆ. ಅವರ ಲೇಖನವೂ ಅಚ್ಚಿನಲ್ಲಿರುವುದರಿಂದ ಮತ್ತು ನನ್ನ ಅವರ ದೃಷ್ಟಿಕೋನಗಳು ಬಹುಮಟ್ಟಿಗೆ ಒಂದೇ ಆದ್ದರಿಂದ ನಾನು ಈವರೆಗೆ ಪ್ರಕಟವಾಗಿ ಲಭ್ಯವಿರುವ ಸಂಶೋಧನಾ ನಿಬಂಧನೆಗಳ ಮತ್ತು ಕೆಲ ವಿಶ್ಲೇಷಣಾತ್ಮಕ ಅಧ್ಯಯನಗಳ ವಿಮರ್ಶೆಯನ್ನು ಕ್ರಮವಾಗಿ ಇಲ್ಲಿ ಮಾಡುತ್ತಾ ಹೋಗಿದ್ದೇನೆ. ಎಲ್ಲ ಪ್ರಕಟಿತ ಕೃತಿಗಳನ್ನು ನಾನು ನೋಡಿದ್ದೇನೆಂದು ಹೇಳಲಾರೆ, ಕೆಲವು ನನ್ನ ಗಮನಕ್ಕೆ ಬರದೇ ಹೋಗಿರಬಹುದು. ಹೆಚ್ಚಾಗಿ ವಿವಿಧ ಸಂಶೋಧಕರ ಬಿಡಿ ಲೇಖನಗಳು ಅಲ್ಲಲ್ಲಿ ಪ್ರಕಟವಾಗಿವೆ. ನನ್ನ ದೃಷ್ಟಿಯಲ್ಲಿ ಮಹತ್ವಪೂರ್ಣ ವೆನಿಸುವ ಕೆಲವು ಲೇಖನಗಳನ್ನುಪರಿಶೀಲಿಸಿದ್ದೇನೆ. ಆದರೆ ಅವುಗಳ ಪಟ್ಟಿಯನ್ನು ಇಲ್ಲಿ ಕೊಟ್ಟಿಲ್ಲ.

ಕರ್ನಾಟಕದ ಇತಿಹಾಸ ಸಂಶೋಧನೆ ಇತ್ತೀಚೆಗೆ ಕೆಲ ಉತ್ಸಾಹಿಗಳಿಂದ ಕ್ರಮ ವಾಗಿ ನಡೆಯುತ್ತಿದೆ. ಅಂದರೆ ಈವರೆವಿಗೆ ನಡೆದಿಲ್ಲವೆಂದಲ್ಲ. ನಡೆದಿರುವ ಕೆಲಸ ಅತ್ಯಲ್ಪ ಹಾಗೂ ಅಸಮರ್ಪಕ. ಕೆಲವರಂತೂ "ಆಡುಮುಟ್ಟದ ಸೊಪ್ಪಿಲ್ಲ" ವೆಂಬಂತೆ ಎಲ್ಲ ಭಾಗಗಳಲ್ಲೂ ಕೈಯಾಡಿಸಿ ಯಾವುದೇ ಸಮರ್ಥವಾದ ಅಧ್ಯಯನ ಕ್ರಮವಾಗಿ ಮಾಡದೆ ಅವರ ವಿಚಾರ ಧಾರೆ, ಸಂಶೋಧನಾ ಕ್ರಮವನ್ನೊಪ್ಪದ ಉತ್ಸಾಹಿ ಯುವ ಸಂಶೋಧಕರನ್ನೂ ಗೇಲಿ ಮಾಡುವುದರಲ್ಲಿಯೇ ತೃಪ್ತಿಪಟ್ಟು ಕೊಳ್ಳುತ್ತಾ ಕರ್ನಾಟಕ ಇತಿಹಾಸದ ಮೇಲೆ ಏಕಸ್ವಾಮ್ಯ ಹೊಂದಿರುವವರಂತೆ ವರ್ತಿಸುತ್ತಾರೆ. ಆದರೂ ಇಂಥವರ ಮಾತಿಗೆ ಸೊಪ್ಪು ಹಾಕದೆ ಕೆಲವರಾದರೂ ಮುಂದುವರಿಯುತ್ತಿರುವುದು ಸ್ವಾಗತಾರ್ಹ. ಇಂಥವರಿಗೆ ಉತ್ತೇಜನ, ಮಾರ್ಗ ದರ್ಶನ ನೀಡುವವರೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆಂಬುದು ಒಂದು ಸಂತೋಷದ ವಿಷಯ. ಬಹುಶಃ ಆದರಿಂದಾಗಿಯೇ ನಮ್ಮ ಅಧ್ಯಯನ ಕಾಲದ (1956–1981) ಮೊದಲ 15 ವರ್ಷಗಳಲ್ಲಿ ಹೆಚ್ಚಾಗಿ ಕಂಡುಬರದ ಸಂಶೋಧನಾ ಚಟು ವಟಿಕೆ ಕಳೆದ ಹತ್ತುವರ್ಷಗಳಲ್ಲಿ ಗಮನಾರ್ಹವಾಗಿ ಹೆಚ್ಚಿದೆ.

ಗುಣ ಮತ್ತು ಸಂಖ್ಯೆಯ ದೃಷ್ಟಿಯಿಂದಲೂ ಕಳೆದ ಒಂದು ದಶಕದಲ್ಲಿ ನಡೆದಿರುವಷ್ಟು ಕೆಲಸ ಅದರ ಹಿಂದಿನ ಎರಡೂ ದಶಕಗಳು ಸೇರಿದಂತೆ ನಡೆದಿಲ್ಲವೆನ್ನಬಹುದು. ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಆಧುನಿಕ ಕರ್ನಾಟಕದ ಇತಿಹಾಸ ಸಂಶೋಧನೆ ಹೆಚ್ಚಾಗಿ ನಡೆದಿದ್ದು, ಪ್ರಾಚೀನ ಇತಿಹಾಸ ಸ್ವಲ್ಪ ಕಡೆಗಣಿಸಲ್ಪಟ್ಟಿದೆ. ಇವಕ್ಕೆ ಅಪವಾದವೆಂದರೆ ಡಾ. ಎಂ. ಚಿದಾನಂದಮೂರ್ತಿಯವರ "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ 450–1150 A.D." ನನಗನ್ನಿಸುವಂತೆ ಈ ಸಂಶೋಧನೆ ಅದರ ತೂಕ (ವಿಷಯದ ದೃಷ್ಟಿಯಿಂದ) ಮತ್ತು ವೈವಿಧ್ಯದಿಂದ ಹೆಚ್ಚು ಕೆಲಸವಾಗಿಲ್ಲವೆನ್ನುವ ಕೊರತೆಯನ್ನು ತುಂಬುತ್ತದೆ. ಇನ್ನು ವಿವಿಧ ಸಂಶೋಧನೆಗಳ ಒಳಹೊಕ್ಕು ನೋಡಬಹುದು.

ಮೊದಲಿಗೆ ಚಿದಾನಂದಮೂರ್ತಿಯವರ ಅಧ್ಯಯನವನ್ನೇ ಪರಿಶೀಲಿಸಬಹುದು ಈ ಅಧ್ಯಯನಕಾಲದ ಕರ್ನಾಟಕದ ಸಾಂಸ್ಕೃತಿಕ ಅಧ್ಯಯನವನ್ನು ಶಾಸನಗಳಲ್ಲಿ ಕಂಡಂತೆ ಮಾಡುವುದು ಇವರ ಉದ್ದೇಶ. ಮೊದಲ ಪುಟದಲ್ಲೇ ವಾಲ್ಟೇರ್‌ರವರ ಇತಿಹಾಸ ಚಿತ್ರಣದ ಬಗ್ಗೆ ಇರುವ ಉಲ್ಲೇಖ ("My object is the history of human mind and not a mere detail of petty facts, nor am I concerned with the history of great lords".)ವನ್ನು ಉದ್ಧರಿಸಿ ತಮ್ಮ ಅಧ್ಯಯನವನ್ನಾರಂಭಿಸುತ್ತಾರೆ. ಅಧ್ಯಯನದ ಒಳ ಹೊಕ್ಕಂತೆ ನಾವು ಈ ಉದ್ದೇಶದ ಅರ್ಧದಷ್ಟನ್ನಾದರೂ ಡಾ. ಮೂರ್ತಿಯವರು ಸಾಧಿಸಿದ್ದಾರೆಂದು ಹೇಳಬಹುದು. ಏಕೆಂದರೆ ನಮಗೆ ಮಾನವನ ಮನಸ್ಸಿನ ಬಗ್ಗೆ ಹೆಚ್ಚು ತಿಳಿಯ ಬರದೆ ಘಟನೆಗಳ ಬಗ್ಗೆ ವಿವರಗಳು ಸಿಗುತ್ತವೆ ಮತ್ತು ವಾಲ್ಟೇರನ ಮತ್ತು ಸಂಶೋಧಕರ ಉದ್ದೇಶದಂತೆ ಬೇರೆ ಅಧ್ಯಯನಗಳಲ್ಲಿ ಕಾಣ ಬರುವಂಥ ಮಹಾಪುರುಷರ ಬಗೆಗಿನ ಅನಗತ್ಯ ಚರ್ಚೆ ಇಲ್ಲ. ಹೆಚ್ಚಾಗಿ ವಿಶ್ಲೇಷಣೆ ಕಾಣಬರುವುದಿಲ್ಲ. ವಿಷಯವನ್ನು ಹೆಕ್ಕಿ ತೆಗೆದು ಜೋಡಿಸಿ ಲೇಖಕರ ಅಭಿಪ್ರಾಯವೇನೆಂಬುದುದನ್ನು ತಿಳಿಯಗೊಡದೆ ಸಂದಿಗ್ಧತೆಯಲ್ಲಿ ಬಿಡುತ್ತಾರೆ. ಅಂದರೆ ಇವರು ಆಕರಗಳಲ್ಲಿನ ವಿಷಯವೇ ಸತ್ಯ. ಸಂಶೋಧಕ ವಿಶ್ಲೇಷಣೆಯ ಮೂಲಕ ತನ್ನ ಅಭಿಪ್ರಾಯವನ್ನು ಸೇರಿಸುವ ಅವಶ್ಯಕತೆಇಲ್ಲವೆಂದು ಪ್ರತಿಪಾದಿಸುವ ನಿರ್ದಿಷ್ಟವಾದ (Positivist) ಪಂಥಕ್ಕೆ ಹತ್ತಿರವಾಗುತ್ತಾರೆ. ಈ ಮೂಲಕ ಇತಿಹಾಸ ಸಂಶೋಧನೆಯಲ್ಲಿ ಅಸಾಧ್ಯವಾದ ನೂರಕ್ಕೆ ನೂರರಷ್ಟು ಸತ್ಯ ಇತಿಹಾಸ (True History) ಹೊರಗೆಡವಲು ಪ್ರಯತ್ನಪಟ್ಟಿದ್ದಾರೆನ್ನುವ ಅನುಮಾನಕ್ಕೆಡೆ ಮಾಡಿಕೊಡುತ್ತಾರೆ.

ಆದರೆ ಕೆಲವು ಕಡೆ ಅಧ್ಯಯನ ವಿಶ್ಲೇಷಣಾತ್ಮಕವಾಗಿಯೂ ಇದೆ. ಉದಾ : ಮನು ಮತ್ತು ವ್ಯಾಸರ ಕೃತಿಗಳಲ್ಲಿ ಕಾಣದ ಶ್ಲೋಕಗಳನ್ನುದ್ಧರಿಸಿ ಕಟ್ಟಳೆಗಳನ್ನು ವಿಧಿಸಿ ಜನರನ್ನು ಹೆದರಿಸುವ ಪ್ರಯತ್ನದ ಬಗ್ಗೆ ಚರ್ಚಿಸುತ್ತಾ ಅವುಗಳನ್ನು ವ್ಯಾಸ ಮನುಗಳ ತಲೆಗೆ ಕಟ್ಟಿದಂತಿದೆಯೆನ್ನುವಾಗ, ದಿಗಂಬರ, ಶ್ವೇತಾಂಬರರ ವಾದಗಳ

ಬಗ್ಗೆ (ಪು. 71) ಜೈನ ಧರ್ಮದ ಏಳ್ಗೆಯ ಬಗ್ಗೆ (ಪು. 79), ಶಾಸನಗಳ ಕಂಡುಬರುವಿಕೆಯಿಂದ ಬೌದ್ಧ ಧರ್ಮ ಹರಡಿತ್ತು ಎಂಬುದಕ್ಕಿಂತ ಮೌರ್ಯ ಸಾಮ್ರಾಜ್ಯ ವಿಸ್ತರಿಸಿತ್ತು ಎನ್ನುವಾಗ, ಹೀಗೆ ಕೆಲವು ಕಡೆ ವಿಶ್ಲೇಷಣಾ ಮನೋಭಾವವೂ ಕಂಡುಬರುತ್ತದೆ.

ಇನ್ನೂ ಹಲವು ಕಡೆ ಲೇಖಕರು ಒಂದು ರೀತಿಯ ನಿರ್ಲಿಪ್ತ ಧೋರಣೆ ಅನುಸರಿಸಿದಂತಿದೆ. ಉದಾ : ದೇವದಾಸಿಯರ ಸ್ಥಿತಿಗತಿಗಳ ಬಗ್ಗೆ; ಶಾಸನಗಳು ವೇಶ್ಯೆಯರನ್ನು ಗೌರವದಿಂದ ಕಂಡಿವೆ ಎನ್ನುವಾಗ ಯಾವುದೇ ಶಾಸನವನ್ನು ಪೋಷಕವಾಗಿ ಉದ್ಧರಿಸದೆ, "ಸೂಳೆಯರ ಹಾವಭಾವಗಳನ್ನು ಅವಹೇಳನ ಮಾಡಿರುವ ಶಾಸನಗಳೂ ಇವೆ" ಎನ್ನುವಾಗ ಶಾಸನಗಳನ್ನು ಉದ್ದರಿಸಿರುತ್ತಾರೆ (ಪು. 429). ಆತ್ಮಬಲಿಯ ಬಗ್ಗೆ "ಬಹು ವಿಚಿತ್ರ ಮತ್ತು ಅನಾಗರಿಕವಾಗಿ ಆಧುನಿಕ ಯುಗದ ನಮಗೆ ತೋರಬಹುದು" ಎಂದು ಹೇಳಿ ಸಂಪ್ರದಾಯವಾದಿಗಳೋ ಎಂಬಂತೆ ಆತ್ಮಬಲಿಗೊಳಗಾದವರನ್ನು ನೆನಪಿಗೆ ತಂದುಕೊಂಡರೆ "ಅವರ ವಿಷಯದಲ್ಲಿ ಅಗಾಧವಾದ ಗೌರವವೂ ಭಕ್ತಿಯೂ, ಹೆಮ್ಮೆಯೂ ಮೂಡುತ್ತವೆ" (ಪು. 299) ಎನ್ನುತ್ತಾರೆ. ಆದರೆ ಈ ರೀತಿಯ ಕ್ರಿಯೆಗಳಲ್ಲಿ ತೊಡಗಿ ಜೀವಕೊಡುವುದರ ಸಾಮಾಜಿಕ, ಆರ್ಥಿಕ ಹಿನ್ನೆಲೆ ಏನೆಂಬುದನ್ನು ಹೆಕ್ಕಿ ತೆಗೆಯುವ ಪ್ರಯತ್ನ ಪಟ್ಟಿದ್ದರೆ ಆ ಚಿತ್ರಣ ಹೆಚ್ಚು ಅರ್ಥಪೂರ್ಣವಾಗುತ್ತಿತ್ತು ಎನಿಸುತ್ತದೆ. ಕರ್ನಾಟಕದ ಪ್ರಾಚೀನ ಸಂಸ್ಕೃತಿಯ ಲಕ್ಷಣಗಳು ರಾಜ್ಯವ್ಯವಸ್ಥೆ ಮತ್ತು ಜನಜೀವನ ಇವೆರಡರ ನಡುವಣ ಸಂಬಂಧದಲ್ಲಿ ರೂಪುಗೊಳ್ಳುವ ಬೆಳವಣಿಗೆಯೆಂದೇ ಹೇಳಬಹುದು. ಹೀಗಾಗಿ ಆಡಳಿತ ವ್ಯವಸ್ಥೆ, ಸಾಮಾಜಿಕ ಜೀವನ, ಆರ್ಥಿಕ ವ್ಯವಸ್ಥೆ ಇವುಗಳ ಅರ್ಥಪೂರ್ಣ ಚರ್ಚೆಯೊಂದು ಇವುಗಳ ನಡುವಣ ಸಂಬಂಧದಲ್ಲೇ ರೂಪುಗೊಳ್ಳಲು ಸಾಧ್ಯ. ಚಿದಾನಂದಮೂರ್ತಿಯವರ ಅಧ್ಯಯನದ ಈ ಅಧ್ಯಾಯಗಳಲ್ಲಿ ಇಂತಹ ಚರ್ಚೆಯೊಂದು ಬೆಳೆದಿಲ್ಲವೆಂದು ಹೇಳಬಹುದು. ಇಲ್ಲಿಯೂ ಸಾಮಗ್ರಿಗಳ ಸಂಗ್ರಹವೇ ಹೆಚ್ಚು ಪ್ರಾಧಾನ್ಯ ಪಡೆದಿದೆ.

ಸ್ವಲ್ಪ ಭಿನ್ನವಾದ ಆದರೆ ಎದ್ದು ಕಾಣುವ ಲೋಪದೋಷವೆಂದರೆ ಕಾಪಾಲಿಕರ ಮತ್ತು ಶೈವಧರ್ಮದ ಬಗೆಗಿನ ನಿರೂಪಣೆ. ಲಕುಲೀಶ, ಪಾಶುಪತ ಮತ್ತು ಕಾಳಾಮುಖ ಪಂಥಗಳು ಒಂದೇ; ಅವು ಶೈವಧರ್ಮದ ಇನ್ನೆರಡು ಹೆಸರುಗಳೆಂದು ಸಂಶೋಧಕರ ಕಲ್ಪನೆ. ಈ ಕಲ್ಪನೆಗೆ ಪೋಷಕವಾಗಿ ಲೇಖಕರು ಆರುಜನ ಕರ್ತೃಗಳು ಹೆಸರಿಸುವ ಶೈವಶಾಖೆಗಳನ್ನು ಉಲ್ಲೇಖಿಸುವಾಗ ಈ ಶಾಖೆಗಳಲ್ಲಿ ಕಾಪಾಲಿಕ ಶಾಖೆಯು ಐದು ಜನರಿಂದ ಶೈವಶಾಖೆಯೆಂದು ಪರಿಗಣಿಸಲ್ಪಟ್ಟಿದ್ದರೂ ಸಂಶೋಧಕರು ಕಾಪಾಲಿಕರನ್ನು ಬಹುಶಃ ಅವರು ವಾಮಾಚಾರಿಗಳಾದ್ದರಿಂದ ಅವರನ್ನು ಶೈವರೆಂದು ಗಣನೆಗೆ ತೆಗೆದುಕೊಂಡಿಲ್ಲವೇನೋ ಎನ್ನಿಸುತ್ತದೆ. (ಪು. 133) ಆದರೆ ಕಾಪಾಲಿಕರು, ಕಾಳರ ಬಗ್ಗೆ ಚರ್ಚಿಸುವಾಗ ಪ್ರಾಸಂಗಿಕವಾಗಿ ಶೈವಧರ್ಮದ ಒಂದು ಶಾಖೆಯೆಂದು ಹೇಳುತ್ತಾರೆ (ಪು. 151).

ಆದರೂ ಈ ಎಲ್ಲ ಮಿತಿಗಳನ್ನು ಮೀರಿ ಸುಮಾರು ಏಳು ಶತಮಾನಗಳ (450–1150 A.D.) ಕಾಲದ ಸಾಂಸ್ಕೃತಿಕ ವಿವರಗಳನ್ನು ಬಹುತೇಕ ಶಾಸನ ಗಳಿಂದಲೇ ಹೆಕ್ಕಿತೆಗೆಯುವ ಕಾರ್ಯದಲ್ಲಿ ಡಾ. ಮೂರ್ತಿಯವರು ಯಶಸ್ವಿಯಾಗಿ ದ್ದಾರೆ. ಇವರಿಗಿರುವ ಭಾಷಾ ವಿಜ್ಞಾನದ ಶಿಸ್ತು ಮತ್ತು ಆಲೋಚನೆಗಳು, ಶಾಸನ ಲಿಪಿಯನ್ನು ಅರ್ಥೈಸುವಲ್ಲಿ, ಪದವಿಭಾಗಿಸಿ ಮೂಲಗ್ರಹಿಸುವಲ್ಲಿ ಹೆಚ್ಚು ಪ್ರಯೋಜನಕಾರಿಯಾಗಿರುವುದೇ ಅಲ್ಲದೆ ಎಂಥವರ ಮೆಚ್ಚುಗೆಯನ್ನೂ ಗಳಿಸಿಕೊಳ್ಳು ವಂಥವು. ಮೂಲ ಇತಿಹಾಸದ ವಿದ್ವಾಂಸರು ಮಾಡಬೇಕಾದ ಕೆಲಸವನ್ನು ಇವರು ಮಾಡಿದ್ದಾರೆ. ಇವರು ತಮ್ಮ ಅಧ್ಯಯನದಲ್ಲಿ ಮುಂದುವರಿದ ಸಂಶೋಧನಾ ಕ್ರಮವನ್ನು ಹೆಚ್ಚು ವ್ಯವಸ್ಥಿತ ರೀತಿಯಲ್ಲಿ ಅಳವಡಿಸಿಕೊಂಡಿಲ್ಲವೆನ್ನಬಹುದು. ಆದ್ದರಿಂದಲೇ ತಮ್ಮದೇ ಆದ ಒಂದು ರೀತಿಯ ಮಿತಿಗಳನ್ನು ಹಾಕಿಕೊಂಡು ಉದಾರ ವಾದಿ ಮನೋಭಾವದ ಸಂಶೋಧನಾ ವಿಧಾನವನ್ನು ಅನುಸರಿಸಿದ್ದಾರೆ.

ಈ ಅಧ್ಯಯನ ಪ್ರಾಚೀನ ಕರ್ನಾಟಕ ಇತಿಹಾಸದ ಮೇಲಿನ ಒಂದು ದಾಖಲೆಯೇ ಅಲ್ಲದೆ ಒಂದು ಆಕರ ಪುಸ್ತಕ ವೆಂದು(ಶಾಸನ ಸಾಮಗ್ರಿಯ ಬಳಕೆಯ ದೃಷ್ಟಿಯಿಂದ) ಧಾರಾಳವಾಗಿ ಪರಿಗಣಿಸಬಹುದು. ಲೇಖಕರು ವಿಷಯ ಸಂಗ್ರಹಣ ಕಾರ್ಯದಲ್ಲಿ ಪ್ರತ್ಯೇಕವಾಗಿ ಇತಿಹಾಸ ಸಂಶೋಧಕರಿಗೆ ಹೆಚ್ಚು ಪ್ರಯೋಜನಕಾರಿಯಾದ ಸಣ್ಣ ಬಿಡಿಪಟ್ಟಿಕೆಗಳ ಮೇಲೆ (slip system) ವಿಷಯ ಸಂಗ್ರಹಿಸಿ, ಅದನ್ನು ಮೊದಲ ಅರಿಕೆಯಲ್ಲಿ ನಿವೇದಿಸುವುದರ ಮೂಲಕ ನನ್ನಂಥ ಹಲವರಿಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದಾರೆ.

Economic Conditions in Karnataka ; ಕರ್ನಾಟಕದ ಆರ್ಥಿಕ ಪರಿಸ್ಥಿತಿ A.D. 9T3-1336 A.D

ವಿಷಯಗಳನ್ನಾಯ್ದು (ಕತ್ತರಿಸಿ) ಯಾವುದೇ ವ್ಯಾಖ್ಯಾನ ಮಾಡದೆ ಅಥವಾ ಅರ್ಥೈಸುವ ಪ್ರಯತ್ನ ಪಡದೆ ಜೋಡಿಸುವುದನ್ನು 'ಪ್ರೌಢ ಸಂಶೋಧನಾಪ್ರಬಂಧ' ವೆಂದು ಒಪ್ಪಿಕೊಳ್ಳುವುದಾದರೆ ಕುಪ್ಪಸ್ವಾಮಿ. ಜಿ. ಆರ್. ಇವರ, ಮೇಲಿನ ಅಧ್ಯಯನ ವನ್ನು ಸಂಶೋಧನೆ ಎಂದು ಕರೆಯಬಹುದು. ಈ ಕ್ರಮವನ್ನು ಇತಿಹಾಸ ಸಂಶೋಧನಾ ಕ್ರಮದಲ್ಲಿ 'scissor and paste' (ಕತ್ತರಿಸಿ ಜೋಡಿಸುವಿಕೆ) ಎಂದು ಕರೆಯುವುದುಂಟು.

ಈ ಸಂಶೋಧನೆಯಲ್ಲಿ ಹಳಗನ್ನಡ ಮತ್ತು ಮಧ್ಯಕಾಲೀನ ಕನ್ನಡದ ಪದಗಳಿಗೆ ಸಮಾನಾಂತರ ಸಮಕಾಲೀನ ಕನ್ನಡದಲ್ಲಿ (ಅಥವಾ ಇಂಗ್ಲಿಷ್‌ನಲ್ಲಿ) ಅರ್ಥವನ್ನು ಕೊಡುವಂಥಹ ಸಂಶೋಧಕನ ಮೂಲಭೂತ ಕೆಲಸವನ್ನು ಮಾಡಿಲ್ಲ. ಪದಗಳನ್ನು ವಸ್ತುನಿಷ್ಠತೆ ದೃಷ್ಟಿಯಿಂದ ಅವು ಹೇಗೆ ಬಳಸಲ್ಪಟ್ಟಿದ್ದವೋ ಹಾಗೆಯೇ

ತೆಗೆದುಕೊಳ್ಳಬೇಕಾದುದು ಸರಿ. ಆದರೆ ಅವುಗಳ ಅರ್ಥವನ್ನು ಅಲ್ಲಿಯೇ ಆಗಲಿ, ಅಡಿ ಟಿಪ್ಪಣಿಗಳಲ್ಲಾಗಲಿ ಕೊಡಬೇಕಾದುದು ಸಂಶೋಧಕನ ಮುಖ್ಯ ಕರ್ತವ್ಯ. ಆದರೆ ಈ ಅಧ್ಯಯನದಲ್ಲಿ ಈ ಬಗ್ಗೆ ಎಳ್ಳಷ್ಟೂ ಗಮನ ಕೊಟ್ಟಿಲ್ಲ. "ವೃತ್ತಿ" ಯೆನ್ನುವ ಪದವನ್ನು ಒಂದು ಪುಟದ ಅಂತರದಲ್ಲಿ ಏಳುಸಲ 'ಕೊಡುಗೆ' (grant) 'ದಾನ' (gift) ಎನ್ನುವ ಅರ್ಥದಲ್ಲಿ ಉಪಯೋಗಿಸಿದ್ದರೂ (ಪು. 29) ಲೇಖಕರು ಅದನ್ನು ವಿವರಿಸುವ ಗೋಜಿಗೇ ಹೋಗದೆ ಸಂಶೋಧನಾ ಶಿಸ್ತು ಇವರಿಗೆ ಗೊತ್ತಿಲ್ಲವೇ ಎನ್ನುವ ಅನುಮಾನ ಬರುವುದಕ್ಕೆ ದಾರಿ ಮಾಡಿಕೊಡುತ್ತಾರೆ. ಈ ಲೋಪ ಅಧ್ಯಯನದುದ್ದಕ್ಕೂ ಸಾಮಾನ್ಯವಾಗಿ ಎದ್ದು ಕಾಣುತ್ತದೆ.

ಚಿದಾನಂದಮೂರ್ತಿಯವರ ಅಧ್ಯಯನ ಹೆಚ್ಚು ವಿಶ್ಲೇಷಣಾತ್ಮಕವಾಗಿಲ್ಲ ದಿದ್ದರೂ ವಿಷಯಗ್ರಹಿಕೆಗೆ ಹೆಚ್ಚು ಅನುವು ಮಾಡಿಕೊಡುತ್ತದೆ. ಪದಗಳನ್ನು ಅರ್ಥೈಸುವಲ್ಲಿ ಅವರು ಲೋಪಮಾಡಿಲ್ಲ. ಆದರೆ ಕುಪ್ಪುಸ್ವಾಮಿಯವರ ಅಧ್ಯಯನ ವಿಶ್ಲೇಷಣಾತ್ಮಕವೂ ಅಲ್ಲ ಮತ್ತು ಮೂಲಭೂತ ಸಂಶೋಧನಾ ಶಿಸ್ತಿಗೂ ಒಳಪಟ್ಟಿಲ್ಲವೆಂದು ಹೇಳಬಹುದು.

Fairs (ಜಾತ್ರೆ, ಪರಿಷೆಕ್ಷೆ) ಎನ್ನುವ ಕಿರು ಶಿರೋನಾಮೆಯಡಿಯಲ್ಲಿ ಇವರು ಹೇಳುವುದಿಷ್ಟು ;"All the citizens Participated in the establish ment of fairs." (ಎಲ್ಲ ಪ್ರಜೆಗಳೂ ಜಾತ್ರೆಗಳ ವ್ಯವಸ್ಥಾಪನೆಯಲ್ಲಿ ಪಾಲ್ಗೊಳ್ಳು ತ್ತಿದ್ದರು) (ಪು. 30) ಈ ಅಧ್ಯಯನದ ಉದ್ದೇಶ ಕರ್ನಾಟಕದ ಈ ಅಧ್ಯಯನ ಕಾಲದ ಆರ್ಥಿಕ ಸ್ಥಿತಿಯನ್ನು ಬೆಳಕಿಗೆ ತರುವುದು. ಜಾತ್ರೆ ಅಥವಾ ಪರಿಷೆ (ಸಂತೆ ಎನ್ನುವ ಅರ್ಥವೂ ಬರುತ್ತದೆ) ಈ ಅಧ್ಯಯನದ ದೃಷ್ಟಿಯಲ್ಲಿ ಇಲ್ಲಿ ಪಾಲ್ಗೊಳ್ಳು ಜನರ ಆರ್ಥಿಕಸ್ಥಿತಿ, ವ್ಯಾಪಾರದಲ್ಲಿ ಬಳಸಲ್ಪಟ್ಟ ಮಾಧ್ಯಮ (medium of exchange) ಅಥವಾ ಮಾರಾಟವಾಗುತ್ತಿದ್ದ ವಸ್ತುಗಳ ವಿಷಯ ಮುಖ್ಯ ಎನ್ನುವುದು ಯಾವ ಪ್ರಜ್ಞಾವಂತನಿಗೂ ಹೊಳೆಯದಿರದು. ಆದರೆ ನಾವು ಲೇಖಕರ ಆರ್ಥಿಕ ಸ್ಥಿತಿಗೆ ಸಂಬಂಧಪಡದ ಮೇಲಿನ ಹೇಳಿಕೆಯೊಂದಿಗೆ ತೃಪ್ತಿ ಪಡಬೇಕಾಗುತ್ತದೆ.

ಸಂಶೋಧಕರು, ಕೆರೆಗಳನ್ನು ಕಟ್ಟುವುದಕ್ಕೆ ಎಮ್ಮೆಯ ಒಡೆಯರೂ (buffalo-keepers), ಕಾವಲುಗಾರರೂ (watchman), ಸಾಮಾನ್ಯ ಭಕ್ತರೂ (Lay-disciples) ಕಾರಣರಾಗಿದ್ದರು ಅಥವಾ ಕಟ್ಟಿಸಿದರು (ಪು. 68) ಎನ್ನುತ್ತಾ ಶಾಸನಗಳನ್ನು ಉದ್ಧರಿಸುತ್ತಾರೆ. ಈ ಅಧ್ಯಯನದಲ್ಲಿ ಸಾಮಾನ್ಯ ಜನರ ಧರ್ಮ ಬುದ್ಧಿಯಿಂದ ಆದ ಮಹತ್ಕಾರ್ಯಕ್ಕೆ ನಿದರ್ಶನಗಳಿವು. ಆದರೆ ಇದು ಲೇಖಕರಿಗೆ ಹೊಳೆಯಲಿಲ್ಲವೇ? ವಿಷಯವನ್ನು ಮಗುಂ' ಆಗಿ ಹೇಳಿ ಈ ವಿಷಯದಲ್ಲಿ ಹೆಚ್ಚು ವಿವರಗಳನ್ನು ಬಯಸುವವರನ್ನು (ಇದು ಲೇಖಕರ

ಮಾಡಲೇಬೇಕಾದ ಕೆಲಸವೂ ಹೌದು) ನಿರಾಶೆಗೊಳಿಸುತ್ತಾರೆ. ಸಾಮಾನ್ಯ ಜನರ ಆರ್ಥಿಕ ಸ್ಥಿತಿಯ ಬಗ್ಗೆ ಎಲ್ಲಿಯೂ ವಿವರ ಕೊಡದೆ. ಆರ್ಥಿಕ ಸ್ಥಿತಿಯೆಂದರೆ ಬರೀ ಮೇಲ್ವರ್ಗಗಳ ಆರ್ಥಿಕ ಸ್ಥಿತಿಯೆಂದು ಇವರು ತಿಳಿದುಕೊಂಡಿದ್ದಾರೆಯೇ ಎಂಬ ಆಲೋಚನೆಗೆ ಎಡೆಮಾಡಿ ಕೊಡುತ್ತಾರೆ.

Rural Economy : (ಗ್ರಾಮೀಣ ಅರ್ಥ ವ್ಯವಸ್ಥೆ)ಯ ಬಗ್ಗೆ ಇರುವ ಎರಡೂ ಅಧ್ಯಾಯಗಳಲ್ಲಿ ಗ್ರಾಮೀಣ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಒಂದು ಸಂಕ್ಷಿಪ್ತ ಮಾಹಿತಿಯೂ ದೊರೆಯುವುದಿಲ್ಲವೆಂದರೆ ಆಶ್ಚರ್ಯವಾದರೂ ಇದು ನಿಜ.

ಕೊನೆಯದಾಗಿ ಕೂಲಿ (wages)ಯ ಬಗ್ಗೆ ಆರನೆ ಅಧ್ಯಾಯದಲ್ಲಿ ಪ್ರಸ್ತಾಪ ಮಾಡಿ ಅನುಬಂಧದಲ್ಲಿ ಕೂಲಿದರ ಪಟ್ಟಿಯನ್ನೂ ಕೊಟ್ಟು ಆಚಾರ್ಯರಿಗೆ 20 ಗದ್ಯಾಣ, ವೈಷ್ಣವರಿಗೆ 15 ಗದ್ಯಾಣ (ಪು. 193)ವೆಂದು, ವೈದಿವರಿಳಿಸಿ ದಿನಗೂಲಿ ಮಾಡು ವವನಿಗೆ (casual labour) 1 ಗದ್ಯಾಣ (ಪು. 192)ವೆಂದು ತಿಳಿಸಿ ಸಾಮಾನ್ಯ ಜನರ ಆರ್ಥಿಕ ಪರಿಸ್ಥಿತಿಯನ್ನು ಊಹಿಸಿಕೊಳ್ಳಲೂ ಭಯವಾಗುವ ಮಟ್ಟಕ್ಕೆ ಓದುಗರನ್ನು ತರುತ್ತಾರೆ. ಆದರೆ ನಿಯಮವೋ ಎಂಬಂತೆ ಈ ಬಗ್ಗೆ ಅಧ್ಯಾಯದಲ್ಲಿ ಎಲ್ಲೂ ಚಕಾರವನ್ನೆತ್ತುವುದಿಲ್ಲ.

ಮಧ್ಯಯುಗೀನ ಕರ್ನಾಟಕದ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯನ್ನು ಅಧ್ಯಯನ ಮಾಡಲು ಡಾ. ಗುರುರಾಜಾಚಾರ್ ಅವರು ತಮ್ಮ ಪಿ.ಎಚ್.ಡಿ. ನಿಬಂಧದಲ್ಲಿ (Some Aspects of Economic and Social life in Karnataka A.D. 1000–1300 A.D.) ಪ್ರಯತ್ನಪಟ್ಟಿದ್ದಾರೆ. ಆದರೆ ನಾವು ಇಲ್ಲಿ ಇವುಗಳ ಯಾವುದೇ ಅಂಶವನ್ನೂ ಸಮರ್ಪಕವಾಗಿ ಕಾಣುವುದಿಲ್ಲ.

ಹೊಸ ವಿಷಯವೋ ಎಂಬಂತೆ ಗದ್ದೆಯಲ್ಲಿ ವಿವಿಧ ರೀತಿಯ ಭತ್ತ ಬೆಳೆಯುತ್ತಿದ್ದರು. ಅವರು ಹೇಳುವ ಇನ್ನೊಂದು ಮಾತು "ಚಿತ್ತಾಕರ್ಷಕವಾಗಿ, ಸೋಮೇಶ್ವರ ಎನ್ನುವರು ಎಂಟು ಬಗೆಯ ಅಕ್ಕಿ (ಅಥವಾ ಭತ್ತ) ಇದ್ದುವೆಂದು ಉಲ್ಲೇಖಿಸುತ್ತಾರೆ". ಇದರಲ್ಲಿ ಚಿತ್ತಾಕರ್ಷಕವಾದುದಂತೂ ಏನೂ ಕಾಣುವುದಿಲ್ಲ. ಆಕರ್ಷಕವಾಗುವುದೆಂದರೆ "ಕಾಡಕ್ಕಿ" (wild rice) ಒರಟು ಅಥವಾ ದಪ್ಪ ಅಕ್ಕಿಯ ಬಗ್ಗೆ ಹೇಳುತ್ತಾ "ಸಾಗುವಳಿ ಮಾಡ್ದದ ಭೂಮಿ" (uncultivated land) ಯಲ್ಲಿ ಭತ್ತ ಬೆಳೆಯುತ್ತಿದ್ದರು ಎನ್ನುವುದು (ಪು. 41) ಸಾಗುವಳಿ ಮಾಡದೆ ಒಣಬೆಳೆ (ನೀರು ಹೆಚ್ಚು ಬೇಕಾಗದ ಜೋಳ, ಹುರುಳಿ ಮುಂತಾದ)ಯನ್ನೇ ಬೆಳೆಯುವುದಕ್ಕಾಗದೆಂದ ಮೇಲೆ ಬತ್ತವನ್ನು ಹೇಗೆ ಬೆಳೆಯುತ್ತಿದ್ದರೆಂಬುದು ಊಹಿಸುವುದಕ್ಕೂ ಅಸಾಧ್ಯವಿರುವಾಗ ಲೇಖಕರು ಈ ರೀತಿ ಹೇಳುವುದೇನನ್ನು ಸೂಚಿಸುತ್ತದೋ ತಿಳಿಯುವುದು ಕಷ್ಟ. ಕೃಷಿಯ ಬಗ್ಗೆ ಅವರಿಗಿರುವ ಪರಿಮಿತಜ್ಞಾನವಿರಬಹುದೇ?

ಅಧ್ಯಯನ ಕಾಲಕ್ಕೂ ಇಂದಿಗೂ ಬೆಳೆಯುವ ಬೆಳೆಗಳಲ್ಲಿ ಬಹಳ ವ್ಯತ್ಯಾಸ ಕಂಡು ಬರದಿದ್ದರೂ ಲೇಖಕರು ಅನವಶ್ಯಕವಾಗಿ ಬೆಳೆಗಳ ಬಗ್ಗೆ ಎರಡು ಪುಟದಷ್ಟು ಬರೆಯುತ್ತಾರೆ. (ಪು. 41–42). ಹೆಚ್ಚು ಕಾಡು ಭೂಮಿಯನ್ನೂ ಸಾಗುವಳಿ ಯೋಗ್ಯ ಮಾಡುವುದರ ಬಗ್ಗೆಯಾಗಲಿ,ವ್ಯವಸಾಯ ಕ್ರಮದ ಬಗ್ಗೆಯಾಗಲಿ ಯಾವುದೇ ಹೊಸ ವಿಷಯ ಹೋಗಲಿ, ವಿಶ್ಲೇಷಣೆಯನ್ನೂ ನಾವು ಕಾಣುವುದಿಲ್ಲ. ತೀರ ಸಪ್ಪೆಯಾದ ಮಾಹಿತಿ ಕೊಡುವುದರಲ್ಲೇ ತೃಪ್ತಿಪಟ್ಟುಕೊಂಡಂತಿದೆ. (ಉದಾ : ಕೃಷಿ ಕೆಲಸಗಳಲ್ಲಿ ಅಂದರೆ, ನೆಲ ಉಳುವುದರಲ್ಲಿ, ಕಪಿಲೆ ಹೊಡೆಯುವುದರಲ್ಲಿ ಜೋಡೆತ್ತುಗಳನ್ನು ಉಪಯೋಗಿಸುತ್ತಿದ್ದರು (ಪು. 57–58). ಈಗಲಾದರೂ ಇದು ಬೇರೆಯಾಗಿದೆಯೇ ?).

ನಿಯಮವೋ ಎಂಬಂತೆ "ಕೃಷಿ" ಅಧ್ಯಾಯದ ಪ್ರತಿ ಶಿರೋನಾಮೆಯಡಿ ಯಲ್ಲೂ "ಕೃಷಿ ಭಾರತೀಯರ ಒಂದು ಮುಖ್ಯ ಕಸುಬು" ಎಂಬುದನ್ನು ಹೇಳಲು ಮರೆತಿಲ್ಲ.

"ಕೈಗಾರಿಕೆ", "ವಾಣಿಜ್ಯ ಮತ್ತು ವ್ಯಾಪಾರ" ಗಳಮೇಲಿನ ಎರಡು ಅಧ್ಯಾಯ ಗಳು ಸಮರ್ಪಕವಾಗಿದೆ ಎನ್ನಬಹುದು. ಕಂಡು ಕೇಳರಿಯದ ಒಂದು ಸಂಗತಿ ಯೆಂದರೆ ಹಸುವಿನ ತುಪ್ಪಟ (ಕೂದಲು) ದಿಂದ ಬಟ್ಟೆಯನ್ನು ನೇಯುತ್ತಿದ್ದರು (ಪು. 72) ಎನ್ನುವುದು. ಬಟ್ಟೆ ನೇಯಲು ಬೇಕಾಗುವಷ್ಟು ಹಸುವಿನ ತುಪ್ಪಟ ಎಲ್ಲಿ ಸಿಗುತ್ತಿತ್ತೋ ತಿಳಿಯ ಬರುವುದಿಲ್ಲ.

ಆದಾಯ ಮೂಲಗಳ (sources of Revenue) ಬಗೆಗಿರುವ ಅಧ್ಯಾಯ ಸರ್ಕಾರಕ್ಕೆ ಬರುವ ಆದಾಯದ ಬಗ್ಗೆಯೇ ಚರ್ಚಿತವಾಗಿದೆ. ಸಾಮಾನ್ಯ ಜನರು ಹೆಚ್ಚು ತೆರಿಗೆಗಳನ್ನು ಸಲ್ಲಿಸುತ್ತಿದ್ದಿರಬಹುದೆಂದು, ನೆರೆರಾಜ್ಯಗಳ ತೆರಿಗೆ ವ್ಯವಸ್ಥೆಯನ್ನುದ್ಧರಿಸಿ ಹೇಳುತ್ತಾರೆಯೇ ವಿನಹ (ಪು. 163–164) ಅವರ ಆರ್ಥಿಕ, ಸಾಮಾಜಿಕ ಸ್ಥಿತಿ, ಬದುಕಿನ ಮಟ್ಟ ಹೇಗಿತ್ತು ಎಂಬುದರ ಬಗ್ಗೆ ಏನೂ ಚರ್ಚೆಮಾಡದೆ ಪಾಶ್ಚಾತ್ಯರು ಪೂರ್ವದ ಬಗ್ಗೆ ಯೋಚಿಸಿ ಇತಿಹಾಸ ಬರೆದಂತೆಯೇ ಇತಿಹಾಸವೆಂದರೆ, ರಾಜರ, ಅವರ ಬೊಕ್ಕಸದ, ರಾಣಿವಾಸದ ಹಾಗೂ ಸ್ಥಿತಿವಂತರ ಸಾಮಾಜಿಕ, ಆರ್ಥಿಕ ಸ್ಥಿತಿ ಎಂಬಂತೆ ಯೋಚನೆ ಮಾಡಿರುವಂತಿದೆ.

ವರ್ಗ (ವರ್ಣ) ವ್ಯವಸ್ಥೆ, ವಿವಿಧ ವರ್ಗಗಳಿಗಿದ್ದ ಸಾಮಾಜಿಕ ಆರ್ಥಿಕ ಅನುಕೂಲ ಅಥವಾ ಅನಾನುಕೂಲಗಳು, ಸಾಮಾಜಿಕ ಅಂತರಗಳು, ಸಾಮಾಜಿಕ ರಕ್ಷಣೆಗಳ ಬಗ್ಗೆ ಅಧ್ಯಯನದಲ್ಲಿ ಏನೂ ಕಾಣುವುದಿಲ್ಲ. ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣ ಕ್ರಾಂತಿಯ ಮೂಲಕ ನಡೆದ ಸಾಮಾಜಿಕ ಆಂದೋಲನವಾಗಲಿ, ಇದರಿಂದ ಸಾಮಾಜಿಕ, ಆರ್ಥಿಕ ವ್ಯವಸ್ಥೆಗಳ ಮೇಲಾದ ಪರಿಣಾಮಗಳಾಗಲಿ ಇಲ್ಲಿ ತಪ್ಪಿ ಯಾದರೂ ಲೇಖಕರ ಗಮನಕ್ಕೆ ಬಂದಿಲ್ಲ. ಇದು ಸಂಶೋಧಕನೊಬ್ಬನು ಮಾಡು ವಂತಹ ಬಹು ದೊಡ್ಡ ತಪ್ಪು (blunder).

ಕರ್ನಾಟಕ ಶಾಸನ ಸಮೀಕ್ಷೆ: ಕೊ. ವ್ಯಾ. ರಮೇಶ

ಈ ಕೃತಿ ಡಾ. ರಮೇಶ್ ಅವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನೀಡಿದ ಮೂರು ಉಪನ್ಯಾಸಗಳ ಮುದ್ರಿತ ರೂಪ. "ಭಾರತ ಇತಿಹಾಸ ಮತ್ತು ಶಾಸನ ಸಾಮಗ್ರಿ" ಎಂಬ ಮೊದಲ ಅಧ್ಯಾಯದಲ್ಲಿ ಇಲ್ಲಿಯವರೆಗೆ ನಡೆದಿರುವ ಶಾಸನಾಧಾರಿತ ಇತಿಹಾಸ ಸಂಶೋಧನೆಯ ಬಗೆಗೆ ಸಂಕ್ಷಿಪ್ತವಾಗಿ ಚರ್ಚಿಸಿ ಶಾಸನ ಸಾಮಗ್ರಿಯನ್ನು ಬೇರೆ ಆಕರಗಳಿಂದ ಹೇಗೆ ಶ್ರೇಷ್ಠವಾದುದೆಂದು ಪರಿಗಣಿಸಬಹುದೆಂಬ ಬಗ್ಗೆ ಅತ್ಯುಪಯುಕ್ತ ಸಲಹೆ ನೀಡುತ್ತಾರೆ. ಅಂದರೆ ಶಾಸನ ಸಾಮಗ್ರಿ ಎಲ್ಲವೂ ಅಕ್ಷರಶಃ ಸತ್ಯವೆಂದು ಅವರು ಹೇಳುತ್ತಾರೆಂದಲ್ಲ. ಕೆಲಶಾಸನಗಳನ್ನು ಆಕರಗಳನ್ನಾಗಿ ಬಳಸಿ ಕೊಳ್ಳಬೇಕಾದಾಗ ಸಂಶೋಧಕ ವಹಿಸಬೇಕಾದ ಜಾಗ್ರತೆ ಮತ್ತು ಪಾತ್ರದ ಬಗ್ಗೆಯೂ ಉಪಯುಕ್ತ ಸಲಹೆಗಳನ್ನು ನೀಡುತ್ತಾರೆ (ಪು. 3–8).

ಲಿಪಿಗಳ ಬೆಳವಣಿಗೆ, ಪರಸ್ಪರ ಪ್ರಭಾವಗಳ ಬಗ್ಗೆಯೂ ಕಾಲಾನುಕ್ರಮ ಚರ್ಚೆಯ ಜೊತೆಗೆ, ಶಾಸನಗಳಲ್ಲಿ ಕಂಡಂತೆ ಸಂಕ್ಷಿಪ್ತವಾಗಿ ಭಾರತದ ಇತಿಹಾಸ ಚಿತ್ರಣವನ್ನು ಕೊಟ್ಟು ಕೆಲ ಇತಿಹಾಸಕಾರರ ಗ್ರಹಿಕೆಗಳಲ್ಲಿನ ಲೋಪದೋಷಗಳನ್ನು ಎತ್ತಿ ತೋರಿಸುತ್ತಾರೆ. ಕೃತಕ ಶಾಸನಗಳ ಪರಿಶೀಲನೆ ಬಗ್ಗೆ ಇವರು ಕೊಡುವ ಸಲಹೆಗಳಂತೂ ಎಂಥವರೂ ಒಪ್ಪಿಕೊಳ್ಳುವಂಥವು (ಪು. 15–16 ಮತ್ತು 25–27).

ಇದೇ ಮಾತುಗಳು ಇವರ "ಕರ್ನಾಟಕದ ಇತಿಹಾಸ ಮತ್ತು ಶಾಸನ ಸಾಮಗ್ರಿ" ಅಧ್ಯಾಯಕ್ಕೂ ಅನ್ವಯಿಸುತ್ತವೆ. ವಿಜಯನಗರ ಕಾಲವನ್ನು (ಮಧ್ಯಯುಗವನ್ನು) ಸ್ಮಾರಕಗಳ ಮತ್ತು ಶಾಸನಗಳ ಆಧಾರದ ಮೇಲೆ "ಮಂದಗತಿಯ", "ವೈಪರೀತ್ಯಗಳ, ವಿರೋಧಾಭಾಸದ" ಯುಗವೆಂದು ಕರೆದಿರುವುದೂ ಸಮಂಜಸವಾಗಿಯೇ ಇದೆ. ಏಕೆಂದರೆ ರಾಜಕೀಯ, ಆರ್ಥಿಕ ರಂಗಗಳೇ ಅಲ್ಲದೇ, ಸಾಮಾಜಿಕ ಅನಿಷ್ಟಗಳೂ ತುಟ್ಟ ತುದಿಗೆ ಬಂದು ಮುಟ್ಟಿದ ಕಾಲ ಮಧ್ಯಯುಗ. ಆ ಕಾಲದಿಂದಲೇ ಅನಿಷ್ಟದ ತುದಿಯಿಂದ ಕ್ರಮೇಣ ಸ್ವಾಗತಿಸಬಹುದಾದಂತ ದಿಸೆಯಲ್ಲಿ ಸಮಾಜ ಮುನ್ನಡೆಯ ತೊಡಗಿತು.

ಇತಿಹಾಸವನ್ನು ಸರಿಯಾಗಿ ಅರಿಯುವುದಕ್ಕೆ ಮೂಲ ಶಾಸನಪಾಠವನ್ನೇ ಪರಿಶೀಲಿಸ ಬೇಕಾದ ಅಗತ್ಯವನ್ನು ಒತ್ತಿ ಹೇಳುವ ಮೂಲಕ, ಶಾಸನ ಸಾಮಗ್ರಿಯನ್ನು ಇತಿಹಾಸ ಪುನಾರಚನೆಗೆ ಉಪಯೋಗಿಸಿಕೊಳ್ಳುವವರಿಗೆ ಇರಬೇಕಾದ ಪರಿಣತಿ ಬಗ್ಗೆ ಸೂಚ್ಯವಾಗಿ ಹೇಳುತ್ತಾರೆ. ಬಹುಶಃ ಈ ಹೇಳಿಕೆ ಅಸಮರ್ಪಕ ಅಧ್ಯಯನ ಮಾಡಿದವರಿಗೆ, ಬೇರೆಯವರು ಶಾಸನಗಳನ್ನು ಅರ್ಥೈಸಿ ಬರೆದಿಟ್ಟಿರುವ ಆಧಾರದ ಮೇಲೆ ತೀರ್ಮಾನ ತೆಗೆದುಕೊಳ್ಳುವವರಿಗೆ ಹಾಗೂ ತೆಗೆದುಕೊಂಡವರಿಗೆ ನೇರವಾಗಿ ಅನ್ವಯಿಸುತ್ತದೆ ಎನ್ನ ಬಹುದು.

ಕೊನೆಯ ಅಧ್ಯಾಯದಲ್ಲಿ ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದ ಹೊರನಾಡಿನ ಶಾಸನ ಸಂಪತ್ತಿನ ಬಗ್ಗೆ ದೀರ್ಘ ಚರ್ಚೆ ಮಾಡುತ್ತಾ ಕರ್ನಾಟಕ ರಾಜರ ಸಾಗರೋತ್ತರ ಕಾರ್ಯಾಚರಣೆಯ ಬಗ್ಗೆ ಸ್ಥೂಲವಾಗಿ ವಿವರಣೆ ಕೊಡುತ್ತಾರೆ. ಮುಕ್ತಾಯ ಮಾಡುತ್ತಾ ಇತಿಹಾಸಕ್ಕೆ ಇವರು ಕೊಡುವ ವ್ಯಾಖ್ಯಾನವಂತೂ ಯಾರೂ ಅಲ್ಲಗಳೆಯು ಲಾರದಂಥದ್ದು. ಈ ವ್ಯಾಖ್ಯಾನವನ್ನು ಅವರ ಮಾತುಗಳಲ್ಲೇ ಹೇಳುವುದು ಸಮಂಜಸವೆನಿಸುತ್ತದೆ "ಇತಿಹಾಸ ಎನ್ನುವುದು ಕೇವಲ ರಾಜಮಹಾರಾಜರ, ಚೇಷ್ಟೆ ಕುಚೇಷ್ಟೆಗಳ, ಅವರಿಗೂ ಇವರಿಗೂ ನಡುವೆ ನಡೆದುಹೋದ ಕಾಳಗಗಳ...ಕ್ರಮ ಪಟ್ಟಿ ಮಾತ್ರವಲ್ಲ. ಅದು ನಮ್ಮ ಪೂರ್ವಜರ, ಜನಸಾಮಾನ್ಯರ, ಒಪ್ಪು ತಪ್ಪುಗಳ ಪಟ್ಟಿ...ಯಾವುದೇ ಒಂದು ರಾಷ್ಟ್ರದ ಇತಿಹಾಸವು ಆ ನಾಡಿನ ಪರಂಪರಾನುಗತ ಸಾಂಪ್ರದಾಯಿಕತೆಯನ್ನು, ಅದರ ಒಳಿತು ಕೆಡಕುಗಳನ್ನು ಜನಸಾಮಾನ್ಯರಿಗೆ ತಿಳಿಯು ಗೊಡುವ ಅಮೂಲ್ಯವಾದೊಂದು ಸಾಧನ" (ಪು. 73–74).

ಒಟ್ಟಿನಲ್ಲಿ ಈ ಕೃತಿ ಬಹಳಮಟ್ಟಿಗೆ ಪ್ರಾಚೀನ ಮತ್ತು ಮಧ್ಯಯುಗೀನ ಕರ್ನಾಟಕದ -ಇತಿಹಾಸವನ್ನು ತಿಳಿಯಲು ಶಾಸನ ಸಾಮಗ್ರಿಯನ್ನು ಬಳಸಿಕೊಳ್ಳುವ ಒಂದು ನಿರ್ದಿಷ್ಟ ನೆಲೆಯನ್ನು ಕಾಣುವ ಕಡೆಗೆ ಹಾಕಿದ ಮಹತ್ವ ಪೂರ್ಣ ಹೆಜ್ಜೆಯೆನ್ನ ಬಹುದು.

ಸೇವುಣರ (ದೇವಗಿರಿಯ ಯಾದವರು) ಬಗ್ಗೆ ಪ್ರಕಟಗೊಂಡಿರುವ ಎರಡೂ ಅಧ್ಯಯನಗಳೂ (1. The seunas. the yadavas of Devagiri. ಲೇಖಕ ಶ್ರೀನಿವಾಸರಿತ್ತಿ. 2. The seunas of Devagiri. ಲೇಖಕ ಎ. ವಿ. ನರಸಿಂಹಮೂರ್ತಿ) ಸಂಶೋಧಕರಿಗೆ ಪಿ. ಎಚ್. ಡಿ. ಪಟ್ಟಗಳನ್ನು ತಂದು ಕೊಟ್ಟವು. ಕೆಲ ವಿಷಯಗಳಿಗೆ ಸಂಬಂಧಪಟ್ಟ ಭಿನ್ನಾಭಿಪ್ರಾಯಗಳನ್ನು ಬಿಟ್ಟರೆ (ಉದಾ : ಮೂರನೆ ಭಿಲ್ಲಮನ ನಂತರ ಬಂದ ವೆದುಗಿ, ವೇಸಗಿ ಮತ್ತು ಭಿಲ್ಲಮ ಇವರು ಭಿಲ್ಲಮನ ದಾಯಾದಿಗಳೆಂಬ ಬಗ್ಗೆ (ಪು. 54) ಅಥವಾ ಸಿಂಘಣನು ಪಟ್ಟಕ್ಕೆ ಬಂದದ್ದು A.D. 1200ರಲ್ಲಿ ಎನ್ನುವುದರ ಬಗ್ಗೆ ನರಸಿಂಹ ಮೂರ್ತಿಯವರ ವಿವರಣೆ ಸಮರ್ಪಕವಾಗಿಲ್ಲ.) ಈ ಅಧ್ಯಯನಗಳು ಯಾವುದೇ ದೃಷ್ಟಿ ಯಲ್ಲಿ ಒ.ಪಿ. ವರ್ಮ ಅವರ "The yadavas and their times." ಅಧ್ಯಯನ ಕ್ಕಿಂತ ಹೆಚ್ಚಿನದೇನನ್ನು ಹೇಳಿದಂತಿಲ್ಲ.

ಸೇವುಣ ವಂಶಜರ ಒಳಜಗಳ, ಇತರರೊಂದಿಗಿನ ಹೋರಾಟಗಳೇ ಮುಕ್ಕಾಲು ಪಾಲು ಅಧ್ಯಯನಗಳನ್ನು ವ್ಯಾಪಿಸಿವೆ. ಡಾ. ರಿತ್ತಿಯವರು ಅವರ ಅಧ್ಯಯನ ವನ್ನು ಪ್ರಕಟಿಸುವುದಕ್ಕೆ ಕೊಡುವ ಕಾರಣವೆಂದರೆ ಇಲ್ಲಿಯವರೆಗೆ ಬಂದ ಸೇವುಣರ ಮೇಲಿನ ಅಧ್ಯಯನಗಳು ಸಮರ್ಪಕವಾಗಿಲ್ಲ ಎನ್ನುವುದು. ಪ್ರಾಚೀನ ಹಾಗೂ ಮಧ್ಯಯುಗೀನ ಇತಿಹಾಸವೇ ಏಕೆ ಆಧುನಿಕ ಮತ್ತು ಸಮಕಾಲೀನ ಇತಿಹಾಸ

ಸಂಶೋಧನೆಯೇ ಸಮರ್ಪಕವಾಗಲು ಸಾಧ್ಯವಿಲ್ಲ. ಈ ದೃಷ್ಟಿಯಿಂದ ಹೆಚ್ಚು ಹೆಚ್ಚಾಗಿ ಸಂಶೋಧನೆಗಳು 'ನಡೆಯುವುದು ಅವಶ್ಯ. ಆದರೆ ಅಧ್ಯಯನದಲ್ಲಿ ವೈವಿಧ್ಯ, ಹೊಸತನ, ಹೊಸವಿಷಯಗಳು ಇರಬೇಕಾದುದೂ ಅಷ್ಟೇ ಅವಶ್ಯ. ಈ ದೃಷ್ಟಿಯಿಂದ ಈ ಎರಡೂ ಅಧ್ಯಯನಗಳು ಯಾವುದೇ ಪರಿಣಾಮ ಬೀರುವುದಿಲ್ಲ.

ರಿತ್ತಿಯವರ ಅಧ್ಯಯನದ ಆಡಳಿತ ಮತ್ತು ಸರ್ಕಾರಿ ಆದಾಯದ ಮೇಲಿನ ಅಧ್ಯಾಯಗಳು ಈವರೆಗೆ ಚರ್ಚಿಸಿರುವ (ಈ ಲೇಖನದಲ್ಲಿ)ಎಲ್ಲ ಅಧ್ಯಯನಗಳಂತೆಯೇ ತೀರಸಪ್ಪೆ. (ರಿತ್ತಿ ಎಸ್.ಹೆಚ್. ಪು. 209–447) "ಸಮಾಜ ಮತ್ತು ಧರ್ಮ", "ವಿದ್ಯಾಭ್ಯಾಸ" ಅಧ್ಯಾಯಗಳಂತೂ ಚರ್ವಿತ ಚರ್ವಣವೆನ್ನಲು ಯಾವುದೇ ಅಡ್ಡಿ ಯಿಲ್ಲ. ರಿತ್ತಿಯವರೇ ಹೇಳುವಂತೆ "ಸಮಾಜರಚನೆ ಭಾರತದ ಮಧ್ಯಯುಗೀನ ಸಮಾಜಕ್ಕಿಂತ ಭಿನ್ನವಾಗಿರಲಿಲ್ಲ. ಮಾಮೂಲಿನಂತೆ ಬ್ರಾಹ್ಮಣ, ಕ್ಷತ್ರಿಯ, ಶೂದ್ರ ವರ್ಗಗಳಿದ್ದವು "(ಪು. 248) ಆದರೂ 26 ಪುಟಗಳಷ್ಟು 'ಸಮಾಜ ಮತ್ತು ಧರ್ಮದ ಬಗೆಗಿನ ವಿವರಣೆ ಇದೆ. "ವಿದ್ಯಾಭ್ಯಾಸ" ಅಧ್ಯಾಯವಂತೂ ಚಿದಾನಂದಮೂರ್ತಿ ಯವರ ಅಧ್ಯಯನದ ಇಡೀ ಅಧ್ಯಾಯದ ಪ್ರತಿರೂಪವೆನ್ನುವಂತಿದೆ (ಪು. 277-281). ಸ್ತ್ರೀಯರ ಸ್ಥಾನಮಾನದ ಬಗ್ಗೆ ಚರ್ಚಿಸುತ್ತಾ "ಸ್ತ್ರೀಯರು ಸಾರ್ವಜನಿಕ ಜೀವನದಲ್ಲಿ (ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ) ಸಕ್ರಿಯವಾಗಿ ಭಾಗವಹಿಸುತ್ತಿದ್ದರು" ಎನ್ನುತ್ತಾರೆ. ಇದಕ್ಕೆ ಪೂರಕವಾಗಿ ಮಹಾರಾಣಿಯರ, ಮಹಾ ಪ್ರಧಾನರ ಮನೆಯ ಸ್ತ್ರೀಯರ ಧಾರ್ಮಿಕ, ರಾಜಕೀಯ ಚಟುವಟಿಕೆಗಳನ್ನು ಚರ್ಚಿಸುತ್ತಾರೆ. ಇವರು ಬಿಟ್ಟರೆ ಸ್ತ್ರೀಯರೇ ಇರಲಿಲ್ಲವೇ? (ಪು. 250–251).

ಲೇಖಕರ ಪ್ರಕಾರ ಜೈನ, ವೈಷ್ಣವ, ಶೈವ, ವೀರಶೈವ ಮತ್ತು ಇಸ್ಲಾಂ ಧರ್ಮಗಳ ಜೊತೆಗೆ ಮಹಾನುಭಾವ ಪಂಥವೂ ಪ್ರಬಲವಾಗಿದ್ದಿತು. (ಪು. 256–268) ಯಾವುದೇ ವ್ಯವಸ್ಥೆಯಾಗಲೀ, ಧರ್ಮವಾಗಲಿ ಮತ್ತೊಂದರ ಅವನತಿಯಿಂದ ಪ್ರಬಲ ವಾಗಲು ಸಾಧ್ಯ. ಇಲ್ಲವೇ ಇವು ಯಾವುವೂ ಇಲ್ಲದಾಗ ಹೊಸದೊಂದು ಬೆಳೆಯಲು ಸಾಧ್ಯ. ನಿಜವಾಗಿಯೂ ಪ್ರಬಲವಾಗಿದ್ದ, ಆಗುತ್ತಿದ್ದ, ಅಥವಾ ಅವನತಿಯ ಹಾದಿ ಹಿಡಿದಿದ್ದ ಧರ್ಮಗಳಾವುವು ಎನ್ನುವ ಚರ್ಚೆ ಹೆಚ್ಚು ಸಮಂಜಸವಾಗುತ್ತಿತ್ತು. ಆದರೆ ಈ ಬಗೆಯ ವಿಶ್ಲೇಷಣೆ ಇರಲಿ, ವಿವರಗಳೂ ಇಲ್ಲ. ಕರ್ನಾಟಕ ಚರಿತ್ರೆಯನ್ನು ಅಭ್ಯಸಿಸಿದವರೆಲ್ಲರಿಗೂ ತಿಳಿದಿರುವಂತೆ 12ನೆಯ ಶತಮಾನದಿಂದ ಜೈನಧರ್ಮ ರಾಜಾಶ್ರಯ ಕಳೆದುಕೊಂಡು ಅವನತಿಯ ಜಾಡನ್ನು ಹಿಡಿದಿದ್ದೇ ಅಲ್ಲದೆ ಜೈನರು ಬೇರೆ ಧರ್ಮಾವಲಂಬಿಗಳಾಗತೊಡಗಿದ್ದರು. ವೀರಶೈವ ಮತ್ತು ವೈಷ್ಣವಧರ್ಮ ಗಳು ಉನ್ನತಿ ಹೊಂದತೊಡಗಿದ್ದವು. ಈ ಬಗೆಯ ಮೂಲಭೂತ ಚರ್ಚೆ ಎಲ್ಲೂ ಕಾಣಸಿಗುವುದಿಲ್ಲ.

ಅರಸರ ಅಥವಾ ಹಿಂದೂ ನಾಗರಿಕತೆಯ ಮತಸಹಿಷ್ಣುತೆಯಿಂದ ಎಲ್ಲ ಧರ್ಮಗಳೂ ಪ್ರಚಲಿತವಿದ್ದವು ಎಂಬ ಲೇಖಕರ ಆಧಾರ ರಹಿತ ಮಾತನ್ನು ಒಪ್ಪಲು

ಸಾಧ್ಯವಾಗದು (ಪು. 268). ಏಕೆಂದರೆ ಮತ ಸಹಿಷ್ಣುತೆ, ಎಲ್ಲ ಧರ್ಮೀಯರ ಸಹ ಬಾಳ್ವೆಯಿದ್ದರೆ, ಇದೇ ಕಾಲದ ಕರ್ನಾಟಕದ ಇನ್ನೊಂದು ಭಾಗದಲ್ಲಿ (ಹೊಯ್ಸಳ ರಾಜ್ಯದಲ್ಲಿ) ದೇವರ ಪ್ರಸಾದವನ್ನು ಶೈವ, ವೈಷ್ಣವರಲ್ಲಿ ಯಾರು ಮೊದಲು ಸ್ವೀಕರಿಸಬೇಕೆಂಬುದರ ಬಗ್ಗೆ ದೊಡ್ಡ ಜಗಳವಾಗಿ ರಾಜನೇ ಬಂದು ಸಮಸ್ಯೆಯನ್ನು ಬಗೆ ಹರಿಸಬೇಕಾಗಿರಲಿಲ್ಲ. ಜೈನ-ವೈಷ್ಣವರಲ್ಲಿ, ವೈಷ್ಣವ-ಶೈವರಲ್ಲಿ, ಜೈನ-ಶೈವರಲ್ಲಿ ತಿಕ್ಕಾಟಗಳು ನಡೆಯುತ್ತಿದ್ದುದಕ್ಕೂ ಸಾಕಷ್ಟು ಪುರಾವೆಗಳು ಇವೆ.

ಒಟ್ಟಿನಲ್ಲಿ ಈ ಅಧ್ಯಯನದಲ್ಲಿ ಅಳವಡಿಸಿಕೊಂಡುರುವ ಚಾರಿತ್ರಿಕ ತತ್ವಜ್ಞಾನ (Historiography) ವಸಾಹತು(colonial)ಚಾರಿತ್ರಕ ತತ್ವಜ್ಞಾನವೆನ್ನುವ ಅನುಮಾನವೂ ಬರುತ್ತದೆ. ಸಂಶೋಧಕರು ಈ ರೀತಿಯು ದೊಡ್ಡ ಬೇರು ಬಿಟ್ಟಿರುವ ಅವರೋಧಗಳನ್ನು ಸಡಲಿಸಿ ಮುಂದುವರಿದ ಕ್ರಮವನ್ನು ಅನುಸರಿಸುವುದರ ಮೂಲಕ ಹೆಚ್ಚು ಶಕ್ತಿಯುತ (ಗುಣಮಟ್ಟದಲ್ಲಿ) ಅಧ್ಯಯನ ಗಳನ್ನು ಹೊರತರಲು ಸಾಧ್ಯ. ಬರೀ ಹಳಸಲು ಸಂಶೋಧನಕ್ರಮ ಅನುಸರಣೀಯವೂ ಅಲ್ಲ ಅಪೇಕ್ಷಣೀಯವೂ ಅಲ್ಲ.

ಸಮಾಜ ಕಾರ್ಯ ಮತ್ತು ಪುನರ್ನಿರ್ಮಾಣ (social work and reconstruction) ಮಾಲೆಯ ಮಹಾತ್ವಾಕಾಂಕ್ಷೆಯ ಮೊದಲ ಅಧ್ಯಯನದ ಫಲ "ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಚಳವಳಿ" (Backward caste movement in Karnataka) ಲೇಖಕರು ಡಾ. ಬಿ. ಕುಪ್ಪುಸ್ವಾಮಿ.

ಈ ಅಧ್ಯಯನ ಸಂಶೋಧನಾತ್ಮಕವೆಂದು ನಾನು ಇಲ್ಲಿ ಚರ್ಚಿಸುತ್ತಿಲ್ಲ. ಆದರೆ ಹಿಂದುಳಿದ ವರ್ಗಗಳು ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ, ಪ್ರತ್ಯೇಕವಾಗಿ ಕರ್ನಾಟಕ ದಲ್ಲಿ ವಹಿಸಿರುವ ಪಾತ್ರದ ದೃಷ್ಟಿಯಿಂದ, ಈ ವಿಷಯಕ್ಕಿರುವ ಮಹತ್ವದಿಂದ ಹಾಗೂ ಇದೇ ಮೊಟ್ಟ ಮೊದಲ ಒಂದು ಬೌದ್ಧಿಕ ಚರ್ಚೆ, ತಾತ್ವಿಕ ಚರ್ಚೆ, ಒಂದು ವಿಶ್ಲೇಷಣೆಯನ್ನುವ ದೃಷ್ಟಿಯಿಂದ ಪರಿಶೀಲನೆ ಮಾಡಿದ್ದೇನೆ. ಜೊತೆಗೆ ವೈಯುಕ್ತಿಕವಾಗಿ ನನಗಿರುವ ಆಸ್ಥೆಯಿಂದಲೂ ಹೌದು.

ಹಿಂದುಳಿದ ವರ್ಗಗಳ ಚಳುವಳಿಯ ಮೂಲವನ್ನು ಹುಡುಕುತ್ತಾ (ತಮ್ಮ ಮುಂದಿನ ಪೂರ್ವಾಗ್ರಹಪೀಡಿತ ವಿಶ್ಲೇಷಣೆಗೆ ಪೂರಕವಾಗುವಂತೆ) "19ನೆಯ ಶತ ಮಾನದಲ್ಲಿ ಭಾರತೀಯರೆಲ್ಲ ಹಿಂದುಳಿದವರಾಗಿದ್ದರು." ಹೇಗೆ ಎಂದು ವಿವರಿಸುತ್ತಾ" "ಅವರಿಗೆ ಆಡಳಿತದಲ್ಲಿ ಪಾಲ್ಗೊಳ್ಳಲು ಬೇಕಾದ ಅರ್ಹತೆ ಇರಲಿಲ್ಲ, ಬ್ರಿಟಿಷ್ ಆಳರಸರಿಗೆ ಇಂಗ್ಲಿಷ್ ವಿದ್ಯೆಯಿತ್ತಾದ್ದರಿಂದ ಬ್ರಿಟಿಷರು ಮುಂದುವರಿದವರಾಗಿದ್ದರು" ಎನ್ನುತ್ತಾರೆ (ಪು. 38). ಆದರೆ 19ನೇ ಶತಮಾನದ ಚಾರಿತ್ರಿಕ ಕಾಲದಿಂದ ಮೂಲವನ್ನು ಹುಡುಕುವ ಪ್ರಯತ್ನ ಯಾವ ಉದ್ದೇಶದಿಂದ?

ಭಾರತೀಯರಿಗೆ ಹೋಲಿಸಲು ಆಂಗ್ಲರು ಮತ್ತು ಭಾಷೆ ಇದ್ದುದರಿಂದಲೇ? ಅಥವಾ ಅದಕ್ಕೂ ಮುನ್ನ ಎಲ್ಲರೂ ಮುಂದುವರಿದವರಾಗಿದ್ದರೇ? ಈ ಪ್ರಶ್ನೆಗಳಿಗೆ ಉತ್ತರ ಲೇಖಕರಿಂದ ದೊರೆಯುವುದಿಲ್ಲವಾದರೂ ಪ್ರಯತ್ನಿಸಿ ಅಧ್ಯಯನದ ಒಳಹೊಕ್ಕು ಅಂತಃ ಪದರಗಳನ್ನು ಬಿಡಿಸಿ ನೋಡಿದರೆ ಉತ್ತರ ಖಂಡಿತ ಸಿಗುತ್ತದೆ.

ಹಿಂದುಳಿಯುವಿಕೆಯ (backwardness) ಮೂಲವನ್ನು ಆರ್ಯ-ದಸ್ಯುಗಳ ಕಾಲಕ್ಕೆ ಕೊಂಡೊಯ್ದು ವೇದಗಳ ಪ್ರಸ್ತಾಪ ಮಾಡಿ ಭಾರತದ ಮಾನವ ಚಿತ್ರಣವನ್ನು ಕೊಟ್ಟು ಒಂದೊಂದೂ ವರ್ಣದ ಕೆಲಸವನ್ನು ತಿಳಿಸುತ್ತದೆ ಎನ್ನುತ್ತಾರೆ. (ಪು. 8) ಆದರೆ ಈ ವರ್ಣ ವ್ಯವಸ್ಥೆಯೇ ಮನು ಮುಂತಾದ ಸ್ಮೃತಿ ಕಾರರು, ಧರ್ಮಶಾಸ್ತ್ರಜ್ಞರಿಂದಾಗಿ ವರ್ಗ ವ್ಯವಸ್ಥೆ ಮತ್ತು ಮಾಡುವ ಕಸುಬನ್ನಾಧರಿಸಿ ಹೇಗೆ ಜಾತಿ ಅನಿಷ್ಟ ಪದ್ಧತಿಗೆ ಮೂಲವಾಗಿ ಕ್ರಮವಾಗಿ ಸಾಮಾಜಿಕ, ಆರ್ಥಿಕ ಅಸಮತೋಲಕ್ಕೆ ಕಾರಣವಾಯಿತೆನ್ನುವ ಪ್ರಸ್ತಾಪ ಎಲ್ಲೂ ಕಾಣುವುದಿಲ್ಲ. ಆದರೆ ಹಿಂದುಳಿದವರಿಗೆ ಯಾವುದೇ ಆಶಯಗಳಿಲ್ಲ. ಏಕೆಂದರೆ ಪುನರಾವೃತ್ತಿಗೊಳ್ಳುವ ಸಾಮಾಜಿಕ ಪರಿಸರದಿಂದಾಗಿ ಅವರ ಜೀವನ ಮತ್ತು ದೃಷ್ಟಿ ಜಡಗೊಂಡಿವೆ ಎನ್ನುವ ತೀರ್ಮಾನ ಕೊಡುತ್ತಾರೆ. ಇಂತಹ ಸಾಮಾಜಿಕ ಪರಿಸರ ಹೇಗೆ ಸೃಷ್ಟಿಯಾಯಿ ತೆನ್ನುವ ಬಗ್ಗೆ ಚಕಾರವನ್ನೆತ್ತುವುದಿಲ್ಲ.

ಇನ್ನು ಕರ್ನಾಟಕದ ಹಿಂದುಳಿದ ವರ್ಗಗಳ ಚಳವಳಿಯ ಹಿನ್ನೆಲೆಯ ಚರ್ಚೆ ಯಂತೂ ಚಳವಳಿಯನ್ನೇ ಗೇಲಿ ಮಾಡಿದಂತಿದೆ. ಹತ್ತೊಂಬತ್ತನೆಯ ಶತಮಾನದಿಂದ ಲೇಖಕರ ಪೀಠಿಕೆ ಆರಂಭವಾಗಿ ಹೇಗೆ ಮದ್ರಾಸ್ ಬ್ರಾಹ್ಮಣರು ಇಂಗ್ಲಿಷ್ ವಿದ್ಯಾ ಭ್ಯಾಸದಿಂದ ಮುಂದುವರಿದರು. ಮೈಸೂರು ಬ್ರಾಹ್ಮಣರು ಬರಿ ಸಂಸ್ಕೃತಕ್ಕೆ ಅಂಟಿಕೊಂಡು ಬೇರೆಯವರನ್ನು ಒಳಗೊಂಡಂತೆ ಹಿಂದುಳಿದಿದ್ದರು (ಪು. 43) ಎನ್ನುವುದನ್ನು ಚರ್ಚಿಸುವುದರೊಂದಿಗೆ ಇಂಗ್ಲಿಷ್ ವಿದ್ಯಾಭ್ಯಾಸವೇ ಪ್ರಗತಿಯ ಸಂಕೇತವೆನ್ನುವ ಪಾಶ್ಚಿಮಾತ್ಯರ ಪೂರ್ವದ ಬಗೆಗಿನ ಅಭಿಪ್ರಾಯಕ್ಕೆ ಕೊಂಡೊಯ್ಯು ತ್ತಾರೆ.

ಮದ್ರಾಸು ಬ್ರಾಹ್ಮಣರೇ ಮೈಸೂರಿನ ದಿವಾನರಾಗಿದ್ದರಿಂದ ಅವರ ಪಕ್ಷಪಾತ ನೀತಿಯಿಂದ ಆ ಜನಾಂಗವೇ ಆಡಳಿತದಲ್ಲಿ ನುಸುಳಿ ಮುಂದುವರಿದರು. ಈ ಬೆಳ ವಣಿಗೆಯಿಂದ ಮೈಸೂರು ಬ್ರಾಹ್ಮಣರು, ಮದ್ರಾಸಿಗರ ವಿರುದ್ಧವೆಂಬಂತೆ "ಮೈಸೂರು ಮೈಸೂರಿಗರಿಗೆ" (Mysore for Mysoreans) ಎಂಬ ಘೋಷಣೆ ಹಾಕಿ ಮೈಸೂರಿನ ಬ್ರಾಹ್ಮಣರು ದಿವಾನರಾದ ನಂತರ ತಮ್ಮ ಭವಿಷ್ಯ ಅವರ ಕೈಲಿ ಸುರಕ್ಷಿತವೆಂದು ಸುಮ್ಮನಾದರು. ಇದರೊಂದಿಗೆ ಮೈಸೂರಿನವ-ಮದ್ರಾಸಿನವ (Mysorean v/s Madrassis) ವಾಗ್ವಾದ ಕೊನೆಗೊಂಡು, ಮೈಸೂರು ಸಂಸ್ಥಾನ ದಲ್ಲೇ ಬ್ರಾಹ್ಮಣ-ಬ್ರಾಹ್ಮಣೇತರ (Brahmins v/s non brahmin) ವಾಗ್ವಾದ

ಹರಡಿತು ಎನ್ನುತ್ತಾರೆ. (ಪು. 41–49) ಎಲ್ಲ ವಿವರಗಳನ್ನು ಕೊಟ್ಟು ಮದ್ರಾಸು-ಮೈಸೂರು ಬ್ರಾಹ್ಮಣ ವಾಗ್ವಾದವನ್ನು "ಮೈಸೂರು ಬ್ರಾಹ್ಮಣರು ಹಿಂದುಳಿದವರಾಗಿದ್ದರು, ತಮಗೆ ನ್ಯಾಯಬೇಕೆಂದು ಬಯಸಿದರು" (ಪು. 42) ಎನ್ನುತ್ತಾರೆ. ಆದರೆ ಮೈಸೂರು ಬ್ರಾಹ್ಮಣ-ಬ್ರಾಹ್ಮಣೇತರ ವಾಗ್ವಾದವು ರೂಪುಗೊಂಡು ಐತಿಹಾಸಿಕ ಕಾರಣಗಳನ್ನು ವಿವರಿಸುವುದಾಗಲಿ, ವಿಶ್ಲೇಷಿಸುವುದಾಗಲೀ ಮಾಡುವುದಿಲ್ಲ. ಮದ್ರಾಸ್-ಮೈಸೂರು ಬ್ರಾಹ್ಮಣರ ವಿವಾದವೇ ಹೇಗೆ ಮೈಸೂರಿನ ಬ್ರಾಹ್ಮಣ-ಬ್ರಾಹ್ಮಣೇತರ ವಾಗ್ವಾದವಾಗಿ ರೂಪುಗೊಂಡಿತು ಎನ್ನುವುದರ ಬಗ್ಗೆ ಯಾವ ರೀತಿಯ ಚರ್ಚೆಯನ್ನು ಮಾಡದೆ ಈ ಸಮಸ್ಯೆಯನ್ನು ಇತಿಹಾಸಕಾರರಿಗೇ ಬಿಟ್ಟ ವಿಷಯವೆಂದು ಹೇಳುತ್ತಾರೆ. (ಪು. 43-44).

ಬ್ರಾಹ್ಮಣೇತರ ರಾಜಕೀಯ ಸಂಸ್ಥೆ ಪ್ರಜಾಮಿತ್ರಮಂಡಳಿಯ ಬಗ್ಗೆ ಮಾತನಾಡುವಾಗ, ಹಿಂದುಳಿದವರ ಶ್ರೇಯೋಭಿವೃದ್ಧಿಗಾಗಿ ಆ ಸಂಸ್ಥೆ ಮಾಡಿದ ಕೆಲಸದ ಬಗ್ಗೆ ವಿಶ್ಲೇಷಿಸುವಾಗ ಮಾತ್ರ ಇತಿಹಾಸಕಾರ ತಪ್ಪಿಯೂ ಅವರ ಮನಸ್ಸಿಗೆ ಬರುವುದಿಲ್ಲ. ಈ ಸಂಸ್ಥೆಯ ಬಗ್ಗೆ ವಿಶ್ಲೇಷಿಸುತ್ತಾ" ಯಾವುದೇ ದೃಷ್ಟಿಯಿಂದಲೂ ಇದು ಹಿಂದುಳಿದ ವರ್ಗಗಳ ಏಳ್ಗೆಗಾಗಿ ಶ್ರಮಿಸಿದ ಸಾಮೂಹಿಕ ಚಳವಳಿಯಾಗಿರಲಿಲ್ಲವೆಂಬುದು ನಿಜ" (ಪು. 52) ಎಂದು ತೀರ್ಮಾನವನ್ನೇ ಕೊಡುತ್ತಾರೆ. ಈ ಮಾತುಗಳಲ್ಲೆಲ್ಲಾ ಇವರು ಹಿಂದುಳಿದವರ (ಬ್ರಾಹ್ಮಣೇತರ) ಬಗ್ಗೆ ತಮ್ಮ ವಿರೋಧಿ ನಿಲುವನ್ನು ಮಾರ್ಮಿಕ (Subtle)ವಾಗಿ ವ್ಯಕ್ತಪಡಿಸಿದ್ದಾರೆನಿಸುತ್ತದೆ. ಇಂಥ ವಿಶ್ಲೇಷಣೆಯಿಂದ ಲೇಖಕರು ಬ್ರಾಹ್ಮಣರ ಪಕ್ಷಪಾತಿಯೇ ಎನ್ನುವ ಬಲವಾದ ಸಂಶಯವೂ ಉಂಟಾಗುತ್ತದೆ.

ಈ ಸಂಶಯಕ್ಕೆ ಪೂರಕವಾಗಿ ಮತ್ತೊಂದು ಕಣ್ಣಿಗೆ ಕಟ್ಟುವಂಥ ಉದಾಹರಣೆಯನ್ನು ಕೊಡಬಹುದು. ವಿಶ್ವೇರಯ್ಯನವರು ಮತ್ತು ಹಿಂದುಳಿದ ವರ್ಗಗಳ ಏಳ್ಗೆಯ ಬಗ್ಗೆ ಚರ್ಚಿಸುತ್ತಾ 'ಹಿಂದುಳಿದವರ ವಿದ್ಯಾಭ್ಯಾಸಕ್ಕಾಗಿ ದಿವಾನರು 1917ರಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಪ್ರತ್ಯೇಕವಾಗಿರಿಸಿದರು' ಎನ್ನುತ್ತಾರೆ. ಇದು ದೊಡ್ಡ ಸುಳ್ಳೆಂದೇ ಸಾಬೀತಾಗಿದೆ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ ಅವರ ಇಂಗಿತವನ್ನು ಕಡೆಗಣಿಸಿ ಮಹಾರಾಜರೇ ಖುದ್ದು ಮಧ್ಯ ಪ್ರವೇಶಿಸಿ ಕಾದಿರಿಸಿದ ಹಣವಿದು. 1916ರಲ್ಲೇ ಹಿಂದುಳಿದ ವರ್ಗಗಳ ಮುಖಂಡ ಎಂ, ಬಸವಯ್ಯನವರು ನ್ಯಾಯವಿಧಾಯಕ ಸಭೆಯಲ್ಲಿ ನಿರ್ಣಯ ಮಂಡಿಸಿ 1 ಲಕ್ಷ ರೂಪಾಯಿಗಳ ಪ್ರತ್ಯೇಕ ಅನುದಾನವನ್ನು ಕೇಳಿದ್ದರು. ಆದರೆ ಈ ನಿರ್ಣಯ ವಿಶ್ವೇಶ್ವರಯ್ಯನವರೇ ಅಧ್ಯಕ್ಷರಾಗಿದ್ದ ಸಭೆಯಲ್ಲಿ ಪಾಸಾಗುವುದಿರಲಿ, ಮಂಡಿಸಲ್ಪಟ್ಟು ಚರ್ಚಿಸುವುದಕ್ಕೇ ಸಾಧ್ಯವಾಗಲಿಲ್ಲ. ನಂತರ ಮಹಾರಾಜರೇ ಈ ಬೇಡಿಕೆಯನ್ನು ಈಡೇರಿಸಬೇಕಾಯಿತು .ವಿಶ್ವೇಶ್ವರಯ್ಯನವರು ಹಿಂದುಳಿದವರ ವಿಷಯದಲ್ಲಿ ಸಹಾನುಭೂತಿಯುಳ್ಳವರಾಗಿದ್ದರು, ಪ್ರಗತಿಗಾಗಿ ವಿದ್ಯೆಯ ಹರಡುವಿಕೆ, ಕೈಗಾರೀಕರಣ ಆಗಬೇಕೆಂದು ನಂಬಿದವ

ರಾಗಿದ್ದರು. ಆದರೆ ಚಾರಿತ್ರಿಕ ವಸ್ತುನಿಷ್ಠತೆ (Historical objectivity)ಯ ದೃಷ್ಟಿಯಿಂದ, ಹಿಂದುಳಿದವರಿಗೆ ಮೀಸಲಾತಿ ಮತ್ತು ಹೆಚ್ಚಿನ ಸೌಕರ್ಯ ಕಲ್ಪಿಸುವುದರ ಬಗ್ಗೆ ವಿಶ್ವೇಶ್ವರಯ್ಯನವರು ಹೆಚ್ಚು ಅನುಕೂಲಕರ ನೀತಿಯನ್ನು ಅನುಸರಿಸಲಿಲ್ಲವೆಂದು ಹೇಳಬೇಕಾಗುತ್ತದೆಯೇ ವಿನಹ ಬೇರೆಯವರಿಂದಾಗಿ ಒದಗಲ್ಪಟ್ಟ ಅನುಕೂಲ, ಸಹಾಯಗಳೆಲ್ಲಾ ವಿಶ್ವೇಶ್ವರಯ್ಯನವರಿಂದಲೇ ಆದವು ಎನ್ನುವುದು ಪಕ್ಷಪಾತವಾಗುತ್ತದೆ.

ವಿಶ್ವೇಶ್ವರಯ್ಯನವರು ಮೀಸಲಾತಿಯಿಂದ ಆಡಳಿತದ ಸಾಮರ್ಥ್ಯ ಮತ್ತು ಆರ್ಥಿಕ ಕುಸಿತ ಉಂಟಾಗುತ್ತದೆಂದು, ಕೆಲವರಿಗೆ (ಇಲ್ಲಿ ಬ್ರಾಹ್ಮಣೇತರರಿಗೆ) ಹೆಚ್ಚಿನ ಸವಲತ್ತು ಕೊಟ್ಟರೆ ಸಮಾನಾವಕಾಶಗಳನ್ನು ಬೇರೆಯವರಿಗೆ ನಿರಾಕರಿಸಿದಂತಾಗುತ್ತದೆಂದು, ಮಹಾರಾಜರ ಬ್ರಾಹ್ಮಣೇತರರ ಪರವಾದ ರಕ್ಷಣೆಯ ಪಕ್ಷಪಾತ (Protective discrimination) ನೀತಿ ಮತ್ತು ಬ್ರಾಹ್ಮಣೇತರರ ಬೇಡಿಕೆಗಳನ್ನು ವಿರೋಧಿಸಿದ್ದರಿಂದ ಅವರು ರಾಜಿನಾಮೆಕೊಡಬೇಕಾಯಿತೆಂದು ವಿಶ್ಲೇಷಿಸುವುದು ಸಮಂಜಸವಾಗುತ್ತದೆಯೇ ಹೊರತು. ಕುಪ್ಪುಸ್ವಾಮಿಯವರು ಹೇಳುವಂತೆ "ಬ್ರಾಹ್ಮಣರ ಅನುಚಿತ ಅಥವಾ ಅಯೋಗ್ಯ ಕಾದಾಟದಿಂದ" ಎನ್ನುವುದು (ಪು. 52) ಬ್ರಾಹ್ಮಣ ಪಕ್ಷಪಾತದ ವಿಶ್ಲೇಷಣೆಯಾಗುತ್ತದೆ.

ಕೊನೆಗೆ ಈ ಚರ್ಚೆಯ ಅಂಕದ ಪರದೆ ಎಳೆಯುತ್ತಾ "ಮಹಾರಾಜ ಮತ್ತು ದಿವಾನರ ಭಿನ್ನಾಭಿಪ್ರಾಯ ಹಿಂದುಳಿದವರ ಏಳ್ಗೆಯ ಧ್ಯೇಯಕ್ಕೆ ಸಂಬಂಧ ಪಟ್ಟದಲ್ಲ. ಆದರೆ ಅನುಸರಿಸುವ ವಿಧಾನಕ್ಕೆ ಸಂಬಂಧ ಪಟ್ಟದು, ಸಾಧಿಸುವ ಮಟ್ಟದ ರಿಯಾಯಿತಿಗೆ ಸಂಬಂಧಪಟ್ಟದು" ಎಂದು ತಿಪ್ಪೆ ಸಾರಿಸುವ ವಿಶ್ಲೇಷಣೆ ಮಾಡುತ್ತಾರೆ. (ಪು. 51).

"ಪ್ರಗತಿಗೆ ವಿದ್ಯೆಯೊಂದೇ ಸಾಧನ" ಎನ್ನುವುದು ಸಾಮಾನ್ಯ ಪರಿಸ್ಥಿತಿಯಲ್ಲಿ ನಿಜವಾದರೂ, ಇಲ್ಲಿನ ಲೇಖಕರ ಧೋರಣೆಯಂತೂ ಬಹಳ ಹಳಸಲಾದ ಸವಕಲು ಎಂದು ಪರಿಗಣಿಸಲ್ಪಟ್ಟಿರುವ cyclical theoryಯ ಪ್ರತಿಪಾದನೆಯಂತಿದೆ. ಏಕೆಂದರೆ ಇಂಗ್ಲಿಷ್ ವಿದ್ಯೆ ಕಲಿತವರೆಲ್ಲಾ ಮುಂದುವರಿದರು; ಮೊದಲು ಆಂಗ್ಲರು (ಅಸಂಬದ್ಧವೆನಿಸಿದರೂ) ನಂತರ ಕ್ರಮವಾಗಿ ಮದ್ರಾಸ್-ಮೈಸೂರು ಬ್ರಾಹ್ಮಣರು. ಆದ್ದರಿಂದ ಹಿಂದುಳಿದವರೂ ವಿದ್ಯೆ ಕಲಿತರೆ ಮುಂದುವರಿಯುತ್ತಾರೆನ್ನುವ ಧಾಟಿ ಲೇಖಕರದು. (ಏಕೋ ಇಲ್ಲಿ ಇಂಗ್ಲಿಷ್ ವಿದ್ಯೆಯೆನ್ನುವುದನ್ನು ಸ್ಪಷ್ಟವಾಗಿ ಹೇಳಿಲ್ಲ. ಬಹುಶಃ ಆಂಗ್ಲರು ತಮ್ಮ ಭಾಷೆಯನ್ನು ಮಾತ್ರ ಶಾಶ್ವತವಾಗಿ ಬಿಟ್ಟು ಭಾರತವನ್ನು ಖಾಲಿ ಮಾಡಿರುವುದರಿಂದ ಇರಬಹುದು). ಆದರೆ ವಿದ್ಯೆಕಲಿತ ಹಿಂದುಳಿದವರು ಎಷ್ಟು ಮಾತ್ರ ಮುಂದುವರಿದಿದ್ದಾರೆನ್ನುವುದು (ಸರ್ಕಾರದ ಪ್ರೋತ್ಸಾಹವಿಲ್ಲದೆ) ಉತ್ತರಿಸಲಾಗದೆ, ಸಂದಿಗ್ಧತೆಯುಳ್ಳುಳಿಸುವ ಪ್ರಶ್ನೆಯಾಗೇ ಉಳಿಯುತ್ತವೆ (ಅಧ್ಯಯನ 1970ರ ದಶಕದವರೆಗೂ ಮುಂದುವರಿಯುತ್ತದೆ.).

ಪ್ರಗತಿಗಾಗಿ ಲೇಖಕರು ಕೊಡುವ ಆದರ್ಶವಾದಿ (idealist) ಎನ್ನಬಹುದಾದ ಸಲಹೆಗಳಂತೂ ರಾಮರಾಜ್ಯವೆಂಬುದಿದ್ದರೆ ಅಲ್ಲಿಯೂ ಕ್ರಿಯಾತ್ಮಕವಾಗಲಾರದಂಥವು. ಉದಾ : "ಸಾಮಾಜಿಕ, ಆರ್ಥಿಕವಾಗಿ ಪ್ರಗತಿ ಹೊಂದಬೇಕಾದರೆ ನೂರಕ್ಕೆ ನೂರರಷ್ಟು ಮಂದಿಗೂ ಅಕ್ಷರಜ್ಞಾನ, 11ರಿಂದ 14 ವರ್ಷ ವಯೋಮಿತಿಯ ನೂರಕ್ಕೆನೂರುಮಕ್ಕಳೂ ಶಾಲೆಗೆ ನೊಂದಾಯಿಸು ಕೊಳ್ಳುವಿಕೆ. ಇಲ್ಲದಿದ್ದರೆ ಯಾವುದೇ ದೇಶ ಮುಂದುವರಿಯುವುದಿಲ್ಲ." (ಪು. 35) ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗೆ ಲೇಖಕರು ಮುಖ್ಯವಾದ ಪರಿಹಾರವನ್ನು ಕೊಡುತ್ತ, ಹೇಳುವ ಮೇಲಿನ ಅಕ್ಷರ ಜ್ಞಾನದ ವಿಚಾರವು, ಹಿಂದೆ ನೋಡಿದಂತೆ ಮುಖ್ಯವಾದ ವಿಚಾರವೇ ಆದರೂ ಅವರು ಅದೊಂದಕ್ಕೇ ಕೊಡುವ ಒತ್ತು ಉಳಿದ, ಐತಿಹಾಸಿಕವಾಗಿ ಮುಖ್ಯವಾಗಿ ಗಮನಿಸಬೇಕಾದ ದಾರಿಗಳನ್ನು ಪರೋಕ್ಷವಾಗಿ ಮುಚ್ಚಿಡುವ ಪ್ರಯತ್ನವಾಗಿಯೇ ಇಲ್ಲಿ ತೋರುತ್ತದೆ.

ಕರ್ನಾಟಕದ ಹಿಂದುಳಿದ ವರ್ಗಗಳ ಚಳವಳಿ ಈ ಅಧ್ಯಯನದ ತಲೆ ಬರಹ (tittle)ವಾದರೂ 1956ರ ವರೆಗಿನ ಮೈಸೂರು ಸಂಸ್ಥಾನದ ಹಿಂದುಳಿದ (!) ವರ್ಗಗಳ ಚಳವಳಿ ಮಾತ್ರ ಇಲ್ಲಿ ಚರ್ಚಿತವಾಗಿದೆ. (ಲೇಖಕರ ದೃಷ್ಟಿಯಲ್ಲಿ ಮೈಸೂರು ಸಂಸ್ಥಾನ ಮಾತ್ರ ಮೈಸೂರು ರಾಜ್ಯ, ನಂತರ ಕರ್ನಾಟಕವಾದಂತಿದೆ). ಬೇರೆ ಭಾಗಗಳಲ್ಲಿನ ಚಳವಳಿಯ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ. ಹಾವನೂರು ವರದಿ ಜಾರಿಗೆ ಬರುವವರೆಗಿನ ಸರ್ಕಾರಿ ನಿಯಮಿತ (ಕೇಂದ್ರ ಮತ್ತು ರಾಜ್ಯ) ಹಿಂದುಳಿದ ವರ್ಗಗಳ ಸಮಿತಿಗಳ ವರದಿ ಅದರ ಮೇಲಿನ ಸರ್ಕಾರಿ ಆಜ್ಞೆ (ಭಾರತ ಸಂವಿಧಾನದಲ್ಲಿನ ಈ ಬಗ್ಗೆ ಇರುವ ಕೆಲವು ಅಧಿನಿಯಮ (article) ಮತ್ತು ಅನುಚ್ಛೇದ (sections and clauses)ಗಳೂ ಸೇರಿದಂತೆ) ಕೋರ್ಟುಗಳಲ್ಲಿನ ವ್ಯಾಜ್ಯ, ಅವುಗಳ ಮೇಲಿನ ತೀರ್ಪುಗಳನ್ನೇ ನಾವು ಕರ್ನಾಟಕದ ಹಿಂದುಳಿದ ವರ್ಗಗಳ ಚಳವಳಿ (ಪು. 65-135)ಯೆನ್ನುವುದಾದರೆ ಈ ಅಧ್ಯಯನವನ್ನು ನಾವು ಹಾಗೆಯೇ ಭಾವಿಸಬಹುದು.

ಒಟ್ಟಾರೆ ಈ ಕೃತಿ ಎಲ್ಲ ದೃಷ್ಟಿಯಿಂದಲೂ ಅಸಮರ್ಪಕವೇ ಅಲ್ಲ, ಹಿಂದುಳಿದ ವರ್ಗಗಳ ಚಳವಳಿಯಲ್ಲಿ, ಏಳ್ಗೆಯಲ್ಲಿ ಉತ್ಸಾಹವುಳ್ಳವರನ್ನೂ (ಸಮಾಜ ಕಾರ್ಯಕರ್ತರನ್ನೂ) ಉದ್ದೇಶಪೂರ್ವಕವಾಗಿ ದಾರಿತಪ್ಪಿಸುವಂತಾದ್ದು ಎಂದರೂ ತಪ್ಪಾಗಲಾರದು.

ಆಧುನಿಕ ಮೈಸೂರು ಇತಿಹಾಸಕ್ಕೆ ಸಂಬಂಧಪಟ್ಟಂತೆ ನಡೆದಿರುವ ಕೆಲವು ಸಂಶೋಧನೆಗಳಲ್ಲಿ Poliitical Change in an Indian State-Mysore-1917–1955 ಎನ್ನುವ ಜೇಮ್ಸ್ ಮೆನರರ ಕೃತಿಯೂ ಒಂದು.

ಅಲ್ಪಸಂಖ್ಯಾತ ಜಾತಿಯ ಮೈಸೂರು ರಾಜಶಾಹಿ, ದೇಶೀಯ ಹಿತಾಸಕ್ತಿಗಳ (local interests) ಅಧಿಕಾರಕ್ಕೆ ಕೈಹಾಕದೆ ರಾಜ್ಯ ಮತ್ತು ಗ್ರಾಮ (ಪ್ರಾದೇಶಿಕ)ಗಳ ಮಧ್ಯೆ ಕಂದರ ಉಳಿಯಲು ಪ್ರೋತ್ಸಾಹದಾಯಕವಾದ ಆಡಳಿತ ನಿರ್ವಹಿಸಿತು. ಆಂಗ್ಲ ಸಾಮ್ರಾಜ್ಯ ಶಾಹಿಗಳ ನೇರ ಕ್ರಮವನ್ನು (Direct Action) ತಪ್ಪಿಸಿಕೊಳ್ಳಲು ರಾಜ್ಯದ ಪ್ರಗತಿಗಾಗಿ ಯೋಜನೆಗಳನ್ನು ಹಾಕಿಕೊಂಡು, ಸಮರ್ಥ ಆಡಳಿತವೆನಿಸಿಕೊಂಡು ವಿವಿಧ ಹಂತಗಳಲ್ಲಿ ರಾಜಕೀಯ ಕಂದರವೇರ್ಪಟ್ಟಿತು. ಈ ಕಂದರ ಮೈಸೂರು ಅರಸರ ಅಧಿಕಾರವನ್ನು ಪ್ರಶ್ನಿಸಿಬಹುದಾದ ಜನಾಭಿಪ್ರಾಯ ರೂಪುಗೊಳ್ಳಲು ಅಡ್ಡಿಯಾಗಿತ್ತಾದ್ದರಿಂದ ಅರಸರೂ ಈ ಕಂದರವನ್ನು ಉಳಿಸಿ ಕೊಂಡು ಬಂದರು. ಬೆಳೆಸಲು ಪ್ರಯತ್ನಪಟ್ಟರೂ, ದೇಶದೆಲ್ಲೆಡೆ ಊಹೆಗೂ ಮೀರಿ ಬೆಳೆಯುತ್ತಿದ್ದ ಜಾಗೃತಿ ಮೈಸೂರಿಗೂ ಕ್ರಮೇಣ ಹರಡಿ ರಾಜಶಾಹಿಯ ಬುಡ ವನ್ನಲುಗಿಸುವ ಹಾದಿಯಲ್ಲಿ ಮುಂದುವರಿಯಿತು.

ಈ ಕಂದರದಿಂದುಂಟಾದ ಅಡಚಣೆಗಳನ್ನು ನಿವಾರಿಸಿಕೊಂಡು ಮೈಸೂರು ರಾಜಕಾರಣಿಗಳು, ರಾಜಶಾಹಿಯಿಂದ ರಾಜ್ಯವನ್ನು ವಿಮುಕ್ತಿಗೊಳಿಸಿ ಕಾಂಗ್ರೆಸ್ ಆಡಳಿತಕ್ಕೊಳಪಡಿಸಿದ ರಾಜಕೀಯ ವಿವೇಚನೆಯೇ ಈ ಸಂಶೋಧನೆಯ ತಿರುಳು. ಮೈಸೂರಿನ ರಾಜಕೀಯ ಸ್ಥಿತ್ಯಂತರಗಳ ಈ ಅಧ್ಯಯನ ಕಾಲದ ಸಮಗ್ರ ಚಿತ್ರಣ ವಂತೂ ಈ ಅಧ್ಯಯನದಲ್ಲಿದೆ. ಆದರೆ ಸಂಶೋಧಕರು, ಕೆಲವೆಡೆ ಪೂರ್ವಾಗ್ರಹ ಪೀಡಿತ, ಹೆಚ್ಚು ಸಮರ್ಥನೆ ದೊರೆಯದ ತೀರ್ಮಾನಗಳಿಗೆ ಬಂದಿದ್ದಾರೆನಿಸುತ್ತದೆ. ಇದಕ್ಕೆ ಕೆಲ ಉದಾಹರಣೆಗಳನ್ನು ಕೊಡಬಹುದು. ಮೊದಲ ಅಧ್ಯಾಯದಲ್ಲಿ "ಮಾದರಿ ಮೈಸೂರು" ಒಂದು ಮುಖವಾಡ ಮಾತ್ರ. ಸಾರ್ವಜನಿಕ ಅಭಿಪ್ರಾಯ ವನ್ನು ರಾಜ್ಯದ ಪರವಾಗಿ ರೂಪಿಸಿಕೊಳ್ಳಲು ಪೊಳ್ಳು ಪದಕಗಳನ್ನು ಸರ್ಕಾರ ಹಾಕಿ ಕೊಂಡಿತ್ತು. ಪ್ರಗತಿಯ ಪ್ರತಿಬಿಂಬವನ್ನು ಕಟ್ಟಿಕೊಳ್ಳುವುದರಲ್ಲಿ ಸರ್ಕಾರ ಆಸಕ್ತವಹಿಸಿ ಬ್ರಿಟಿಷರ ಹಾಗೂ ಕೇಂದ್ರ ಕಾಂಗ್ರೆಸ್‌ನಾಯಕರ ಮೆಚ್ಚುಗೆ ಗಳಿಸುವುದಕ್ಕೆ ಇವೆಲ್ಲ ಸಹಾಯಕವಾಗುವಂತಹ ನಾಟಕಗಳು ಎನ್ನುವಂತಹ ಚರ್ಚೆಯಿದೆ. (ಪು. 11-27) ಒಂದುಕಡೆ ಬ್ರಿಟಿಷರ-ಮೈಸೂರಿನ ಸಂಬಂಧದ ಬಗ್ಗೆ ವಿವರಿಸುತ್ತಾ 1920ರ ನಂತರ ಸಾಮ್ರಾಜ್ಯ ಶಾಹಿಗಳು ಯಾವುದೇ ನಿರೂಪ (directive) ಮೈಸೂರು ಸರ್ಕಾರಕ್ಕೆ ನೀಡಲಿಲ್ಲ. (ಪು. 13) ವೆನ್ನುತ್ತಾರೆ. ಆದರೆ ಈ ಹೇಳಿಕೆಗಳೂ ಪೂರ್ಣ ನಿಜವಿಲ್ಲ. ಪ್ರತಿಯೊಬ್ಬ ದಿವಾನ ನೇಮಕಗೊಂಡಾಗಲೂ ಬ್ರಿಟಿಷರ ಅನುಮತಿ ಅವಶ್ಯವಾಗಿತ್ತು. 'ಪತ್ರಿಕಾ ಶಾಸನದ ತಿದ್ದುಪಡಿ (1924) ಯಂತೂ ಬ್ರಿಟಿಷರಿಗೋಸ್ಕರವೇ ತಂದದ್ದು. 1923ರ ಸಂವಿಧಾನ ಸುಧಾರಣೆಗಳ ಕರಡು ಪ್ರತಿಯಲ್ಲಿ ಮೈಸೂರು ಅರಸು ಮನೆತನವನ್ನು 'Royal family' ಎಂದು ನಮೂದಿಸಿ ದಕ್ಕೆ ಬ್ರಿಟಿಷ್ ರೆಸಿಡೆಂಟರು ಆ ಪದ ಬಳಕೆ ಬೇಡವೆಂದು (ಅದು ಬ್ರಿಟಿಷರಿಗೆ ಮೀಸ ಲೆಂಬಂತೆ) ಬೇಕಾದರೆ 'Ruling Family' ಎಂದು ಕರೆದುಕೊಳ್ಳಬಹುದೆಂದು ತಿದ್ದಿಸಿಯೂ ಬಿಟ್ಟರು. ಮಿರ್ಜಾಇಸ್ಮಾಯಿಲ್ಲರ ರಾಜೀನಾಮೆಯಲ್ಲಿ ಬ್ರಿಟಿಷರ

ಕೈವಾಡವಿತ್ತು ಎನ್ನುವುದೂ ಸರ್ವವಿದಿತ. ಲಂಡನ್ನಿನ ಇಂಡಿಯಾ ಆಫೀಸ್ ಲೈಬ್ರರಿಯ ಮೂಲ ಅಕ್ಷರಗಳನ್ನು ಪರಿಶೀಲಿಸಿರುವ ಸಂಶೋಧಕರಿಗೆ ಈ ವಿಷಯಗಳು ಏಕೆ ಕಣ್ಣಿಗೆ ಬೀಳಲಿಲ್ಲವೆಂಬುದು ನಿಗೂಢವಾಗುಳಿಯುತ್ತದೆ.

'ಗ್ರಾಮಾಧಿಕಾರಿಗಳು ಒಪ್ಪಿಸಿದ ಭೂಕಂದಾಯ ವಿವರಗಳನ್ನು ಪರಿಶೋಧಿಸಿದರೆ ಅವರು ರೊಚ್ಚಿಗೆದ್ದಾರೆಂದು, ಅವರ ಅಧಿಕಾರವನ್ನು ಪ್ರಶ್ನಿಸಿದಂತಾಗುತ್ತದೆಂದು ಆಡಳಿತ ಈ ರೀತಿಯ ಶೋಧನೆ ಮಾಡುತ್ತಿರಲಿಲ್ಲ. ಸರ್ಕಾರ ಮತ್ತು ಗ್ರಾಮಾಂತರ ಅಧಿಕಾರೇತರ ಯಜಮಾನರ ನಡುವೆ ಒಂದು ರೀತಿಯ ಒಡಂಬಡಿಕೆಯಿತ್ತು' (ಪು. 17) ಎನ್ನುವ ಮಾತುಗಳಂತೂ ಮೇಲು ನೋಟಕ್ಕೆ ಉತ್ಪ್ರೇಕ್ಷೆಯವು ಎನಿಸುತ್ತದೆ.

ರಾಜ್ಯದ ರಾಜಕೀಯದಲ್ಲಿ ವೃತ್ತಪತ್ರಿಕೆಗಳ ಪಾತ್ರ ಮತ್ತು ಪತ್ರಿಕೆಗಳ ಬಗ್ಗೆ ಸರ್ಕಾರದ ನೀತಿಯನ್ನು ವಿವರಿಸುತ್ತಾ "ಭಾಷಾ ಪತ್ರಿಕೆಗಳು ಸರ್ಕಾರದ ವಿಮರ್ಶೆ ಮಾಡುತ್ತಾ ಕಾಂಗ್ರೆಸ್ಸಿಗೆ ಬೆಂಬಲ ಸೂಚಿಸುತ್ತಿದ್ದವು. ಸಾಮಾನ್ಯವಾಗಿ ಪತ್ರಿಕೆಗಳಿಗೆ ಮುಕ್ತವಾಗಿರಲು ಸರ್ಕಾರದ ಅನುಮತಿ ಇತ್ತು" (ಪು.49) ಎನ್ನುವ ಹೇಳಿಕೆಯನ್ನು ಸಂಶೋಧಕರು, ಸಮಾಜ ವ್ಯವಸ್ಥೆ, ಗ್ರಾಮಾಡಳಿತಗಳಲ್ಲಿ ಸರ್ಕಾರ ಕೈಹಾಕಿ ವಿರೋಧ ಕಟ್ಟಿಕೊಳ್ಳಲಿಲ್ಲ ಎನ್ನುವುದಕ್ಕೆ ಪೂರಕವಾಗಿ ಬಳಸಿಕೊಳ್ಳುವ ಭರದಲ್ಲಿ ನಿಜಸ್ಥಿತಿಯನ್ನು ಮರೆಮಾಚಿದ್ದಾರೆಂದೇ ಹೇಳಬೇಕಾಗುತ್ತದೆ. ಏಕೆಂದರೆ ಸರ್ಕಾರ 1926 ಸುಮಾರಿಗೆ 126 ಪತ್ರಿಕೆಗಳಿಗಿದ್ದ ಅನುಮತಿ ರದ್ದು ಪಡಿಸಿ ಅವುಗಳ ಬಾಯಿ ಮುಚ್ಚಿಸಿತ್ತು ಹಾಗೂ ಮೈಸೂರಿನ ಕ್ರೂರ ಪತ್ರಿಕಾ ಶಾಸನ ಆಂಗ್ಲ ಭಾರತದ ಶಾಸನಕ್ಕಿಂತ ಹೆಚ್ಚು ಕ್ರೂರವಾಗಿತ್ತು. ಈ ಶಾಸನವನ್ನು ಮೈಸೂರು ಸರ್ಕಾರ ಆಂಗ್ಲರನ್ನು ಸಂಪ್ರೀತ ಗೊಳಿಸಿ ಪತ್ರಿಕೆಗಳನ್ನು ಬಗ್ಗು ಬಡಿಯಲು ತಂದ ಶಾಸನವೆಂದರೂ ತಪ್ಪಾಗುವುದಿಲ್ಲ. ಅನುಮತಿ ರದ್ದುಗೊಳಿಸಿದ್ದು ಸಾಲದೆಂಬಂತೆ ಮುದ್ರಣಾಲಯವನ್ನೇ ಮುಟ್ಟುಗೋಲು ಹಾಕಿಕೊಂಡದ್ದು ಮೈಸೂರು ಸರ್ಕಾರದ ಮತ್ತೊಂದು ವಿಕ್ರಮ. (ಈ ಪತ್ರಿಕೆ ತಡಗೂರು ರಾಮಚಂದ್ರರಾಯರ ಕಣಿಯರ ಪತ್ರಿಕೆ, (ಚಿಕ್ಕ) ಮುದ್ರಣಾಲಯವೂ ಅವರದೇ.)

"ಮೈಸೂರು ಸರ್ಕಾರ ಭೂ ಕಂದಾಯವನ್ನು ರೈತರು ಕೆರಳಬಹುದೆಂದು ಭಯಪಟ್ಟು ಹೆಚ್ಚಿಸಲಿಲ್ಲ. ಹಣದ ಅಡಚಣೆ ಹೆಚ್ಚೆಂದು ಹೇಳಿಕೊಳ್ಳುವುದರಲ್ಲಿ ಆಸಕ್ತಿ ವಹಿಸಿತ್ತು. ಆದರೆ ಹಣದ ಅಭಾವ ಸರ್ಕಾರದ ಮುಖ್ಯ ಸಮಸ್ಯೆಯಾಗಿರ ಲಿಲ್ಲ. ಪ್ರಾಥಮಿಕ ಶಾಲೆಗಳ ಹೆಚ್ಚಳ, ಗ್ರಾಮೋದ್ಧಾರ ಕಾರ್ಯಗಳನ್ನು ಕೈಗೊಂಡರೆ, ಗ್ರಾಮಾಂತರ ಜನರೂ ಎಚ್ಚೆತ್ತು ಸರ್ಕಾರದ ವಿರುದ್ಧ ತಿರುಗಿ ಬೀಳಬಹುದೆಂಬ ಭೀತಿ ಯಿಂದ, ಈ ಬಾಬ್ತು ಖರ್ಚಿಗೆ ಹಣವಿಲ್ಲವೆಂದು ಹೇಳಿಕೊಳ್ಳಬೇಕಾಗಿತ್ತಾದ್ದರಿಂದ ಹಣದ ಮುಗ್ಗಟ್ಟನ್ನು ಒತ್ತಿ ಹೇಳುತ್ತಿತ್ತು." (ಪು. 19) ಆದರೆ ಅದೇ ಉನ್ನತ

ವಿದ್ಯಾಭ್ಯಾಸ ಸರ್ಕಾರ ಪ್ರಗತಿಯ ನಿಲುವನ್ನು ಎತ್ತಿ ತೋರುವುದಾದ್ದರಿಂದ ಹಣದ ಕೊರತೆಯೇಕೆ, ಸತತವಾಗಿ ಅದರ ಮೇಲೆ ಹೆಚ್ಚು ಖರ್ಚು ಮಾಡುತ್ತಿತ್ತು (ಪು.20) ಎನ್ನುತ್ತಾರೆ.

ಅಂಕಿ-ಅಂಶಗಳ ಆಧಾರದ ಮೇಲೆ ಈ ತೀರ್ಮಾನ ಕೂಡ ತಪ್ಪು ಎಂದು ಸಾಧಿಸಿ ಹೇಳಬಹುದು. ಸಾಮಾನ್ಯವಾಗಿ ಪ್ರಾಥಮಿಕ ವಿದ್ಯಾಭ್ಯಾಸದ ಮೇಲಿನ ಸರ್ಕಾರಿ ವೆಚ್ಚ ಹೆಚ್ಚುತ್ತಾ ಹೋಯಿತು. 1925-26 ರಲ್ಲಿ ಸುಮಾರು ರೂ. 20 (ಇಪ್ಪತ್ತು) ಲಕ್ಷವಿದ್ದ ಈ ಖರ್ಚು 1940ರ ವೇಳೆಗೆ 26 ಲಕ್ಷಕ್ಕೇರಿದರೆ ಇದೇ ವರ್ಷಗಳಲ್ಲಿ ಉನ್ನತ ವಿದ್ಯಾಭ್ಯಾಸದ ಮೇಲಿನ ವೆಚ್ಚ ರೂ. 9 ಲಕ್ಷದಲ್ಲಿಯೇ ನಿಂತಿತು. ಅಲ್ಲದೇ ಹಿಂದುಳಿದ ವರ್ಗಗಳಿಗಾಗಿ ಕೊಡುತ್ತಿದ್ದ ಸ್ಕಾಲರ್‌ಶಿಪ್ ಮೊತ್ತ (ಪ್ರಾಥಮಿಕ ಹಂತ ದಲ್ಲಿ) 1918ರಲ್ಲಿ ಕೇವಲ ರೂ. 7000 ಇದ್ದದ್ದು, 1937 ರ ವೇಳೆಗೆ ರೂ. 2 ಲಕ್ಷ ಕ್ಕೇರಿತ್ತು ಎಂದಾಗ ಲೇಖಕರ ತೀರ್ಮಾನ ಪೂರ್ವಗ್ರಹ ಸಿದ್ಧಾಂತವಲ್ಲವೇ ಎನ್ನುವ ಪ್ರಶ್ನೆ ಮತ್ತೆ ಏಳುತ್ತದೆ.

"ಶಾಲಾಸಂಖ್ಯೆ ಗಮನಾರ್ಹವಾಗಿ ಇಳಿಯಿತು" ಎನ್ನುವುದೂ. ಅದರ ಹಿನ್ನೆಲೆ ಯನ್ನು ತಿಳಿಯದೆ ತೆಗೆದುಕೊಂಡಿರುವ ತೀರ್ಮಾನ ಎನಿಸುತ್ತದೆ. ಶಾಲಾಸಂಖ್ಯೆ ಸುಮಾರು 10000ದಿಂದ ಸುಮಾರು 8500ಕ್ಕೆ ಇಳಿದಿದದ್ದು ನಿಜ. ಆದರೆ ಹಣದ ಮುಗ್ಗಟ್ಟಿನಿಂದಾಗಲಿ ಅಥವಾ ಹಳ್ಳಿಗರನ್ನು ವಿದ್ಯೆಯಿಂದ ವಂಚಿಸುವುದಕ್ಕಾಗಲಿ ತೆಗೆದುಕೊಂಡ ಕ್ರಮವಂತೂ ಇದಲ್ಲ. 1919ರಲ್ಲಿ ಪಂಚಮರಿಗೆ (ದಲಿತರಿಗೆ) ಸಾರ್ವಜನಿಕರಿಗೆ ಶಾಲೆಗಳಿಗೆ ಪ್ರವೇಶ ನೀಡಲಾಯಿತು. ಸಹವಿದ್ಯಾಭ್ಯಾಸ ಪ್ರೋತ್ಸಾಹಕ್ಕಾಗಿ ಕೆಲವು ಪ್ರತ್ಯೇಕ ಬಾಲಕಿಯರ ಶಾಲೆಗಳನ್ನು ಮುಚ್ಚಲಾಯಿತು. ಪಂಚಮರಿಗೆ ಎಲ್ಲ ಶಾಲೆಗಳಲ್ಲಿ ಪ್ರವೇಶವಿದ್ದಾಗ ಪ್ರತ್ಯೇಕ ಶಾಲೆಗಳ ಅವಶ್ಯಕತೆ ಹೆಚ್ಚಿರಲಿಲ್ಲ. ವಿದ್ಯಾರ್ಥಿ ಸಂಖ್ಯೆ ಸಾಕಷ್ಟಿದ್ದ ಪಂಚಮ ಮತ್ತು ಬಾಲಕಿಯರ ಪ್ರತ್ಯೇಕ ಶಾಲೆಗಳನ್ನು ಮುಂದುವರಿಸಿ, ಸಂಖ್ಯೆ ಇಲ್ಲದ ಶಾಲೆಗಳನ್ನು ಮುಚ್ಚಲಾಯಿತು. ಈ ಶಾಲೆಗಳ ಪ್ರತ್ಯೇಕ ಸಂಖ್ಯೆಯೇ ಸುಮಾರು ಅರ್ಧದಷ್ಟಿದ್ದುದರಿಂದ, ಈ ಕೆಲಶಾಲೆಗಳನ್ನು ಮುಚ್ಚಿದ ಪರಿಣಾಮವಾಗಿ ಶಾಲಾಸಂಖ್ಯೆ ಇಳಿಯಿತೇ ವಿನಹ ಸರ್ಕಾರದ ಕೀಳು ನೀತಿಯಿಂದಲ್ಲ.

ಸರ್ಕಾರದ ಹಣಕಾಸಿನ ಸ್ಥಿತಿಯೂ ಅಷ್ಟೆ. "ಹಣದ ಸಮಸ್ಯೆ ಸರ್ಕಾರಕ್ಕೆ ಮುಖ್ಯವೇ ಅಲ್ಲ. ಏಕೆಂದರೆ ರಾಜ್ಯದಿಂದ ಬ್ರಿಟಿಷರಿಗೆ ಹೋಗುವ ಹಣ ನಿಗದಿಯಾಗಿತ್ತಾದ್ದ ರಿಂದ ರಾಜ್ಯ ಸರ್ಕಾರ ಹಣದ ಬಗ್ಗೆ ಯೋಚನೆ ಮಾಡುವಂತಿರಲಿಲ್ಲ" ಎನ್ನುವ ಮಾತುಗಳೂ ಪೂರ್ವಾಗ್ರಹ ಪೀಡಿತವಾದುದೇ. ಎಲ್ಲರಿಗೂ ತಿಳಿದಂತೆ ಮೈಸೂರು ಸರ್ಕಾರ ಬ್ರಿಟಿಷರ ಮೊದಲ ಜಾಗತಿಕ ಯುದ್ಧ ಪ್ರಯತ್ನಗಳಿಗೆ ಸಹಾಯವಾಗಿ ಸೈನ್ಯ ಕಳಿಸಿದ್ದೇ ಅಲ್ಲದೆ ಸುಮಾರು ರೂ. 3 ಕೋಟಿಯಷ್ಟು ಹಣವನ್ನು ಕೊಡುಗೆ

ಯಾಗಿ ಕೊಟ್ಟಿತ್ತು. (ರಾಜ್ಯದ ವಾರ್ಷಿಕ ಆದಾಯವೇ ಬರಿ 3 ಕೋಟಿ ರೂಪಾಯಿಯಷ್ಟಿತ್ತು.) 1981-21 ರ ಅವಧಿಯಲ್ಲಿ ಕಾಲರಾ, ಇನ್‌ಫ್ಲೂಯಂಜ, ಕ್ಷಾಮಗಳಿಂದಾಗಿ ಸರಕಾರಿ ಆದಾಯ ನಿಂತದ್ದೇ ಅಲ್ಲಿ ಬೊಕ್ಕಸದಿಂದಲೇ ಲಕ್ಷಾಂತರ ರೂಪಾಯಿಗಳನ್ನು ಜನಹಿತಕಾರ್ಯಕ್ಕಾಗಿ ಖರ್ಚುಮಾಡಬೇಕಾಯಿತು. ಈ ಪರಿಸ್ಥಿತಿಯ ಒತ್ತಡದಿಂದಾಗಿ, ಮೈಸೂರು ಸರ್ಕಾರ 1920, 1928 ಮತ್ತು 1933 ರಲ್ಲಿ ಸುಮಾರು 7 ಕೋಟಿ ರೂಪಾಯಿಯಷ್ಟು ಸಾರ್ವಜನಿಕ ಸಾಲವನ್ನೆತ್ತಬೇಕಾಯಿತು.

ಬ್ರಿಟಿಷರಿಗೆ ರಾಜ್ಯದಿಂದ ಸಲ್ಲಬೇಕಾದ ಹಣ ನಿಗದಿಯಾಗಿತ್ತು ಎನ್ನುವ ಮಾತು ಅರ್ಧ ಸತ್ಯ. ಏಕೆಂದರೆ ಮೈಸೂರು ಕೊಡುತ್ತಿದ್ದ ಕಪ್ಪ (subsidy) ನಿಗದಿಯಾಗಿತ್ತು. ಆಗಾಗ್ಗೆ ಬ್ರಿಟಿಷ್ ಸರ್ಕಾರ ಬೇರೆ ವಿಧದಲ್ಲಿ ರಾಜ್ಯಗಳ ಮೇಲೆ ತೆರಿಗೆ ವಿಧಿಸುತ್ತಿತ್ತು. 1934ರಲ್ಲಿ ಬ್ರಿಟಿಷ್ ಭಾರತ ಸರ್ಕಾರ ಬೆಂಕಿಪೊಟ್ಟಣ ಮತ್ತು ಸಕ್ಕರೆ ಮೇಲೆ ತೆರಿಗೆ ವಿಧಿಸಿ ಸುಮಾರು ರೂ. 6 ಲಕ್ಷ (ವಾರ್ಷಿಕ) ವರಮಾನ ಹೆಚ್ಚಿಸಿಕೊಂಡಿತು. ಆಂಗ್ಲ ಪ್ರತಿನಿಧಿಗಳು ಪದೇ ಪದೇ ರಾಜ್ಯಕ್ಕೆ ಭೇಟಿಯಿತ್ತಾಗ ಆಗುವ ಲಕ್ಷಾಂತರ ರೂಪಾಯಿ ಖರ್ಚನ್ನು ರಾಜ್ಯ ಸರ್ಕಾರವೇ ಭರಿಸಬೇಕಾಗುತ್ತಿತ್ತು.

ಇವೆಲ್ಲದರ ಜೊತೆಗೆ ಮೈಸೂರು ಸರ್ಕಾರ ಕೂಡ ಸಾಕಷ್ಟು ತೆರಿಗೆಗಳನು ವಿಧಿಸಿತು. (ರೈತರಿಗೆ ಹೆಪರದೆ) 1919ರಲ್ಲಿ ಕೃಷಿ ವರಮಾನದ ಮೇಲೆ, 1933ರಲ್ಲಿ ಮನರಂಜನೆ ತೆರಿಗೆ. 1934ರಲ್ಲಿ ಚಿನ್ನದ ಮೇಲೆ. ಆಂಗ್ಲ ಸರ್ಕಾರದ ತೆರಿಗೆಗಳ ನೆಪದಲ್ಲಿ ಕೋರ್ಟು ಫೀ ಸ್ಟ್ಯಾಂಪುಗಳ ಮೇಲೆ, ಹೀಗೆ ಹಲವಾರು ತೆರಿಗೆಗಳನ್ನು ವಿಧಿಸಿ ಸುಮಾರು ರೂ. 15 ಲಕ್ಷದಷ್ಟು ವಾರ್ಷಿಕ ಆದಾಯ ಹೆಚ್ಚಿಸಿಕೊಂಡಿತು. ನಿಜಸ್ಥಿತಿ ಹೀಗಿದ್ದಾಗ ರೈತರ ಮೇಲೆ ರಾಜ್ಯಸರ್ಕಾರ ತೆರಿಗೆ ವಿಧಿಸಲಿಲ್ಲ ಎನ್ನುವುದು ದಾರಿತಪ್ಪಿಸುವ ಹೇಳಿಕೆಯೆನ್ನಬಹುದು.

ಸಂಶೋಧಕರ ಈ ಧೋರಣೆ ನಮ್ಮಲ್ಲಿರುವ ಅನುಮಾನಕ್ಕೆ ಪುಷ್ಟಿಕೊಡುತ್ತದೆ. ಇವರು (ಅಡಿ ಟಿಪ್ಪಣಿಗಳಿಂದ ತಿಳಿದು ಬರುವಂತೆ) ಸಂದರ್ಶಿಸಿರುವ ಬಹುತೇಕ ವ್ಯಕ್ತಿಗಳು ಆಗಿನ ಸರ್ಕಾರದ ವಿರೋಧಿಗಳು. ಸರ್ಕಾರದಿಂದ ತೊಂದರೆಗೊಳಗಾಗಿ ಬಹುಮಂದಿ ಜೈಲಿಗೂ ಹೋದವರು. (ಸ್ವಾತಂತ್ರ್ಯ ಹೋರಾಟಗಾರರಾಗಿ) ಇವರು ಕೊಟ್ಟ ಮಾಹಿತಿ ನಿಖರವಾದುದಲ್ಲ ಅಥವಾ ಹೌದು ಎನ್ನುವ ಬಗ್ಗೆ ಚರ್ಚೆಮಾಡದೆ ಆ ಮಾಹಿತಿಯನ್ನು ಸಮಕಾಲೀನ ಆಕರಗಳೊಂದಿಗೆ ಸಮರ್ಪಕವಾಗಿ (ಯಾವುದೇ ಪೂರ್ವಾಗ್ರಹಕ್ಕೊಳಗಾಗದೆ) ಮರು ಪರೀಕ್ಷಿಸಿ ಲೇಖಕರು ಅಭಿಪ್ರಾಯ ಕೊಟ್ಟಿಲ್ಲವೆನ್ನಬೇಕಾಗುತ್ತದೆ. ಸಮಕಾಲೀನ ಕೆಲ ರಾಜಕೀಯ ನಾಯಕರಂತೆಯೇ ಸಂಶೋಧಕರೂ ಕೆಲವೆಡೆ ಪೂರ್ವಾಗ್ರಹವಾದೊಂದು ಸಿದ್ಧಾಂತ ರೂಪಿಸಿಕೊಂಡು ಲಿಖಿತ ಆಕರಗಳನ್ನು ಅಸಮರ್ಪಕವಾಗಿ. ಅವರ ಸಿದ್ಧಾಂತಕ್ಕೆ ಪೂರಕವಾಗಿ ಬಳಸಿಕೊಂಡು ತೀರ್ಮಾನಕ್ಕೆ

ಬಂದಂತಿದೆ. ಆಕರಗಳು ಮತ್ತು ವಿಶ್ಲೇಷಣೆ ಪರಸ್ಪರ ಪೂರಕವಾಗಿ ಸಂಶೋಧಕರ ಕೈಲಿ ಕೆಲಸ ಮಾಡದೆ ನಿಗದಿ ವಿಶ್ಲೇಷಣೆಗಾಗಿಯೇ ಆಕರಗಳು ಎನ್ನುವ ಧೋರಣೆ ಈ ಸಂಶೋಧನೆಯಲ್ಲಿ ಕಾಣುತ್ತದೆ.

ಇಂತಹ ತಪ್ಪುಗಳು (2, 3 ಮತ್ತು 4ನೇ ಅಧ್ಯಾಯಗಳಲ್ಲಿ) ಕಂಡುಬಂದು ಸಂಶೋಧಕರ ವಿಶ್ಲೇಷಣೆಗೆ ಸಹಾಯಕವಾದರೂ ಒಟ್ಟಾರೆ ಈ ಅಧ್ಯಯನ ಕಾಲದ ಮೈಸೂರು ಸಂಸ್ಥಾನದ ರಾಜಕೀಯ ಬದಲಾವಣೆಯ ಚಿತ್ರ ನೀಡುವುದಕ್ಕೆ ಅವರು ಅವರು ವಹಿಸಿರುವ ಶ್ರಮ ಶ್ಲಾಘನೀಯ. ಇತಿಹಾಸ ಸಂಶೋಧನೆಯಲ್ಲಿ ಮೌಖಿಕ ಚರಿತ್ರೆ (Oral History) ಸಂಶೋಧನಾಕ್ರಮವನ್ನು ಕರ್ನಾಟಕ ಇತಿಹಾಸ ಸಂಶೋಧನೆಯಲ್ಲಿ ತಂದವರಲ್ಲಿ ಪ್ರಾಯಶಃ ಮೇನರ್ ಮೊದಲಿಗರು. ಆದರೆ ಈ ವಿಧಾನ ಅವರಿಗೆ ಹೆಚ್ಚು ಪ್ರಯೋಜನಕಾರಿಯಾಗದೆ ಮೇಲೆ ವಿವರಿಸಿದಂತೆ ನಡೆದ ಸಂಗತಿಗಳಿಗೆ ಸಂಬಂಧಿಸಿದಂತೆ ತಪ್ಪು (Factual errors) ಗ್ರಹಿಕೆಗೆ ದಾರಿಮಾಡಿಕೊಟ್ಟಿದೆಯೆನ್ನಬಹುದು. ನಾಯಕರು (Leaders)ಗಳ ರಾಜಕೀಯ ವರ್ತನೆಯ ವಿಶ್ಲೇಷಣೆ ಸಮರ್ಥವಾಗಿ ಮೂಡಿಬಂದಿದೆ. (ಪು. 73–105). ಬ್ರಾಹ್ಮಣೇತರ ರಾಜಕೀಯ ಸಂಸ್ಥೆಗಳು, ರಾಜ್ಯ ಮತ್ತು ಗ್ರಾಮಾಂತರ ಪ್ರದೇಶಗಳ ಮಧ್ಯೆಯಿದ್ದ ಕಂದರವನ್ನು ಮುಚ್ಚಲು ಪಟ್ಟ ಪ್ರಯತ್ನಗಳ ವಿವರಣೆ, ಎಲ್ಲ ವರ್ಗಗಳೂ ಸೇರಿ ಕಾಂಗ್ರೆಸ್ ಸಂಸ್ಥೆಯಡಿಯಲ್ಲಿ, ರಾಜ್ಯ ಮತ್ತು ಕೇಂದ್ರಗಳ ಮಧ್ಯೆಯಿದ್ದ ರಾಜಕೀಯ ಬಿರುಕನ್ನು ಮುಚ್ಚುವ ಪ್ರಯತ್ನದ ವಿವರಣೆ; ಎಲ್ಲ ಶಕ್ತಿಗಳೂ ಒಂದಾಗಿ ಸರ್ಕಾರದ ವಿರುದ್ಧ ಸೆಣಸಿ ಸಫಲವಾದ ಬಗೆಯನ್ನು ವಿವರಿಸುವ ಆಕರಗಳ ಆಧಾರಿತ ಚರ್ಚೆ ಸಮರ್ಪಕವಾಗಿದೆ.

ಈ ಅಧ್ಯಯನದಿಂದ ರಾಜಕಾರಣಿಗಳ ವರ್ತನೆ ಯಾವ ಆಧಾರದ ಮೇಲೆ ರೂಪುಗೊಳ್ಳುತ್ತದೆ ಎಂಬುದು ತಿಳಿಯುಬರುತ್ತದೆ. ಮೈಸೂರಿನ ನಾಯಕರು ರಾಜಕೀಯ ಜರೂರು ಮತ್ತು ಸಾಮಾಜಿಕ ಒತ್ತಡಗಳಿಂದಾಗಿ, ಯಾವುದೇ ಬದ್ಧತೆ (Committment) ಇಲ್ಲದಿದ್ದರೂ ತಾವೇ ಊಹಿಸಿದಂತಹ ನಿಲುವುಗಳನ್ನು ತೆಗೆದುಕೊಂಡ ಬಗೆ, ಕೆಲವರು ಸಮಯ ಸಾಧಕ ಪ್ರವೃತ್ತಿಯಿಂದಾಗಿ ತತ್ವಗಳಿಗೆ ತಿಲಾಂಜಲಿಕೊಟ್ಟು ಸ್ವಾರ್ಥ ಸಾಧನೆಯಲ್ಲಿ ತೊಡಗಿದ ವಿವರಣೆ (ಪು. 105–147) ಗಳು ಅರ್ಥಗರ್ಭಿತವಾಗಿದೆ.

ವಿವಿಧ ವರ್ಗಗಳ ಸಂಘರ್ಷ, ಅದರಿಂದುಂಟಾದ ರಾಜಕೀಯ ಪರಿಣಾಮ, ಈ ಬಗ್ಗೆ ಆದಳಿತದ ಒಲವು-ನಿಲುವುಗಳೂ ಸಂಕ್ಷಿಪ್ತವಾಗಿ ಚರ್ಚಿಸಲ್ಪಟ್ಟು ಇರುವ ನ್ಯೂನತೆಗಳ ಕಡೆ ಹೆಚ್ಚು ಗಮನ ಹರಿಸದಂತೆ ತಡೆಯುವಲ್ಲಿ ಯಶಸ್ವಿಯಾಗುತ್ತದೆ.

ಆಧುನಿಕ ಮೈಸೂರಿಗೆ ಸಂಬಂಧಪಟ್ಟಂತೆ ಒಂದು ಮಹತ್ವದ ಸಂಶೋಧನೆ ಬಿ. ಹೆಟ್ನೆಯವರ The Political Economy of Indirect Rule–Mysore 1881–1947

ಈ ಅಧ್ಯಯನ ಕಾಲದ ಮೈಸೂರು ಸಂಸ್ಥಾನದ ಒಳಾಡಳಿತದಲ್ಲಿನ ಸ್ವಾಯತ್ತತೆ (Internal autonomy) ಹೇಗೆ ಬ್ರಿಟಿಷರ ಪರೋಕ್ಷ ಆಡಳಿತ (Indirect Rule) ದಿಂದ ಮಿತಿಗೊಂಡಿತ್ತು ಅಥವಾ ಕೆಲವು ವೇಳೆ ನಿಷ್ಕ್ರಿಯ ಗೊಂಡಿತ್ತು ಎಂಬುದರ ಬಗ್ಗೆ ಸಾಧಾರ ಬೆಳಕು ಬೀರುತ್ತದೆ.

ಎಲ್ಲ ರಾಜಕೀಯ, ಆರ್ಥಿಕ ಬೆಳವಣಿಗೆಗಳೂ ಬ್ರಿಟಿಷರಿಂದಲೇ ಪರೋಕ್ಷ ನಿಯಂತ್ರಿತಗೊಂಡಿದ್ದವೆಂದು ಸಾಬೀತುಪಡಿಸುವ ಭರದಲ್ಲಿ, ಆಂತರಿಕ ಬೆಳವಣಿಗೆಗಳು (ಆಗು ಹೋಗುಗಳು) ಯಾವುದೇ ಪ್ರಭಾವ ಬೀರಲಿಲ್ಲವೇ? ಎನ್ನುವ ಪ್ರಶ್ನೆ ಏಳಲು ಅಲ್ಲಲ್ಲಿ ಸಂಶೋಧಕರು ಕಾರಣರಾಗುತ್ತಾರೆ. ಉದಾ : ದಿವಾನರುಗಳಾದ ಪಿ. ಎನ್. ಕೃಷ್ಣಮೂರ್ತಿ, ವಿಶ್ವೇಶ್ವರಯ್ಯ, ಮಿರ್ಜ ಇಸ್ಮಾಯಿಲ್ ಎಲ್ಲರ ರಾಜೀನಾಮೆ ಗಳೂ ಒಂದಲ್ಲ ಒಂದು ರೀತಿಯಲ್ಲಿ ಬ್ರಿಟಿಷರ ಕೈವಾಡದಿಂದಲೇ ಎನ್ನುವ ಧಾಟಿ ಕಂಡುಬರುತ್ತದೆ. (ಪು. 74–86) ಈ ರಾಜಿನಾಮೆಗಳಬಗ್ಗೆ ಹೇಳುತ್ತಾ "ಮೂವರ ರಾಜೀನಾಮೆಗಳಲ್ಲೂ ಸಾಮ್ರಾಜ್ಯಶಾಹಿ ಅಂಶ (Imperialist factor)ವಿತ್ತು ಮತ್ತು ಬಹುತೇಕ ನಿರ್ಣಾಯಕವಾಗಿತ್ತು" (ಪು. 86) ಎನ್ನುವಾಗಿನ ಧೋರಣೆ ಎಲ್ಲಕ್ಕೂ ಬ್ರಿಟಿಷರೇ ಮೂಲ ಎನ್ನುವಂತಿದೆ. ಇದು ಅತ್ಯುತ್ಸಾಹದಿಂದ ಎನ್ನಬಹುದು.

ಲೇಖಕರೇ ಹೇಳುವಂತೆ ಮಹಾರಾಜ ಮತ್ತು ದಿವಾನರ ವೈಮನಸ್ಯವನು ಬ್ರಿಟಿಷರು ಉಪಯೋಗಿಸಿಕೊಂಡು ತಮ್ಮ ಇಚ್ಛೆಗೆ ವಿರುದ್ಧವಾಗಿ ನೇಮಕಗೊಂಡ ಅಥವಾ ನಡೆಯುತ್ತಿದ್ದವರನ್ನು ಜಾಗ ಖಾಲಿ ಮಾಡುವಂತೆ ನೋಡಿಕೊಂಡರು. ಅಂದರೆ ಇಲ್ಲಿ ಮುಖ್ಯವಾಗಿ ಆಂತರಿಕ ಬೆಳವಣಿಗೆಗಳು ನಿರ್ಣಾಯಕವಾಗುತ್ತಿದ್ದವು ಎನ್ನಬೇಕಾಗುತ್ತಾದೆ.

ಎರಡನೆಯದಾಗಿ ಮಿರ್ಜಾ ಇಸ್ಮಾಯಿಲ್‌ರ ರಾಜೀನಾಮೆಯಂತೂ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಊಹಿಸುವುದಕ್ಕೂ ಮುನ್ನವೇ ತೀರ್ಮಾನವಾಗಿತ್ತೆನ್ನು ವುದಕ್ಕೆ ಸ್ಪಷ್ಟ ಆಧಾರಗಳಿವೆ ಎಂದಾಗ ಬ್ರಿಟಿಷರ ವಿರೋಧ ಅಥವಾ ರಾಜೀನಾಮೆ ಗಳಲ್ಲಿನ ಅವರ ಕೈವಾಡ ಮಹಾರಾಜರ ಇಚ್ಛೆಗೆ ಮತ್ತು ಆಂತರಿಕ ಬೆಳವಣಿಗೆಗಳಿಗೆ ಪೂರಕವಾಗಿದ್ದವೆಂದು ಹೇಳಬೇಕಾಗುತ್ತದೆಯಾಗಲಿ, ನಿರ್ಣಾಯಕವಾಗಿತ್ತು ಅನ್ನು ವುದು ಅಷ್ಟಾಗಿ ಸರಿ ಹೋಗುವುದಿಲ್ಲ. ಕೊನೆಗೆ ತಮ್ಮ ಅಭಿಪ್ರಾಯವನ್ನು ತಾವೇ ವಿರೋಧಿಸಿ "ಎಲ್ಲ ರಾಜೀನಾಮೆಗಳೂ ಆಂತರಿಕ ಕಲಹದಿಂದುಂಟಾದವು. ಆದರೆ ಹೇಗೋ ಎಲ್ಲವೂ ಬ್ರಿಟಿಷರು ಬಯಸಿದ ಫಲಿತಾಂಶಗಳೇ" (ಪು. 86) ಎನ್ನುತ್ತಾರೆ. ಲೇಖಕರಿಲ್ಲಿ ಪರೋಕ್ಷವಾಗಿ ಆಂತರಿಕ ಕಲಹಗಳೇ (ಬೆಳವಣಿಗೆಗಳೇ) ನಿರ್ಣಾಯಕ ವಾಗಿದ್ದುವೆನ್ನುವುದನ್ನು ಒಪ್ಪಿಕೊಳ್ಳುತ್ತಾರೆ.

ಈ ನ್ಯೂನತೆ (ನ್ಯೂನತೆಯೆನ್ನುವುದಾದರೆ) ಯನ್ನು ಬಿಟ್ಟರೆ ಲೇಖಕರ ಕ್ರಮ ಬಹುಮಟ್ಟಿಗೆ ಸಾರ್ಥಕವಾಗಿದೆ. ಈ ಅಧ್ಯಯನಕಾಲದ ಮೈಸೂರು ಸಂಸ್ಥಾನದ ರಾಜಕೀಯ-ಆರ್ಥಿಕ ಬೆಳವಣಿಗೆಗೆ ಹಿಡಿದಿರುವ ಕನ್ನಡಿ ಈ ಅಧ್ಯಯನ ಎಂದರೂ ಅತಿಶಯೋಕ್ತಿಯಾಗಲಾರದು. ಇವರು ವಿಶ್ಲೇಷಣಾಕ್ರಮ ಹೊಸತಷ್ಟೆ ಅಲ್ಲ, ಸ್ವಾಗತಾರ್ಹವೂ ಹೌದು. ಈ ದೃಷ್ಟಿಯಿಂದ ಕರ್ನಾಟಕ ಇತಿಹಾಸ ಸಂಶೋಧನೆ ಹೆಚ್ಚು ಆಗಬೇಕಾಗಿದೆ. ಸಂಸ್ಥಾನದ ಪ್ರಗತಿಯ ಹಾದಿಯನ್ನು ಸ್ಪಷ್ಟವಾಗಿ ಗುರುತಿಸಿ, ವಿವಿಧ ಶಕ್ತಿಗಳು, ವಿರುದ್ಧವಾಗಿಯಾಗಲಿ ಅಥವಾ ಸಹಾಯಕವಾಗಿಯಾಗಲಿ, ಹೇಗೆ ಈ ಕ್ರಿಯೆಯಲ್ಲಿ ಭಾಗವಹಿಸಿದವು ಮತ್ತು ಪ್ರತಿಕ್ರಿಯಿಸಿದವೆಂಬುದನ್ನು ಮನೋಜ್ಞ ವಾಗಿ ವಿಶ್ಲೇಷಿಸಿದ್ದಾರೆ. ಕರ್ನಾಟಕ ಇತಿಹಾಸ ಸಂಶೋಧನೆ ಹೆಚ್ಚು ನಡದೇ ಇಲ್ಲ. ನಡೆದಿರುವುದರಲ್ಲಿ ಹೆಚ್ಚಿನವು ಸಮರ್ಪಕವಾಗಿಲ್ಲವೆಂದುಕೊಳ್ಳುವವರಿಗೆ ಈ ಅಧ್ಯಯನ ಮರುಭೂಮಿಯಲ್ಲಿ ಕಾಣುವ ನೀರಿನ ಒರತೆ (oasis) ಯೆಂದರೂ ಹೆಚ್ಚಿರ ಲಾರದು.

ಕರ್ನಾಟಕ ಇತಿಹಾಸದ ಮೇಲೆ ಸಾಕಷ್ಟು ಪಠ್ಯ ಪುಸ್ತಕಗಳು ಈವರೆಗೆ ಪ್ರಕಟಗೊಂಡಿವೆ. ಹೆಚ್ಚಿನವು ಕೆಲವು ಕೆಲವಾರ, ಕೆಲದಿನಗಳಲ್ಲಿಯೇ ಬರೆದಂಥವು. ಇವುಗಳ ಉದ್ದೇಶ ಸ್ಪಷ್ಟ. ವಿದ್ಯಾರ್ಥಿಗಳು ಅದೂ ಪದವಿಪೂರ್ವ ತರಗತಿಗಳ ವಿದ್ಯಾರ್ಥಿಗಳು ಪೇಟೆಯಲ್ಲಿ ಯಾವ ಪಠ್ಯಪುಸ್ತಕಗಳು ಸಿಕ್ಕರೂ ಕೊಳ್ಳುವ ಅಭ್ಯಾಸ ವುಳ್ಳವರು. ಅವರ ಬೇಡಿಕೆಗೆ ಸರಿಹೊಂದಿಸಿಕೊಂಡು ಅಧ್ಯಯನ ಶಿಸ್ತಿಗೆ ಹೆಚ್ಚು ಗಮನ ಕೊಡದೆ ಬರೆಯಿಸಿಕೊಂಡು ಹುಟ್ಟಿರುವ ಪುಸ್ತಕಗಳೇ ಹೆಚ್ಚು. ಇವುಗಳ ಬಗ್ಗೆ ಚರ್ಚಿಸದಿರುವುದೇ ಒಮ್ಮೊಮ್ಮೆ ಒಳ್ಳೆಯದೆನಿಸಿಸುತ್ತದೆ. ಆದರೆ ಕೆಲಪಠ್ಯ ಪುಸ್ತಕಗಳಂತೂ ಬಹಳ ತಪ್ಪುಗಳನ್ನೊಳಗೊಂಡೇ ಪ್ರಕಟಗೊಂಡಿರುವಂಥವು. ಸಂಗತಿಗಳ (events) ಸತ್ಯಾಸತ್ಯತೆಯನ್ನು ಪರೀಕ್ಷಿಸದೆ (ಮೂಲ ಆಕರಗಳನ್ನು ನೋಡದೆ) ಕೈಗೆ ಸಿಕ್ಕ ಹಳೆಯ ಕೆಲಪುಸ್ತಕಗಳನ್ನಿಟ್ಟುಕೊಂಡು ಬರೆದಿರುವುದರಿಂದ ಇವು ವಿದ್ಯಾರ್ಥಿಗಳಲ್ಲಿ ಕರ್ನಾಟಕ ಇತಿಹಾಸದ ಬಗ್ಗೆ ಬಹಳವೇಳೆ ತಪ್ಪು ಕಲ್ಪನೆಯನ್ನು ಮೂಡಿಸುವಂಥವು. ಕೆಲ ಪುಸ್ತಕಗಳಲ್ಲಿ ಕೊಟ್ಟಿರುವ ವಂಶಾವಳಿಪಟ್ಟಿ, ಮತ್ತು ಕಾಲ ಗಣನೆಯ ಪಟ್ಟಿ (Geneology and Chronology)ಹಾಗೂ ನಕಾಶೆ (map) ಗಳು ಬಹಳ ಗೊಂದಲಗೊಳಿಸುವಂಥವು. ಪೂರ್ತಿ ಇಲ್ಲವೇ ಇಲ್ಲವೆಂದಾಗ ಒಂದೆರಡು ಈ ರೀತಿಯ ಪುಸ್ತಕಗಳು ಅವಶ್ಯವಾಗುತ್ತವೆ. ಆದರೆ ಈಗಾಗಲೇ ಬಹಳಷ್ಟು ಗೋಜಲುಗೊಳಿಸಿರುವ ಪಠ್ಯಪುಸ್ತಕಗಳು ಬಂದು ದಿಢೀರ್ ಹಣ ಮಾಡುಕೊಳ್ಳು ವವರಿಗೆ ನೆರವಾಗಿವೆ. ಇತಿಹಾಸದ ಪಾವಿತ್ರ್ಯದ ದೃಷ್ಟಿಯಿಂದ ಈ ರೀತಿಯ ಪುಸ್ತಕ ಗಳ ರಚನೆಯನ್ನು ನಿಲ್ಲಿಸುವುದು ಅತ್ಯಗತ್ಯ. ಅಲ್ಲದೆ ಇದೇ ರೀತಿಯ ಕರ್ನಾಟಕದ ಇತಿಹಾಸ ಪುಸ್ತಕಗಳು ಇನ್ನೂ ಹಣದಾಸೆಯಿಂದ (ಒಂದೆರಡುಬಿಟ್ಟರೆ) ಹುಟ್ಟಿಕೊಂಡರೆ ಇತಿಹಾಸದ ಬಗೆಗೆ ಇನ್ನೂ ಅನಾಸ್ಥೆ ಮೂಡಿ, ಚರಿತ್ರೆಯೆಂದರೆ ಮೂಗುಮರಿಯುತ್ತಾ ತೂಕಡಿಸುವವರಿಗೆ ಹಾಸಿಗೆ ಹಾಸಿಕೊಟ್ಟಂತಾಗುತ್ತದೆ.

ಕೊನೆಯದಾಗಿ ಅಲ್ಲಲ್ಲಿ ಚದುರಿದಂತೆ ಪ್ರಕಟಗೊಂಡ ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದ ಲೇಖನಗಳು ಕೆಲನೂರುಗಳಿಷ್ಟಿವೆ. ಈ ಲೇಖಕರಲ್ಲಿ ಹೆಸರಿಸಬೇಕಾದವರೆಂದರೆ ಡಾ. ಕೆ. ವೀರತಪ್ಪ. ಆಧುನಿಕ ಮೈಸೂರು ಇತಿಹಾಸದ ಮೇಲೆ ಸುಮಾರು ಇಪ್ಪತ್ತಕ್ಕೂ ಹೆಚ್ಚು ಲೇಖನಗಳು ಪ್ರಕಟಗೊಂಡಿವೆ. ವಸ್ತುನಿಷ್ಠವಾಗಿ ಮತ್ತು ಚೊಕ್ಕವಾಗಿ ಪ್ರತಿಪಾದಿಸುವ ಸಂಶೋಧನಾಶಿಸ್ತು ಇವರ ಲೇಖನಗಳಲ್ಲಿ ಎದ್ದು ಕಾಣುತ್ತದೆ. ಇತಿಹಾಸವನ್ನು ಯಾವುದೇ ಭಾವೋದ್ವೇಗಕ್ಕೊಳಪಡದೆ ಪುನರ್ರಚಿಸುವಲ್ಲಿ ಇವರ ಲೇಖನಗಳು ಮಾದರಿಯಾಗುತ್ತದೆ. ಇವರ ಸಂಶೋಧನೆಯಲ್ಲಿನ ಸಾಮಾಜಿಕ ಕಾಳಜಿಯನ್ನು ಇರ್ವಿನ್ ನಾಲಾ ಅಚ್ಚುಕಟ್ಟು ಪ್ರದೇಶದ ರೈತ ಚಳುವಳಿ ಕಾಡು ಕುರುಬರ ಬಗೆಗಿನ ಲೇಖನಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಸಮಕಾಲೀನ ಬೆಳವಣಿಗೆಗಳಿಗೆ ಸ್ಪಂದಿಸುವ ಇವರ ಸ್ವಭಾವವನ್ನು ಇವರ ಇರ್ವಿನ್ ನಾಲಾ ರೈತ ಚಳುವಳಿಯ ಬಗೆಗಿನ ಲೇಖನ ಬರೆದ ಕಾಲ (time) ದಿಂದ ಗುರುತಿಸಬಹುದು. ಕರ್ನಾಟಕದಲ್ಲಿ ಮಲಪ್ರಭಾ-ಘಟಪ್ರಭಾ ಅಚ್ಚುಕಟ್ಟು ಪ್ರದೇಶದ ರೈತರ ಹೋರಾಟ ಸಮಯದಲ್ಲಿ ಕ್ಷೇತ್ರಕಾರ್ಯ (Field Work) ಕೈಗೊಂಡು ಬರೆದದ್ದು ಇರ್ವಿನ್-ನಾಲಾ ರೈತ ಹೋರಾಟದ ಮೇಲಿನ ಲೇಖನ. ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿ ಇವರ ಇನ್ನೊಂದು ಅಧ್ಯಯನ. ಭಾರತ ಸ್ವಾತಂತ್ರ್ಯ ಸಂಗ್ರಾಮದ ಬಗೆಗೆ ಇವರಿಗಿರುವ ಪರಿಶ್ರಮ, ಹಾಗೂ ಸುಮಾರು 20 ವರ್ಷಗಳಿಂದ ಇವರು ಈ ವಿಷಯ ಬೋಧಿಸಿರುವ (ಇವರ ಪಿಎಚ್.ಡಿ. ನಿಬಂಧವೂ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧ ಪಟ್ಟುದೇ) ದಟ್ಟ ಅನುಭವದ ಹಿನ್ನೆಲೆಯಲ್ಲಿ ರಚಿತಗೊಂಡ ಕೃತಿ ಇದು.

ಎರಡನೆಯದಾಗಿ ಪ್ರೊ. ಷ. ಶೆಟ್ಟರ್‌ರವರು. ಇವರ ಹೆಚ್ಚು ಲೇಖನಗಳು ನನಗೆ ದೊರೆಯಲಿಲ್ಲ. ದೊರೆತವುಗಳೆಲ್ಲವೂ "ಏಕಮೇವಾದ್ವಿತೀಯ" ಎಂದು ಉದ್ಗರಿಸಬೇಕಾದಂತವೆ. ಇವರ "ಭಾರತೀಯ ಹಿನ್ನೆಲೆಯಲ್ಲಿ ಕರ್ನಾಟಕದ ಧಾರ್ಮಿಕ ಸಾಮಾಜಿಕ ಜೀವನ" ಇವರ ಪ್ರತಿಭೆಗೆ ಕಳಸವಿಟ್ಟಂತಿದೆ. ಹೊಯ್ಸಳರ ಕಾಲದ ಜೈನ ಧರ್ಮದ ಬಗೆಗಿನ ವಿಶ್ಲೇಷಣೆ. ಕಾಪಾಲಿಕರ ಬಗೆಗಿನ ನಿರೂಪಣೆಗಳು ತಲೆತೂಗಿಸಬಲ್ಲಂಥವು. ಮತ್ತು ಎಂಥ ಅಭಿಪ್ರಾಯ ಹೊಂದಿದ್ದರೂ ಇವರ ವಿಶ್ಲೇಷಣೆಯನ್ನು ಒಪ್ಪಿಕೊಳ್ಳಬೇಕಾದಂಥ ವಸ್ತುನಿಷ್ಠತೆ ಪರಿಪಕ್ವತೆ ಇವರ ಸಂಶೋಧನೆಯಲ್ಲಿ ಕಾಣಬರುತ್ತದೆ. ಒಂದೊಂದು ಲೇಖನವೂ ಒಂದು ಪಿಎಚ್.ಡಿ ಪ್ರಬಂಧದಷ್ಟು ತೂಕವುಳ್ಳಂತವು.

ಡಾ. ಚಿದಾನಂದ ಮೂರ್ತಿಯವರ ಕರ್ನಾಟಕ ಸಂಸ್ಕೃತಿಯ ಬಗೆಗಿನ ಲೇಖನಗಳು. ಡಾ. ಸೂರ್ಯಕಾಮತರ ಮಧ್ಯಯುಗೀನ ಇತಿಹಾಸದ ಮೇಲಿನ ಲೇಖನಗಳು ಹೆಸರಿಸತಕ್ಕಂಥವೇ. ಈ ಎಲ್ಲ ಲೇಖನಗಳನ್ನು ಒಟ್ಟುಗೂಡಿಸಿ (ಸರಿಹೊಂದುವಂತೆ ಕಾಲ ಮತ್ತು ಔಚಿತ್ಯವನ್ನು ಗಮನದಲ್ಲಿಟ್ಟುಕೊಂಡು) -ಸಂಪಾದಿಸಿದರೆ ಚದುರಿದಂತೆ

ಪ್ರಕಟಗೊಂಡಿರುವ ವಿಷಯಗಳಿಗೆ ಹೊಸರೂಪ ಕೊಟ್ಟಂತಾಗುತ್ತದೆ. ಮತ್ತು ಹೆಚ್ಚು ಜನರಿಗೆ ಸಂಶೋಧನಾ ಫಲವೂ ದೊರೆಯುವಂತಾಗಿ ಕರ್ನಾಟಕ ಸಂಶೋಧನೆಯಲ್ಲಿನ ಕೊರತೆ ಅಲ್ಪಮಟ್ಟಿಗಾದರೂ ನೀಗಿದಂತಾಗುತ್ತದೆ. ಕರ್ನಾಟಕ ಇತಿಹಾಸ ಸಂಶೋಧನೆಯ ಬಗ್ಗೆ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಹಾಕಿಕೊಂಡ ಯೋಜನೆಗಳು ಇನ್ನೂ ಕಾರ್ಯಗತವಾಗಬೇಕಾಗಿದೆ. ಜೊತೆಗೆ ಹೆಚ್ಚು ಯುವ ಉತ್ಸಾಹಿ ಸಂಶೋಧಕರಿಗೆ ನೆರವು ಮತ್ತು ಮಾರ್ಗದರ್ಶನ ನೀಡಿ ನಮ್ಮ ಸ್ನಾತಕೋತ್ತರ ಕೇಂದ್ರಗಳು ಮತ್ತು ವಿಶ್ವವಿದ್ಯಾಲಯಗಳು ಈ ಸಂಶೋಧನಾ ಕಾರ್ಯ ಕೈಗೊಂಡರೆ ಉತ್ತಮ ಅಧ್ಯಯನಗಳನ್ನು ನಿರೀಕ್ಷಿಸಬಹುದು. ಆದರೆ ಇದು ಬರೀ ಆಶಯವಾಗುಳಿಯದೆ ಕಾರ್ಯರೂಪಕ್ಕೆ ಬಂದರೆ ಇರುವ ಕೊರತೆಯನ್ನು ಕೆಲಮಟ್ಟಿಗಾದರೂ ನೀಗಬಹುದು.

ಸಂಶೋಧನೆ: ವಾಙ್ಮಯ–ಒಂದು ಸ್ಥೂಲ ಸಮೀಕ್ಷೆ

ಎನ್. ಎಸ್. ತಾರಾನಾಥ

ಎಂದಿಗಿಂತಲೂ ಇಂದು ಸಮೀಕ್ಷೆಗಳನ್ನು ಮಾಡುವುದು, ದಶಕಗಳಲ್ಲಾಗಿರುವ ಒಂದು ಕ್ಷೇತ್ರದ ಸಾಧನೆ ಸಿದ್ಧಿಗಳನ್ನು ಪರಿಶೀಲಿಸುವುದು ಹೆಚ್ಚು ಜವಾಬ್ದಾರಿಯು ಆದರೆ ಅಷ್ಟೇ ಅಪಾಯಕಾರಿಯಾದ ಕಾರ್ಯವೆಂದು ಅನೇಕರ ಅಭಿಪ್ರಾಯವಾಗಿದೆ. ಒಂದು ಕ್ಷೇತ್ರದಲ್ಲಿ ನಾವು ತಳೆದಿರುವ ಹಾದಿ, ಮುಂದೆ ಹಾಕಬೇಕಾದ ಹೆಜ್ಜೆ, ನಡೆಯುಬೇಕಾದ ರೀತಿ, ಪಡೆಯಬೇಕಾದ ಫಲ-ಇವನ್ನು ವಸ್ತುನಿಷ್ಠ ಸಮೀಕ್ಷೆಗಳು ಕರಾರುವಕ್ಕಾಗಿ ತಿಳಿಸಿಕೊಡುವುದರಿಂದ ಇದು ಜವಾಬ್ದಾರಿಯ ಕಾರ್ಯ. ಸಮೀಕ್ಷೆಗಳು ಪ್ರಕಟವಾದ ಅನಂತರ ಅವು ಅಸಮಗ್ರವೆಂದೋ, ತಮ್ಮ ಅಥವಾ ತಮ್ಮ ನಚ್ಚಿನ ಹೆಸರುಗಳು ಬಿಟ್ಟುಹೋಗಿವೆಯೆಂದೋ, ತಮ್ಮ ಇಲ್ಲವೇ ತಾವು ಬಲ್ಲ ಪುಸ್ತಕಗಳ ಬಗ್ಗೆ ಹೇಳಿರುವ ಅಭಿಪ್ರಾಯಗಳು ಸೋಪಪತ್ತಿಕವೂ ಸವಿವರವೂ ಆಗಿಲ್ಲವೆಂದೋ ಅನೇಕ ವಿಮರ್ಶಕರು ತರುವಾಯ ಟೀಕಿಸುವುದನ್ನು ಗಮನಿಸಿದರೆ ಇದು ಅಪಾಯಕಾರಿ ಕಾರ್ಯವೆಂದೇ ಅನಿಸುತ್ತದೆ. ಸಮೀಕ್ಷಾಕಾರನ ಉದ್ದೇಶ ಹಾಗೂ ಮಿತಿಗಳನ್ನು ಗಮನಿಸಿ ಇಂಥ ಬರೆಹಗಳನ್ನು ಓದುವ ವಾಚಕವರ್ಗ ಕಡಿಮೆಯೆಂದೇ ನನ್ನ ಅಭಿಪ್ರಾಯ. ಆದ್ದರಿಂದ ಈ ಮುಂದೆ ಮಾಡಿರುವ ಸಮೀಕ್ಷೆಯ ಮೇಲೆ ಕಣ್ಣಾಡಿಸುವ ಮೊದಲು ಓದುಗರು ಈ ಕೆಲವು ಮಾತುಗಳನ್ನು ಗಮನಿಸಬೇಕಾಗಿ ನನ್ನ ಪ್ರಾರ್ಥನೆ: (1) ಮೊದಲನೆಯದಾಗಿ ಸಮಸ್ತ ವಾಙ್ಮಯದ ಸಂಶೋಧನೆಯಂಥ ವ್ಯಾಪಕ ಕ್ಷೇತ್ರದ ಆದ್ಯಂತವೆಲ್ಲವನ್ನೂ ಇಲ್ಲಿ ಸಮೀಕ್ಷಿಸಿಲ್ಲ. ಅದರ ಮುಖ್ಯ ಅಂಶಗಳಾದ ಛಂದಸ್ಸು, ವ್ಯಾಕರಣ, ಭಾಷೆ, ಶಾಸನ, ಸಾಹಿತ್ಯ ಚರಿತ್ರೆಗಳನ್ನು ವಿಶೇಷವಾಗಿಯೂ ಇತರ ಕೆಲವನ್ನು ಸಂಕೀರ್ಣ ಎಂಬ ಶೀರ್ಷಿಕೆಯಲ್ಲಿಯೂ ಸಮೀಕ್ಷಿಸಲಾಗಿದೆ. (2) ಎರಡನೆಯದಾಗಿ ಮೇಲ್ಕಂಡ ಕ್ಷೇತ್ರಗಳ ಇಪ್ಪತ್ತೈದು ವರ್ಷಗಳ ಮುಖ್ಯ ಕನ್ನಡ ಪ್ರಕಟಣೆಗಳನ್ನು ಆಯಾ ಕ್ಷೇತ್ರದ ಸಮಗ್ರ ಸಾಧನೆ, ಸಿದ್ಧಿಗಳ ಹಿನ್ನೆಲೆಯಲ್ಲಿ ಮಾತ್ರ ಗಮನಿಸಲಾಗಿದೆ. ಇದರಿಂದ ಪುಸ್ತಕಗಗಳ,ಎಲ್ಲ ಲೇಖನಗಳ, ಎಲ್ಲ ಲೇಖಕರ ಉಲ್ಲೇಖ ಮತ್ತು ಪ್ರಸ್ತಾಪಗಳು ಇಲ್ಲಿ ಬರುವುದಿಲ್ಲ ಎಂಬುದು ನನಗೆ ಸ್ಪಷ್ಟವಾಗಿ ತಿಳಿದಿದೆ. ಆದ್ದರಿಂದ ಪ್ರಸ್ತಾಪಿತವಾಗದಿರುವ ಲೇಖಕರ, ಪುಸ್ತಕಗಳ ಹಾಗೂ ಬರೆಹಗಳ ಆದ್ದರಿಂದ ಓದುಗರು ಅನ್ಯಥಾ ಭಾವಿಸಬಾರದಾಗಿ ಪ್ರಾರ್ಥನೆ. ಅಲ್ಲದೆ ಈ ಸಮೀಕ್ಷೆ ಸಮಯಾಧಾವ ಹಾಗೂ ಪುಟಮಿತಿಗಳ ಕಟ್ಟಿಗೂ ಒಳಪಟ್ಟಿದೆ ಎಂಬುದನ್ನು

ದಯೆಯಿಟ್ಟು ಗಮನಿಸಬೇಕು. (3) ಕಡೆಯದಾಗಿ ಈ ಬರೆಹವಲ್ಲಿ ಆಯಾ ಕ್ಷೇತ್ರಗಳಲ್ಲಾಗಿರುವ ಕೆಲಸದ ಪರಿಚಯ ಕ್ಷೇತ್ರ ಶ್ರೀಮಂತಿಕೆ ಹಾಗೂ ಆಗಬೇಕಾಗಿರುವ ಕೆಲಸದ ಮುಖಗಳಿಗೆ ಒತ್ತನ್ನು ಕೊಡಲಾಗಿದೆ.

ಛಂದಸ್ಸಿನ ಕ್ಷೇತ್ರ ಇತರ ಶಾಸ್ತ್ರಕ್ಷೇತ್ರಗಳಿಗೆ ಹೋಲಿಸಿದಾಗ ಅಷ್ಟೇನೂ ಸಂಪದ್ಯುಕ್ತವಾದುದಲ್ಲವೆಂದೇ ಹೇಳದೆಬೇಕು. ಇತರ ಕ್ಷೇತ್ರಗಳೊಂದಿಗೆ ಹೋಲಿಸಿದಾಗ ಇಲ್ಲಿ ಕೆಲಸ ಮಾಡಿರುವ, ಮಾಡಲು ತೊಡಗಿರುವ ಮಂದಿ ಕಡಿಮೆಯೇ. ಇಲ್ಲಿ ಆಗಿರುವ ಕೆಲಸವು ವೈವಿಧ್ಯರಹಿತವಾಗಿದ್ದರೂ, ಮೊದಲ ಗುದ್ದಲಿಯೇಟೇ ಬೀಳದ ನೆಲದ ತುಣುಕುಗಳು ಹಲವು ಇಲ್ಲಿ ಉಳಿದುಕೊಂಡಿದೆಯಾದರೂ ಆಗಿರುವ ಅಲ್ಪ ಪ್ರಮಾಣದ ಕೆಲಸ ಅರೆಕೊರೆಗಳೊಂದಿಗೂ ತೃಪ್ತಿಯನ್ನುಂಟುಮಾಡುವಷ್ಟು ಸಕ್ರಮವೂ ಶಾಸ್ತ್ರಶುದ್ಧವೂ ಆಗಿದೆಯೆಂಬುದು ನೆಮ್ಮದಿಯ ಸಂಗತಿ. 1956ರಲ್ಲಿಯೇ ಡಿ.ಎಸ್. ಕರ್ಕಿಯವರ "ಕನ್ನಡ ಛಂದೋ ವಿಕಾಸ" ಪ್ರಕಟವಾಯಿತಾದರೂ ಈ ವರೆಗೆ ಇಲ್ಲಿ ಬಂದಿರುವ ಪುಸ್ತಕಗಳ ಸಂಖ್ಯೆ ಕಡಿಮೆಯೆ. ಆದರೆ ಲೇಖನಗಳು ಮಾತ್ರ ಅನೇಕ ನೂರುಗಳನ್ನು ದಾಟಿವೆ.

ಕನ್ನಡ ಛಂದಸ್ಸಿನ ಅಧ್ಯಯನಕ್ಕೆ ಅಡಿಗಲ್ಲುಗಳಾದ "ಛಂದೋಂಬುಧಿಯೇ ಮೊದಲಾದ ಛಂದೋಗ್ರಂಥಗಳು" 56ಕ್ಕೂ ಹಿಂದೆಯೇ ಕಿಟೆಲ್, ರಾಮಸ್ವಾಮಯ್ಯಂಗಾರ್ ಮುಂತಾದವರಿಂದ ಪ್ರಕಟವಾಗಿದ್ದುವು. ಅಚ್ಚಗನ್ನಡ ಛಂದಸ್ಸಿನ ರಹಸ್ಯವನ್ನು 36ರಲ್ಲಿಯೇ "ಶ್ರೀ"ಯವರು ಭೇದಿಸಿದ್ದರು. ಆಧುನಿಕ ಛಂದಸ್ಸಿನ ಪರಿಭಾಷೆಗಳನ್ನು ಕುರಿತು ತೀ.ನಂ. ಶ್ರೀಕಂಠಯ್ಯನವರು "ಮಾತ್ರೆ, ಮುಡಿ, ಪದ್ಯಗಣ" ಲೇಖನವನ್ನು 58ರಲ್ಲಿ ಪ್ರಕಟಿಸಿದರಾದರೂ, ಅದಕ್ಕೂ ಒಂದೆರಡು ದಶಕಗಳ ಹಿಂದೆಯೇ ಹೊಸಗನ್ನಡ ಛಂದಸ್ಸಿನ ಲಯ, ಮಟ್ಟುಗಳನ್ನು ಅವರು ಪರಿಶೀಲಿಸಿದ್ದರು. ಆದ್ದರಿಂದ ಈ ಎರಡೂವರೆ ದಶಕಗಳಲ್ಲಾಗಿರುವ ಬಹುಪಾಲು ಕೆಲಸ ಇವರ ಹಿನ್ನೆಲೆಯಲ್ಲಿಯೇ ಆಗಿದೆ ಎಂಬುದನ್ನು ಲಕ್ಷಿಸಬೇಕು.

ಛಂದೋಂಬುಧಿಯೇ ಮುಂತಾದ ಛಂದೋಗ್ರಂಥಗಳ ವಿದ್ವದ್ ಪುನರ್ ಪರಿಷ್ಕರಣ ಈಚೆಗೆ ಆಗಿರುವುದು ಈ ಇಬ್ಬರಿಂದಲೇ: ಒಬ್ಬರು ಎಲ್. ಬಸವರಾಜು ಮತ್ತೊಬ್ಬರು ಕುಕ್ಕಿಲ ಕೃಷ್ಣಭಟ್ಟರು. ಬಸವರಾಜು ಅವರ "ಕನ್ನಡ ಛಂದಸ್ಸಂಪುಟ" ದಲ್ಲಿ ಕನ್ನಡದ ಛಂದೋಗ್ರಂಥಗಳು ಸಂಕಲಿತವಾಗಿರುವುದು ಅಭ್ಯಾಸಿಗಳಿಗೆ ಉಪಯುಕ್ತವಾದುದು, ಅದು 'ಜಯದಾಮನ್' ಮಾದರಿಯದು. ಆದರೆ ಇಲ್ಲಿಯ ಪಾಠ ಪರಿಷ್ಕರಣ, ಲಕ್ಷಣ ವಿವೇಚನೆ, ತುಂಬ ಅಶಾಸ್ತ್ರೀಯವೂ ವಿವಾದಾಸ್ಪದವಾದುದೂ ಆಗಿದೆ. ಕೊನೆಯಲ್ಲಿತ್ತಿರುವ ಅನುಬಂಧಗಳು ಶ್ಲಾಘ್ಯವೂ ಪ್ರಯೋಜನಕಾರಿಯೂ ಆಗಿರುವಂತೆ ಪೀಠಿಕಾಭಾಗ ಹಾಗೂ ಲಕ್ಷಣಪದ್ಯ ಟಿಪ್ಪಣಿಗಳು ಆಗಿಲ್ಲ. ಆದರೆ ಕೃತಿಪರಿಷ್ಕರಣದಲ್ಲಿ ಹೊಸ ಹಸ್ತಪ್ರತಿಗಳನ್ನು ಅವರು ಬಳಸಿಕೊಂಡಿದ್ದಾರೆ ಎಂಬು

ದನ್ನು ಗಮನಿಸಬೇಕು. ಕೃಷ್ಣಭಟ್ಟರ ಪಾಠ ಪರಿಷ್ಕರಣ ಹಲವೆಡೆ ಉತ್ತಮ ಪಾಠಗಳನ್ನೊಳಕೊಂಡಿದೆಯಾದರೂ, ಅವರು ಕೃತಿಭಾಗದ ನಡುವೆಯೇ ತರುವ ಛಂದೋವಿಷಯಕನಾದ ಚರ್ಚೆ, ಅನ್ಯ ಛಂದೋಗ್ರಂಥ ಪದ್ಯಗಳ ಉದ್ಧೃತಿ ಗ್ರಂಥ ಸಂಪಾದನಾ ಕ್ರಮಕ್ಕೆ ವಿರುದ್ಧವಾದುದು. ಧಾರವಾಡದ ಕಡೆಯಿಂದ ಧೊಂಡೋರವರ 'ಛಂದಸ್ಸಾರ'ವೇ ಮುಂತಾದುವು ಪುನರ್ಮುದ್ರಿತವಾಗಿದ್ದರೂ ಅವುಗಳಲ್ಲಿ ಹೊಸತೇನಿಲ್ಲ.

ಕನ್ನಡ ಛಂದಸ್ಸಿನ ಸ್ವರೂಪ, ಲಕ್ಷಣ ವಿಶ್ಲೇಷಣೆ, ಇತಿಹಾಸಗಳನ್ನು ಕುರಿತಂತೆ ಪೂರ್ಣ ಪ್ರಮಾಣದ ಪುಸ್ತಕಗಳು ಪ್ರಕಟವಾಗಿರುವುವು ಕೆಲವೇ. ಅವುಗಳಲ್ಲಿ ಮುಖ್ಯವಾದವು ಡಿ.ಎಸ್. ಕರ್ಕಿಯವರ "ಕನ್ನಡ ಛಂದೋ ವಿಕಾಸ", ಟಿ.ವಿ. ವೆಂಕಟಾಚಲ ಶಾಸ್ತ್ರೀ ಅವರ "ಕನ್ನಡ ಛಂದಃ ಸ್ವರೂಪ" ಹಾಗೂ "ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಛಂದಸ್ಸಿನ ಚರಿತ್ರೆ" ಸಂಪುಟಗಳು. ಕರ್ಕಿಯವರ ಕೃತಿ ಈ ವಿಷಯದಲ್ಲಿ ಮೊದಲ ಪ್ರಯತ್ನವಾದುದರಿಂದ—ಅದರಲ್ಲಿ ವಿವರಗಳ ಅಭಾವ, ಚಾರಿತ್ರಿಕಾಂಶಗಳ ಕೊರತೆ, ವಿಷಯಪುಷ್ಟಿ ಮತ್ತು ವಿಶ್ಲೇಷಣೆಗಳ ಅರಕೆಯೇ ಮುಂತಾದ ಅರೆಕೊರೆಗಳಿದ್ದರೂ-ಐತಿಹಾಸಿಕವಾಗಿ ಅದು ತುಂಬ ಪ್ರಾಮುಖ್ಯವನ್ನು ಪಡೆದುಕೊಂಡಿದೆ. ಇಂಥದೊಂದು ಪುಸ್ತಕ ಬಂದಮೇಲೂ ನವೀನವಾಗಿ, ವಿಷಯ ಪುಷ್ಟಿಯೊಂದಿಗೆ, ಸಾಂಗವಾಗಿ ಹೇಗೆ ಈ ಕ್ಷೇತ್ರದಲ್ಲಿ ಮತ್ತೆ ಅದ್ಭುತ ಮೆರೆಯಬಹುದೆಂಬುದಕ್ಕೆ ಟಿ. ವಿ. ವೆಂಕಟಾಚಲಶಾಸ್ತ್ರಿಗಳ "ಕನ್ನಡ ಛಂದಃಸ್ವರೂಪ" ಒಂದು ತಕ್ಕ ನಿದರ್ಶನ. ಅನೇಕ ಮೂಲಗಳಿಂದ ತಂದುತುಂಬಿರುವ ಸಾಮಗ್ರಿ, ಹಿನ್ನೆಲೆ ಮತ್ತು ಮೂಲಗಳೊಂದಿಗೆ ಇಲ್ಲಿ ನಡೆದಿರುವ ವಿಶ್ಲೇಷಣೆ ಮೌಲಿಕವಾದವು. ಅಧ್ಯಯನ ಸಂಸ್ಥೆಯ ಛಂದಸ್ಸಿನ ಚರಿತ್ರೆ ಸಾಮೂಹಿಕವಾದ ಒಂದು ಸಾಂಸ್ಥಿಕ ಪ್ರಯತ್ನವಾಗಿದ್ದು ಛಂದಃಕ್ಷೇತ್ರಕ್ಕೆ ಈ ದಶಕದ ಗಣ್ಯಕೊಡುಗೆಯಾಗಿದೆ. ಮುಗಳಿಯವರ "ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು" (1973) ಕೂಡ ಒಂದು ಬೆಲೆಯುಳ್ಳ ಪುಸ್ತಕ. ಸಾಹಿತ್ಯ ಚರಿತ್ರೆಗೆ ಪೂರಕವಾಗುವಂಥ ಕೃತಿಯಿದು. ಇಲ್ಲಿ ಸಹಜವಾಗಿಯೇ ಮತ್ತು ಛಂದೋಮೀಮಾಂಸೆ ಪ್ರಾಧಾನ್ಯ ಪಡೆದು ಛಂದಸ್ಸಿನ ಇತಿಹಾಸ, ಮೂಲ, ವಿಶ್ಲೇಷಣೆಗಳು ಕೊಂಚ ಹಿಂದೆ ಬಿದ್ದಿದೆ. ಶಿವರಾಮ ಐತಾಳರು "ಛಂದಸ್ಸಿನ ಪರಿಚಯ" ಮತ್ತು "ಛಂದಸ್ಸಿನ ಔಚಿತ್ಯ" ಎಂಬ ಕಿರುಹೊತ್ತಗೆಗಳ ಮೂಲಕ ಛಂದಸ್ಸನ್ನು ಜನಪ್ರಿಯಗೊಳಿಸಲು ಮಾಡಿರುವ ಪ್ರಯತ್ನ ಅಭಿನಂದನೀಯವಾದದ್ದು. ಮೊದಲ ಪುಸ್ತಕವಲ್ಲಿ ಲಕ್ಷಣ ಭಾಗ ನಿರೂಪಣೆ ಸರಿಯಾಗಿದೆ, ಆದರೆ ಲಕ್ಷ್ಯಗಳನ್ನು ಬೇರೆ ಪದ್ಯಭಾಗಗಳಿಂದ ಕತ್ತರಿಸಿ ಹೊಂದಿಸುತ್ತ ಹೋಗಿರುವುದು ಸರಿಯಲ್ಲ. ಎಸ್. ಅನಂತನಾರಾಯಣ ಅವರ "ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ" ಎಂಬ ಪುಸ್ತಕದಲ್ಲಿ ಕನ್ನಡದ ಆಧುನಿಕ ಸಾಹಿತ್ಯದ ಕೆಲವು ಛಂದೋರೂಪಗಳ ಮೂಲ ಹಾಗೂ ಸ್ವರೂಪ ವಿಶ್ಲೇಷಣೆಯ ಉಪಯುಕ್ತ ವಿವರಗಳಿವೆ. ಇವನ್ನುಳಿದರೆ ನೀ. ಗಿರಿಗೌಡ ("ಕನ್ನಡ ಛಂದಸ್ಸಿನ ಪ್ರವೇಶಿಕೆ"), ಬಿ. ಟಿ. ರಂಗಸ್ವಾಮಿ (ಛಂದಶ್ಶಾಸ್ತ್ರ ದರ್ಪಣ),

ಸಿ. ವಿ. ಪಾಟೀಲ (ಕನ್ನಡ ಛಂದಶ್ಶಾಸ್ತ್ರ ಪರಿಚಯ), ಪದ್ಮಾಶೇಖರ್ (ಕನ್ನಡ ಛಂದಸ್ಸು : ಒಂದು ಅವಲೋಕನ) ಅವರು ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟು ಕೊಂಡು ಕಿರುಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಒಂದೆರಡನ್ನುಳಿದರೆ ಉಳಿದವು ಅಸಮಗ್ರವೂ ಅಸಮರ್ಪಕವೂ ಅನುಚಿತವೂ ಆದ ಮಾಹಿತಿ, ನಿರೂಪಣೆಗಳನ್ನೊಳ ಕೊಂಡಿದೆ. ಪ್ರತ್ಯೇಕ ಹಾಗೂ ಸ್ವತಂತ್ರವಾಗಿ ರೂಪಗಳ ಬಗ್ಗೆಯೇ ಕೆಲವು ಪುಸ್ತಕ ಗಳು ಹೊರಬಂದಿವೆ. ನಿದರ್ಶನಕ್ಕೆ "ತ್ರಿಪದಿಯ ಚತುರ್ಮುಖ", "ಷಟ್ಪದಿ ಸಾಹಿತ್ಯ", "ಸಾಂಗತ್ಯ ಕವಿಗಳು", "ಯಕ್ಷಗಾನ ಛಂದಸ್ಸು" ಮುಂತಾದುವು. ಇವು ಗಳಲ್ಲಿ ಮೊದಲನೆಯದನ್ನುಳಿದು ಇತರ ಕೃತಿಗಳಲ್ಲಿ ಛಂದಸ್ಸಿನ ಪರಿಶೀಲನೆ ಗೌಣ ವಾದರೂ, ಆಯಾಛಂದಸ್ಸುಗಳಿಗೆ ಸಂಬಂಧಿಸಿದಂತೆ ಸಾಹಿತ್ಯ ಸಾಮಗ್ರಿ ಹೇರಳ ವಾಗಿ ದೊರೆಯುತ್ತವೆ.

ಈ ಇಪ್ಪತ್ತೈದು ವರ್ಷಗಳಲ್ಲಿ ಛಂದಸ್ಸಿನ ಬೇರೆ ಬೇರೆ ಮುಖಗಳನ್ನು ಕುರಿತಂತೆ ಪ್ರಕಟವಾಗಿರುವ ಲೇಖನಗಳು ಅಸಂಖ್ಯವಾಗಿದ್ದು, ಅವು ಕೊಂಚ ವೈವಿಧ್ಯವನ್ನು ಗಮನಿಸಿಕೊಂಡಿವೆ. ಛಂದಸ್ಸಿನ ಸ್ವರೂಪ, ಕಾವ್ಯಕ್ಕೆ ಛಂದಸ್ಸು ಆವಶ್ಯಕವೇ ಎಂಬಂಥ ವಿಷಯಗಳೇ ಅಲ್ಲದೆ ರಗಳೆ ಕಂದ, ತ್ರಿಪದಿ, ಸಾಂಗತ್ಯ, ಲಯಗ್ರಾಹಿ, ಏಳೆ, ಗೀತಿಕೆ, ಷಟ್ಪದಿ, ಅಕ್ಕರ, ಅಂಶಛಂದಸ್ಸಿನ ಸ್ವರೂಪವೇ ಮುಂತಾದ ವಿವಿಧ ಛಂದಸ್ಸುಗಳ ಬಗ್ಗೆಯೂ ಛಂದಶಾಸ್ತ್ರಕ್ಕೊಂದು ನಿಘಂಟನ್ನು ಕುರಿತಂತೆಯೂ ಲೇಖನಗಳು ಪ್ರಕಟ ವಾಗಿವೆ. ಇವುಗಳಲ್ಲಿ ರಗಳೆ, ತ್ರಿಪದಿ, ಸಾಂಗತ್ಯ, ಷಟ್ಪದಿ, ಗೀತಿಕೆಗಳ ಬಗ್ಗೆ ಹೆಚ್ಚು ಲೇಖನಗಳು ಪ್ರಕಟವಾಗಿವೆ. ಅಂಶಗಣ ಮತ್ತು ಅಂಶಲಯಗಳ ವಿಚಾರಗಳ ಬಗ್ಗೆ ಕಲಬುರ್ಗಿಯವರ ಹಾಗೂ ಇತರರ ಬರೆಹಗಳು ಹೊಸ ದೃಷ್ಟಿಯನ್ನೊಳಕೊಂಡಿವೆ. ಛಂದಸ್ಸಿನ ಸ್ವರೂಪ, ನಿಯಮ, ಸ್ವಾತಂತ್ರ್ಯಗಳನ್ನು ಕುರಿತಂತಿರುವ ಪು.ತಿ.ನ. ಅವರ "ಛಂದಸ್ಸು" (ಕಾವ್ಯ ಕುತೂಹಲ), ಸಿದ್ಧಲಿಂಗಯ್ಯನವರ "ಛಂದಸ್ಸು : ಅದರ ನಿಯಮ ಹಾಗೂ ಸ್ವಾತಂತ್ರ್ಯ" ('ದೇವಗಂಗೆ') ಲೇಖನಗಳು ವಿಶ್ಲೇಷಕ ವಿಚಾರ ಗಳನ್ನೊಳಗೊಂಡಿವೆ. ಏಳೆಯನ್ನು ಕುರಿತು ಕುಕ್ಕಿಲ ಕೃಷ್ಣಭಟ್ಟರು, ಕೆ. ಪಿ. ಸೀತಾರಾಮ ಕೆದಿಲಾಯರು, ಎಂ. ವಿ. ಸೀತಾರಾಮಯ್ಯನವರು ಕ್ರಮವಾಗಿ ಬರೆದಿರುವ 'ದೇಶೀಯ ಛಂದಸ್ಸುಗಳ ಮೂಲ-ಏಳೆ, 'ಏಳೆ' 'ಏಳೆಯ ಸ್ವರೂಪ' ಬರೆಹಗಳು ಛಂದಸ್ಸಿನ ಬಗ್ಗೆ ಹೊಸ ದೃಷ್ಟಿಕೋನ ಮೂಡಿಸುವಂಥವಾಗಿವೆ : ತ್ರಿಪದಿಯ ಬಗ್ಗೆ ಚಿದಾನಂದ ಮೂರ್ತಿಯವರ 'ತ್ರಿಪದಿ-ಅದರ ಸ್ವರೂಪ ಮತ್ತು ಇತಿಹಾಸ', ಮತಿಘಟ್ಟ ಕೃಷ್ಣ ಮೂರ್ತಿಯವರ 'ಜನಪದ ಛಂದಸ್ಸು : ತ್ರಿಪದಿಯನ್ನು ಕುರಿತ ಒಂದು ವಿವೇಚನೆ' ತುಂಬ ಉಪಾದೇಯವಾದ ವಿಚಾರಗಳನ್ನೊಳಗೊಂಡಿವೆ ; ಖ್ಯಾತ ಕರ್ಣಾಟಕಗಳ ಬಗ್ಗೆ ಮಾಧವಪೈ ಅವರ 'ಸಾಧನೆ'ಯ 4-3ರ ಲೇಖನ, ಕಂದದ ಬಗ್ಗೆ ಎಲ್.ಎಂ.ಎಲ್. ಶಾಸ್ತ್ರಿ ಅವರ 'ಸಾಕ್ಷಿ'ಯ 17ನೆಯ ಸಂಚಿಕೆಯ ಲೇಖನ, ರಗಳೆ ಛಂದಸ್ಸುಗಳ ಬಗ್ಗೆ

ಸೀತಾರಾಮ ಜಾಗೀರದಾರರ 'ಪ್ರಬುದ್ಧ ಕರ್ನಾಟಕ'ದ 51-1ರ ಲೇಖನ ಹೊಸ ಸಾಮಗ್ರಿಯನ್ನು ವಿಚಾರಗಳನ್ನೂ ಪ್ರತಿಪಾದಿಸುವಂಥಾಗಿವೆ ; ಕಿರಿಯ ಅಂಶಬಂಧ ಗಳಲ್ಲಿ ಗೀತಿಕೆಯ ಬಗ್ಗೆಯೂ, ಷಟ್ಪದಿಗಳಲ್ಲಿ ಉದ್ದಂಡದ ಬಗ್ಗೆಯೂ ಈಚೆಗೆ ತುಂಬ ಚರ್ಚೆಗಳಾಗಿವೆ ; ಬರೆಹಗಳು ಬಂದಿವೆ. ಅನೇಕ ಹಿರಿಕಿರಿಯ ವಿದ್ವಾಂಸರು ಪಾಲ್ಗೊಂಡಿದ್ದಾರೆ ಎಂಬುದು ಗಮನಾರ್ಹ. ಸಾಂಗತ್ಯ ಛಂದಸ್ಸಿಗೆ ಬಗ್ಗೆ ಹಂಪ. ನಾಗರಾಜಯ್ಯ ಅವರ 'ಸಾಂಗತ್ಯದ ಕೆಲವು ಸಂಗತಿಗಳು; ಟಿ. ಕೇಶವಭಟ್ಟರ' ಸಾಂಗತ್ಯದ ಧಾಟಿ ಮತ್ತು ಛಂದಸ್ಸು', ದೇವೀರಪ್ಪನವರ 'ಸಾಂಗತ್ಯ-ಷಟ್ಪದ' ಉಲ್ಲೇಖನ ಯೋಗ್ಯ ಬರೆಹಗಳು ತ್ರಿಪದಿ, ಸಾಂಗತ್ಯಗಳನ್ನು ಕುರಿತು ಕರ್ನಾಟಕ ವಿಶ್ವವಿದ್ಯಾನಿಲಯ ಪ್ರಚಾರ ಪುಸ್ತಿಕೆಗಳನ್ನು ಪ್ರಕಟಿಸುವುದುಂಟು.

ತೀ.ನಂ.ಶ್ರೀಯವರ 'ಮಾತ್ರೆ–ಮುಡಿ-ಪದ್ಮಗಣ' ಲೇಖನ 1958ರಲ್ಲಿ ಮೊತ್ತ ಮೊದಲ ಬಾರಿಗೆ ಪ್ರಕಟವಾಗಿ ಆಧುನಿಕ ಕನ್ನಡ ಸಾಹಿತ್ಯದ ಛಂದಃ ಪರಿಶೀಲನೆಗೆ ಕೆಲವು ಪರಿಭಾಷೆಗಳನ್ನು ಒದಗಿಸಿಕೊಟ್ಟಿತು. ಇಂದಿಗೂ ಹೊಸಗನ್ನಡ ಛಂದಸ್ಸಿನ ಪರಿಶೀಲನೆ ಇದರ ಆಧಾರದ ಮೇಲೆಯೇ ನಿಂತಿದೆ. ವ್ಯಾಪಕ ಪರಿಶೀಲನೆ ನಡೆದು ಹೊಸ ಪರಿಭಾಷೆಗಳನ್ನು ಸಾಧಾರವಾಗಿ ಪ್ರತಿಪಾದಿಸುವ ಕಾರ್ಯ ಈವರೆಗೆ ಯಾರಿಂದಲೂ ಆಗಿಲ್ಲದಿರುವುದು ವ್ಯಥೆಯ ಸಂಗತಿ. ಚಿದಾನಂದಮೂರ್ತಿಯವರ 'ಛಂದಸ್ಸಿನ ಪ್ರಯೋಗಗಳು-ನವೋದಯ ಕಾವ್ಯದಲ್ಲಿ' ಎಂಬುದೂ, ಜಿ. ಎಸ್. ಸಿದ್ಧಲಿಂಗಯ್ಯನವರ 'ಛಂದಸ್ಸು-ನವ್ಯಕಾವ್ಯದಲ್ಲಿ' ಎಂಬುದೂ ಈ ದಿಕ್ಕಿನ ಗಮನಾರ್ಹ ಪ್ರಯತ್ನಗಳು. ಬೇಂದ್ರೆ ಹಾಗೂ ಕುವೆಂಪು ಕಾವ್ಯದ ಛಂದಸ್ಸಿನ ಹಲವು ಮುಖಗಳು ಪರಿಶೀಲನೆಯ ವಿಷಯವಾಗಿರುವಂತೆ ಇತರ ಕವಿಗಳ ಕಾವ್ಯ, ಛಂದಸ್ಸಿನ ದೃಷ್ಟಿಯಿಂದ ಪರಿಶೀಲಿತವಾಗಿಲ್ಲ. ಗೋವಿಂದಪೈ ಕಾವ್ಯದ ಛಂದೋಗತಿ ಕುರಿತು ಶಂಕರ ನಾರಾಯಣಭಟ್ಟರು ಒಂದು ಪುಸ್ತಕ ಪ್ರಕಟಿಸಿ ಇತರ ಅಲಕ್ಷಿತ ಕವಿಗಳ ಬಗ್ಗೆಯೂ ಹಾಗೆ ಕೆಲಸ ಮಾಡಬಹುದೆಂಬುದಕ್ಕೆ ಒಂದು ಮಾದರಿಯನ್ನೊದಗಿಸಿಕೊಟ್ಟಿದ್ದಾರೆ. ಆಧುನಿಕ ಸಾಹಿತ್ಯ ಪ್ರಕಾರಗಳಲ್ಲಿಯೂ ಸಾನೆಟ್, ಸರಳರಗಳೆ ಮತ್ತು ಮಹಾ ಛಂದಸ್ಸುಗಳನ್ನು ಕುರಿತಂತೆ ಈ ದಶಕದಲ್ಲಾಗಿರುವ ಕೆಲಸ ಪ್ರಗಾಥ, ಮುಕ್ತ ಛಂದಸ್ಸು ಮತ್ತು ಬಿಡಿಬಂಧಗಳ ಬಗ್ಗೆ ಆಗಿಲ್ಲ. ಸರಳರಗಳೆ, ಮಹಾಛಂದಸ್ಸುಗಳ ಪರಿಶೀಲನೆಯೂ ಪುಟ್ಟಪ್ಪನವರ ಕಾವ್ಯಗಳನ್ನೇ ಪ್ರಧಾನವಾಗಿ ಆಧರಿಸಿದೆ.

ಈ ಕ್ಷೇತ್ರದ ಎರಡೂವರೆ ದಶಕಗಳ ಸಾಧನೆ ಪ್ರಗತಿಶೀಲವಾಗಿದ್ದರೂ, ಶಾಸ್ತ್ರ ಶುದ್ಧವಾಗಿದೆಯೆನಿಸುವಂತಿದ್ದರೂ, 56ಕ್ಕೆ ಹಿಂದೆ ನಡೆದ ಛಂದಃ ಪರಿಶೀಲನೆಗಳಲ್ಲಿ ವ್ಯಕ್ತವಾಗಿರುವ ಹೊಚ್ಚ ಹೊಸತನ ಇಲ್ಲಿಲ್ಲ. ಕಣ್ಣು ಕುಕ್ಕುವಂಥ ಮಹತ್ವಪೂರ್ಣ ಶೋಧನೆಗಳು-ಛಂದಸ್ಸಿನ ತತ್ತ್ವ ಹಾಗೂ ಸಿದ್ಧಾಂತಗಳನ್ನು ಕುರಿತು-ಕಡಮೆಯೇ.

ಹಿಂದಿನವರ ಶೋಧನೆಯ ಬೆಳಕಿನಲ್ಲಿ ನಮ್ಮ ಈ ದಶಕದ ಪ್ರಯತ್ನಗಳು ಮುನ್ನಡೆದಿವೆ ಅಷ್ಟೆ. ಈ ಕ್ಷೇತ್ರದಲ್ಲಿ ಆಗಬೇಕಾದ ಕೆಲಸವಂತೂ ಅಪಾರವಾಗಿದೆ. ಜನಪದ ಸಾಹಿತ್ಯ, ವಚನ ಸಾಹಿತ್ಯ ಮತ್ತು ಹರಿದಾಸ ಸಾಹಿತ್ಯಗಳ ಛಂದಃ ಪರಿಶೀಲನೆ, ಅದರೆಲ್ಲ ಮುಖಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಆಗಿಲ್ಲ : ಯಕ್ಷಗಾನಗಳ ಛಂದಸ್ಸಿನ ಗುಟ್ಟು ಗಳು ಭೇದಿತವಾಗಿಲ್ಲ ; ಶಾಸನಗಳ ಹಾಗೂ ಆಧುನಿಕ ಕವಿತೆಗಳ ಛಂದಸ್ಸು ಸಮಗ್ರ ಪರಿಶೀಲನೆಗೆ ಒಳಪಟ್ಟಿಲ್ಲ : ಪಂಪ, ರನ್ನ, ನೇಮಿಚಂದ್ರ, ಬೇಂದ್ರೆ, ಅಡಿಗರ ಕೃತಿಗಳ ಛಂದಃಶಿಲ್ಪಗಳ ಅಧ್ಯಯನವಾಗಿಲ್ಲ ; ಸಂಸ್ಕೃತ, ಪ್ರಾಕೃತ ಮತ್ತು ಅನ್ಯದ್ರಾವಿಡ ಛಂದಸ್ಸುಗಳೊಡನೆ ಕನ್ನಡ ಛಂದಸ್ಸಿನ ಹೋಲಿಕೆಯಾಗಲಿ, ಕನ್ನಡ ಛಂದೋ ಮೀಮಾಂಸೆಯಾಗಲಿ ಆಗಿಲ್ಲ ; ಛಂದಃಶಬ್ದಕೋಶವೊಂದು ಇನ್ನೂ ಕನ್ನಡದಲ್ಲಿ ಬಂದಿಲ್ಲ. ಅಲಕ್ಷಿತವಾಗಿರುವ ಈ ಕ್ಷೇತ್ರದಲ್ಲಿ ಕರ್ಕಿ, ವೆಂಕಟಾಚಲಶಾಸ್ತ್ರಿ, ಮುಗಳಿ, ಶಿವರಾಮ ಐತಾಳರೇ ಮುಂತಾದ ಕೆಲವು ಹಿರಿಯರು ಮಾತ್ರ ನಿರಂತರವಾಗಿ ಕೆಲಸ ಮಾಡುತ್ತ ಬಂದಿದ್ದಾರೆ. ಹೊಸಬರೂ ತರುಣರೂ ಆದ ಕೆಲವರು ಸಂಶೋಧಕರು ಇಲ್ಲಿ ಕೆಲಸ ಮಾಡಲು ಮುಂದೆ ಬಂದಿದ್ದಾರೆಂದರೂ ಅವರ ಸಂಖ್ಯೆ ಕಡಿಮೆಯೆ. ಅವರಿಂದ ಆಗಿರುವುದೂ ಬಿಡಿಬಿಡಿ ಪ್ರಯತ್ನಗಳಷ್ಟೆ. "ಈ ಕ್ಷೇತ್ರದಲ್ಲಿ ತಕ್ಕ ಪ್ರಮಾಣದಲ್ಲಿ ಕೆಲಸ ನಡೆದಿಲ್ಲ" ಎಂದೂ, "ಉತ್ಸಾಹಿಗಳು ಸರಿಯಾದ ಮಾರ್ಗ ದರ್ಶನ ವಿವೇಚನೆಗಳಿಂದ ಈ ಕ್ಷೇತ್ರದಲ್ಲಿ ದುಡಿದು ನಮ್ಮ ಭಾಷೆಯ ಮೂಲಾ ಧಾರಗಳ ನೆಲಗಟ್ಟನ್ನು ಭದ್ರಪಡಿಸಬೇಕು. ಆದರೆ ಚೈತನ್ಯಶೀಲರೂ ಶ್ರಮ ಸಹಿಷ್ಣುಗಳೂ ಆದ ತರುಣ ವಿದ್ವಾಂಸರ ಕೊರತೆ ನಮ್ಮಲ್ಲಿ ಹೆಚ್ಚು ಎಂಬುದನ್ನು ವಿಧಿಯಿಲ್ಲದೆ ಒಪ್ಪಿಕೊಳ್ಳಬೇಕಾಗಿದೆ" ಎಂದೂ ಒಂದು ಸಂದರ್ಭದಲ್ಲಿ ಟಿ. ವಿ. ವೆಂಕಟಾಚಲಶಾಸ್ತ್ರಿಗಳು ಹೇಳಿದುದನ್ನೇ ಈಗಲೂ ಪುನರುಚ್ಚರಿಸಬೇಕಾಗಿರುವುದು ದುರದೃಷ್ಟದ ಮಾತು.

ಕಿಟಲ್, ರೈಸ್, ಆರ್. ನರಸಿಂಹಾಚಾರ್ ಮುಂತಾದ ಹಿರಿಯ ವಿದ್ವಾಂಸರು 19ನೆಯ ಶತಮಾನದ ಕೊನೆಯ ದಶಕಗಳು ಹಾಗೂ 20ನೆಯ ಶತಮಾನದ ಆರಂಭ ದಶಕಗಳಲ್ಲೇ ನಾಗವರ್ಮ, ಕೇಶಿರಾಜ ಮತ್ತು ಭಟ್ಟಾಕಲಂಕರ ವ್ಯಾಕರಣ ಪತ್ರ ಗಳನ್ನು ಪ್ರಕಟಿಸಿದ್ದರು. ಅವುಗಳನ್ನು ಅವಲಂಬಿಸಿ, ಅಲ್ಲಿಯ ಹಾಗೂ ಇತರ ವ್ಯಾಕರಣ ವಿಷಯಗಳನ್ನು ಕುರಿತು ವಿಶ್ಲೇಷಣೆ ಆರಂಭವಾದದ್ದು 20ನೆಯ ಶತ ಮಾನದ ಮೂರು, ನಾಲ್ಕನೆಯ ದಶಕಗಳಲ್ಲಿ ಎನ್ನಬಹುದು. ಆದರೆ ಅದು ಹುಲು ಸಾಗಲಾರಂಭಿಸಿದ್ದು ಈ ಶತಮಾನದ ಉತ್ತರಾರ್ಧದ ಆರಂಭದಲ್ಲಿ. ಇಲ್ಲೂ ಕೆಲಸಗಳು ನಡೆದಿವೆಯಾದರೂ ಪೂರ್ಣಪ್ರಮಾಣದ ಕೆಲಸಗಳು ಕಡಿಮೆಯೇ : ಬಿಡಿ ಲೇಖನಗಳ ಪ್ರಯತ್ನಗಳೇ ಹೆಚ್ಚು. ಆಗಿರುವ ಕೆಲಸಗಳು ಪೂರ್ವ ಪಂಡಿತರ

ಸಂಪ್ರದಾಯಕ್ಕನುವಾಗಿದ್ದು, ವೈವಿಧ್ಯ ವೈಶಿಷ್ಟ್ಯಗಳು ಕೊಂಚ ಕಡಿಮೆಯೇ. ಕೆಲಸ ಮಾಡಿರುವ, ಮಾಡುತ್ತಿರುವ, ಹೆಸರುಗಳು ಹಲವಿದ್ದರೂ ಗಟ್ಟಿ ಕೆಲಸ ಮಾಡಿರುವವರು ಕೆಲವರೇ.

'56ರ ಈಚೆಗೆ ನಮ್ಮ ಪ್ರಾಚೀನ ವೈಯಾಕರಣರ ಪಠ್ಯಗಳು ಮತ್ತೆ ಪರಿಷ್ಕೃತವಾಗಿ ಮುದ್ರಣಗೊಂಡಿವೆ. ಈಚೆಗೆ ಕಾಪಸೆಯವರು ಕಾವ್ಯಾವಲೋಕನದ. ಶಬ್ದಸ್ಮೃತಿ' ಭಾಗವನ್ನು 1979ರಲ್ಲಿ ಮತ್ತೆ ಸಂಪಾದಿಸಿ ಪ್ರತ್ಯೇಕವಾಗಿ ಪ್ರಕಟಿಸಿದ್ದಾರೆ. ಪ್ರತಿಸೂತ್ರದ ಸಾರಾಂಶ, ಉದಾಹರಣೆಗಳ ಬೇರ್ಪಡಿಕೆ ಇಲ್ಲಿಯ ಹೊಸ ಸಂಗತಿ. ಮೂಲಪಠ್ಯ ಆರ್. ನರಸಿಂಹಾಚಾರ್ಯರದೇ. ಕೇಶಿರಾಜನ 'ಶಬ್ದಮಣಿದರ್ಪಣ'ದ ಹಲವು ಪರಿಷ್ಕರಣಗಳು ಈಚೆಗೆ ಹೊರಬಂದಿವೆ. ಇವುಗಳಲ್ಲಿ 59ರಲ್ಲಿ ಡಿ.ಎಲ್. ನರಸಿಂಹಾಚಾರ್ಯದಿಂದ ಗ್ರಂಥ ಸಂಪಾದನಾ ಕ್ರಮಕ್ಕನುಗುಣವಾಗಿ ಸಂಪಾದಿತವಾಗಿ ಹೊರಬಂದಿರುವ ಪರಿಷ್ಕರಣವೇ ಪ್ರಮಾಣ ಪೂರ್ವಕವೂ ಶಾಸ್ತ್ರ ಶುದ್ಧವಾದುದೂ ಆಗಿದೆ. ಇದನ್ನು ಮೀರಿಸುವ ಇನ್ನೊಂದು ಪರಿಷ್ಕರಣ ಇನ್ನೂ ಬರಬೇಕಾಗಿದೆ. ಇದನ್ನು ಅತ್ಯಧಿಕ ಪ್ರಮಾಣದಲ್ಲಿ ಬಳಸಿಕೊಂಡು ತ.ಸು. ಶಾಮರಾವ್ ಮತ್ತು ಎಚ್. ನಂಜೇಗೌಡರು ದರ್ಪಣದ ಒಂದು ಪರಿಷ್ಕರಣವನ್ನು ಕೆಲವು ಹೆಚ್ಚಿನ ವಿವರಗಳೊಂದಿಗೆ ತಂದಿದ್ದಾರೆ.' 77 ರಲ್ಲಿ ಡಿ. ಕೆ. ಭೀಮಸೇನರಾಯರು ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಹಸ್ತಪ್ರತಿಯನ್ನು ಬಳಸಿಕೊಂಡು ಪರಿಷ್ಕರಿಸಿದ್ದ ದರ್ಪಣದ ಆವೃತ್ತಿ ಹೊರಬಂದಿದೆ. ಈ ಕೃತಿಯ ಪರಿಷ್ಕರಣ ಹಾಗೂ ಮುದ್ರಣ ವಿಧಾನಗಳು ತುಂಬ ನಿರಾಸೆಯನ್ನುಂಟುಮಾಟುವಂಥವಾಗಿದೆ. ಪದ್ಮನಾಭಶರ್ಮರ ದರ್ಪಣದ ಕೃತಿ ಬೃಹತ್ತಾಗಿದ್ದರೂ ಆನೇಕ ವಾದಗ್ರಸ್ತ ಸಂಗತಿಗಳನ್ನೊಳಕೊಂಡಿವೆ. ಇಲ್ಲಿ ಅನೇಕ ಕನ್ನಡ ಶಬ್ದಗಳಿಗೆ ಕೊಟ್ಟಿರುವ ಅರ್ಥ ತಪ್ಪುತಪ್ಪಾಗಿವೆ. ಮಳಗಿಯವರು. ಕಲಬುರ್ಗಿಯವರು ದರ್ಪಣದ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಇವುಗಳ ಉಪಯುಕ್ತತೆ ತುಂಬ ಕಡಮೆ. ವ್ಯಾಕರಣ ವಿಷಯಗಳನ್ನು ಸಂಗ್ರಹಿಸುವುದರ ಸಾರ್ಥಕ್ಯ ತಿಳಿಯುವುದಿಲ್ಲ.' 68 ರಲ್ಲಿ ಪದ್ಮನಾಭಶರ್ಮರುವ ಪ್ರಕಟಿಸಿರುವ ಭಟ್ಟಾಕಲಂಕನ ಶಬ್ದಾನುಶಾಸನ ಮೂಲಕೃತಿಗೆ ಅಪಚಾರವನ್ನೆಸಗುವಂತಿದೆ.

ಈ ಎರಡೂವರೆ ದಶಕಗಳಲ್ಲಿ ಕನ್ನಡ ವ್ಯಾಕರಣಗಳ ಬಗ್ಗೆ ಪುಸ್ತಕರೂಪದಲ್ಲಿ ಪ್ರಕಟವಾಗಿರುವ ಕೃತಿಗಳು ಕೆಲವೇ. ಬಿಳಿಗಿರಿಯವರ 'ಆಲೋಕ' ಈ ದಿಕ್ಕಿನ ಒಂದು ಅತ್ಯುತ್ತಮ ರಚನೆ. ವ್ಯಾಕರಣ ವಿಷಯವನ್ನು ಭಾಷಾ ವಿಜ್ಞಾನದ ಹಿನ್ನೆಲೆಯಲ್ಲಿ ಎಷ್ಟು ಚೊಕ್ಕವಾಗಿ ವಿಶ್ಲೇಷಿಸಬಹುದೆಂಬುದಕ್ಕೆ ಇದೊಂದು ಶ್ರೇಷ್ಠವಾದ ನಿದರ್ಶನ. ನಾಮಪ್ರಕರಣದ ಮುಂದಿನ ವಿಷಯಗಳಿಗೆ ಅವರು ವ್ಯಾಖ್ಯಾನ ಬರೆಯದಿರುವುದು ತುಂಬ ಖೇದದ ಸಂಗತಿ. ಅವರು ಇದನ್ನು ಮುಂದುವರಿಸದಿದ್ದಲ್ಲಿ ವ್ಯಾಕರಣ ಕ್ಷೇತ್ರಕ್ಕೆ ತುಂಬ ದೊಡ್ಡ ನಷ್ಟವಾಗುತ್ತದೆಂಬುದನ್ನು

ಅಪ್ರಸ್ತುತವೆನಿಸಿದರೂ ಇಲ್ಲಿ ಹೇಳಬೇಕೆನಿಸುತ್ತದೆ. ಸ್ವಾರಸ್ಯಕರವಾದ ಹಾಗೂ ಸಮಸ್ಯೆ
ಗಳ ಮೂಲಭೂತ ಸಮಸ್ಯೆಗಳನ್ನು ಒಳಹೊಕ್ಕು ಬಿಡಿಸಲು ಯತ್ನಿಸಿರುವ ಒಂದು
ಶ್ಲಾಘ್ಯ ಪ್ರಯತ್ನ ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟರ 'ಕನ್ನಡ ಸಮಾಸಗಳು'
ಚಿಕ್ಕದಾದರೂ ಚಿನ್ನದಂಥ ಪುಸ್ತಕವಿದು. ಟಿ. ಶಂಭುಲಿಂಗಪ್ಪ ಅವರ 'ಕೇಶಿರಾಜನ
ಶಬ್ದಮಣಿ ದರ್ಪಣದ ಸೂತ್ರಸಾರ' ವ್ಯಾಕರಣ ವಿಷಯಗಳನ್ನು ಸರಿಯಾಗಿ ಅರ್ಥ
ಮಾಡಿಕೊಳ್ಳದೆ ಬರೆದಿರುವ ಅಪಾಯಕಾರಿ ಪುಸ್ತಕ. ಶಿವಾನಂದರ 'ಶಬ್ದಮಣಿದರ್ಪಣ
ವಿಲಾಸ' ವಿದ್ಯಾರ್ಥಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ರಚಿತವಾಗಿದೆ. ಎಂ.ವಿ. ಸೀತಾ
ರಾಮಯ್ಯನವರ 'ಪ್ರಾಚೀನ ಕನ್ನಡ ವ್ಯಾಕರಣಗಳು' ದೊಡ್ಡಸ್ವಾಮಿಯವರ 'ಹಳಗನ್ನಡ
ವ್ಯಾಕರಣಗಳ ತೌಲನಿಕ ವಿಶ್ಲೇಷಣೆ' ಪ್ರಾಚೀನ ಕನ್ನಡ ವ್ಯಾಕರಣಗಳನ್ನು ತೌಲನಿಕ
ಪರಿಶೀಲನೆಗೆ ಗುರಿಪಡಿಸಿರುವ ಕೃತಿಗಳು. ಮೊದಲನೆಯದಕ್ಕಿಂತ ಎರಡನೆಯದು
ದೊಡ್ಡದು. ಆದರೆ ಮೊದಲನೆಯದರಲ್ಲಿರುವ ವಿಶದತೆ. ಅಚ್ಚುಕಟ್ಟಾದ ನಿರೂಪಣೆ.
ಹೊಸತನ ಎರಡನೆಯದರಲ್ಲಿಲ್ಲ. ಅಲ್ಲದೆ ಎರಡನೆಯ ಕೃತಿಯಲ್ಲಿ ವಿಶ್ಲೇಷಣಾ ಭಾಗ
ಕ್ಕಿಂತ ಉದ್ಧೃತ ಭಾಗಗಳೇ ಹೆಚ್ಚಾಗಿವೆ. ದರ್ಪಣವನ್ನು ಕುರಿತು ಕುಳ್ಳಿಯವರು
ಭಾಷಾವಿಜ್ಞಾನದ ದೃಷ್ಟಿಯಿಂದ ಬರೆದಿರುವ ಕೃತಿ ಇಂಗ್ಲೀಷಿನಲ್ಲಿದೆ. ಈ ಅವಧಿ
ಯಲ್ಲಿ ಅತಿಹೆಚ್ಚಿನ ಸಂಖ್ಯೆಯಲ್ಲಿ ಡಿ.ಗಂಗರಾಜು ಎ. ಕೆ. ಪುಟ್ಟರಾಮು. ಕೆ. ಹನುಮಂತ
ರಾವ್. ಎಲ್. ಗುಂಡಪ್ಪ. ಸೀ. ಗಿರಿಗೌಡ. ಎಂ. ಪಿ. ಮಂಜಪ್ಪ ಶೆಟ್ಟಿ. ಮುಂತಾದ
ಅನೇಕರು ಐವತ್ತಕ್ಕೂ ಹೆಚ್ಚು ಶಾಲಾವ್ಯಾಕರಣಗಳನ್ನು ರಚಿಸಿದ್ದಾರೆ. ವಿದ್ಯಾರ್ಥಿಗಳನ್ನೇ
ಗಮನದಲ್ಲಿಟ್ಟುಕೊಂಡು ರಚಿತವಾಗಿರುವ ಇವು ತೀ. ನಂ. ಶ್ರೀಯವರ 'ಕನ್ನಡ
ಮಧ್ಯಮ ವ್ಯಾಕರಣ'ದ ಮಟ್ಟಕ್ಕೆ ಬರುವುದಿಲ್ಲ.

ಈ ಅವಧಿಯಲ್ಲಿ ವ್ಯಾಕರಣ ವಿಷಯಗಳನ್ನು ಕುರಿತು ಕೆಲವು ವಿಚಾರಪೂರ್ಣ
ಲೇಖನಗಳೂ ಅಚ್ಚಾಗಿವೆ. ಕುಶಾಲಪ್ಪಗೌಡರು ಸಪ್ತವಿಭಕ್ತಿಗಳನ್ನು ಹಾಗೂ ಲಿಂಗ
ಗಳನ್ನು ಕುರಿತು ಪ್ರಕಟಿಸಿರುವ ಲೇಖನಗಳು ಹೊಸವಿಷಯಗಳನ್ನೊಳಕೊಂಡಿವೆ.
ವಿ. ಕೃಷ್ಣಸ್ವಾಮಿ ಅಯ್ಯಂಗಾರ್ ಅವರು ಗಮಕಸಮಾಸ, ಸತಿಸಪ್ತಮಿ, ಕವಿರಾಜ
ಮಾರ್ಗದಲ್ಲಿ ಕಾರಕ ವಿಚಾರ ಕುರಿತು "ಕನ್ನಡನುಡಿ". "ಕನ್ನಡ-ಸಾಹಿತ್ಯ ಪರಿಷತ್ಪತ್ರಿಕೆ".
"ಸಾಧನೆ"ಗಳಲ್ಲಿ ಪ್ರಕಟಿಸಿರುವ ಬರೆಹಗಳು ಮೌಲಿಕವಾದವಾಗಿವೆ. ಅನಂತನಾರಾಯಣ,
ಎಂ. ವಿ. ಸೀತಾರಾಮಯ್ಯ ಮುಂತಾದವರು ಸಂಸ್ಮರಣ ಹಾಗೂ ಅಭಿನಂದನ
ಗ್ರಂಥಗಳಲ್ಲಿ ಪ್ರಕಟಿಸಿರುವ ತದ್ಧಿತ ಪ್ರತ್ಯಯಗಳನ್ನು ಕುರಿತ ಲೇಖನಗಳು ಕುತೂಹಲ
ಕರವಾಗಿವೆ. ವಿಲಿಯಂ ಮಾಡ್ತಾ ಅವರು ವ್ಯಾಕರಣ ವಿಷಯಗಳಲ್ಲಿ ಕೆಲವನ್ನು ಭಾಷಾ
ವಿಜ್ಞಾನ ದೃಷ್ಟಿಯಿಂದ ಪರಿಶೀಲಿಸಿರುವುದು. ಆ ಸಂಬಂಧದಲ್ಲಿ ಕೆಲವೆಡೆ ಸರಿಯಾದ
ನಿರ್ಣಯಗಳನ್ನು ತಳೆದಿರುವುದು ಉಲ್ಲೇಖನೀಯವಾಗಿದೆ. ಅನುಸ್ವಾರಗಳನ್ನು
ಕುರಿತು, ಕನ್ನಡ ವರ್ಣಮಾಲೆಯನ್ನು ಕುರಿತು, ದರ್ಪಣದ ಕೆಲವು ಸೂತ್ರಗಳನ್ನೇ
ಕುರಿತು ಪಾಟೀಲ. ಸಂಗಮೇಶ ಬಿರಾದಾರ. ಎಂ.ಎಲ್. ಲಲಿತಮ್ಮ. ಲಿಂಗದೇವರು
ಹಳೇಮನೆ ಹಾಗೂ ಲೀಲಾವತಿ ಇವರೇ ಮುಂತಾದವರು ಬಿಡಿ ಬರೆಹಗಳನ್ನು
ಪ್ರಕಟಿಸಿರುವುದುಂಟು.

ವ್ಯಾಕರಣ ಕ್ಷೇತ್ರದಲ್ಲಿ ಈವರೆಗೆ ಆಗಿರುವ ಕೆಲಸವೆಲ್ಲ ಬಲುಮಟ್ಟಿಗೆ ದರ್ಪಣವನ್ನು ಆಧರಿಸಿಯೇ ನಡೆದಿದೆ. ಭಟ್ಟಾಕಲಂಕನ ವ್ಯಾಕರಣದಲ್ಲಿ ಪ್ರಸ್ತಾಪಿತವಾಗಿರುವ ಸಂಗತಿಗಳನ್ನು ನಮ್ಮ ವಿದ್ವಾಂಸರು ಅಲಕ್ಷಿಸಿದ್ದಾರೆ. ಭಾಷಾ ವಿಜ್ಞಾನದ ದೃಷ್ಟಿಕೋನದಿಂದ ಆಗಿರುವ ಕೆಲಸ ಕಡಿಮೆಯದಾಗಿರುವುದಲ್ಲದೆ, ಆ ತತ್ವಗಳನ್ನು ಇಲ್ಲಿ ಅಳವಡಿಸಿಕೊಂಡು ಸರಿಯಾದ ಫಲಿತಾಂಶಗಳನ್ನು ಪಡೆದಿರುವ ಸಂದರ್ಭಗಳು, ಬರೆಹಗಳು ಹೆಚ್ಚಿಲ್ಲ. ಕನ್ನಡ ವ್ಯಾಕರಣಗಳನ್ನು ಇತರ ತೆಲುಗು, ತಮಿಳು ಮತ್ತು ಮಲಯಾಳಂ ವ್ಯಾಕರಣಗಳೊಡನೆ ಹೋಲಿಸುವ ಕೆಲಸ, ಕನ್ನಡ ವ್ಯಾಕರಣಗಳ ಮೇಲಾಗಿರುವ ಸಂಸ್ಕೃತ ಹಾಗೂ ಪ್ರಾಕೃತ ವ್ಯಾಕರಣ ಸಂಪ್ರದಾಯಗಳ ಪ್ರಭಾವ. ಕೇಶಿರಾಜಾದಿಗಳ ವಿಷಯ ನಿರೂಪಣೆಯ ಸರಿತಪ್ಪುಗಳ ವಿವೇಚನೆ, ಹೊಸಗನ್ನಡ ಭಾಷೆಯ ನಿರೂಪಣೆ. ಈವರೆಗೆ ಬಂದಿರುವ ಕನ್ನಡ ವ್ಯಾಕರಣಗಳ ಒಂದು ಟಿಪ್ಪಣಿಸಹಿತವಾದ ಗ್ರಂಥಸೂಚಿಯೇ ಮುಂತಾದ ಕಾರ್ಯಗಳು ತರುಣ ವಿದ್ವಾಂಸರ ಬರವನ್ನು ಕಾಯುತ್ತ ನಿಂತಿವೆ.

ಭಾಷಾವಿಜ್ಞಾನ ಕ್ಷೇತ್ರದಲ್ಲಿ ಕನ್ನಡದಲ್ಲಿ ಈಚೆಗೆ ಕೊಂಚ ವೇಗವಾಗಿಯೇ ಕೆಲಸಗಳಾಗುತ್ತಿದೆಯೆನ್ನಬಹುದು. ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳಲ್ಲಿ ಭಾಷಾವಿಜ್ಞಾನ ಇಲಾಖೆಗಳಿರುವುದು, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಇದಕ್ಕೆ ಪ್ರೋತ್ಸಾಹವಿರುವುದು, ಅನೇಕ ಕನ್ನಡ ವಿದ್ವಾಂಸರು ಇದರೆಡೆ ಆಕರ್ಷಿತರಾಗಿ ಬೇಸಿಗೆಶಾಲೆ ಮುಂತಾದುವುಗಳಲ್ಲಿ ಪಾಲ್ಗೊಂಡಿರುವುದು ಪ್ರಾಯಃ ಇದಕ್ಕೆ ಕಾರಣಗಳಿರಬಹುದು. ತತ್ತ್ವ ಮತ್ತು ಸಿದ್ಧಾಂತಗಳನ್ನು ಕುರಿತಂತೆ. ಕನ್ನಡ ಭಾಷೆಯನ್ನೇ ಕುರಿತಂತೆ ಇಲ್ಲಿ ಕೆಲಸಗಳು ಆಗಿವೆ.

ಹಂಪನಾ ಅವರ 'ಭಾಷಾವಿಜ್ಞಾನ' ಮತ್ತು 'ಭಾಷೆ', ಚಿದಾನಂದಮೂರ್ತಿಯವರ 'ಭಾಷಾವಿಜ್ಞಾನದ ಮೂಲತತ್ತ್ವಗಳು', ಕುಳ್ಳಿಯವರ ವರ್ಣನಾತ್ಮಕ ಮತ್ತು ಐತಿಹಾಸಿಕ ಭಾಷಾವಿಜ್ಞಾನವನ್ನು ಕುರಿತ ಹೊತ್ತಗೆಗಳು ಹಾಗೂ ಭಾಷಾಸೌಧ, ಎಂಬ ಪುಸ್ತಕ. ಬಿಳಿಗಿರಿಯವರ 'ವರ್ಣನಾತ್ಮಕ ವ್ಯಾಕರಣ'. ಶಂಕರಭಟ್ಟರ 'ಭಾಷೆಯ ಬಗ್ಗೆ ನೀವೇನು ಬಲ್ಲಿರಿ?' ಪುಸ್ತಕಗಳು ಭಾಷಾವಿಜ್ಞಾನದ ಸ್ವರೂಪ, ವ್ಯಾಪ್ತಿ, ವಿಭಾಗಗಳು, ಪ್ರಯೋಜನವೇ ಮುಂತಾದ ಸಾಮಾನ್ಯ ತತ್ತ್ವ ಸಿದ್ಧಾಂತಗಳನ್ನು ತಿಳಿಸಿಕೊಡುವ ಪುಸ್ತಕಗಳು. ಈ ಎಲ್ಲ ಪುಸ್ತಕಗಳಿಗೂ ಇಂಗ್ಲಿಷ್‌ನಲ್ಲಿ ಪ್ರಕಟವಾಗಿರುವ ಬ್ಲೂಮ್‌ಫೀಲ್ಡ್. ಪಾಟರ್, ಗ್ಲೀಸನ್. ಲೆಹ್‌ಮನ್, ಪೈಕ್ ಮುಂತಾದವರ ಕೃತಿಗಳೇ. ಬರೆಹಗಳೇ ಮುಖ್ಯ ಆಕರ. ವಿಷಯ ನಿರೂಪಣೆಯನ್ನು ಮಾಡುವಾಗ ಮಾತ್ರ ಕನ್ನಡಕ್ಕನುಗುಣವಾಗಿ ಈ ಲೇಖಕರು ನಿರೂಪಣೆ ಮಾಡಿರುವುದು ಉಚಿತವೂ ಶ್ಲಾಘ್ಯವೂ ಆದ ವಿಷಯವಾಗಿದೆ. ಇವುಗಳಲ್ಲಿ ಒಬ್ಬೊಬ್ಬರಾಗಿ ಬೇರೆ ಬೇರೆ ಮೂಲಗಳಿಂದ ಸಂಗ್ರಹಿಸಿ ಕಲೆ ಹಾಕಿರುವ ಸಾಮಗ್ರಿ ತುಂಬ ಉಪಯುಕ್ತವಾದ್ದು. ಆದರೂ ಚಿದಾನಂದಮೂರ್ತಿ ಹಾಗೂ ಬಿಳಿಗಿರಿ ಅವರ ಬರವಣಿಗೆಗಳಲ್ಲಿ

ಕಂಡುಬರುವ ನಿಖರತೆ, ವಿಶದತೆ, ಅಡಕ ನಿರೂಪಣೆ, ಶಾಸ್ತ್ರಾನುಗುಣವಾದ ಗೊಂದಲ ರಹಿತ ಭಾಷೆ ಉಳಿದವರಲ್ಲಿ ಕಾಣುವುದಿಲ್ಲ. ಭಾಷಾವಿಜ್ಞಾನಭಾರತಿ ಎಂಬ ಪ್ರಕಾಶನದ ಮೂಲಕ ಕೆ. ಕೆಂಪೇಗೌಡರು ಭಾಷೆ ಹಾಗೂ ವಿಜ್ಞಾನಗಳ ಸ್ವರೂಪ, ಭಾಷೆಗಳ ವರ್ಗೀಕರಣ, ಧ್ವನಿ ಮತ್ತು ಧ್ವನಿಮಾ ವಿಜ್ಞಾನಗಳನ್ನು ಕುರಿತು ಈವರೆಗೆ ನಾಲ್ಕು ಪ್ರತ್ಯೇಕ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಆಂಗ್ಲ ಭಾಷೆಯ ಪುಸ್ತಕ ಸಾಮಗ್ರಿಯೇ ಇವುಗಳಿಗೆ ಮೂಲ ಆಕರ. ಇಂಥ ಕೆಲಸ ಅಭಿನಂದನೀಯವಾದು ದೆಂಬುದು ದಿಟ : ಆದರೆ ಈ ಲೇಖಕರು ಬರವಣಿಗೆಯಲ್ಲಿ ತೋರುವ ಸಡಿಲತೆ, ಪುನರುಕ್ತಿ, ಅನವಶ್ಯಕ ವಿಸ್ತಾರ, ಅನಗತ್ಯ ವಿಷಯಗಳ ಪ್ರಸ್ತಾಪ-ಇವನ್ನು ಖಂಡಿತ ನಿವಾರಿಸಿಕೊಳ್ಳಬೇಕು. ಉಪಭಾಷೆಯನ್ನು ಕುರಿತು ಕೃಷ್ಣಪರಮೇಶ್ವರ ಭಟ್ಟರ 'ಉಪಭಾಷೆ' ಹಾಗೂ ಶಾಲಿನಿ 'ರಘುನಾಥರ ಉಪಭಾಷಾ ಪರಿವೀಕ್ಷಣೆ' ಪ್ರಚಾರ ಪುಸ್ತಕ ಮಾಲೆಯ ಹೊತ್ತಗೆಗಳಾಗಿದ್ದರೂ ಮೌಲಿಕವಾದ ಕೃತಿಗಳಾಗಿವೆ. ಕನ್ನಡ ಭಾಷೆ ಇವುಗಳ ನಿರೂಪಣೆಯ ಹಿನ್ನೆಲೆಯಲ್ಲಿರುವುದು ಲಕ್ಷಿಸತಕ್ಕದ್ದು. ಡಿ. ಎನ್. ಶಂಕರಭಟ್ಟರು ಧ್ವನಿಪರಿವರ್ತನೆ, ವರ್ಣಪರಿವರ್ತನೆ ಕುರಿತು ಒಂದು ಲೇಖನವನ್ನೂ ಪ್ರಕಟಿಸಿದ್ದಾರೆ. ಬಿ. ರಾಮಚಂದ್ರರಾವ್, ಎಂ. ಜಿ. ವೆಂಕಟೇಶಯ್ಯ ಮತ್ತು ಚಿ. ರಾಮಸ್ವಾಮಿಯೇ ಮತ್ತಿತರರು ಸಾಮಾನ್ಯ ಭಾಷಾವಿಜ್ಞಾನಕ್ಕೆ ಸಂಬಂಧಿಸಿದಂತೆ ಕೆಲವು ಬಿಡಿಬರಹಗಳನ್ನು ಪ್ರಕ. ಕನು. ಕಭಾಗಳಲ್ಲಿ ಪ್ರಕಟಿಸಿದ್ದಾರೆ.

ಕನ್ನಡ ಭಾಷೆಯ ಚರಿತ್ರೆಯನ್ನು ಆರ್. ನರಸಿಂಹಾಚಾರ್ ಮತ್ತು ಧಾರವಾಡಕರ್ ಅವರ ಅನಂತರ ಈಚೆಗೆ ಮತ್ತೆ ಪ್ರ.ಗೋ. ಕುಲಕರಣಿ, ಕೆ. ಎಂ. ಕೃಷ್ಣರಾವ್ ಹಾಗೂ ಸಂಗಮೇಶ ಸವದತ್ತಿಮಠರು ಮತ್ತೆ ಬರೆಯಲು ಪ್ರಯತ್ನಿಸಿದ್ದಾರೆ. ಕುಲಕರ್ಣಿಯವರದು ಸಾಂಗೋಪಾಂಗವಾದ ಸವಿವರವಾದ ವಿವೇಚನೆಯನ್ನೊಳಕೊಂಡ ಒಂದು ದೊಡ್ಡ ಪುಸ್ತಕ. ವಾದಗ್ರಸ್ತ ವಿಚಾರಗಳು ಇದರಲ್ಲಿ ಹಲವಿದ್ದರೂ ಅವರು ಅನೇಕ ಹೊಸ ಅಂತಗಳನ್ನು ಹೇಳಿರುವುದರ ಜೊತೆಗೆ, ಅನೇಕ ಕಡೆಗಳಿಂದ ಸಾಮಗ್ರಿ ತಂದು ಸುರಿದಿದ್ದಾರೆ. ಇದೊಂದು ಪರಾಮರ್ಶನ ಗ್ರಂಥವೇ ಸರಿ. ಉಳಿದೆರಡು ವಿದ್ಯಾರ್ಥಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ರಚಿತವಾಗಿವೆ. ಸವದತ್ತಿಮಠರ ಪುಸ್ತಕದಲ್ಲಿರುವ ಸಕ್ರಮತೆ ಕೃಷ್ಣರಾಯರ ಪುಸ್ತಕದಲ್ಲಿಲ್ಲ; ಅಲ್ಲದೆ ಅದರಲ್ಲಿ ವಿವರಗಳೂ ಹೆಚ್ಚಿವೆ. '56ರಲ್ಲಿ ಪ್ರಕಟವಾದ ಮಾಸ್ತಿ ನರಸಿಂಗರಾಯರ ನಡುಗನ್ನಡ ಒಂದು ಕಾಲದ ಭಾಷಿಕ ಅವಸ್ಥೆಯ ಬಗೆಗಿನ ಸರಳ ಕೃತಿ. ಮಾಸ್ತಿಯವರ 'ನಮ್ಮ ನುಡಿ', 60ರಲ್ಲಿ ಪ್ರಕಟವಾಗಿದ್ದು ಕನ್ನಡ ಶಬ್ದಭಂಡಾರದ ಅನೇಕ ವೈಶಿಷ್ಟ್ಯಗಳನ್ನು ಸರಳವಾಗಿ ಹಾಗೂ ಜನಪ್ರಿಯ ಶೈಲಿಯಲ್ಲಿ ಉದಾಹರಣಾ ಸಹಿತವಾಗಿ ವಿವರಿಸುವ ಕೃತಿಯಾಗಿದೆ. ಹಂಪನಾ ಅವರ 'ದ್ರಾವಿಡ ಭಾಷಾವಿಜ್ಞಾನ' ಮತ್ತು ಸವದತ್ತಿಮಠರ 'ದ್ರಾವಿಡ ಭಾಷಾ ವ್ಯಾಸಂಗ' ಪುಸ್ತಕಗಳಲ್ಲೂ ಕನ್ನಡ ಭಾಷೆಯ ಸ್ವರೂಪ, ವೈಲಕ್ಷಣ್ಯಗಳನ್ನು ಕುರಿತ ಚರ್ಚೆ ಪ್ರಸ್ತಾಪಗಳಿವೆ.

ಶುದ್ಧ ಭಾಷಾವಿಜ್ಞಾನದ ದೃಷ್ಟಿಯಿಂದ ಕನ್ನಡ ಭಾಷೆಯ ಬೇರೆಬೇರೆ ಮುಖಗಳ ಪರಿಶೀಲನೆ ಇಂಗ್ಲಿಷ್‌ನಲ್ಲಾಗಿರುವಂತೆ ಕನ್ನಡದಲ್ಲಿ ಆಗಿಲ್ಲ. ಹಾ.ಮಾ. ನಾಯಕರ, ಹಿರೇಮಠರ, ವಿಲಿಯಂ ಬ್ರೈಟರ ವರ್ಣನಾತ್ಮಕ ವ್ಯಾಕರಣಗಳಾಗಲಿ ವಿಲ್ಲಿಯಂ ಮೆಕರ್ಮೆಕ್ ಶೈಲಿಸಂಬಂಧ ಕೃತಿಯಾಗಲಿ ಇಂಗ್ಲಿಷ್‌ನಲ್ಲಿವೆ. ಗುಲ್ಬರ್ಗ, ಬಳ್ಳಾರಿ, ಕೊಡಗು, ನಂಜನಗೂಡು, ಬಿಜಾಪುರ ಮುಂತಾದ ಕ್ಷೇತ್ರಗಳನ್ನು ಕುರಿತ ಪರಿಶೀಲನೆಗಳು ಆಗಿರುವುದು ಇಂಗ್ಲಿಷ್‌ನಲ್ಲೇ. ಹವ್ಯಕರ, ಹಾಲಕ್ಕಿಯವರ, ಇರುಳರ ಭಾಷಾವ್ಯಾಕರಣ ವಿಶ್ಲೇಷಣೆಗಳೂ ಇಂಗ್ಲಿಷಿನಲ್ಲೇನಡೆದಿದೆ. ಇವುಗಳ ಕನ್ನಡ ರೂಪಗಳು ಪ್ರಕಟವಾಗುವ ಅಗತ್ಯ ಖಂಡಿತ ಇದೆ.

ಕನ್ನಡ ಭಾಷೆಯ ಬೇರೆ ಬೇರೆ ಮುಖಗಳನ್ನು ಕುರಿತು ಪ್ರಕಟವಾಗಿರುವ ಕೆಲವು ಲೇಖನಗಳು ಉಲ್ಲೇಖನ ಯೋಗ್ಯವಾದವು. ಸುವರ್ಣಸಂಚಯ ಸಂಪುಟದಲ್ಲಿ ಪ್ರಕಟವಾಗಿರುವ ಪ್ರಾದೇಶಿಕ ಭಾಷೆಗಳನ್ನು ಕುರಿತ ಪರಿಶೀಲನಾ ಲೇಖನಗಳು ಇಂದಿಗೂ ಚಾರಿತ್ರಿಕ ಬೆಲೆಯನ್ನು ಪಡೆದುಕೊಂಡಿರುವಂಥವಾಗಿವೆ ; ಅಧ್ಯಯನ ಸಂಸ್ಥೆಯ ಸಾಹಿತ್ಯಚರಿತ್ರೆಯ ಸಂಪುಟಗಳಲ್ಲಿ ಕೆ. ಅನಂತರಾಮು ಬರೆಯುತ್ತಿರುವ ಕನ್ನಡ ಭಾಷಾಸ್ವರೂಪ ಮಾಲೆಯ ಲೇಖನಗಳು ವಿವರಗಳಿಂದ ತುಂಬಿಕೊಂಡಿದ್ದು ಮೊತ್ತಮೊದಲಬಾರಿಗೆ ಅನೇಕ ವಿಷಯಗಳನ್ನು ಪ್ರತಿಪಾದಿಸಿವೆ ; ಕರ್ನಾಟಕ ಭಾರತಿಯಲ್ಲಿ ಕುಳ್ಳಿ ಮತ್ತು ವಿಲಿಯಂ ಮಾಡ್ಡಾ ಪ್ರಕಟಿಸಿರುವ ಬಿಂದು. ಕನ್ನಡ ಧ್ವನಿಮಾ ಹಾಗೂ ಗುಣವಾಚಕಗಳ ಬಗೆಗಿನ ಲೇಖನಗಳು ಗಮನಿಸತಕ್ಕವಾಗಿವೆ. ಮಾಡ್ಡಾರವರ 'ಕನ್ನಡ ಭಾಷೆಯ ರೂಪರೇಷೆಗಳು'ನಲ್ಲಿ ಅವರ ಈ ಕೆಲವು ಲೇಖನಗಳು ಸೇರಿವೆ. ಡಿ. ಎಲ್. ನರಸಿಂಹಾಚಾರ್ಯರ 'ಪೀಠಿಕೆಗಳು ಲೇಖನಗಳು' ಪುಸ್ತಕದಲ್ಲಿ ಸೇರಿರುವ ಭಾಷಾವಿಜ್ಞಾನ ಸಂಬಂಧದ ಲೇಖನಗಳಲ್ಲಿ 'ಕನ್ನಡದಲ್ಲಿ ಶಬ್ದರಚನೆ' ಎಂಬುದು ಹೊಚ್ಚಹೊಸ ಸಂಗತಿಗಳನ್ನು ನಿರೂಪಿಸಿರುವ ಬರಹ. ಇಂಥ ವ ಪ್ತಿ ಮತ್ತು ಸಮಗ್ರತೆಗಳನ್ನು ಒಳಕೊಂಡ ಲೇಖನಗಳು ನನಗೆ ಬೇರಾವುದೂ ಕೂಡಲೇ ನೆನಪಿಗೆ ಬರುತ್ತಿಲ್ಲ. ಕನ್ನಡ ವಾಕ್ಯವಿಜ್ಞಾನವನ್ನು ಕುರಿತು ಡಿ. ಎನ್. ಶಂಕರ ಭಟ್ಟರು ಪ್ರಕಟಿಸಿರುವ "ಕನ್ನಡ ವಾಕ್ಯಗಳು" ಆ ಬಗೆಯ ಮೊದಲ ಪುಸ್ತಕ. ಚಿದಾನಂದ ಮೂರ್ತಿಯವರ ಈಚಿನ ಭಾಷಾವಿಜ್ಞಾನ ಸಂಬಂಧ ಪ್ರಕಟಣೆಯಾದ ವಾಗರ್ಥ ಈ ದಶಕದ ಒಂದು ಶ್ರೇಷ್ಠ ಕೃತಿಯಾಗಿ ನಿಲ್ಲುವುದರಲ್ಲಿ ಸಂದೇಹವಿಲ್ಲ. ತಾಲವ್ಯೀಕರಣ, ಸ್ಥಳನಾಮ, ವ್ಯಕ್ತಿನಾಮಗಳನ್ನು ಕುರಿತ ಇಲ್ಲಿಯ ಬರೆಹಗಳು ಮೊತ್ತ ಮೊದಲ ಬಾರಿಗೆ ಅನೇಕ ಸಂಗತಿಗಳನ್ನು ತಿಳಿಸುವಂಥವಾಗಿವೆ. ಸೇಡಿಯಾಪು ಕೃಷ್ಣಭಟ್ಟರ ಕೆಲವು ದೇಶನಾಮಗಳು' 'ಕೆಮ್ಮೂರು ರಘುಪತಿಭಟ್ಟರ 'ತುಳುನಾಡಿನ ಸ್ಥಳನಾಮಗಳು' ಎಂಬ ಪುಸ್ತಕಗಳು ಕೂಡ ತುಂಬ ಮಹತ್ವಪೂರ್ಣವಾದ ಶೋಧನೆಗಳನ್ನೊಳಕೊಂಡಿವೆ. ಸ್ಥಳನಾಮಗಳ ಅಧ್ಯಯನಕ್ಕೆ ಈ ಎರಡು ಕೃತಿಗಳೂ ಮತ್ತೆ ನಾಂದಿ ಹಾಡಿವೆ ಎನ್ನಬಹುದು.

ಈ ಕ್ಷೇತ್ರದಲ್ಲೂ ಆಗಬೇಕಾದ ಕೆಲಸ ತುಂಬ ಇದೆ. ಕನ್ನಡದಲ್ಲಿ ಈವರೆಗೆ ವರ್ಣನಾತ್ಮಕ, ಐತಿಹಾಸಿಕ ಮತ್ತು ತೌಲನಿಕ ಭಾಷಾವಿಜ್ಞಾನಗಳ ಪ್ರವೇಶ ಪರಿಚಯ ವಾಗಿದೆಯೇ ವಿನಾ ಮಾನವ ಭಾಷಾವಿಜ್ಞಾನ, ಸಾಮಾಜಿಕ ಭಾಷಾವಿಜ್ಞಾನ, ಗಣಿತಾತ್ಮಕ ಭಾಷಾವಿಜ್ಞಾನ, ಶೈಲಿಶಾಸ್ತ್ರ, ದ್ವಿಭಾಷಿಕತೆ, ಗಣಕ ಭಾಷಾವಿಜ್ಞಾನ, ಮಾನಸಿಕ ಭಾಷಾವಿಜ್ಞಾನವೇ ಮುಂತಾದ ಇತರ ಕ್ಷೇತ್ರಗಳ ಹೊಸ ರಕ್ತ ಇನ್ನೂ ಇಲ್ಲಿ ಚುಚ್ಚಲ್ಪಡಬೇಕಾಗಿದೆ. ಉಪಭಾಷೆಗಳ ಸಮಗ್ರ ಪರಿವೀಕ್ಷಣೆಗೆ ಆಗಬೇಕಾಗಿದೆ. ಹಳೆಯಕಾವ್ಯಗಳಂತೆ ಹೊಸಕಾವ್ಯಗಳ, ವೃತ್ತ ಪತ್ರಿಕೆಗಳ, ಕಾದಂಬರಿಗಳ ಭಾಷಾ ಪರಿಶೀಲನೆ ನಡೆಯಬೇಕಾಗಿದೆ. ಕನ್ನಡ ಮತ್ತು ಇತರೆಲ್ಲ ಭಾಷೆಗಳ ನಡುವಣ ಕೊಳುಕೊಡುಗೆಗಳ ವಿಶ್ಲೇಷಣೆಯಾಗಬೇಕಿದೆ. ಪ್ರಾಚೀನ ಕನ್ನಡ ಸಾಹಿತ್ಯ ಕೃತಿಗಳ ಭಾಷಾಸ್ವರೂಪ ಪರಿಶೀಲಿತವಾದಂತೆ, ಆ ಕಾಲದ ಶಾಸ್ತ್ರಕೃತಿಗಳ ಟೀಕೆ ವ್ಯಾಖ್ಯಾನಗಳ ಭಾಷಾ ಪರಿಶೀಲನೆಯಾಗಬೇಕಿದೆ : ವೃತ್ತಿ ಪದಕೋಶ ಸಿದ್ಧತೆ ತುರ್ತಾಗಿ ಆಗ ಬೇಕಾದೆ. ಕನ್ನಡ ಜನಪದ ಸಾಹಿತ್ಯದ ಬೇರೆಬೇರೆ ಪ್ರಕಾರಗಳ ಭಾಷಿಕ ವಿಶ್ಲೇಷಣೆ ಆಗಬೇಕಿದೆ. ಇವೇ ಆಗಬೇಕಾದವುಗಳಲ್ಲಿ ಕೆಲವು. ಹೇಳಬಹುದಾದವು ಇನ್ನೂ ಹಲವಿವೆ.

* * * *

ಶಾಸ್ತ್ರಕ್ಷೇತ್ರಗಳಲ್ಲಿ ನಿರ್ಲಕ್ಷಿತವಾಗಿರುವ ಮತ್ತೊಂದು ಕ್ಷೇತ್ರವೆಂದರೆ ಶಾಸನದ್ದು. ಕನ್ನಡದ ಹಾಗೂ ಕರ್ನಾಟಕದ ಶಾಸನಗಳನ್ನೊಳಗೊಂಡ ಶಾಸನಸಂಪುಟಗಳು 20ನೆಯ ಶತಮಾನದ ಮೊದಲೆರಡು ದಶಕಗಳ ಹೊತ್ತಿಗೇ ಬಂದಿತ್ತಾದರೂ ಆ ಸಾಮಗ್ರಿಯನ್ನು ಅದರೆಲ್ಲ ಮುಖಗಳಲ್ಲಿ ಪರಿಶೀಲಿಸುವ ಕಾರ್ಯ ಆರಂಭವಾದದ್ದು ತೀರ ಈಚೆಗೇ ಎಂದೆನ್ನಬಹುದು. ಕರ್ನಾಟಕದಲ್ಲಿ ದೊರತಿದ್ದ ಸಂಸ್ಕೃತ ಶಾಸನಗಳ ಬಗ್ಗೆ ಹಾಗೂ ಕನ್ನಡದ ಆರಂಭಕಾಲೀನ ಶಾಸನಗಳ ಬಗ್ಗೆ ಮಾತ್ರ ಕೇಂದ್ರೀಕೃತ ವಾಗಿದ್ದ ವಿದ್ವಾಂಸರ ಗಮನ ಸಮಗ್ರ ಕನ್ನಡ ಶಾಸನಗಳಲ್ಲಿ ಹುದುಗಿರುವ ಸಾಹಿತ್ಯಿಕ, ಭಾಷಿಕ ಹಾಗೂ ಸಾಂಸ್ಕೃತಿಕ ಸಂಪತ್ತುಗಳ ಕಡೆ ಹರಿದದ್ದು '60ರಿಂದ ಈಚೆಗೆ ಎಂದರೆ ತಪ್ಪಾಗಲಾರದೆನಿಸುತ್ತದೆ. ಕರ್ನಾಟಕದ ಶಾಸನಗಳ ಸ್ವರೂಪ, ವೈಶಿಷ್ಟ್ಯ, ನೆಲೆಬೆಲೆ ಗಳನ್ನು ಪರಿಚಯ ಮಾಡಿಕೊಡುವ ಸಲವಾಗಿ ಕಿರುಹೊತ್ತಗೆಗಳನ್ನೇ ಕೆಲವರು ಪ್ರಕಟಿಸಿದ್ದಾರೆ. ಇವುಗಳಲ್ಲಿ ಪಿ. ಬಿ. ದೇಸಾಯಿಯವರ 'ಕನ್ನಡ ನಾಡಿನ ಶಾಸನಗಳು ಪಂಚಮುಖಿಯವರು ಹಾಗೂ ಅನಂತರಂಗಾಚಾರ್ಯರು ಪ್ರತ್ಯೇಕವಾಗಿ ಪ್ರಕಟಿಸಿದ್ದರೂ ಸಮಾನ ಶೀರ್ಷಿಕೆಯ 'ಕರ್ನಾಟಕ ಶಾಸನಗಳು' ಜಿ. ವೆಂ. ಅವರ 'ಕನ್ನಡ ಶಾಸನ. ಪರಿಚಯ' ಕೆಲವು. ಇಂಥ ಪ್ರಯತ್ನ ಎಷ್ಟು ಹೊಸ ಮಾಹಿತಿಗಳನ್ನೊಳಗೊಂಡು. ವಿಶದವಾದ ನಿರೂಪಣೆಯೊಂದಿಗೆ ಬೆಲೆಬಾಳುವಂಥದಾಗಬಹುದುದೆಂಬುದಕ್ಕೆ ಕೆ. ವಿ. ರಮೇಶರ 'ಕರ್ನಾಟಕದ ಶಾಸನ ಸಮೀಕ್ಷೆ' ಒಂದು ಒಳ್ಳೆಯ ಉದಾಹರಣೆ. ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟವಾಗಿರುವ ವೀರಗಲ್ಲು ಮಾಸ್ತಿಗಲ್ಲುಗಳನ್ನು ಕುರಿತ, ಐ.ಬಿ.ಎಚ್‌ನಿಂದ ಪ್ರಕಟವಾಗಿರುವ ಕರ್ನಾಟಕದ ಶಾಸನ ಸಂಪತ್ತಿನ ಹಾಗೂ

ವೀರಗಲ್ಲಿನ ಮಾಸ್ತಿಗಲ್ಲಿನ ಕಿರು ಹೊತ್ತಗೆಗಳು ಸಾಮಾನ್ಯರಿಗೆ ಈ ವಿಷಯವನ್ನು ಪರಿಚಯಿಸಿ ಕೊಡಲು ಸಮರ್ಥವಾಗಿವೆ ಸಿ. ಪಿ. ಕೆ. ಅವರ 'ಭಾರತೀಯ ಶಾಸನಶಾಸ್ತ್ರ ಪರಿಚಯ' ಫ್ಲೀಟರು ಇಂಪೀರಿಯಲ್ ಗೆಜೆಟಿಯರ್‌ಗೆ ಬರೆದ ಎಪಿಗ್ರಫಿ ಲೇಖನದ ಅನುವಾದವಾಗಿದ್ದರೂ ಸಕಾಲಿಕವಾಗಿದೆ.

ಶಾಸನಗಳನ್ನು ಮತ್ತು ಶಾಸನಗಳಲ್ಲಿರುವ ಸಾಮಗ್ರಿಯನ್ನು ವಿಭಿನ್ನ ದೃಷ್ಟಿ ಕೋನದಿಂದ ಅಭ್ಯಸಿಸಿರುವ ಬೆಲೆಬಾಳುವ ಕೃತಿಗಳು ಕೆಲವು ಬಂದಿವೆ. ಅವುಗಳಲ್ಲಿ ಕೂಡಲೇ ಎಲ್ಲ ವಿದ್ವಾಂಸರ ನೆನಪಿಗೂ ಬರುವುದು ಚಿದಾನಂದಮೂರ್ತಿಗಳ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' 60ರ ದಶಕದಲ್ಲಿ ನಡೆದಿರುವ ಕನ್ನಡ ಸಂಶೋಧನೆ ಯಲ್ಲೆಲ್ಲಾ ಇದು ಕಿರೀಟಪ್ರಾಯವಾದುದು. ಇದರ ಲೇಖಕರು ಪರಿಶೀಲಿಸಿರುವ ಶಾಸನಗಳಸಂಖ್ಯೆ, ಸಂಗ್ರಹಿಸಿರುವ ಮಾಹಿತಿ, ಅದನ್ನು ಜಾಣ್ಮೆಯಿಂದ ಹೆಣೆದಿರುವ ರೀತಿ, ತಳೆದಿರುವ ನಿಲವು ತುಂಬ ಪ್ರಶಂಸಾರ್ಹವಾಗಿದೆ. ಕನ್ನಡನಾಡಿನ ಗತಕಾಲದ ಸಾಂಸ್ಕೃತಿಕ ಬದುಕಿನ ಬಗ್ಗೆ ಇದು ಚೆಲ್ಲುವ ಬೆಳಕು ಬಣ್ಣದ್ದೂ. ಹೊಚ್ಚ ಹೊಸದೂ ಆಗಿದೆ. 450 ರಿಂದ 1150ರ ವರೆಗಿನ ಶಾಸನಗಳನ್ನು ಮಾತ್ರ ಇಲ್ಲಿ ಪರಿಶೀಲಿಸ ಲಾಗಿದೆ. ಇಲ್ಲಿಂದ ಮುಂದಿನ ಶತಮಾನಗಳ ಶಾಸನಗಳನ್ನು ಆಧರಿಸಿ ಈ ಪ್ರಯತ್ನ ವನ್ನು ಮುಂದುವರಿಸುವ ಅಗತ್ಯವಿದೆ. ಬಿ. ಜಿ. ಎಲ್. ಸ್ವಾಮಿಯವರ 'ಶಾಸನಗ ಳಲ್ಲಿ ಗಿಡಮರಗಳು' ಇಂಥದೇ ಒಂದು ನವೀನ ಪ್ರಯತ್ನ. ಈ ಪುಸ್ತಕದ ಹಾಳೆಹಾಳೆಗಳಲ್ಲೂ ಹೊಸತು ಎದ್ದು ಕಾಣುತ್ತದೆ. ಎ. ವಿ. ನರಸಿಂಹ ಮೂರ್ತಿ ಗಳ 'ಕನ್ನಡಲಿಪಿಯ ಉಗಮ ಮತ್ತು ವಿಕಾಸ' ಪೂತ್ತ ಮೊದಲಬಾರಿಗೆ ಶಾಸನಗಳನ್ನವಲಂಬಿಸಿ ಸಚಿತ್ರವಾಗಿ ನಮ್ಮ ಲಿಪಿಯ ಬೆಳವಣಿಗೆಯ ಬೇರೆ ಬೇರೆ ಹಂತಗಳನ್ನು ಗುರುತಿಸಿ ವಿವರಿಸಿರುವ ಪ್ರಯತ್ನ. ಶಾಸನಗಳನ್ನು ಬರೆದಿರುವ ಶಾಸನ ಕವಿಗಳ ಪರಿಚಯ ಮತ್ತು ಅವರ ರಚನೆಗಳ ಸ್ವರೂಪವನ್ನು ಕೊಂಚ ವಿಸ್ತಾರದಲ್ಲಿಯೇ ತಿಳಿಸಿಕೊಡುವ ಪುಸ್ತಕ ಮೇವುಂಡಿ ಮಲ್ಲಾರಿಯವರ 'ಕನ್ನಡ ನಾಡಿನ ಶಾಸನ ಕವಿಗಳು' ಶಾಸನ ಸಾಹಿತ್ಯ ಚರಿತ್ರೆಗೆ ಸಂಬಂಧಿಸಿದ ಕೆಲವು ಉಪಯುಕ್ತ ಮಾಹಿತಿಗಳನ್ನು ಒಳಗೊಂಡಿದೆ. ಎಂ. ಎಂ. ಕಲಬುರ್ಗಿಯವರ 'ಶಾಸನಗಳಲ್ಲಿ ಶಿವಶರಣರು' ಇದೇ ಬಗೆಯ ಇನ್ನೊಂದು ಹೊಸ ಪ್ರಯತ್ನ. ಇದಕ್ಕೆ ಕೊಂಚ ಮಟ್ಟಿಗೆ ಪಿ. ಬಿ. ದೇಸಾಯಿ ಅವರ 'ಜೈನಿಸಂ ಇನ್ ಸೌತ್ ಇಂಡಿಯ ಅಂಡ್ ಸಮ್ ಜೈನ ಎಪಿಗ್ರಾಫ್ಸ್' ಪ್ರೇರಕ ವಾಗಿದೆ; ಮಾದರಿಯಾಗಿದೆ ಎನಿಸುತ್ತದೆ. ಪೂರ್ವೋಕ್ತ ವೈಶಿಷ್ಟ್ಯಪೂರ್ಣ ಪ್ರಯತ್ನ ಗಳು ನಮ್ಮಲ್ಲಿ ಹೆಚ್ಚಾಗಿಲ್ಲ.

ಕನ್ನಡ ಶಾಸನಗಳ ಹಿನ್ನೆಲೆಯಲ್ಲಿ ಶಾಸನಶಾಸ್ತ್ರದ ಸ್ವರೂಪ, ವೈಶಿಷ್ಟ್ಯಗಳನ್ನು ಗುರುತಿಸುವ ಪ್ರಯತ್ನಗಳು ಕಲಬುರ್ಗಿಯವರ 'ಶಾಸನವ್ಯಾಸಂಗ' 1-ರಲ್ಲೂ. ಜಯದೇವ್ ಅವರ 'ಶಾಸನ ಮತ್ತು ಗದ್ಯ' ಪುಸ್ತಕದಲ್ಲೂ ಇವೆ. ಶಾಸನ 'ಪದ್ಯ ಮಂಜರಿ'ಯ ಮಾದರಿಯಲ್ಲಿ 'ಶಾಸನ ಸಾಹಿತ್ಯ ಸಂಚಯ', 'ಕನ್ನಡ ಶಾಸನ

'ಸಂಪದ', 'ಶಾಸನ ಸಂಗ್ರಹ' ಪುಸ್ತಕಗಳು ಹೊರಬಂದಿವೆ. 'ಶಾಸನ ಸಂಗ್ರಹ' ಹಾಗೂ 'ಶಾಸನ ಪದ್ಯಮಂಜರಿ'ಯ 1975ರ ಪರಿಷ್ಕರಣದ ಟೀಕಾಭಾಗಗಳಲ್ಲಿ ಅನೇಕ ಹೊಸತೂ ಉಪಯುಕ್ತವೂ ಆದ ವಿಚಾರಗಳನ್ನು ಸಂಗ್ರಹಿಸಿಕೊಟ್ಟಿವೆ. 'ಎಪಿಗ್ರಾಫಿಯಾ ಕರ್ನಾಟಿಕಾ' ಸಂಪುಟಗಳನ್ನು ಪರಿಷ್ಕರಿಸಿ ಪುನರ್ಮುದ್ರಿಸುವಂಥ ಬೃಹತ್ಕಾರ್ಯವನ್ನು ಕನ್ನಡ ಅಧ್ಯಯನ ಸಂಸ್ಥೆ ಕೈಗೊಂಡಿರುವುದನ್ನು ಇಲ್ಲಿಯೇ ಉಲ್ಲೇಖಿಸಬಹುದು.

ಕನ್ನಡ ಶಾಸನಗಳಲ್ಲಿ ವ್ಯಕ್ತವಾಗಿರುವ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಸಂಗತಿಗಳನ್ನು ಪ್ರತ್ಯೇಕ ಲೇಖನಗಳು ಇಂಗ್ಲಿಷ್ ಸಂಶೋಧನ ಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ ಪ್ರಬುದ್ಧ ಕರ್ನಾಟಕ, ಮಾನವಿಕ ಕರ್ನಾಟಕ, ಕರ್ನಾಟಕ ಭಾರತಿ, ಸಾಧನೆ, ಪರಿಷತ್ಪತ್ರಿಕೆಯೇ ಮುಂತಾದ ತ್ರೈಮಾಸಿಕ ಪತ್ರಿಕೆಗಳಲ್ಲೂ ಅಚ್ಚಾಗಿವೆ ಇಂಗ್ಲಿಷ್‌ಗೆ ಹೋಲಿಸಿದಾಗ ಕನ್ನಡದಲ್ಲಿ ಈ ಸಂಖ್ಯೆ ಕಡಿಮೆಯೇ. ಇಂಥ ಕೆಲವು ಲೇಖನಗಳನ್ನೊಳಗೊಂಡಂಥಹ ಸಂಕಲನಗಳು ಹೊರಬಂದಿವೆ. ಅವುಗಳಲ್ಲಿ ಕಲಬುರ್ಗಿಯವರ 'ಶಾಸನ ವ್ಯಾಸಂಗ–2', ರಘುನಾಥಭಟ್ಟರ 'ಕರ್ನಾಟಕ ಶಾಸನ ಕಲೆ' ಉಲ್ಲೇಖನಯೋಗ್ಯವಾದವು. ಈ ಎರಡರಲ್ಲೂ ಕಂಡುಬರುವ ಸಂಶೋಧನ ಪ್ರತಿಭೆ ಮೇಲ್ಮಟ್ಟದ್ದಾಗಿದೆ. ಕುಶಾಲಪ್ಪಗೌಡರು ನಡುಗನ್ನಡ ಕಾಲದ ಶಾಸನಗಳನ್ನಾಧರಿಸಿ ಅವುಗಳ ವ್ಯಾಕರಣ ವಿವರಿಸುವ ಒಂದು ಕೃತಿ ರಚಿಸಿದ್ದರೂ ಅದು ಇಂಗ್ಲಿಷಿನಲ್ಲಿದೆ. ವೀರಗಲ್ಲುಗಳನ್ನು ಕುರಿತ ಶೇಷಶಾಸ್ತ್ರಿಯವರ ಮಹಾಪ್ರಬಂಧಕ್ಕೆ ಪಿಎಚ್.ಡಿ ಪದವಿ ದೊರೆತಿದ್ದರೂ, ಅದಿನ್ನೂ ಅಚ್ಚಾಗಬೇಕಾಗಿದೆ.

ಈ ಕ್ಷೇತ್ರದಲ್ಲೂ ಆಗಬೇಕಾಗಿರುವ ಕೆಲಸ ಅಪಾರವಾಗಿವೆ. ಉತ್ತರ ಕರ್ನಾಟಕದ ಕಡೆ ಮೊದಲು ಸಮಗ್ರವಾದ ಸಂವೀಕ್ಷಣಾ ಕಾರ್ಯ ನಡೆದು ಶಾಸನ ಸಂಪುಟಗಳು ಹೊರಬರಬೇಕು : ಶಾಸನ ಶಬ್ದಸೂಚಿಯೊಂದು ಅರ್ಥಸಹಿತ ಸಿದ್ಧವಾಗಬೇಕು : ಶಾಸನಗಳ ಛಂದಸ್ಸು, ಕಾವ್ಯಮೌಲ್ಯಗಳು ಪೂರ್ಣಪ್ರಮಾಣದಲ್ಲಿ ಪರಿಶೀಲಿತವಾಗಬೇಕು : ಶಾಸನಗಳಲ್ಲಿ ಉಲ್ಲೇಖಗೊಂಡಿರುವ ರಾಜರ, ದಂಡನಾಯಕರ, ಸಾಮಂತರ, ಸೇನಾನಿಗಳ, ನಾಡಗೌಡರ, ದಾಸಿಗಳ, ವಣಿಗಳ, ದಾನಗ್ರಾಹಕರೇ ಮುಂತಾದ ಶಾಸನ ವ್ಯಕ್ತಿನಾಮ ಸೂಚಿ ತಯಾರಾಗಬೇಕು : ಅವುಗಳಲ್ಲಿ ಹೆಸರಿಸಲ್ಪಟ್ಟಿರುವ ಸ್ಥಳನಾಮ ಸೂಚಿಯೂ ಹಾಗೆಯೇ ಸಿದ್ಧವಾಗಬೇಕು : ಮಾಸ್ತಿಕಲ್ಲುಗಳ, ನಿಸಿದಿಗಲ್ಲುಗಳ ಪರಿಶೀಲನೆಯಾಗಬೇಕು : ಶಾಸನಗಳಲ್ಲಿ ಕಂಡುಬರುವ ಆಡಳಿತ ವಿಧಾನ, ಯುದ್ಧಕಲೆ, ಜನಜೀವನವೇ ಮುಂತಾದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಮುಖಗಳ ಸರ್ವಾಂಗೀಣ ಪರಿಶೀಲನೆಯಾಗಬೇಕು. ಇಂಥ ಕೆಲಸಗಳನ್ನು ಮಾಡಲು ಸಿದ್ಧರಿರುವ ತರುಣ ವಿದ್ವಾಂಸರ ದಂಡೊಂದು ಮೊದಲು ರೂಪುಗೊಳ್ಳಬೇಕು.

* * *

1953ರಲ್ಲಿಯೇ ಮುಗಳಿಯವರ ಕನ್ನಡ ಸಾಹಿತ್ಯ ಚರಿತ್ರೆ ಪ್ರಕಟವಾಯಿತಾದರೂ 1956ರಲ್ಲಿ ಅದಕ್ಕೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿತೆಂಬುದು

ಗಮನಿಸತಕ್ಕ ಸಂಗತಿ. ಇವರ ಸಾಹಿತ್ಯ ಚರಿತ್ರೆ ಪ್ರಕಟವಾದ ಮೇಲೆ ನಮ್ಮಲ್ಲಿ. ಇನ್ನೂ ಅನೇಕ ಸಾಹಿತ್ಯ ಚರಿತ್ರೆಯ ಪುಸ್ತಕಗಳು ಹೊರಬಂದಿವೆ. ತ.ಸು. ಶಾಮರಾಯ. ಮೇ. ರಾಜೇಶ್ವರಯ್ಯ ಅವರು ಕೂಡಿ ಬರೆದ 'ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ'ಯಲ್ಲಾಗಲೀ. ಕೆ. ವೆಂಕಟರಾಮಪ್ಪ ಹಾಗೂ ಎಂ. ಮರಿಯಪ್ಪ ಭಟ್ಟ ಅವರ 'ಕನ್ನಡ ಸಾಹಿತ್ಯ ಚರಿತ್ರೆ' ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ'ಗಳಲ್ಲಾಗಲಿ, ಮುಗಳಿಯವರ 'ಕನ್ನಡ ಸಾಹಿತ್ಯದ ಇತಿಹಾಸ'ದಲ್ಲಾಗಲಿ ಸಂಶೋಧನೆಯ ಅಂಶಗಳಿಲ್ಲ. ಇವೆಲ್ಲ ಬಲುಮಟ್ಟಿಗೆ 'ಕರ್ನಾಟಕ ಕವಿಚರಿತೆ'ಯ ವಿವರಗಳನ್ನು. ಇತರ ಲೇಖನ ಪ್ರಸ್ತಾಪಗಳನ್ನು ಆಧರಿಸಿ ರೂಪುಗೊಂಡಿರುವ ಕೃತಿಗಳು. ಇಲ್ಲಿ ಪರಿಚಯ ಮತ್ತು ವಿಮರ್ಶೆಯ ಮಾತುಗಳಿಗೆ ಪ್ರಾಮುಖ್ಯವೇ ವಿನಾ. ಶೋಧನೆಗಲ್ಲ ಶೋಧನೆಯ ಅಂಶಗಳನ್ನೂ ಒಳಗೊಂಡು ಪೂರ್ಣಪ್ರಮಾಣದಲ್ಲಿ ಸಾಹಿತ್ಯ ಚರಿತ್ರೆ ರಚಿತವಾಗುತ್ತಿರುವುದು ಈಗ ಏಳು ವರ್ಷಗಳಿಂದೀಚೆಗೆ ಅಷ್ಟೆ. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಾಗೂ ಬೆಂಗಳೂರು ವಿಶ್ವವಿದ್ಯಾ ನಿಲಯದ ಕನ್ನಡ ಅಧ್ಯಯನ ಕೇಂದ್ರದ ಸಾಮೂಹಿಕ ಪ್ರಯತ್ನದ ಸಾಹಿತ್ಯ ಚರಿತ್ರೆಯ ಸಂಪುಟಗಳಲ್ಲಿ ಶೋಧನೆ, ವಿಮರ್ಶೆ ಎರಡೂ ಬೆರೆತುಕೊಂಡಿದೆ. ಇದರಿಂದ ಕೃತಿ ವಿಮರ್ಶೆಯಷ್ಟೇ, ಕವಿಚರಿತ್ರೆ ಹಾಗೂ ಹಿನ್ನೆಲೆಗಳೂ ಮುಖ್ಯ ಎಂಬ ದೃಷ್ಟಿ ಈಗೀಗ ಇತರ ಸಾಹಿತ್ಯಚರಿತ್ರಕಾರರಲ್ಲೂ ಮೂಡುತ್ತಿದೆ. ಈ ಸಂಪುಟಗಳನ್ನುಳಿದರೆ 'ಕರ್ನಾಟಕ ಕವಿಚರಿತ್ರೆಯ ಅನುಕ್ತ ಕೃತಿ ಸೂಚಿ' ಶೋಧನ ವರದಿಗಳನ್ನವಲಂಬಿಸಿದ ಒಂದು ಯಾದಿಯಾಗಿದ್ದು ನಮ್ಮ ಸಾಹಿತ್ಯ ಚರಿತ್ರೆಗೆ ಸೇರಬೇಕಾದ ಹೊಸ ಕೃತಿಗಳತ್ತ ಬೊಟ್ಟು ಮಾಡಿದೆ. ಆಧುನಿಕ ಕನ್ನಡ ಸಾಹಿತ್ಯದ ಆರಂಭಕಾಲದ ಹಿನ್ನೆಲೆ. ಸ್ವರೂಪ. ಕಣ್ಣೊಡೆತಗಳನ್ನು ಸಮಗ್ರವಾಗಿ ಶೋಧಿಸಿ ಅದರ ಸ್ಪಷ್ಟಚಿತ್ರವನ್ನು ತುಂಬು ವಿವರ ಗಳೊಂದಿಗೆ ಮೊತ್ತಮೊದಲ ಬಾರಿಗೆ ಹಾವನೂರರು ತಮ್ಮ 'ಹೊಸಗನ್ನಡದ ಅರುಣೋದಯ'ದ್ದಲ್ಲೂ ರಾ.ಯ. ಧಾರವಾಡಕರರು 'ಹೊಸಗನ್ನಡ ಸಾಹಿತ್ಯದ ಉದಯಕಾಲ'ದಲ್ಲೂ ಕೊಟ್ಟಿದ್ದು, ಆಧುನಿಕ ಕನ್ನಡ ಸಾಹಿತ್ಯಕ್ಕೆ ಸೇರಬೇಕಾದ ಹೊಸ ಅಧ್ಯಾಯಗಳ ಪ್ರತಿಪಾದನೆ ಇಲ್ಲಿದೆ. ಇಂಥ ಪ್ರಯತ್ನಗಳನ್ನು ಮುಂದುವರಿಸುವ ಕೆಲಸ ತ್ವರಿತವಾಗಿ ಆಗಬೇಕು. ಕರ್ನಾಟಕದ ಕವಯಿತ್ರಿಯರನ್ನು ಕುರಿತು. ಕವಿರಾಜ ಮಾರ್ಗದ ಪರಿಸರದ ಕನ್ನಡ ಸಾಹಿತ್ಯ ಕುರಿತು. ಪ್ರೌಢದೇವರಾಯ ಹೊಯ್ಸಳರ ಹಾಗೂ ಕೆಳದಿರಾಜರ ಕಾಲದ ಕನ್ನಡ ಸಾಹಿತ್ಯ ಕುರಿತು ಮಹಾಪ್ರಬಂಧಗಳು ಬರೆಯ ಲ್ಪಟ್ಟಿವೆ. ಇವುಗಳಲ್ಲಿ ಕೆಲವು ಅಚ್ಚು ಆಗಿವೆ. ಇವುಗಳಲ್ಲಿ ಕೊಂಚಭಾಗವಾದರೂ ಶುದ್ಧ ಶೋಧನೆಯ ಅಂಶಗಳನ್ನೊಳಕೊಂಡಿರುತ್ತದೆ ಎಂಬುದನ್ನು ಯಾರೂ ಒಪ್ಪು ವುದರಲ್ಲಿ ಸಂದೇಹವಿಲ್ಲ. ಪೊನ್ನ. ನಯಸೇನ. ದುರ್ಗಸಿಂಹ. ನಾಗವರ್ಮ. ನೇಮಿ ಚಂದ್ರ. ಅಲ್ಲಮಪ್ರಭು. ಸಿದ್ಧರಾಮ. ಕುಮಾರವಾಲ್ಮೀಕಿ. ಲಕ್ಷ್ಮೀಶ. ಸರ್ವಜ್ಞ. ಜಗನ್ನಾಥದಾಸ. ವಿಜಯದಾಸ--ಈ ಮುಂತಾದ ಕವಿಗಳ ಬಗ್ಗೆ ಪಿಎಚ್.ಡಿ ಪ್ರಬಂಧಗಳು ಈ 25 ವರ್ಷಗಳಲ್ಲೇ ಪ್ರಕಟವಾಗಿದ್ದು ಅವರ ಜೀವನ ವೃತ್ತಾಂತ ಸಾಹಿತ್ತಿಕ ಸಾಧನೆಗಳ ಬಗ್ಗೆ, ಅವರ ಕೃತಿಗಳ ಆಕರಗಳ ಬಗ್ಗೆ. ಪ್ರಭಾವಗಳ ಬಗ್ಗೆ

ಎಷ್ಟೋ ಹೊಸ ವಿಷಯಗಳನ್ನು ಅವು ಚೆಲ್ಲಿವೆ. ಚಾವುಂಡರಾಯ, ನೇಮಿಚಂದ್ರ, ಜನ್ನ, ಹರಿಹರ ಮುಂತಾದವರ ಬಗ್ಗೆ ಸಿದ್ಧತೆಯಲ್ಲಿರುವ ಕೃತಿಗಳೂ ಇವೆ. ಪಂಪ, ರನ್ನ, ಹರಿಹರ, ನಾಗಚಂದ್ರ, ಮುದ್ದಣ, ಕನಕದಾಸರೇ ಮುಂತಾದವರ ಬಗ್ಗೆ ಬಹಳ ಹಿಂದೆಯೇ ಪ್ರಶಸ್ತಿ ಗ್ರಂಥಗಳೂ, ಈಚೆಗೆ ಲೇಖನ ಸಂಕಲನಗಳೂ ಪ್ರಕಟವಾಗಿವೆ. ಆದ್ದರಿಂದ ನಮ್ಮ ಪ್ರಾಚೀನ ಕವಿಗಳಲ್ಲಿ ಪ್ರಸಿದ್ಧರಾಗಿರುವವರ ಬಗ್ಗೆ ದೊಡ್ಡ ಪುಸ್ತಕ ರೂಪದ ಪ್ರಯತ್ನಗಳಿಗೇನೂ ಕೊರತೆಯಿಲ್ಲ. ಇಷ್ಟೇನಿಲ್ಲದಿದ್ದರೂ ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕ ಮಾಲೆಯ ಕಿರುಗ್ರಂಥಗಳಂತೂ ಇದ್ದೇ ಇವೆ. ಇರುವ ಕೊರತೆಯೆಲ್ಲ ಗೌಣವೂ, ಅಮುಖ್ಯರೂ, ಆದ ಕವಿಗಳ ಬಗ್ಗೆ, ಹಾಗೂ ಅಜ್ಞಾತ ಕೃತಿಗಳ ಬಗ್ಗೆ. ಸಾಹಿತ್ಯವನ್ನು ವಚನಸಾಹಿತ್ಯ, ಹರಿದಾಸ ಸಾಹಿತ್ಯ, ಗದ್ಯಸಾಹಿತ್ಯ, ಸಾಂಗತ್ಯ ಸಾಹಿತ್ಯ, ತ್ರಿಪದಿಸಾಹಿತ್ಯ ಎಂದು ಮುಂತಾಗಿ ವಿಭಜಿಸಿಕೊಂಡೋ, ಜೈನ ತೀರ್ಥಂಕರರ ಇಲ್ಲವೇ ವೀರಶೈವ ಶರಣರ ಅಥವಾ ಪುರಾತನರನ್ನು ಕುರಿತ ಒಂದೇ ವಸ್ತುವಿನ ಕೃತಿಗಳ ತೌಲನಿಕ ಅಧ್ಯಯನವನ್ನೋ ಒಂದು ಯುಗದ ಇಲ್ಲವೇ ಒಬ್ಬ ರಾಜನ ಅವಧಿಯಲ್ಲಿ ಬಂದ ಸಾಹಿತ್ಯವನ್ನೋ ಕುರಿತು ಮಾಡಿರುವ, ಇನ್ನೂ ಮಾಡುತ್ತಿರುವ ಬಗೆಬಗೆಯ ಪ್ರಯತ್ನಗಳಿವೆ. ಇಲ್ಲೆಲ್ಲ ಶೋಧನೆಯ ಹೊಸಮುಖಗಳು ಹೊರಗಿಣುಕಿವೆ. ಅಚ್ಚಾಗಿರುವ ಇಂಥ ಎಲ್ಲ ಪ್ರಯತ್ನಗಳ ಪಟ್ಟಿಯನ್ನು ಆ ಪುಸ್ತಕಗಳ ವಿಮರ್ಶೆಯನ್ನೂ ಇಲ್ಲಿ ಕೊಡುವುದು ಸಾಧ್ಯವಿಲ್ಲ ; ಕೊಟ್ಟರೂ ಅದು ಉಚಿತವಲ್ಲ. ಪಟ್ಟಿಯ ವಿವರಕ್ಕೆ ಬೇಕಾದರೆ '78ರಲ್ಲಿ ಅಚ್ಚಾಗಿರುವ ಮುಗಳಿಯವರ "ಕನ್ನಡ ಸಾಹಿತ್ಯ ಚರಿತ್ರೆ"ಯ ಅಭ್ಯಾಸ ಸೂಚಿಯ ಮೇಲೆ ಆಸಕ್ತರು ಕಣ್ಣಾಡಿಸಬೇಕೆಂದು ಪ್ರಾರ್ಥಿಸುತ್ತೇನೆ. ಹಾಗೆ ಕಣ್ಣಾಡಿಸುವಾಗಲೇ ಆ ಆಸಕ್ತರಿಗೆ ಆ ಎಲ್ಲ ವಿವರಗಳ ಪಟ್ಟಿಯನ್ನು ಕೊಡುವುದು ಅಸಾಧ್ಯವೆಂದೂ, ಅನುಚಿತವೆಂದೂ ಅರಿವಾಗುತ್ತದೆ ಎಂಬ ನಂಬಿಕೆ ನನಗಿದೆ. ಕವಿಕಾವ್ಯವಿಚಾರಗಳನ್ನು ಕುರಿತು, ಕೃತಿಮೂಲ ಪ್ರಭಾವಗಳನ್ನು ಕುರಿತು, ತೌಲನಿಕ ಅಧ್ಯಯನ ಕುರಿತು ಅನೇಕ ಕವಿಗಳ ಬಗ್ಗೆ ಈ ಇಪ್ಪತ್ತೈದು ವರ್ಷಗಳಲ್ಲಿ ಪ್ರಕಟವಾಗಿರುವ ನೂರಾರು ಲೇಖನಗಳ ಬಗೆಗೂ ಇದೇ ಮಾತು ಅನ್ವಯಿಸುತ್ತದೆ.

ಇಲ್ಲೂ ಆಗಬೇಕಾದ ಕೆಲಸ ಅಪಾರವಾಗಿದೆ. 1600ರಿಂದ ಈಚೆಯ, ಅದರಲ್ಲೂ 1700, 1800ರಲ್ಲಿ ರಚಿತವಾದ ನೂರಾರು ಕೃತಿಗಳನ್ನು, ಕವಿಗಳನ್ನು ಕುರಿತು ವಿವೇಚನೆ ಆಗಬೇಕಿದೆ ; ಸಾಹಿತ್ಯ ಕೃತಿಗಳ ತನಿಯಾದ ಅಧ್ಯಯನ ನಡೆದಿರುವಂತೆ ಜೈನ ಹಾಗೂ ವೀರಶೈವ ಸಿದ್ಧಾಂತ ಕೃತಿಗಳ ಮೇಲೆ ಬಂದಿರುವ ಟೀಕೆ, ವ್ಯಾಖ್ಯಾನಗಳ ಪ್ರಕಟಣೆ ಪರಿಶೀಲನೆಯಾಗಬೇಕಿದೆ ; ಕಾಮಶಾಸ್ತ್ರ, ವೃಕ್ಷಶಾಸ್ತ್ರ, ಗಣಿತಶಾಸ್ತ್ರವೇ ಮುಂತಾದ ಕೃತಿಗಳನ್ನು ಕುರಿತೂ ವಿಶ್ಲೇಷಣೆ ನಡೆಯಬೇಕಿದೆ. ಒಡೆಯರ ಕಾಲದ ಸಾಹಿತ್ಯವಂತೂ ಇನ್ನೂ ಹಿಡಿತಕ್ಕೆ ಸಿಕ್ಕಿಲ್ಲ ; ಪಂಥ, ಚಳುವಳಿಗಳನ್ನವಲಂಬಿಸಿ ಅಧ್ಯಯನಗಳಾಗಿರುವಂತೆ ಸಾಹಿತ್ಯಿಕ ಧೋರಣೆಗಳನ್ನು ಕುರಿತೂ ಅಧ್ಯಯನ ಆಗಬೇಕಿದೆ ;

ಸಂಶೋಧನಶಾಸ್ತ್ರ, ಶಬ್ದಾರ್ಥ ಚರ್ಚೆ. ಕೋಶ-ನಿಘಂಟು. ಗ್ರಂಥ ಸಂಪಾದನೆ ಇವಕ್ಕೆ ಸಂಬಂಧಿಸಿದವನ್ನು ಕಡೆಯದಾಗಿ ಇಲ್ಲಿ ಪರಿಶೀಲಿಸಬಹುದಾಗಿದೆ. ಚಿದಾನಂದ ಮೂರ್ತಿ ಮತ್ತು ಹೊಸ್ಕೆರೆ ಶಿವಸ್ವಾಮಿ ಈ ಇಬ್ಬರು ಮಾತ್ರವೇ ಸಂಶೋಧನ ಕ್ರಮಗಳನ್ನು ಕುರಿತು ಪುಸ್ತಕ ಪ್ರಕಟಿಸಿರುವುದು. ಸಂಶೋಧಕರಾಗಬಯಸುವವರಿಗೆ ಮೂರ್ತಿಗಳ ಸಂಶೋಧನೆ ಒಂದು ಅತ್ಯುತ್ತಮ ಕೈಪಿಡಿ. ಇಲ್ಲಿಯ ಸಾಮಗ್ರಿ ಸಾಕಲ್ಯ, ನಿರೂಪಣಾವಿಧಾನ ಮೇಲ್ಮಟ್ಟದವಾಗಿವೆ. ಹೊಸ್ಕೆರೆಯವರ ಸಂಶೋಧನ ಶಾಸ್ತ್ರ ಎಂಬ ಈಚೀನ ಕೃತಿ ತಮಗಿಂತ ಹಿಂದಿನ ಹಲವರ ಬರೆಹ ಗಳನ್ನವಲಂಬಿಸಿ ರಚಿತವಾಗಿದೆ. ಒಂದು ಲೇಖನವಾಗಬಹುದಾಗಿದ್ದ ವಸ್ತುವನ್ನು, ಒಂದು ಪುಸ್ತಕಕ್ಕೆ ಹರಡಿ ಲೇಖಕರು ನಿರೂಪಣೆಯನ್ನು ಜಾಳಾಗಿಸಿದ್ದಾರೆ. ಅವರು ಹೇಳಿರುವ ತತ್ತ್ವಗಳನ್ನು ಅವರೇ ಪಾಲಿಸದಿರುವುದು ಇಲ್ಲಿಯ ವಿಲಕ್ಷಣತೆ.

ಶಬ್ದಾರ್ಥ ವಿಷಯಗಳ ಚರ್ಚೆ ಬಂದ ಕೂಡಲೇ ನೆನಪಿಗೆ ಬರುವುದು ಡಿ. ಎಲ್. ನರಸಿಂಹಾಚಾರ್ಯರ ಹೆಸರು. ಅವರ "ಶಬ್ದವಿಹಾರ" ಅಚ್ಚಾದುದು 1956ರಲ್ಲಿ. ಪೊರಸು, ಅಗ್ರಹಾರ, ಕಾಳಸೆ, ಡಂಗ, ರಪಣ ಮುಂತಾದ ಶಬ್ದಗಳ ನಿಷ್ಪತ್ತಿ ಮತ್ತು ಅರ್ಥಗಳನ್ನು ಅವರು ಸೋಪಪತ್ತಿಕವಾಗಿ ಅಲ್ಲಿ ಪ್ರತಿಪಾದಿಸಿದ್ದಾರೆ. ಅವರ ಇಂಥ ಬರವಣಿಗೆಗಳನ್ನು ಓದಿದಾಗಲೇ ಕನ್ನಡ ಭಾಷೆ ಮತ್ತು ಶಬ್ದಕೋಶಗಳ ಬಗ್ಗೆ ಅವರಿಗಿದ್ದ ತಲಸ್ಪರ್ಶಿ ಪಾಂಡಿತ್ಯದ ಅರಿವಾಗುವುದು. ಪಟಿಂಗಾಸು, ಗುಯ್ಯಲ್, ಮೇಕು, ಈಟಿಲ್, ತಕ್ಕೂರ್ವರ್ಮ ಮುಂತಾದ ಇತರ ಶಬ್ದಗಳನ್ನೊಳಕೊಂಡಂಥ ಅವರ ಈ ಬಗೆಯ ಚರ್ಚೆಯ ಹಲವಾರು ಲೇಖನಗಳು ಅವರು 'ಪೀಠಿಕೆಗಳು ಲೇಖನಗಳು' ಬೃಹತ್ಸಂಪುಟದಲ್ಲಿ ಸೇರಿವೆ. ಸಬ್ಬಂಗ, ಕೇಳಿಕೆ, ಗುಬ್ಬಚ್ಚಿ, ಅಮ್ಮ ಅಪ್ಪೆ, ಅಲ್ಲಮ, ಬಾದುಬ್ಬೆ ಕೊಟ್ಟಣ ಹಾಕಿಸು-ಮುಂತಾದ ಶಬ್ದಗಳನ್ನು ಕುರಿತು ಬೇರೆಬೇರೆ ಸಂದರ್ಭಗಳಲ್ಲಿ ಬರೆದ ಚಿದಾನಂದಮೂರ್ತಿಯವರ ಲೇಖನಗಳು ಅವರ ಸಂಶೋಧನ ತರಂಗ ಸಂಪುಟಗಳಲ್ಲಿ ಸೇರಿವೆ. ಇವು ಮೌಲಿಕವಾದ ಬರಹಗಳು. ಕುಂದಕುಂದ, ಚಕ್ಕಣ, ತೆ ಅವ್ಯಯ ಹಾಗೂ ಹಲ್ಮಿಡಿ, ಬಾದಾಮಿ ಮತ್ತು ಕುಕ್ಕನೂರು ಶಾಸನಗಳ ಶಬ್ದಾರ್ಥ ವಿವೇಚನೆಯನ್ನು ಟಿ. ವಿ. ವೆಂಕಟಾಚಲಶಾಸ್ತ್ರಿಯವರು ಸಾಧಾರಪೂರ್ವಕ ವಾಗಿ ನಡೆಸಿದ್ದು ಅವು ಅವರ "ಶಬ್ದಾರ್ಥ ವಿಹಾರ" ಸಂಪುಟದಲ್ಲಿ ಸೇರಿವೆ. ಹಂಪ. ನಾಗರಾಜಯ್ಯ ಅವರ ಕಮ್ಮಟದ ಕಿಡಿಗಳು ಪುಸ್ತಕದಲ್ಲಿ ಅತ್ತಪರ, ಎಸಗು, ಕುರುಂಬು, ಕೀರ್ತಿ, ಕೂಚಿಭಟ್ಟ, ಡೊಕ್ಕರಿ, ದಾಹೋತ್ತರ, ಬಿಚ್ಚಟಿಸು, ಬೂತು ಎಂಬ ಇಂಥವೇ ಅನೇಕ ಶಬ್ದಗಳ ಅರ್ಥ ನಿಷ್ಪತ್ತಿಗಳ ವಿಶ್ಲೇಷಣಾ ಪ್ರಯತ್ನಗಳಿವೆ. ಇವುಗಳಲ್ಲಿ ಕೆಲವನ್ನು ಒಪ್ಪಬಹುದು ; ಹಲವನ್ನು ಒಪ್ಪಲಾಗುವುದಿಲ್ಲ. ಸಿ.ಪಿ.ಕೆ. ಅವರ 'ಶೋಧನ' ಪುಸ್ತಕದಲ್ಲಿಯೂ ಇಂಥ ಕೆಲವು ಟಿಪ್ಪಣಿಗಳಿವೆ. 'ಪ್ರಬುದ್ಧ ಕರ್ನಾಟಕ'ದ ಕಮ್ಮಟದ ಕಿಡಿಗಳು ವಿಭಾಗ, 'ಕರ್ನಾಟಕ ಭಾರತಿ'ಯ ಒರೆಗಲ್ಲು ವಿಭಾಗ, 'ಸಾಧನೆ'ಯ ಮಂಥನ ವಿಭಾಗ ಇವಕ್ಕೆ ಮೀಸಲಾಗಿದ್ದು ಈಚೆಗೆ ಇದರಲ್ಲಿ ಆಸಕ್ತಿ ತೋರುತ್ತಿರುವವರ ಸಂಖ್ಯೆ ಹೆಚ್ಚಿರುವುದು ಸಮಾಧಾನದ ಮಾತು. ಇಂಥ ಬರೆಹಗಳು ಅನೇಕ ಸಂಕೀರ್ಣ ಸಂಕಲನಗಳಲ್ಲಿ ಸೇರಿರುವುದೂ ಉಂಟು.

ನಿಘಂಟುಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ-ಕನ್ನಡ ನಿಘಂಟಿ'ನ ಬೃಹತ್ಸಂಪುಟಗಳು ಹೊರಬರುತ್ತಿದ್ದು ಅವು ನಮ್ಮ ಭಾಷೆಯ ಮೂಲವೂ ಮಹತ್ತ್ವಪೂರ್ಣವೂ ಆದ ಆಕರಗಳಾಗಿ ನಿಲ್ಲುತ್ತವೆ. ಇದರ ಸಂಕ್ಷಿಪ್ತ ಆವೃತ್ತಿಗಳೂ ಹೊರಬಂದಿರುವುದುಂಟು. ಇದಕ್ಕಿಂತ ಹೆಚ್ಚಾಗಿ ಎಲ್. ಗುಂಡಪ್ಪನವರ 'ಪತ್ರಿಕಾ ನಿಘಂಟು' ಟಿ. ವಿ. ವೆಂಕಟಾಚಲಶಾಸ್ತ್ರಿಗಳ 'ಶ್ರೀವತ್ಸ ನಿಘಂಟು', ಮಲ್ಲಿಕಾರ್ಜುನಪ್ಪನವರ 'ಸಸ್ಯಗಳ ನಿಘಂಟು' ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಮಹತ್ವಪೂರ್ಣ ನಿಘಂಟುಗಳಾಗಿವೆ. ಪುರಾಣ ಪ್ರಪಂಚದ ವ್ಯಕ್ತಿಗಳನ್ನು ಕುರಿತು ರಚಿತವಾಗಿರುವ ಯಜ್ಞನಾರಾಯಣ ಉಡುಪರ 'ಪುರಾಣಭಾರತ ಕೋಶ', ಶಾಮರಾಯರ 'ಶಿವಶರಣ ಕಥಾರತ್ನಕೋಶ' ತುಂಬ ಉಪಯುಕ್ತ ಕೃತಿಗಳಾಗಿವೆ. ಶಾಮರಾಯರು ಮತ್ತು ನಾಗರಾಜಯ್ಯನವರು ಸೇರಿ ಪ್ರಕಟಿಸಿರುವ ಜೈನಧರ್ಮ ಪರಿಭಾಷೆಗೆ ಸಂಬಂಧಿಸಿದ ಕೋಶ ತೀರ ಈಚೆಗೆ ಪರಿಷತ್ತಿನಿಂದ ಅಚ್ಚಾಗಿದೆ; ಶಿವರುದ್ರಪ್ಪ ಮತ್ತು ಕೆ. ವಿ. ನಾರಾಯಣ ಅವರು ಸೇರಿ ಪ್ರಕಟಿಸಿರುವ 'ಕಾವ್ಯಾರ್ಥ ಪದಕೋಶ'ವೂ ಹೊಸ ಬಗೆಯ ಪ್ರಯತ್ನವಾಗಿದ್ದು ನಮ್ಮ ಆಕರ ಸಂಪತ್ತನ್ನು ಹೆಚ್ಚಿಸಲು ಕಾರಣವಾಗಿದೆ. ಎನ್ಕೆ ಅವರ 'ಕುಮಾರವ್ಯಾಸ ಭಾರತ ನಿಘಂಟು', ಹೊಳ್ಳರ 'ಸಂಸ್ಕೃತ ತದ್ಭವ ಕೋಶ' ಇವೇ ಮುಂತಾದುವೂ ಈ ಸಾಲಿಗೇ ಸೇರುವಂಥವು.

ಗ್ರಂಥ ಸಂಪಾದನೆಯ ಕ್ಷೇತ್ರ ಈಚೆಗೆ ಆಕರ್ಷಕ ಕ್ಷೇತ್ರಗಳಲ್ಲಿ ಒಂದಾಗಿದೆ. 62ರಲ್ಲಿ ಪ್ರಕಟವಾದ ಡಿ. ಎಲ್. ನರಸಿಂಹಾಚಾರ್ಯರ 'ಗ್ರಂಥ ಸಂಪಾದನೆ' ಕನ್ನಡದಲ್ಲಷ್ಟೇ ಅಲ್ಲದೆ ಭಾರತೀಯ ಭಾಷೆಗಳಲ್ಲಿಯೇ ಅತ್ಯುತ್ತಮ ಕೃತಿ ಎಂಬ ಕೀರ್ತಿಗೆ ಪಾತ್ರವಾಗಿದೆ. ತರುವಾಯ ಬಂದ ಎಂ. ಎಂ. ಕಲಬುರ್ಗಿಯವರ 'ಕನ್ನಡ ಗ್ರಂಥ ಸಂಪಾದನಾಶಾಸ್ತ್ರ', ಸೀತಾರಾಮಜಾಗೀರದಾರರ 'ಗ್ರಂಥಸಂಪಾದನಾಶಾಸ್ತ್ರ ಪರಿಚಯ' ಹೊಸ ಉದಾಹರಣೆಗೆಗಳನ್ನು, ಸಾಮಗ್ರಿಗಳನ್ನು ಒಳಗೊಂಡಿದ್ದರೂ ನರಸಿಂಹಾಚಾರ್ಯರ ಹಾದಿ ಮತ್ತು ಕೃತಿಗಳನ್ನು ಪ್ರಮುಖವಾಗಿ ಆಧರಿಸಿರುವುದು ಸ್ಪಷ್ಟವಾದ ಸಂಗತಿ. ಲಕ್ಷ್ಮೀನಾರಾಯಣಭಟ್ಟರ 'ಭಾರತೀಯ ಗ್ರಂಥ ಸಂಪಾದನ ಪರಿಚಯ' ಕತ್ರೆಯವರ ಅನುವಾದ. ಈ ದಿಕ್ಕಿನಲ್ಲಿ ಬಂದಿರುವ ಸಣ್ಣಯ್ಯನವರ 'ಗ್ರಂಥ ಸಂರಕ್ಷಣೆ' 'ದೇವೀರಪ್ಪನವರ' 'ಕನ್ನಡ ಹಸ್ತಪ್ರತಿಗಳ ಇತಿಹಾಸ', ಕಲಬುರ್ಗಿಯವರ 'ಸಾಹಿತ್ಯ ಸಂಪಾದನೆ' ಹೊಸಮುಖದ ವಿವೇಚನೆಗಳು. ಹಸ್ತಪ್ರತಿಶಾಸ್ತ್ರದ ಬೇರೆ ಬೇರೆ ಮುಖಗಳಿಗೆ ಸಂಬಂಧಿಸಿದಂತೆ ನಮ್ಮಲ್ಲಿ ಆಗಬೇಕಾಗಿರುವ ಕೆಲಸ ಇನ್ನೂ ಇದೆ. ಪ್ರಾಚೀನ ಕಾವ್ಯಪದ್ಯಗಳ, ವಚನಗಳ, ಕೀರ್ತನೆಗಳ, ಪಠ್ಯಭಾಗಗಳ ಪರಿಷ್ಕರಣ ವಿಚಾರ ಕುರಿತು ಪ್ರಕಟವಾಗಿರುವ ಲೇಖನಗಳು ಹಲವು ಸಂಖ್ಯೆಯಲ್ಲಿವೆ. 'ಪಂಪ ಭಾರತ'ದಂಥ ಒಂದು ಸಮಗ್ರಕೃತಿಯ ಪಾಠಾಂತರಗಳನ್ನು ಕುರಿತು ಹೇಮಲತಾ ಪದಕಿಯವರು ಲೇಖನಮಾಲೆ ಬರೆದಂತೆ, ಇತರ ಕೃತಿಗಳ ಬಗ್ಗೆಯೂ ಬರಬೇಕಿದೆ. ಪರಿಷ್ಕರಣ ವಿಚಾರದ ಲೇಖನಗಳು ಸಂಕೀರ್ಣ ಲೇಖನಗಳು ಸಂಕಲನಗಳಲ್ಲಿ ಸೇರಿ ಹೋಗಿರುವ ಸಂದರ್ಭಗಳೇ ಹೆಚ್ಚು. ಡಿ. ಎಲ್. ನರಸಿಂಹಾಚಾರ್ಯರು ತಮ್ಮ

'ಪೀಠಿಕೆಗಳು ಲೇಖನಗಳು' ಕೃತಿಯಲ್ಲಿ ಟಿ. ವಿ. ವೆಂಕಟಾಚಲಶಾಸ್ತ್ರಿಗಳು ತಮ್ಮ 'ಶಬ್ದಾರ್ಥ ವಿಹಾರ'ದಲ್ಲಿ, ಅವನ್ನು ಒಂದುಗೂಡಿಸಿ ಪ್ರಕಟಿಸಿರುವಂತೆ ವಿದ್ವಾಂಸರು ತಮ್ಮ ಲೇಖನಗಳನ್ನು ಒಂದೆಡೆ ಸೇರಿಸಿ ಪ್ರಕಟಿಸಿದರೆ ಆಸಕ್ತರಿಗೆ ಗಮನಿಸಲು ಅನುಕೂಲವಾಗುತ್ತದೆ.

56 ರಿಂದ 81ರ ವರೆಗಿನ ಇಪ್ಪತ್ತೈದು ವರ್ಷಗಳ ಸಂಶೋಧನ ಕ್ಷೇತ್ರದ ಬೆಳೆಸು ಹುಲುಸಾಗಿದೆ ಎಂಬುದು ದಿಟ : ಆದರೆ ಅದು ಇನ್ನೂ ವಿಪುಲವಾಗಲು ಅವಕಾಶವಿತ್ತು ಎಂಬುದೂ ಅಷ್ಟೇ ದಿಟ. ಅರೆಕೊರೆಗಳಿರುವುದಿದ್ದರೂ ಇಲ್ಲಿ ಆಗಿರುವ ಪ್ರಯತ್ನಗಳು ಒಟ್ಟಾರೆ ವೈವಿಧ್ಯಪೂರ್ಣವೂ ಶ್ರದ್ಧೆ ಪ್ರಾಮಾಣಿಕತೆಗಳನ್ನೊಳಗೊಂಡಂಥವೂ ಮಹತ್ವಾಕಾಂಕ್ಷೆಯುಳ್ಳವೂ ಆಗಿ ಆಗಿರುವುದುಂಟು ಅವು ನಿರಾಶೆಯುನ್ನುಂಟು ಮಾಡುವಂಥವೇನೂ ಅಲ್ಲ. ವ್ಯಕ್ತಿ ಪ್ರಯತ್ನಗಳಂತೆ ಸಾಂಸ್ಥಿಕ ಪ್ರಯತ್ನಗಳೂ ಈ ದಿಕ್ಕಿನಲ್ಲಿ ಆಗುತ್ತಿರುವುದು ಶುಭಸೂಚನೆಯಾಗಿದೆ. ಆದರೆ ಆಗಬೇಕಾಗಿರುವ ಕೆಲಸವನ್ನು ಹೊರೆಯತ್ತ ಕಣ್ಣುಹಾಯಿಸಿದಾಗ ಆಗಿರುವುದು ಏನೇನೂ ಸಾಲದೆನಿಸುತ್ತದೆ. ಈ ಸಂಶೋಧನೆಯ ಬೇರೆ ಬೇರೆ ಶಾಖೆಗಳಲ್ಲಿ ಕೆಲಸ ಮಾಡುತ್ತಿರುವ ವಿದ್ವಾಂಸರಾದರೂ ಸಮಾನವಾಗಿ ಕೆಲವರೇ ಎಂಬುದನ್ನು ಗಮನಿಸಿದಾಗ ಈ ಕ್ಷೇತ್ರದಲ್ಲಿ ದುಡಿಯುತ್ತಿರುವ ಮಂದಿ ಕಡಿಮೆಯೆಂಬುದು ಸ್ಪಷ್ಟವಾಗಿ, ಅದು ವ್ಯಸನವನ್ನುಂಟುಮಾಡುತ್ತದೆ. ಹತ್ತು ಕೈಗಳಿರುವ ಕಡೆ, ನೂರುಕೈಗಳು ಬರಬೇಕು. ನೂರು ವರ್ಷಗಳಲ್ಲಾಗುವ ಕೆಲಸ, ಹತ್ತು ವರ್ಷಗಳಲ್ಲಾಗಬೇಕು. ಆಗ ಪ್ರಗತಿ ಮತ್ತು ನೆಮ್ಮದಿಗಳೆರಡೂ ಏಕಕಾಲದಲ್ಲಿ ಉಂಟಾದೀತು.

ಕನ್ನಡ ರಂಗಭೂಮಿ

ಕ. ವೆಂ. ರಾಜಗೋಪಾಲ

ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಶ್ರೀರಂಗರನ್ನು ಬಿಟ್ಟರೆ ಸಮರ್ಥ ನಾಟಕಕಾರರು ಬೇರೆ ಇರಲಿಲ್ಲ. ಅವರೂ ಧಾರವಾಡದಿಂದ ಬೆಂಗಳೂರಿಗೆ ಬಂದು ನೆಲೆಸಿದರು. ಏಕೆಂದರೆ ಈ ರಾಜಧಾನಿಯು ನಮ್ಮ ಸಾಂಸ್ಕೃತಿಕ ಕೇಂದ್ರವಾಗಿದ್ದಿತು. ಆಗ್ಗೆ ಪರ್ವತವಾಣಿ, ಎ. ಎಸ್. ಮೂರ್ತಿ, ದಾಶರಥಿ ದೀಕ್ಷಿತ್ ಮುಖ್ಯವಾಗಿ ರಂಗ ಚಟುವಟಿಕೆಯಲ್ಲಿದ್ದರು. (ಈಗಲೂ ಇದ್ದಾರೆ. ಆದರೆ ಅಂದಿನ ರೀತಿ ಪೂರ್ಣ ಬದಲಾಗಿದೆ.) ಒಂದೆರಡು ಹವ್ಯಾಸಿ ಸಂಸ್ಥೆಗಳು ಇದ್ದುವು. ಅಂದಿನ ನಾಟಕಗಳೆಂದರೆ (ಶ್ರೀರಂಗರನ್ನು ಬಿಟ್ಟರೆ) ಕೈಲಾಸಂ ಬಿಟ್ಟುಹೋದ ಕೃತಿಗಳು ಮತ್ತು ಮುಖ್ಯವಾಗಿ ಪರ್ವತವಾಣಿ ರೂಪಾಂತರಿಸಿದ್ದ ಪಾಶ್ಚಾತ್ಯನಾಟಕಗಳು. 'ಬಹದ್ದೂರ್ ಗಂಡು' (ಷೇಕ್ಸ್‌ಪಿಯರ್‌ನ ಟೇಮಿಂಗ್ ಆಫ್ ದಿ ಷ್ರ್ಯೂ) ನಾಟಕವು ಕನ್ನಡ ರಂಗಭೂಮಿಯಲ್ಲಿ ಆಯ್ಕೆಯಾದ ನಾಟಕವಾಗಿ ದೆಹಲಿಯ ನಾಟಕೋತ್ಸವದಲ್ಲಿ ಪ್ರದರ್ಶಿತವಾಗಿತ್ತು. ಧಾರವಾಡದಲ್ಲಿ ಗರೂಡ ಸದಾಶಿವರಾಯರು ತಮ್ಮ 'ಉಗ್ರಕಲ್ಯಾಣ' ನಾಟಕವನ್ನೂ ಹೀಗೆಯೇ ಕಳುಹಿಸಿದ್ದರು (ಅದು ಕೂಡ ಗುಜರಾತಿಯ ಮೂಲದ ಕೃತಿಯೆಂದು ಅನ್ನಿಸಿಕೊಂಡದ್ದುಂಟು). ಆಗ್ಗೆ ಶ್ರೀರಂಗರ ನಾಟಕಗಳಷ್ಟೇ ಸ್ವತಂತ್ರ ಕೃತಿಗಳೆಂದು ಆಗಿದ್ದಿತು.

ಆಗ ಕನ್ನಡ ರಂಗಭೂಮಿಯೆಂದರೆ ಶಾಲಾಕಾಲೇಜುಗಳಲ್ಲಿನ ಕೆಲವು ವಿಶೇಷ ಸಂದರ್ಭಗಳಲ್ಲಿ ಆಡುತ್ತಿದ್ದ ಮನರಂಜನಾ ಕಾರ್ಯಕ್ರಮದ ಅಂಗವಾಗಿದ್ದ ಕೃತಿಗಳಷ್ಟೇ. ಇದನ್ನು ಮೊದಲು ಮೀರಿದವರು ಶ್ರೀರಂಗ. ಕೈಲಾಸಂ ಕೃತಿಗಳು ಕೂಡ ಹಗುರವಾಗಿ ಮನರಂಜನೆಗಾಗಿ ನಿರ್ಮಿತವಾದಂತಿದ್ದುವು. ಆದುದರಿಂದ ನಾಟಕಗಳಿಗೆ ಅರ್ಥಭೂತವಾದ ರಂಗಭೂಮಿಯೊಂದು ರೂಪತಾಳಿರಲಿಲ್ಲ. ಬೆಂಗಳೂರಿನಲ್ಲೂ ಹೇಳುವುದಕ್ಕೆ ಎರಡು ಮೂರು ಹವ್ಯಾಸಿ ಸಂಸ್ಥೆಗಳು (ರವಿ ಕಲಾವಿದರು, ಕಲಾಜ್ಯೋತಿ ಕಲಾವಿದರು ಮತ್ತು ಛಾಯಾ ಕಲಾವಿದರು) ಮಾತ್ರ ತಮ್ಮ ಪ್ರಯೋಗಗಳಿಂದ ಮೆಚ್ಚಿಕೆಯನ್ನು ಬಿಟ್ಟು ಬೇರೇನನ್ನೂ ಬಯಸದೆ ಕಲಾವಿದರೇ ಖರ್ಚುಮಾಡಿಕೊಂಡು ತೋರುತ್ತಿದ್ದ ಕಲಾಭಿಮಾನಿಗಳಾಗಿದ್ದರು.

ಇಂಥ ಪರಿಸ್ಥಿತಿಯಲ್ಲಿ ಶ್ರೀರಂಗರು ಬೆಂಗಳೂರಿಗೆ ಬಂದು ನೆಲಸಿದರು. ಅವರ ಕೃತಿಗಳು ಆಗಲೇ ಪ್ರಸಿದ್ಧವಾಗಿದ್ದ ಕಾರಣ ಕಲಾವಿದರಿಗೆ ಭಾಷೆಯ ಸ್ವರೂಪದಿಂದ ಕಠಿಣವಾಗಿಯೇ ಇದ್ದುವು. (ಏಕೆಂದರೆ ಅವರ ನಾಟಕಗಳು ಧಾರವಾಡದ 'ಮಾತಿನ'

ರೂಪದಲ್ಲಿದ್ದುವು. ಅವರ ಉಚ್ಚಾರಕ್ರಮವೇ ಒಂದು ತೊಡಕಾಗಿತ್ತು) ಆದರೂ ಪ್ರಯತ್ನ ಮಾಡತೊಡಗಿದರು. ಶ್ರೀರಂಗರು ನಮ್ಮ ರಂಗಭೂಮಿಯ ಪರಿಸ್ಥಿತಿಯನ್ನು ಸುಧಾರಿಸುವ ಛಲ ಹಿಡಿದುದರಿಂದ ಶಿಕ್ಷಕರ ಬೇಸಿಗೆ ಶಿಬಿರಗಳಾದುವು. ಸರ್ಕಾರವು ನಾಟಕವನ್ನು ಒಂದು 'ಕ್ರಾಫ್ಟ್' (ಕಲಿಯಬೇಕಾದುದು) ಎಂಬರ್ಥದಲ್ಲಿ ಒಪ್ಪಿಕೊಂಡಿತು. ಅಲ್ಲದೆ ಅವರು ನಮ್ಮ ರಂಗಭೂಮಿಯ ಪರಿಸ್ಥಿತಿಯನ್ನು ಸುಧಾರಿಸಲು ಶಾಲಾ ಕಾಲೇಜುಗಳಲ್ಲಿ ಎಚ್ಚರಿಕೆಯುಂಟಾಗದೇ ಸಾಧ್ಯವಿಲ್ಲವೆಂದು ಅರಿತು ಸ್ಪರ್ಧೆಗಳನ್ನು ನಡೆಸಲು ಉತ್ತೇಜನ ನೀಡಿದರು. ದೆಹಲಿಯಲ್ಲಿದ್ದ ಎನ್.ಎಸ್.ಡಿ.ಗೆ ವಿದ್ಯಾರ್ಥಿಗಳನ್ನು ಆಯ್ದು ಕಳುಹುವ ಯತ್ನ ಮಾಡಿದರು. ಇಲ್ಲಿಯೇ ನಾಟ್ಯಸಂಘ, ಥಿಯೇಟರ್ ಸೆಂಟರ್‌ನ್ನು ಸ್ಥಾಪಿಸಿ ಬೆಳೆಸಲು ತೊಡಗಿದರು. (ಇದಕ್ಕೆ ಇಲ್ಲಿಯ ಅನೇಕ ಕಲಾವಿದರು ನೆರವಾದರು).

ಇಂಥ ಜಾಗೃತಿಗೆ ಬೆಂಬಲವಾದಂತೆ ಪರದೇಶಗಳಿಂದ ನಾಟಕ ಸಂಸ್ಥೆಗಳು ಬಂದು ತಮ್ಮ ಪ್ರದರ್ಶನಗಳನ್ನು ನೀಡತೊಡಗಿದರು. ಸುಮಾರು 1960ರ ವೇಳೆಗೇ ಅಮೇರಿಕದ ಒಂದು ವಿದ್ವಾಂಸರು ತಂಡವು ಬಂದು **The Sun rise at Compabells** ಎಂಬ ದಿ॥ ರೂಸ್‌ವೆಲ್ಟರ್ ಜೀವನವನ್ನು ಕುರಿತ ಒಂದು ನಾಟಕವನ್ನು ಅಭಿನಯಿಸಲು ಕೊನೆಗೆ ಬಾಲ್ಡ್‌ವಿನ್ ಸ್ಕೂಲಿನ ರಂಗಮಂಟಪವನ್ನು ಆಯ್ದುದನ್ನು ನೆನೆಯಬೇಕು. ಹೀಗೆಯೇ ಮತ್ತೊಂದು ಸಂಸ್ಥೆ ನಮ್ಮ ಟೌನ್ ಹಾಲ್‌ನಲ್ಲಿ 'ಈಡಿಪಸ್ ದೊರೆ' ಮತ್ತು 'ಬೆಕೆಟ್' (ಟಿ. ಎಸ್. ಎಲಿಯಟ್ ಕೃತಿ) ನಾಟಕಗಳಿಂದ ಮುಖ್ಯ ಭಾಗಗಳನ್ನು ಅಭಿನಯಿಸಿದಾಗ ಮೊದಲಬಾರಿಗೆ 'ಸೈಕ್ಲೋ ರಾಮಾ'ದ ಪರದೆಯನ್ನು ಕಂಡೆವು. ಹೆರಾಲ್ಡ್ ಲ್ಯಾಂಗ್ ಎಂಬ ಸುಪ್ರಸಿದ್ಧ ಇಂಗ್ಲಿಷ್ ನಟ ಬಂದು ತೋರಿದ ರಂಗಭೂಮಿಯ ಜಾಣ್ಮೆಗಳು......ಜೊತೆಗೆ ಬೆಂಗಳೂರಿನಲ್ಲಿ ಎರವಲಾಗಿ ಬಂದಿದ್ದ ಟಾಡ್ ಅಂಥ ವಿದ್ವಾಂಸರು ನಾಟ್ಯಸಂಘದ ಬೆಂಬಲವಾಗಿ ಬಿ.ಎಲ್.ಟಿ.ಯನ್ನೂ ಸ್ಥಾಪಿಸಲು ಕಾರಣರಾದರು, ಇತ್ಯಾದಿ.,...ಒಟ್ಟಿನಲ್ಲಿ ಪರಕೀಯರು ರಂಗಭೂಮಿಯ ವಿಷಯದಲ್ಲಿರಿಸಿದ್ದ ಆಸ್ಥೆ ನಮ್ಮ ಪ್ರೇಕ್ಷಕರನ್ನು ನುಂಗಿಕೊಳ್ಳುತ್ತಿತ್ತು......ಇದರಿಂದ ಕನ್ನಡದಲ್ಲಿ ಹೊಸ ಬಗೆಯ ಪ್ರಯೋಗಗಳು ಮತ್ತು ನಾಟಕಗಳು ಒಡಮೂಡಲು ಸಾಧ್ಯವಾಯಿತು. ಪರಕೀಯರು ತಂದ ಸ್ಪಾಟುಲೈಟುಗಳು ಇಂದಿಗಂತೂ ನಮ್ಮ ರಂಗಭೂಮಿಯ ಒಂದು ಮುಖ್ಯ ಸಾಧನವಾಗಿವೆ. ಇಂಥ ಪ್ರಭಾವವನ್ನೆಲ್ಲಾ ಜೀರ್ಣಿಸಿಕೊಳ್ಳಬಲ್ಲ ಶಕ್ತಿ ಶ್ರೀರಂಗರಲ್ಲಿ ಇದ್ದುದರಿಂದ ಅವರ ರಚನೆಗಳೂ ಬೇರೆ ರೀತಿಯವಾದವು. ಅಂದಿನ ನಾಟಕಗಳಲ್ಲಿದ್ದ ಕೆಲವು ಸರಳ ವಿಷಯಗಳನ್ನು ನೆನೆದರೆ ಅವು ಬದಲಾಗಿದ್ದು ಕನ್ನಡ ರಂಗಭೂಮಿಯ ಏಳಿತಿಗೆನ್ನಿಸಬಹುದು.

1. ನಾಟಕದಲ್ಲಿ ಅಭಿನಯಿಸುವುದಕ್ಕೆ ಸಮಾಜವಿನ್ನೂ ಸಮ್ಮತಿಯನ್ನು ನೀಡಿರಲಿಲ್ಲ. ಆದುದರಿಂದ ಸ್ತ್ರೀ ಪಾತ್ರಗಳನ್ನು ಪುರುಷರೇ ಮಾಡಬೇಕಾಗಿತ್ತು.

2. ದೃಶ್ಯಗಳಲ್ಲಿ ಒಂದು ಬೀದಿಯದಾದರೆ ನಂತರದ್ದು ಮನೆಯೊಳಗಿನದ್ದು, ನಿಜವಾದ ಘಟನೆಯು ಮನೆಯಲ್ಲೇ ಜರುಗುವುದಿತ್ತು. ನಾಟಕದ ವಸ್ತುವಿನಲ್ಲಿ ತರುಣರ ಪ್ರಣಯವು ಒಂದು ಅನಿವಾರ್ಯ ವಿಷಯವೆಂಬಂತೆ ಸೇರಿರುತ್ತಿತ್ತು. ಆದುದರಿಂದ ನಾಟಕದಲ್ಲಿ ಘರ್ಷಣೆಯು. ಸಾಂಪ್ರದಾಯಿಕವಾದ ಮತ್ತು ಅದಕ್ಕೆ ಸುಧಾರಣೆಯನ್ನು ಸೂಚಿಸುವ ಎರಡು ಸ್ತರಗಳ ನಡುವೆಯಾಗುತ್ತಿತ್ತು. ಇದಕ್ಕಾಗಿ "ಪುರೋಹಿತನ" ಪಿಳ್ಳುಜುಟ್ಟು ಹಾಸ್ಯದ ಒಂದು ಅನಿವಾರ್ಯವಾಗಿತ್ತು. ಎ. ಎನ್. ಮೂರ್ತಿರಾಯರ 'ಆಷಾಢಭೂತಿ' ಒಂದು (ಮೋಲಿಯರನ ರೂಪಾಂತರ) ಸುಪ್ರಸಿದ್ಧ ಕೃತಿಯಾಗಲು ಅಲ್ಲಿಯ ಸುಬ್ಬಾಶಾಸ್ತ್ರಿ (ಕೆ.ಡಿ.) ಕಾರಣ. ಬಹದ್ದೂರ್‌ಗಂಡ ಒಂದು ಜನಪ್ರಿಯ ಕೃತಿಯಾಗಲು ಗಂಡಿನ ಪರಾಕ್ರಮ ಮತ್ತು ಪುರೋಹಿತನ ಗೇಲಿ ಕಾರಣಗಳೆನ್ನಬಹುದು. ಆದರೆ ಇವು ಅಂದಿನ ಕಲಿತ ಜನ ಬಯಸಿದ್ದ ಸುಧಾರಣೆಗಳು. ಆದುದರಿಂದಲೆ ಹವ್ಯಾಸಿ ನಾಟಕಗಳಿಗೆ ಒಂದು ನಿಲುವು ಸಾಧ್ಯವಾಯಿತು. ಅವು ಮೂಲತಃ ಪರಕೀಯವಾದರೂ 'ಸುಧಾರಣೆ'ಯ ಅಂಶದಿಂದ ಬೇಕಾಗಿದ್ದುವು. ಕೈಲಾಸಂ ನಾಟಕಗಳಲ್ಲಿಯೂ ಈ ಸುಧಾರಣೆಯ ವಿಷಯವು ಮುಖ್ಯ ಅಂಶವಾಗಿಯೇ ಇದ್ದುದುಂಟು. ಉದಾ. ಹೋಂರೂಲು. ಬಂಡ್ವಾಳ್ವಿಲ್ಲದ ಬಡಾಯಿ. ಸೂಳೆ. ಏಕಲವ್ಯ, ಹುತ್ತದಲ್ಲಿಹುತ್ತ: ಶ್ರೀರಂಗರ ಹರಿಜನ್ವಾರ. ವೈದ್ಯರಾಜ ಮೊದಲಾದ ಕೃತಿಗಳಲ್ಲೂ ಸುಧಾರಣೆಯ ಅಂಶ ಸೇರಿಕೊಂಡಿತ್ತು. ಆದರೆ ಅವರ ಕೃತಿಗಳು ಕೇವಲ ಮನರಂಜನೆಗೆ ಮತ್ತು ಹಗುರವಾದ ಪ್ರಯೋಗಗಳಿಗೆ ಸುಗ್ಗುವಂಥವಾಗಿರಲಿಲ್ಲ. ಅವುಗಳ ರಚನೆಯಲ್ಲಿ ದೊಡ್ಡ ರಂಗಮಂಟಪ ಮತ್ತು ಸೆಟ್ಸ್ ಅವಶ್ಯವಾಗಿದ್ದುವು. ಚನ್ನಾಗಿ ಅಭ್ಯಾಸ ಮಾಡಿದಲ್ಲದೆ ಪ್ರಯೋಗವು ಯಶಸ್ವಿಯಾಗುತ್ತಿರಲಿಲ್ಲ. ವಿಷಯದಲ್ಲೂ ಅವರದು ಒಂದು ಹಿರಿಮೆಯೇ ಆಗಿದ್ದು ವಿದ್ಯಾವಂತರು ವಿಚಾರಮಾಡುವಂತೆ ಇದ್ದುವು. ಅವರ ಪ್ರತಿಯೊಂದು ನಾಟಕವನ್ನೂ ಒಂದೊಂದು ವಿಷಯದ 'ಥಿಸಿಸ್' ಎಂದು ಹೇಳುವಂತೆ ಅವರವರ 2/3 ಭಾಗಕ್ಕೆ ಬಂದಾಗ ಒಬ್ಬ ನಾಯಕನ ಭಾಷಣವು ಸೇರಿಕೊಳ್ಳುತ್ತಿತ್ತು.................. ಅಂದರೆ ಶ್ರೀರಂಗರು ತಮ್ಮ ನಾಟಕಗಳಿಗೆ ತುಂಬ ದೊಡ್ಡ ಹದವನ್ನು ಜೋಡಿಸುತ್ತಿದ್ದರು. ಅವುಗಳ ಪ್ರಯೋಗದ ವಿಷಯದಲ್ಲಿ ನಿಷ್ಠುರವಾಗಿ ವರ್ತಿಸುತ್ತಿದ್ದರು. (ನಾಟಕವನ್ನು ಅಭ್ಯಾಸ ಮಾಡಿದ್ದರೂ ಯಾವುದೇ ಸಂಸ್ಥೆಯು ಅವರ ಒಪ್ಪಿಗೆಯಿಲ್ಲದೆ ಪ್ರದರ್ಶನ ಮಾಡಲು ಅವಕಾಶ ವಿರುತ್ತಿರಲಿಲ್ಲ). ಅವರ ಸೂಚನೆಗಳನ್ನು ಮೀರುವುದಕ್ಕಂತೂ ಅವರು ಒಪ್ಪುತ್ತಿರಲಿಲ್ಲ. ಅಂದರೆ ಅವರದೇ ನಿರ್ದೇಶನವು ಎಂಥವರಿಗೂ ಬಲವಂತವಾಗಿಬಿಡುತ್ತಿತ್ತು. ಇದರಿಂದ ನಿರ್ದೇಶಕನು 'ಕ್ರಿಯಾಶೀಲ'ನಾಗುವುದಕ್ಕೆ ಅಡ್ಡಿಯಾಗಿದ್ದರೂ ಅದರ ಹುಟ್ಟಿನ ಸ್ವರೂಪವನ್ನು ಉಳಿಸಲೇ ಬೇಕಾಗುತ್ತಿತ್ತು.

3. ಅಂದಿಗೆ ಕೆ. ಎ. ಅಯ್ಯರ್ ಒಬ್ಬರೇ ನಿರ್ದೇಶಕರೆನ್ನಿಸಿಕೊಂಡಿದ್ದವರು. ತಾವೇ ಇಬ್ಸನ್ ನಾಟಕಗಳನ್ನ ಅನುವಾದಮಾಡಿ ಪ್ರಯೋಗಿಸುತ್ತಿದ್ದರು. ಅವರ

ವ್ಯಾಯಾಮಶಾಲೆ ಆಗಾಗ್ಗೆ ಭಾನುವಾರದಲ್ಲಿ ರಂಗಭೂಮಿಯೂ ಆಗುತ್ತಿತ್ತು. ಅಂಥ ಪ್ರಯೋಗಗಳಲ್ಲಿ 'ಕಾಕನಕೋಟೆ' (ಮಾಸ್ತಿ)ಯನ್ನು ಪ್ರಯೋಗಿಸಿದ ಕೀರ್ತಿ ಅವರದು. ಈ ಸಂದರ್ಭದಲ್ಲಿ ಮಾಸ್ತಿಯವರ 'ಯಶೋಧರಾ' ಒಳ್ಳೆಯ ಕೃತಿಯಾಗಿದ್ದರೂ ಪ್ರಯೋಗಿಸಲು ನಟಿಯರಿಲ್ಲದೆ ಕೇವಲ ವಿದ್ವಾಂಸರ ಹೊಗಳಿಕೆಗೆ ಒಳಗಾಗಿದ್ದುದುಂಟು. ಆದರೆ ಅದಕ್ಕಿಂತಲೂ ಉತ್ತಮವಾದುದು 'ಕಾಕನಕೋಟೆ' ಎಂದು ಪ್ರಯೋಗದಿಂದಲೆ ನಿರ್ಧಾರವಾಯಿತೆನ್ನಬಹುದು.

4. 1960ರ ವೇಳೆಗೆ ನಮ್ಮ ಕಂಪೆನಿ ನಾಟಕಗಳು ತೀರ ದುರ್ಬಲವಾಗಿ ಹೆಸರಿಗೆ ಮಾತ್ರ ಉಳಿದಿರಬಹುದು. ಅದಕ್ಕೆ ಕಾರಣಗಳು ಅಷ್ಟು ಮುಖ್ಯವಲ್ಲ. ಒಂದಂತೂ ಸ್ಪಷ್ಟ. ನಮ್ಮ ಕಂಪನಿಯ ನಾಟಕಗಳನ್ನೂ ನಟನಟಿಯರನ್ನೂ ಸಿನಿಮಾ ಪ್ರಪಂಚ ಒಳಗೊಂಡುದರಿಂದ ಕಂಪನಿಗಳು ತಮ್ಮ ಅವನತಿಯನ್ನು ತಾವೇ ನಿರ್ಮಿಸಿಕೊಂಡಿದ್ದುವು, ಎಂದರೆ ಸಾಕಾದೀತು.

5. ಇಂತಹ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಸ್ಥಾಪಿತವಾದ 'ನಾಟ್ಯಸಂಘ' ಥಿಯೇಟರ್ ಸೆಂಟರ್ ಮತ್ತು ರವೀಂದ್ರ ಕಲಾಕ್ಷೇತ್ರಗಳು ಮುಖ್ಯ ಆಕರ್ಷಣೆಗಳಾದುವು. ಹವ್ಯಾಸಿ ನಾಟಕಗಳ ಸ್ಪರ್ಧೆ, ಉಲ್ಲಾಳ್‌ಷೀಲ್ಡ್ ನಾಟಕಸ್ಪರ್ಧೆ, ಮತ್ತು ನಾಟಕೋತ್ಸವಗಳು ಜಾರಿಗೆ ಬಂದುವು. ಇದರಲ್ಲಿ ಶ್ರೀರಂಗ ನಾಟಕ ಸಪ್ತಾಹ, ಕೈಲಾಸಂ ನಾಟಕ ಸಪ್ತಾಹ ಮತ್ತು ಕುವೆಂಪು ನಾಟಕ ಸಪ್ತಾಹಗಳು ಗಮನಾರ್ಹವಾದುವು. ಸಾಗರದಲ್ಲಿ ಶ್ರೀರಂಗರ ನಾಟಕಗಳನ್ನು ಆಡುವ ಒಂದು ಹವ್ಯಾಸಿ ಸಂಸ್ಥೆಹುಟ್ಟಿಕೊಂಡಿತು. ಬೆಂಗಳೂರಿನ ರವಿಕಲಾವಿದರು ಶ್ರೀರಂಗರ 'ಶೋಕಚಕ್ರ' ನಾಟಕವನ್ನು ಅಭಿನಯಿಸಿದರು. ಹೀಗೆ ನಮ್ಮ ಹವ್ಯಾಸಿ ರಂಗಭೂಮಿಗೆ ಬೆಳೆಯಲು ಅವಕಾಶವೊದಗಿ ಬಂತು.

1960 ರಿಂದ 1970ರ ಕಾಲ :

ಸ್ವಾತಂತ್ರ್ಯ ನಂತರದ ಪರಿಸ್ಥಿತಿಯಲ್ಲಿ ನವ್ಯ ನಾಟಕಗಳು ಕಾಣಿಸಿಕೊಂಡುವಷ್ಟೆ, ಅದಕ್ಕೆ ಅನುಕೂಲವಾಗಿ ಕನ್ನಡದಲ್ಲಿ ನವ್ಯ ಕಾವ್ಯಚಳುವಳಿ ಬಲವಾಗಿತ್ತು. ಇಲ್ಲಿ ತರುಣರಾದ ನವ್ಯ ಕವಿಗಳು ಮೊದಲು ಹೊಸ ನಾಟಕಗಳ ರಚನೆಗೆ ತೊಡಗಿದುದನ್ನು ಮರೆಯುವಂತಿಲ್ಲ, ಹಿಂದಿನ ರೋಮಾಂಟಿಕ್ ರೀತಿನೀತಿಯ ಕೃತಿಗಳಲ್ಲಿ ಭಾಷೆಯ ಬಿಸಿಯಿಲ್ಲವೆಂಬುದು ಹೊಳೆದಂತೆ ಹೊಸಪ್ರಯತ್ನಗಳಲ್ಲಿ (1) ಆಡುಮಾತಿನ ಬಿಸಿಯನ್ನು ನೇರವಾಗಿ ನಾಟಕದ ಸಂಭಾಷಣೆಗಳಿಗೆ ಬಳಸಲಾಯಿತು. (2) ಪಿರಾಂದಲೋ ಕಾಮೂ, ಸಾರ್ತ್ರ್, ಆಸ್‌ಬೋರನ್, ವೆಸ್ಕರ್, ಜೇನೆ, ಐನಸ್ಕೋ ಮೊದಲಾದ ಪ್ರಸಿದ್ಧ ನಾಟಕಕಾರರನ್ನು ಅಧ್ಯಯನ ಮಾಡುವಲ್ಲಿ ಹೊಸ ಹಾದಿಯಲ್ಲಿ ತೀಕ್ಷ್ಣವೂ ಸಾಮಾಜಿಕವೂ ಆದ ಕಾವ್ಯ ಸತ್ವವನ್ನು ಗುರುತಿಸಿಕೊಂಡು ನಾಟಕ ರಚನೆಗಳೂ ಪ್ರಯೋಗಗಳೂ ಮೊದಲಾದುವು.

ಆದರೆ ಪಾಶ್ಚಾತ್ಯ ಪ್ರಸಿದ್ಧ ನಾಟಕಕಾರರಿಗೆ (ಮೇಲೆ ಹೇಳಿದವರು) ಮಾರ್ಕ್ಸ್‌ವಾದವೂ ಅದರ ಸಮರ್ಥನೆಯ 'ಪ್ರಾಗ್ರೆಸಿವ್ ಮೂವ್‌ಮೆಂಟ್' ರಚನೆಗಳೂ ಹಳೆಯವಾಗಿದ್ದು, ಅವರು ಅದರ ಮುಂದಿನ ಹೆಜ್ಜೆಯಾದ 'ಅಸ್ತಿತ್ವವಾದ' ಮತ್ತು ಅಸಂಗತ' (ಅಬ್ಸರ್ಡ್) ಪ್ರಯೋಗಗಳಲ್ಲಿ ಪ್ರಸಿದ್ಧರಾಗಿದ್ದರು. ಆದುದರಿಂದ ನಮ್ಮ ನವ್ಯ ಬರಹಗಾರರಿಗೆ ಅಸ್ತಿತ್ವವಾದವೇ ಮುಖ್ಯವಾಗಿ ಅದರ ವಿಚಾರಧಾರೆಯ ಕೃತಿಗಳು ರಚಿತವಾದವು. ಈ ಬಗೆಯಿಂದಾಗಿ ನಮ್ಮಲ್ಲಿ ಪ್ರಗತಿಶೀಲ ರಚನೆಗಳು ಶ್ರೀರಂಗರಲ್ಲಿ ಕಂಡುಬಂದರೂ ಈ ತರುಣರು ಆ ಹಾದಿಯನ್ನು ತುಳಿಯದೆ ಮುಂದು ವರಿದರು. (1960ರ ವರ್ಷಗಳಲ್ಲಿ ಮಾರ್ಕ್ಸ್‌ವಾದವು ಗೌಣವಾಗಿತ್ತೆಂದು ಬೇಕಾದರೆ ಸಾಹಿತಿಗಳ ವಿಷಯದಲ್ಲಿ ಮಾತ್ರ ಹೇಳಬಹುದಾಗಿದೆ).

ಈ ಹೊಸ ಬಗೆಯಿಂದ ಹಿಂದಿನ ನಾಟಕಗಳು ರಮ್ಯನಾಟಕಗಳಾದುವು. ಅವುಗಳ ರಚನೆಯಲ್ಲಿ ಶೈಥಿಲ್ಯವನ್ನು ಗುರುತಿಸಿ ನವ್ಯಕಾವ್ಯದ ರೀತಿನೀತಿಯಲ್ಲಿ ನವ್ಯ ನಾಟಕಗಳೂ ಹುಟ್ಟಿಕೊಂಡವು. ಈ ಸಂದರ್ಭದಲ್ಲಿ ಹಳಬರು ಹೊಸನಾಟಕಗಳನ್ನು ಅಸಹ್ಯ ರಚನೆಗಳೆಂದೂ ಸಭ್ಯತೆಯನ್ನು ಮೀರಿದವೆಂದೂ ದೂರಿದಾಗ ರಮ್ಯನಾಟಕಗಳು ನೀತಿಯ ಭಾರದಿಂದ ಸೊರಗಿರುವುವೆಂದೂ ಕಾವ್ಯ ಸತ್ವವಿಲ್ಲದ ಕೃತಿಗಳೆಂದೂ ಆಕ್ಷೇಪಣೆಗೆ ಒಳಗಾದುವು. ಒಟ್ಟಿನಲ್ಲಿ ತರುಣರ ಮನೋಧರ್ಮವು ಹೆಚ್ಚು ಸಮಕಾಲೀನವಾಗಿರುವಂತೆ ಕಂಡುಬಂದುದರಿಂದ ನಾಟಕ ಸಂಸ್ಥೆಗಳೂ ಪ್ರೇಕ್ಷಕರೂ ಬೆಂಬಲವಾದರು. ಆದರೆ ಈ ಸಂದರ್ಭದಲ್ಲಿ ಶ್ರೀರಂಗರು ಹಿಂದೆ ಬೀಳಲಿಲ್ಲ, ನಿಜ. ಆದರೆ ಅವರು ತಮ್ಮ ಧೋರಣೆಯನ್ನು ಬಿಟ್ಟು ಕೊಡಲೂ ಇಲ್ಲ.

1960ರ ನಂತರ ಪ್ರಸಿದ್ಧಿಗೆ ಬಂದ ನವ್ಯ ನಾಟಕಗಳನ್ನು ಗುರುತಿಸುವಲ್ಲಿ ಮೊಟ್ಟ ಮೊದಲ ನವ್ಯ ನಾಟಕವು ಕುರ್ತುಕೋಟಿಯವರ 'ಆಮಸಿ' (1956) ಆಗುತ್ತದೆ. ನಂತರ 'ಮೂಕಬಲಿ' ಜಡಭರತ ವಿರಚಿತಕೃತಿ. ಇವೆರಡರ ಪ್ರಯೋಗಗಳೂ ನವ್ಯ ನಾಟಕದ ಚಳುವಳಿಯೊಂದು ಬೆಳೆದ ಮೇಲೆಯೇ ಆದುದು. ಆದ್ದರಿಂದ ಇವರಿಗಿಂತಲೂ ಉಳಿದ ನಾಟಕಕಾರರು ಮುಖ್ಯರಾಗುತ್ತಾರೆಯಷ್ಟೆ! ಇವರಲ್ಲಿ ಶ್ರೀರಂಗ, ಕಾರ್ನಾಡ್, ಪೂಚಂತೇ, ಲಂಕೇಶ್, ಚಂ. ಪಾಟೀಲ, ಚಂ. ಕಂಬಾರ, ಸ. ರತ್ನ ಮತ್ತು ಜಿ. ಬಿ. ಜೋಷಿ ಮುಖ್ಯರು. 'ಆಮಸಿ' ಒಂದು ಮಕ್ಕಳ ನಾಟಕವಾದರೂ ಕಾವ್ಯಸತ್ವವನ್ನು ಒಳಗೊಂಡ ಕೃತಿ. ಇದು ಮಕ್ಕಳೇ ಮೊದಲಾಗಿ ದೊಡ್ಡವರಿಗೂ ಕಣ್ಣು ತೆರೆಯಿಸುವ ಕೃತಿ. ಮಕ್ಕಳ ನಾಟಕಗಳ ರಚನೆಯಲ್ಲಿ ಕೂಡ ಇದು ಹೊಸಹಾದಿಯನ್ನು ತೋರಿತ್ತು. ಕುರ್ತುಕೋಟಿಯವರು 'ಆಮಸಿ'ಯ ಮುನ್ನುಡಿಯಲ್ಲಿ 'ಮಕ್ಕಳ ನಂಬಿಕೆಗಳಲ್ಲಿ ಹುದುಗಿರುವ ಕಲ್ಪನಾ ವಿಲಾಸ, 'ಆಮಸಿಯ ರಹಸ್ಯಮಯ ವಾತಾವರಣ, ಬೆಳೆಯಲೇಬೇಕಾದ ಜೀವವನ್ನು ಸಾವು ಮುಟ್ಟಲಾರದೆಂಬಭಾವನೆ, ಎಲ್ಲಕ್ಕೂ ಹೆಚ್ಚಾಗಿ ಜೀವನದ ಆಳವಲ್ಲಿ, ಭವಿಷ್ಯದ ಕೊನೆಯಲ್ಲಿ ಮೂಡುವ ಅಗಮ್ಯತೆ, ಈ ಅದ್ಭುತ ರಮ್ಯತೆಗೆ ಕಾರಣವಾಗಿವೆ-ಎಂದಿ

ದ್ದಾರೆ. ತಮ್ಮ ನಾಟಕ ರಚನೆಯ ಸಂದರ್ಭವನ್ನು ಕುರಿತು ಅವರು 'ಇನ್ನು ನಾಟಕ ಪ್ರಯೋಗದ ವಿಷಯ: ಎರಡನೆಯ ದೃಶ್ಯದಲ್ಲಿಯ ರಂಗವ್ಯವಸ್ಥೆ ಕಠಿಣವಾಗಿದ್ದರೂ ಅಸಂಭವನೀಯವೇನೂ ಅಲ್ಲ. ನಮ್ಮಲ್ಲಿ ರಂಗವ್ಯವಸ್ಥೆ ಇನ್ನೂ ಒಂದು ಕಲೆಯಾಗಿ ಬೆಳೆದಿಲ್ಲ, ಸಾಮಾಜಿಕ ನಾಟಕಗಳಲ್ಲಿ ಕೂಡ ರಂಗವ್ಯವಸ್ಥೆ ಒಂದು ತಲೆಬೇನೆಯಾಗಿದೆ. ಅದಕ್ಕಿರುವ ಹಣದ ವಿಪರೀತ ವೆಚ್ಚದಿಂದ ನಮ್ಮ ಅಭಿರುಚಿಗೆ ತಕ್ಕಂತೆ ದೃಶ್ಯಗಳನ್ನು ನಿಯೋಜಿಸುವ ಅವಕಾಶವೇ ನಮಗೆ ಸಿಕ್ಕಿಲ್ಲ. ನಾಟಕ ಕಂಪನಿಗಳು ಈ ಒಂದು ವಿಷಯದಲ್ಲಿ ಆಸ್ಥೆ ವಹಿಸುತ್ತಿದ್ದರೂ, ಅದಕ್ಕೆ ಪ್ರೇಕ್ಷಕರಿಂದ ಸಾಮಾಜಿಕರಿಂದ ಪ್ರೋತ್ಸಾಹ ದೊರೆಯುವುದಿಲ್ಲ. ಈ ವಿಷಯ ವಾತಾವರಣ ಇನ್ನಾದರೂ ಹೋಗ ಬೇಕು. ಸರಿಯಾದ ಹಿನ್ನೆಲೆ ಕೊಡದಿದ್ದರೆ ನಾಟಕದ ಅರ್ಥಸೌಂದರ್ಯ ಇಲ್ಲದಂತಾಗುವುದೆಂಬ ಪ್ರಜ್ಞೆ ಆಡುವವರಿಗೂ. ನೋಡುವವರಿಗೂ ಇರಬೇಕು.' ಎಂದು ಸಂದರ್ಭವನ್ನು ವಿಮರ್ಶಿಸಿದ್ದಾರೆ. ಇದು ಧಾರವಾಡದ ಭಾಗಕ್ಕಲ್ಲದೆ 'ಮೈಸೂರು ವಿಭಾಗಕ್ಕೂ ಅನ್ವಯಿಸುತ್ತಿದ್ದ ವಿಚಾರವಾಗಿದೆ.

ಈ ವೇಳೆಗೆ ಸಾಮಾಜಿಕ ಸಂದರ್ಭವು ರಾಜಕೀಯದಿಂದ ಸಂಕೀರ್ಣವಾಗ ತೊಡಗಿದ ಕಾರಣ ನಾಟಕಕಾರರ ವಿಚಾರಧಾರೆಯಲ್ಲಿ ಹಳೆಯದನ್ನೆಲ್ಲಾ ಬಿಟ್ಟುಕೊಡಲು ಅವಕಾಶವಾದಂತೆ ತೋರುತ್ತದೆ. ನಮ್ಮ ನವ್ಯ ನಾಟಕಗಳು ಹೊಸ ಹಾದಿಯಲ್ಲಿ ಥಾಳಾಗಿ ಕಾಣಿಸಿಕೊಂಡುವು. ಅದರಲ್ಲೂ ಲಂಕೇಶ್ ಮತ್ತು ಗಿರೀಶ್ ಕಾರ್ನಾಡ್ ಮುಂದಾಳುಗಳಾದರು. ಲಂಕೇಶರ ಟಿ. ಪ್ರಸನ್ನನ ಗೃಹಸ್ಥಾಶ್ರಮದಿಂದ 'ಸಂಕ್ರಾಂತಿ'ಯ ವರೆಗೂ ಪರಿಶೀಲಿಸಿದಾಗ ಅವರ ರಚನೆಗಳಿಗೆ ಬಲವಾದ ಧೋರಣೆಯೂ ಕಂಡು ಬರುತ್ತದೆ. ಇವರು ಕ್ರಮೇಣ ಲೋಹಿಯಾವಾದಿಗಳಾದರೆಂಬುದನ್ನು ಇವರ ಇತರ ಕೃತಿಗಳಿಂದಲೂ ಅರಿಯಬಹುದಾಗಿದೆ. (ಮುಸ್ಸಂಜೆಯ ಕಥಾ ಪ್ರಸಂಗ ಎಂಬ ಇವರ ಒಂದು ಪ್ರಸಿದ್ಧ ಕಾದಂಬರಿಯನ್ನು ನೋಡಿ.) ಇವರ ಧೋರಣೆಯಲ್ಲಿ ಕಂಡು ಬರುವ ಸಂಕೀರ್ಣತೆಯನ್ನು ಗುರುತಿಸಲು ಪಾಶ್ಚಾತ್ಯ ಅಸ್ತಿತ್ವವಾದ ಮತ್ತು 'ಅಸಂಗತ' ರೀತಿನೀತಿಗಳನ್ನೂ ಅಭ್ಯಾಸ ಮಾಡಬೇಕಾಗುತ್ತದೆ. ಆದರೆ ಅದಕ್ಕೂ ಮುಂಚಿತವಾಗಿ ಹೇಗೆ ನಮ್ಮ ರಾಜಕೀಯ ಸಂದರ್ಭವು ಇವರನ್ನು ಒಳಗೊಂಡಿತು ಎಂಬುದನ್ನು ಗಮನಿಸಬೇಕಾಗುತ್ತದೆ. ಅದರ ಜೊತೆಗೆ ಕೃತಿಗಳು ಕಲಾತ್ಮಕವಾಗಿ ನಿರ್ದೇಶಕರಿಗೂ ನಟರಿಗೂ ಒಂದು ಸವಾಲಾಗಿ ನಿಲ್ಲುವುದನ್ನು ಗಮನಿಸಬಹುದು.

ಕಾರ್ನಾಡರಾದರೂ 'ಯಯಾತಿ' (1961)ಯಲ್ಲಿ ಬಂಡುಗಾರ ಅಸ್ತಿತ್ವವಾದಿ ಯಾಗಿ ಕಂಡರೆ ಕ್ರಮೇಣ ಅದರ ಒಳ ಹೊರಗಿನ ಆತಂಕಗಳಲ್ಲಿ ಮಾತ್ರ ತೊಡಗಿದವರಂತೆ ಅವರ ಕೃತಿಗಳು ಹೇಳುತ್ತವೆ. ವಾಸ್ತವವಾಗಿ ಕೇವಲ ಮನರಂಜನೆಗಾಗಿ ಅಥವಾ ಕಲಾತ್ಮಕತೆಗಾಗಿ ನಾಟಕಕಾರರಾಗಿರಲು(ಅಥವಾ ಸಾಹಿತಿಗಳಾಗಿರಲು) ಅಂದು ಅಸಾಧ್ಯವಾಗಿದ್ದ ಕಾರಣ ಕಾರ್ನಾಡರ ಪ್ರಯತ್ನಗಳು. ಎದುರಿಗಿದ್ದ ಪರಿಸ್ಥಿತಿಗೆ ಮುಖಾಮುಖಿಯಾಗಲಿಲ್ಲ. ಅವರು ಬುದ್ಧಿ ಪೂರ್ವಕವಾಗಿಯೇ ಅಂಥ ಒಂದು

ಸವಾಲನ್ನು ತಪ್ಪಿಸಿಕೊಳ್ಳುತ್ತಿದ್ದರೆಂದು-ಊಹಿಸಲು ಅವರ ಕೃತಿಗಳೇ ಆಧಾರವಾಗಿವೆ. ಅಲ್ಲದೆ ಅವರ 'ತೊಡಗುವಿಕೆ' ಕೂಡ ಕ್ರಮೇಣ ದುರ್ಬಲವಾಗಿರಬೇಕೆಂದು ಹೇಳಲು 'ತುಘಲಕ್' ನಂತರ ಬಂದ 'ಹಯವದನ' ಮತ್ತು 'ಅಂಜುಮಲ್ಲಿಗೆ' ಗಳಿಂದತಿಳಿಯ ಬಹುದಾಗಿದೆ. ಏಕೆಂದರೆ 'ತುಘಲಕ್'ನಲ್ಲಿ ಕಂಡುಬರುವ ರಾಜಕೀಯದ ಸಮಕಾಲೀನ ಹೊಳಹು, ನಂತರ ಕಂಡುಬರುವುದೇ ಇಲ್ಲ. ಅಂದರೆ ಬರಿಯ ಅಸ್ತಿತ್ವ ವಾದವನ್ನು ಪಾಶ್ಚಾತ್ಯರ ನಿಲುವಿನಲ್ಲಿರುವಂತೆಯೇ ಬಳಸಲು ಯತ್ನಿಸಿದರೆನ್ನಬಹುದು. ಇದೇ ಅವರ ಸೋಲಿನ ಹೆಜ್ಜೆಗಳನ್ನೂ ತೋರಿಸುತ್ತಿದೆ. ಅವರ ಇತ್ತೀಚಿನ 'ಹಿಟ್ಟಿನ ಹುಂಜ' (ತುಘಲಕ್' ನಂತರ ಬರೆದರೂ ಅದನ್ನು ಪ್ರಕಟಿಸಿರಲಿಲ್ಲ. ಹಸ್ತಪ್ರತಿಯ ರೂಪ ದಲ್ಲಿ ಬೆಂಗಳೂರಿನಲ್ಲೂ ದೆಹಲಿಯಲ್ಲೂ ಪ್ರದರ್ಶನಗಳಾಗಿಯೂ ಅಚ್ಚಾಗಿರಲಿಲ್ಲ.) ಅಚ್ಚಾಗಿ ಬಂದುದು ಅಸಂಭವನೀಯ ರೀತಿಯಲ್ಲಿದೆ. ಇದರಲ್ಲಿ ಬೆಳಕಿಗೆ ಬರುವ ಹೆಣ್ಣುಗಂಡಿನ ಸಂಬಂಧದಲ್ಲಿ ಸಾಮಾಜಿಕವಾಗಿ ಒಪ್ಪಬೇಕಾದ ನಿಲುವಂತೂ ಇರುವು ದಿಲ್ಲ. ಆದುದರಿಂದ ಈ ಕೃತಿ ರಂಗದಮೇಲೆ ಯಶಸ್ವಿಯಾದರೂ ಒಂದು ನಾಟಕ ವಾಗಿ ಸೋಲುತ್ತದೆ.

ಲಂಕೇಶರ ಪ್ರಯೋಗಗಳಿಗೆ ಸಮಕಾಲೀನ ಒಳತೋಟಿ ಖಚಿತವಾಗಿ ಸೇರುವುದ ರಿಂದ ಅವು ಕಲಾತ್ಮಕವಾಗಿಯೂ ಯಶಸ್ವಿಯಾಗಿವೆ. ಅವರ ಸಂಕ್ರಾಂತಿಯಲ್ಲಿ ಐತಿಹಾಸಿಕತೆಯಿದ್ದರೂ ಇಂದಿನ ಪರಿಸ್ಥಿತಿಯಲ್ಲಿ ಎಂದಿನಂತೆಯೇ 'ಜಾತಿವಾದವು' ಆಳವಾಗಿ ಅನ್ವಯಿಸುವಂಥದೆಂಬುದನ್ನು ಕಾಣುತ್ತೇವೆ. 'ಸಂಕ್ರಾಂತಿ'ಯ ನಾಯಕಿ 'ಹಯವದನ'ದ ನಾಯಕಿಯಂತೆ ಅಲ್ಲ ಮತ್ತು ಸಮಕಾಲೀನತೆಯಿಂದ ಹೊರಚ್ಚಾಗು ವುದಿಲ್ಲ. ಆದುದರಿಂದ ಅವರ 'ತೆರೆಗಳು' ಮೊದಲಾಗಿ ನಾಟಕಗಳು ಕಾರ್ನಾಡರ ಕೃತಿಗಳಿಗಿಂತ ನಮಗೆ ಹತ್ತಿರವಾಗುತ್ತವೆ ಮತ್ತು ನಮ್ಮ ಸಮಕಾಲೀನ ಸಮಸ್ಯೆಗಳ ಬೇರೆ ಬೇರೆ ರೂಪಗಳನ್ನೂ ಕಾಣುತ್ತೇವೆ. ಪಟ್ಟಭದ್ರತೆಯ ವಿರುದ್ಧ ಬಂಡೇಳು ವುದು ಲಂಕೇಶರ ಮುಖ್ಯ ಕಾಳಜಿಯಾಗಿ ಉಳಿದ ನಾಟಕಕಾರರಿಗೂ ಹಾದಿತೋರಿಸಿ ದಂತೆ ಆಗಿದೆ. ಆದುದರಿಂದ ಉಳಿದ ನಾಟಕಕಾರರೂ ಕ್ರಮೇಣ 'ಬಂಡೇಳುವ' ಧೋರಣೆಯನ್ನು ಒಪ್ಪಿಕೊಂಡಂತೆ ಕೃತಿರಚನೆಯಲ್ಲಿ ತೊಡಗಿದರೆಂಬುದೂ ಗಮನಿಸ ಬೇಕಾದ ವಿಷಯ. ಹೀಗೆ ಅನುಭವಕ್ಕೆ ಹತ್ತಿರವಾಗುವುದರ ಮೂಲಕ ನವ್ಯ ನಾಟಕವು ಹೆಚ್ಚು ಅರ್ಥಪೂರ್ಣವಾಗಿ ಪರಿಣಮಿಸಿದೆ. ಅದರ ತೊಡಕಿರುವುದು ಇದರಲ್ಲಿಯೇ ಎನ್ನಬಹುದು. ಏಕೆಂದರೆ ನಮ್ಮ ಪ್ರೇಕ್ಷಕರಿಗೆ ಹಿಂದಿನ ನಾಟಕಗಳಲ್ಲಿ ಇಂಥ ಸ್ವಾರಸ್ಯ ಕಂಡುಬಂದಿರಲಿಲ್ಲ. ಆ ಕೃತಿಗಳು ಹೀಗೆ ಸವಾಲಾಗಿರಲಿಲ್ಲ.

ಶ್ರೀರಂಗರು ಯಾವಾಗಲೂ ಸಮಕಾಲೀನವಾಗಿ ಜಾಗ್ರತವಾಗಿದ್ದವರು. ಈಗಲೂ ಅವರು ಹಿಂದೆ ಬೀಳಲಿಲ್ಲ. ಆದರೆ ಅವರ ಕಲಾತ್ಮಕತೆಯ ನಿಲುವಿಗೆ ಅಸ್ತಿತ್ವ ವಾದವಾಗಲಿ ಅಸಂಗತವಾಗಲಿ ಹಿಡಿಯುವಂಥದಾಗಿರಲಿಲ್ಲ. ಮೊದಲಿನಿಂದಲೂ ಪ್ರಗತಿ ಶೀಲ ಧೋರಣೆಯಲ್ಲಿ ವಿಚಾರವಂತರಾಗಿದ್ದು ಅವರ 'ಪಲ್ಲವಿ' ಬದಲಾಗುವ ಸಾಧ್ಯ

ತೆಯೂ ಇರಲಿಲ್ಲ. ಅವರು ಪಿರಾಂಡಲ್ಲೊವಿನಂತೆ (ಆತನ 'ಸಿಕ್ಸ್ ಕಾರೆಕ್ಟರ್ಸ್ ಇನ್‌ಸರ್ಚ್ ಆಫ್ ಆನ್ ಆಥರ್' ಪ್ರಭಾವ ಬೆಳೆದಿದೆ) ಪಾತ್ರ ಮತ್ತು ಸನ್ನಿವೇಶ ರಚನೆಗಳನ್ನು ಸೃಷ್ಟಿಮಾಡತೊಡಗಿದರು. ಇದಕ್ಕೆ ಅವರ 'ಕೇಳು ಜನಮೇಜಯ' ಒಂದು ಒಳ್ಳೆಯ ಉದಾ. ಎರಡನೆಯದೆಂದರೆ 'ಸ್ವಗತ ಸಂಭಾಷಣ' ಎಂಬ ಏಕಾಂಕ. 1960ರ ದಶಕದಲ್ಲಿ ಅವರು ಇಂಥ ಹಾದಿಯಲ್ಲಿ ಹೊರಟು ಆಧುನಿಕ ರಂಗಸಿದ್ಧತೆಗಳಲ್ಲಿ ಬಹುಮುಖ್ಯವಾದ ಸ್ಪಾಟ್ ಲೈಟ್ಸ್ ಮತ್ತು ಸೈಕ್ಲೊರಮಾಗಳನ್ನು ಬಳಸಬೇಕಾದ ಕೃತಿಗಳನ್ನು ನೀಡಿದ್ದಾರೆ. ಧಾರವಾಡದಲ್ಲಿದ್ದಾಗ ಅವರ ಕೃತಿಗಳು (ನಾಟಕಗಳು) ಮುಖ್ಯವಾಗಿ 'ಮನೆಯ ಅಂಗಳದ' ಚೌಕಟ್ಟಿನಲ್ಲಿ ಅಂಥ ಒಂದು ಸೆಟ್ಸ್ (ಬಾಗಿಲಿರುವ ಹಿಂದಿನ ಪರದೆ) ಆಧಾರದಿಂದ ರೂಪತಾಳಿದ್ದರೆ ಈಚೆಗೆ ಅವರು ಅದರಿಂದ ಹೊರ ಬಂದಂತೆ ಹಂತಗಳ ಜೋಡಣೆ, ಟೇಪ್‌ರೆಕಾರ್ಡುಗಳ ಬಳಕೆ ಮತ್ತು ಅಭಿನಯದ ಚೌಕಟ್ಟುಗಳಿಂದ ಕೂಡಿದ ನಿರೂಪಣೆಗೆ ಹೊರಳಿದರು. ಇವರ 'ರಂಗಭಾರತ' 'ಸಂಜೀವನಿ' 'ಕತ್ತಲು ಬೆಳಕು', ಕೃತಿಗಳು ತುಂಬ ಗಂಭೀರವೂ ಸಮಕಾಲೀಕವೂ ಆದ ಕೃತಿಗಳಾಗುತ್ತವೆ.

ನಮ್ಮ ನಾಟಕಕಾರರಲ್ಲಿ ಶ್ರೀರಂಗರದು ಅದ್ವಿತೀಯವಾದ ಸ್ಥಾನಮಾನವೆಂದೂ ಹೇಳಬಹುದು. ಇದಕ್ಕೆ ಇವರು ಸಮಕಾಲಿಕವಾದ ನಡವಳಿಕೆಯಲ್ಲಿ ನಾಟಕಕಾರ ರಾಗಿಯೇ ಉಳಿದು ಕನ್ನಡ ರಂಗಭೂಮಿಯ ಕಾಳಜಿಯನ್ನು ವಿಶೇಷವಾಗಿ ಹೆಚ್ಚಿ ಕೊಂಡುದಾಗಿದೆ. ಇಂದಿಗೂ ಇವರ ಕೃತಿಗಳಲ್ಲಿ ಹೊಸತನವಿದೆಯೆನ್ನಬಹುದು. (ಧೋರಣೆಯಲ್ಲಿ ಮಾತ್ರ ಅವರು ಶ್ರೀರಂಗರೇ ಆಗಿದ್ದಾರೆ). ಬೇರೆಯವರಂತೆ ಇವರು ಪಾಶ್ಚಾತ್ಯವಾದಗಳನ್ನು ಒಪ್ಪಿಕೊಂಡವರೂ ಅಲ್ಲ. ಇವರ ಬದುಕಿನ ನಿಲುವಿನೊಡನೆ 'ಮಾನವತಾವಾದ' ಮಾತ್ರ 'ಗಾಂಧೀವಾದದ ಸತ್ವ'ದಿಂದ ಕೂಡಿ ಉಳಿದುಕೊಂಡು ಬಂದಿದೆ. ಆದುದರಿಂದ ಇವರನ್ನು ಆದರ್ಶವಾದಿಗಳೆಂದು ಗುರುತಿಸಿ ಅದರ ಉದಾತ್ತತೆಯನ್ನು ಅರಿಯಬೇಕಾಗುತ್ತದೆ. ಆದುದರಿಂದ ಶ್ರೀರಂಗರ ರಚನೆಗಳು ಮೇಲೆ ಹೇಳಿದಂತೆ ಅರ್ಥಪೂರ್ಣ ಪ್ರಯೋಗಗಳಾದರೂ 'ನವ್ಯ'ವಾಗುವುದಿಲ್ಲ. ಉಳಿದ (ತರುಣ) ನಾಟಕಕಾರರಿಂದಂತೂ ಅವರು ಪ್ರತ್ಯೇಕವಾಗಿ ಉಳಿದುಬಿಡುತ್ತಾರೆ.

ಶ್ರೀರಂಗರು 1970ರ ವರ್ಷಗಳಲ್ಲಿ ಕೂಡ ಹಿಂದೆಬಿದ್ದವರಲ್ಲ. ಉಳಿದವರಂತೆ ತುರ್ತು ಪರಿಸ್ಥಿತಿಯನ್ನೂ ಎದುರಿಸಿದ್ದುಂಟು. ಅಂತಹ ಪ್ರಚಾರಾತ್ಮಕವಾದ ಮತ್ತು ಪ್ರತಿಭಟನೆಯ ಕೃತಿಗಳನ್ನು ರಚಿಸಿದ್ದೂ ಉಂಟು. ಈ ನಿಟ್ಟಿನಲ್ಲಿ ಅವರ 'ಸಮಗ್ರ ಮಂಥನ', 'ಉತ್ತಮ ಪ್ರಭುತ್ವಲೊಳಲೊಟ್ಟೆ', ಮತ್ತು 'ಭಾರತ ಭಾಗ್ಯವಿಧಾತ'— ಕೃತಿಗಳನ್ನೂ ಗುರುತಿಸಬೇಕಾಗುತ್ತದೆ.ಇಂದಿಗೂ ಇವರ 'ಹರಿಜನ್ವಾರ', 'ಸಂಸಾರಿಗಕಂಸ' 'ಪ್ರಪಂಚಪಾಣಿಪತ್ತು' 'ಶೋಕಚಕ್ರ', 'ಸಂಧ್ಯಾಕಾಲ' ಅರ್ಥಪೂರ್ಣವಾದ ಕೃತಿ ಗಳಾಗಿವೆ. ಇವುಗಳೆಲ್ಲೆಲ್ಲಾ ಶ್ರೀರಂಗರನ್ನು ಗುರುತಿಸಬಹುದು. ಅವರು ನಮ್ಮ

ಜೀವನವನ್ನು ವಿಮರ್ಶೆಗೆ ಒಡ್ಡುವುದನ್ನು ಒಪ್ಪಿಕೊಳ್ಳಬಹುದು. ಒಂದು ರೀತಿಯಲ್ಲಿ ಶ್ರೀರಂಗರೇ ತರುಣ ನಾಟಕಕಾರರಿಗೆ ಕೈಲಾಸಂರಿಗಿಂತಲೂ ಹತ್ತಿರ ವಾಗುವವರು.

ಲಂಕೇಶ್ ಮತ್ತು ಕಾರ್ನಾಡರ ರೀತಿಯ ತರುಣದಲ್ಲಿ ಚಂ. ಪಾಟೀಲ, ಚಂ. ಕಂಬಾರ, ನ. ರತ್ನ, ಪೂಚಂತೇ, ರಾಘವ, ಎಂ. ಎಸ್. ಕೇ. ಪ್ರಭು ಮತ್ತು ಶ್ರಿನಿವಾಸ ರಾಜು ಮುಖ್ಯರು. ಇವರಲ್ಲಿ 'ಅಸಂಗತ' ಮತ್ತು 'ಬಂಡಾಯ' ಎನ್ನಬಹುದಾದ ನೀತಿಗಳು ಹೊಳೆಯುತ್ತವೆ. ಇವರ ಜೊತೆಗೆ ಕೇವಲ 'ನಗೆನಾಟಕ'ಗಳನ್ನು ರಚಿಸುತ್ತಿದ್ದ ಪಿ. ಎಸ್. ಮೂರ್ತಿಯವರೂ ಸೇರಿ 'ಬೀದಿ ನಾಟಕ'ದ ಚಳುವಳಿಯನ್ನು ಸಾಧಿಸುತ್ತಾ ಬಂದಿದ್ದಾರೆ.

1970ರ ನಂತರ ಕನ್ನಡ ರಂಗಭೂಮಿಯಲ್ಲಿ ಹೊಸ ಜಾಗೃತಿಯೊಂದು ಕಾಣಿಸಿ ಕೊಂಡಿತು. ಇದಕ್ಕೆ ಮುಖ್ಯವಾಗಿ ರಾಜಕೀಯವಾದ 'ತುರ್ತುಪರಿಸ್ಥಿತಿ' ಕಾರಣ ವಾಯಿತೆನ್ನಬಹುದು. ಈವೇಳೆಗೆ ಕಾಂಗ್ರೆಸ್ ರಾಜ್ಯಭಾರದಲ್ಲಿ ಅಧಿಕಾರವು ಬೇರೂರಿದಂತೆ ಕಂಡು ಪ್ರಜಾಪ್ರಭುತ್ವದಲ್ಲಿ ಪಟ್ಟಭದ್ರತೆಗೆ ಅವಕಾಶವಾಗುವ ಆತಂಕ ಗಳಿಂದ ನಮ್ಮ ಬರಹಗಾರರು ರಾಜಕೀಯ ಅರಿವಿನಿಂದ ಪ್ರತಿಭಟಿಸತೊಡಗಿದರು. ಇದನ್ನು ಅಡಗಿಸುವ ಪ್ರಯತ್ನವಂತೂ ಸಫಲವಾಗಲಿಲ್ಲ. ಹೀಗಾಗಿ ನಮ್ಮ ವಿಚಾರ ವಂತರು ಅಥವಾ ಬುದ್ಧಿಜೀವಿಗಳು ತಮಗೆ ಸಾಧ್ಯವಾದ ರೀತಿಯನ್ನೆಲ್ಲಾ ಬಳಸಿಕೊಂಡು ದಬ್ಬಾಳಿಕೆಯನ್ನು ಹತ್ತಿಕ್ಕಲು ಹೆಣಗಿದರು. ಇಂಥ ಹೋರಾಟವೇ ಮುಖ್ಯವಾಗಿದ್ದ ವಾತಾವರಣದಲ್ಲಿ ಬ್ರೆಕ್ಟ್-ಅರ್ಥಪೂರ್ಣ ಸಾಧಕನಾಗಿ ಕಂಡುದುಂಟು. ಶ್ರೀರಂಗರು ಕೂಡ ಈಗ ಹಿಂದೆ ಬೀಳಲಿಲ್ಲ. (ಆದರೆ ಬ್ರೆಕ್ಟನ ಅನುಕರಣೆ ಮಾಡಲಿಲ್ಲ) ಸಮಾಜ ವಾದದ ಆಧಾರದಿಂದ ಮಾರ್ಕ್ಸ್‌ವಾದದ ಪುನರ್ವಿಮರ್ಶೆಯೂ ನಡೆದಂತೆ ಸಾಹಿತಿ ಗಳು ಲೇಖನಿಯನ್ನು ಬಳಸತೊಡಗಿದರು. 'ಸಮುದಾಯ'ವು ಇಂಥ ಒಂದು ಸಂಸ್ಥೆ ಯಾಗಿ ರಂಗಭೂಮಿಯ ಚಟುವಟಿಕೆಯನ್ನು ಬೆಳೆಸಿತು. ಆದರೆ ಈಗ 'ಅಸಂಗತ' ವೆನ್ನುವುದಕ್ಕಿಂತ ಪ್ರತಿಭಟನೆಯ ರೂಪಗಳು ಮುಖ್ಯವಾದುವು. ಆದುದರಿಂದ 'ಹುತ್ತವ ಬಡಿದರೆ' ನಾಟಕದಿಂದ ಮೊದಲಾಗಿ 'ತಾಯಿ', 'ಗೆಲಿಲಿಯೋ' ಮತ್ತು 'ದಂಗೆಯ ಮುಂಚಿನ ದಿನಗಳು' ರಚಿತವಾಗಿ ಪ್ರಯೋಗವಾಗಿವೆ.

ದಬ್ಬಾಳಿಕೆಯನ್ನು ವಿರೋಧಿಸಿ ಪ್ರಜಾಪ್ರಭುತ್ವದ ಅಸ್ತಿತ್ವವನ್ನು ರಕ್ಷಿಸಿಕೊಳ್ಳುವ ಧೋರಣೆಯಿಂದ ಬೀದಿಯನಾಟಕಗಳು (ಚಿಕ್ಕಮಗಳೂರು ಚುನಾವಣಾ ಕ್ಷೇತ್ರದಲ್ಲಿ ಮುಖ್ಯವಾಗಿ) ಮೂಕ ನಾಟಕಗಳೂ ಕಾಣಿಸಿಕೊಂಡುವು. ಇವುಗಳಲ್ಲಿ ಲಂಕೇಶರ 'ನನ್ನ ಮಗನ ಕಾರಿನ ಪ್ರಸಂಗ'. ಶ್ರೀರಂಗರ 'ಉತ್ತಮ ಪ್ರಭುತ್ವ ಲೊಳಲೊಟ್ಟೆ' ಸಿ. ಜಿ. ಕೃಷ್ಣಸ್ವಾಮಿಯವರ 'ಬೆಲ್ಚಿ' ಸಿದ್ಧಲಿಂಗಯ್ಯನವರ 'ಪತ್ರೆ ಸಂಗಪ್ಪನ ಕೊಲೆ

ಪ್ರಕರಣ', ನರಸಿಂಹನ್‌ರ 'ಕತ್ತಲೆದಾರಿ ದೂರ' 'ಕೇಳ್ರಪ್ಪೋಕೇಳ್ರಿ' (ಎ. ಎಸ್.ಮೂರ್ತಿ) 'ಧನ್ವಂತರೀ ಚಿಕಿತ್ಸೆ' (ವಿಜಯಾ), ಬರ (ಎಂ. ಎಸ್. ಕೆ. ಪ್ರಭು) ಗಾರ್ಧಭ (ಕೌಶಿಕ್) —ಮುಂತಾದ ಕೃತಿಗಳನ್ನೂ ಗುರುತಿಸಬಹುದು.

ಈ ನಡುವೆ 'ಮೂಕಬಲಿ' (ಸು. 1959) ಯಿಂದ ಪ್ರಸಿದ್ಧರಾದ ಜಡಭರತರು (ಜಿ. ಜಿ. ಜೋಷಿ) 'ಕದಡಿದ ನೀರು', 'ಆ ಊರು–ಈ ಊರು' ಮತ್ತು 'ಸತ್ತವರ ನೆರಳು'—ನಾಟಕಗಳಲ್ಲದೆ 'ನಾನೇ ಬಿಜ್ಜಳ' ಎಂಬ (ಪಿರಾಂಡಲೋ ರೂಪಾಂತರ) ನಾಟಕವನ್ನು ನೀಡಿದ್ದಾರೆ. ಇವುಗಳಲ್ಲೆಲ್ಲಾ 'ಕದಡಿದ ನೀರು' ಸ್ವಾತಂತ್ರ್ಯಾನಂತರದ ಸಂದರ್ಭದಲ್ಲಿ ಆದ ಸಾಮಾಜಿಕ ಬದಲಾವಣೆಯನ್ನು ಗುರುತಿಸುವ ಒಂದು ಮುಖ್ಯ ನಾಟಕವಾಗಿದೆ. 'ಸತ್ತವರ ನೆರಳು' ಪ್ರಾಯೋಗಿಕವಾಗಿ ಒಂದು ಮುಖ್ಯ ಕೃತಿಯೂ ಆಗಿದೆ. ಆದರೆ ಉಳಿದ ತರುಣ ನಾಟಕಕಾರರು ಮತ್ತು ಶ್ರೀರಂಗರೊಡನೆ ಇವರನ್ನು ಹೋಲಿಸಿ ನೋಡುವುದಕ್ಕೂ ಸಾಧ್ಯವಾಗುವುದಿಲ್ಲ. ಹಾಗೆ ಇವರ ನಿಲುವು ಒಂದು ಬಗೆಯ 'ಕ್ಲಾಸಿಕಲ್' ರೂಪದಲ್ಲಿ ಉಳಿಯುತ್ತದೆ. 'ನಾನೇ ಬಿಜ್ಜಳ'ವು ನಮ್ಮ ನಾಟಕವೇ ಆಗದೆ ಉಳಿದುಬಿಡುತ್ತದೆ. ಇವರ 'ಕದಡಿದ ನೀರು' ಎಂಬುದೇ ಮುಖ್ಯ ಕೃತಿಯಾಗಿದೆ ಎನ್ನಬಹುದು, ಏಕೆಂದರೆ ಇದರಲ್ಲಿರುವ ಸತ್ವವು ಉತ್ತರ ಕರ್ನಾಟಕದ ಬದುಕನ್ನು ಅರ್ಥಯಿಸುತ್ತದೆ.

ಇತ್ತೀಚೆಗೆ ಕನ್ನಡರಂಗಭೂಮಿಗೆ 'ರಾಜಕೀಯ'ವೆಂದು ಪರಿಗಣಿಸಬೇಕಾದ ಕೃತಿಗಳು ಕಾಣಿಸಿಕೊಂಡಿವೆ. ಇವುಗಳಲ್ಲಿ ಟಿ. ಎನ್. ಸೀತಾರಾಂ ಅವರ 'ಆಸ್ಫೋಟ' ಒಂದು. ಪ್ರಸನ್ನರ 'ದಂಗೆಯ ಮುಂಚಿನ ದಿನಗಳು' ಕೃತಿಯೂ ಇಂತಹುದೇ ಆಗುತ್ತದೆ. ಹೀಗೆಯೇ 'ನಿಸರ್ಗಪ್ರಿಯರ' 'ಸ್ವರ್ಗಸ್ಥ' ವೈಕುಂಠರಾಜು ಅವರ 'ಸಂದರ್ಭ' ಹೂಲಿಶೇಕರ್ ಅವರ 'ಕಲ್ಯಾಣದಲ್ಲಿ ಒಂದು ಕ್ರಾಂತಿ' ಮತ್ತು ಶ್ರೀನಿವಾಸ ರಾಜು ಅವರ 'ನಾಳೆ ಯಾರಿಗೂ ಇಲ್ಲ' ಇವುಗಳ ಯಶಸ್ಸನ್ನು ಕಾದುನೋಡಬೇಕಾಗಿದೆ. ಆದರೆ ಇವುಗಳಿಂದ ಕನ್ನಡ ನಾಟಕವು ಮತ್ತೊಂದು ಹೆಜ್ಜೆಯನ್ನು ಖಚಿತವಾಗಿ ಮೂಡಿಸುವ ಪ್ರಯತ್ನ ಮಾಡಿದಂತಿದೆ. ಅಲ್ಲದೆ ಇವುಗಳಿಗೆ ಕನ್ನಡ ಹವ್ಯಾಸಿ ರಂಗಭೂಮಿಯ ಹಿನ್ನೆಲೆಯೂ ಕಲಾವಂತಿಕೆಯೂ ಸೇರುವುದರಿಂದ ಇವು ಸ್ವತಂತ್ರವೂ ಅರ್ಥಪೂರ್ಣವೂ ಆದಕೃತಿಗಳಾಗುತ್ತವೆ. ಎನ್ನಬಹುದು.

ಕಳೆದ ಕಾಲು ಶತಮಾನದ ಕನ್ನಡ ನಾಟಕಗಳನ್ನು ಸಿಂಹಾವಲೋಕಿಸುವಲ್ಲಿ ರಂಗಪ್ರಯೋಗವು ಒಂದು ಅನಿವಾರ್ಯ ಅಂಶವಾಗಿದೆ. ಅದು ಸಾಧ್ಯವಾಗದ ರಚನೆಗಳನ್ನು (ಅಂದರೆ ಪ್ರಯೋಗಿಸಲು ಅಸಾಧ್ಯವಾದುವನ್ನು) ಗಮನಿಸದೆ ಬಿಟ್ಟು ಬಿಡಬೇಕಾಗುತ್ತದೆ. ಏಕೆಂದರೆ ಅವುಗಳನ್ನು 'ಓದುನಾಟಕ' ಎಂದರೂ ಸರಿಯಾಗುವುದಿಲ್ಲ. ಅಂಥವನ್ನು fiction ಎಂದು ಕರೆಯಬಹುದಾಗಿದೆ.

1. ಇನ್ನು ರಂಗಪ್ರಯೋಗಗಳನ್ನೇ ಗಮನಿಸುವಾಗ ಅವು ನೇರವಾಗಿ 'ರಂಗಭೂಮಿ'ಯ ಕಾಣಿಕೆಗಳಾಗುತ್ತವೆ. ಇವುಗಳಲ್ಲಿ (ಪ್ರಸ್ತುತ) ಪರಕೀಯ ಸತ್ವ ಮತ್ತು ತಾಂತ್ರಿಕಜ್ಞಾನ, ಹಾಸು ಹೊಕ್ಕಾಗಿ ಸೇರಿಕೊಂಡಿದೆ. ಹೀಗಾದರೂ ಸರಿಯೆ ನಾಟಕವು ಕನ್ನಡ ಭಾಷೆಯಿಂದ ಮತ್ತು ಕನ್ನಡಿಗರ ಅಭಿನಯದಿಂದ ನಮ್ಮದೇ ಆಗುತ್ತದೆ.

2. ಹೀಗೆ ಜೀವಂತವಾಗಿ (ಅಸ್ತಿತ್ವವಾದ, ಅಸಂಗತತೆ ಮತ್ತು ಮಾರ್ಕ್ಸ್‌ಗಳು ಪರಕೀಯರಿಂದ ಬಂದರೂ ನಮ್ಮ ಜನಜೀವನದ ಪರಿಶೀಲನೆಯಾಗುವುದರಿಂದ) ನವ್ಯನಾಟಕಗಳು ಅರ್ಥಪೂರ್ಣವಾಗುತ್ತವೆ. ಆದುದರಿಂದ ಕಾದಂಬರಿಗಳು, ಸಣ್ಣ ಕತೆಗಳು ಮತ್ತು ಕವಿತೆ ಕೂಡ ನಾಟಕ ರೂಪಕ್ಕೆ ಮಾರ್ಪಟ್ಟುದುಂಟು. ಸ್ತ್ರೀಯರು ಕೂಡ ಈಚೆಗೆ ಸಂಕೋಚವನ್ನು ಬಿಟ್ಟು ಅಭಿನಯಿಸಲು ಬರುತ್ತಿದ್ದಾರೆ. ಅವರ ಬಗ್ಗೆ ಇದ್ದ 'ಟಾಬೂ' ಈಗ ಪರಿಹಾರವಾಗುತ್ತಿದೆ. ಇವರಲ್ಲಿ ಕೆಲವರು ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ, ದೆಹಲಿಯಲ್ಲಿ ತರಬೇತಿಯನ್ನು ಪಡೆದೂ ಬಂದವರೂ ಇದ್ದಾರೆ. ಆದುದರಿಂದ ಈಚಿನ ದಿನಗಳಲ್ಲಿ ರಂಗಪ್ರಯೋಗಗಳಿಗೆ ತಾಂತ್ರಿಕ ಸಿದ್ಧತೆ, ಸೆಟ್ಸ್ ಜೋಡಣೆ ಮತ್ತು ಸ್ತ್ರೀಯರ ನೆರವು-ಎಲ್ಲರೂ ಸೇರಿ ರಂಗಭೂಮಿಯ ಪ್ರಗತಿವೇಗ ಗತಿಯಲ್ಲಿದೆ, ಎನ್ನಬಹುದು.

3. ಈ ನಿಟ್ಟಿನಲ್ಲಿ ನಮ್ಮ ಹವ್ಯಾಸಿ ರಂಗಭೂಮಿಯು ಸಾಧಿಸಿರುವ ಕೆಲವು ಪ್ರಮುಖ ನಾಟಕಗಳನ್ನೂ ಗುರುತಿಸಬಹುದು.

'ಸಂಸರ' : (1) ವಿಗಡ ವಿಕ್ರಮರಾಯ ಮತ್ತು (2) ಬಿರುದಂತೆಂಬರ ಗಂಡ, ಇವೆರಡನ್ನೂ ಬಿ. ವಿ. ಕಾರಂತರು ಯಶಸ್ವಿಯಾಗಿ ಪ್ರಯೋಗಿಸಿದ್ದಾರೆ. ಕೈಲಾಸಂರ (1) ಟೊಳ್ಳುಗಟ್ಟಿ (2) ಸೂಳೆ ಮತ್ತು (3) ಹುತ್ತದಲ್ಲಿ ಹುತ್ತ. ಶ್ರೀರಂಗರ (1) ಹರಿಜನ್ವಾರ (2) ಶೋಕಚಕ್ರ (3) ಕೇಳು ಜನಮೇಜಯ (4) ಹುಟ್ಟಿದ್ದು ಹೊಲೆಯೂರು (5) ಕತ್ತಲು ಬೆಳಕು (6) ಸ್ವರ್ಗಕ್ಕೆ ಮೂರೇ ಬಾಗಿಲು (7) ನೀಕೊಡೆ ನಾಬಿಡೆ (8) ಸಮಗ್ರ ಮಂಥನ (9) ಸ್ವಗತ ಸಂಭಾಷಣ (ಏಕಾಂಕ).

ಶ್ರೀರಂಗರ ಕೃತಿಗಳಿಗೆ ಅವರೇ ನಿರ್ದೇಶಕರನ್ನುವಂತೆ ಬೇರೆಯ ನಿರ್ದೇಶಕರಿಗೆ ಮಾರ್ಗ ದರ್ಶನವಿರುತ್ತದೆ. ಆದುದರಿಂದ ಅವರ ಕೃತಿಗಳ ಯಶಸ್ಸಿಗೆ ಒಳ್ಳೆಯ ನಟರು ಮಾತ್ರ ಮುಖ್ಯರಾಗುತ್ತಾರೆ. ಆದರೂ ಕಾರಂತರು ನಿರ್ದೇಶಿಸಿದ ಕತ್ತಲು ಬೆಳಕು ಮತ್ತು ನೀಕೊಡೆ ನಾಬಿಡೆ-ತಾಂತ್ರಿಕವಾಗಿ ವಿಶೇಷ ಅನುಭವಗಳಾದುದುಂಟು.

ಕಾರ್ನಾಡರ (1) ಯಯಾತಿ ಮತ್ತು (2) ತುಘಲಕ್ ನಾಟಕಗಳು ಅವರ ಒಟ್ಟು ಆರು ಕೃತಿಗಳಲ್ಲಿ ಮುಖ್ಯವಾದುವು. ತುಘಲಕ್ ನಾಟಕವನ್ನು ಬಿ. ಚಂದ್ರಶೇಖರ್ ನಿರ್ದೇಶಿಸಿ ತೋರಿದ ಜಾಣ್ಮೆ ಅವರನ್ನು ಸಮರ್ಥ ನಿರ್ದೇಶಕರನ್ನಾಗಿಸಿತೆನ್ನಬಹುದು. ಕಾರ್ನಾಡರ ಉಳಿದ ನಾಟಕಗಳಲ್ಲಿ 'ಹಯವದನ'ವನ್ನು ಬಿ. ವಿ.

ಕಾರಂತರು ಪ್ರಯೋಗಿಸಿ ಒಂದು ವಿಶೇಷ ಅನುಭವವನ್ನಾಗಿಯೇ ಮಾಡಿದರೆನ್ನ ಬಹುದು. ಆದರೂ ಕಾರ್ನಾಡರ ಕೃತಿಗಳು ಒಗಟಿನಂತೆ ಚರ್ಚಾಸ್ಪದ ಕೃತಿಗಳೇ ಆಗಿವೆ. ಇವುಗಳಲ್ಲಿ ಭಾಷೆಯ ದುರ್ಬಲತೆ ಕಂಡರೂ ದೃಶ್ಯ ಸತ್ವದಿಂದ ಕೂಡ ಪ್ರಯೋಗಗಳು ಯಶಸ್ವಿಯಾಗುತ್ತವೆ. ಇವರ 'ಅಂಜುಮಲ್ಲಿಗೆ'ಯನ್ನು ಶಂಕರನಾಗ್ ನಿರ್ದೇಶಿಸಿದ್ದರು. ಆದರೂ ಅದು ನಮ್ಮ ಸಂಸ್ಕೃತಿಯನ್ನು ಒಳ ಗೊಳ್ಳಲಾರದೆಂಬಂತೆ ಅದರ ವಿಚಾರಧಾರೆಯು ಚರ್ಚಾಸ್ಪದವಾಗುತ್ತದೆ.

ಲಂಕೇಶರ (1) ತೆರೆಗಳು (2) ಕ್ರಾಂತಿ ಬಂತು ಕ್ರಾಂತಿ ಮತ್ತು (3) ಸಂಕ್ರಾಂತಿ. ಅವರ ಒಟ್ಟು ಹತ್ತು ನಾಟಕಗಳಲ್ಲಿ ಇವು ಪ್ರಚಂಡವಾದ ಪರಿಣಾಮವನ್ನುಂಟು ಮಾಡುತ್ತವೆ. ನಮ್ಮ ಸಮಕಾಲೀನ ಜೀವನವನ್ನು ಪೃಥಕ್ಕರಿಸಿಬಂದಂತೆ ಈ ಕೃತಿ ಗಳಲ್ಲಿನ 'ಒಳತೋಟ' ಅರ್ಥಪೂರ್ಣವಾಗುತ್ತದೆ. ಇವುಗಳಲ್ಲಿರುವ ಕಲಾತ್ಮಕತೆಯು ಮುಂದಿನ ನಾಟಕಕಾರರಿಗೆ **Trend setter** ಆಗಿವೆ ಎನ್ನಬಹುದು.

ಇವುಗಳಲ್ಲಿ 'ತೆರೆಗಳು' ಬಿ.ಸಿ.ಯವರ ಮತ್ತು 'ಸಂಕ್ರಾಂತಿ'ಯು ಬಿ. ವಿ. ಕಾರಂತರ ನಿರ್ದೇಶನದಲ್ಲಿ ಯಶಸ್ವಿಯಾಗಿವೆ (ಇತ್ತೀಚೆಗೆ ಉಡುಪಿಯ ರಾಮದಾಸರು ಸಂಕ್ರಾಂತಿಯ ಪ್ರಯೋಗವನ್ನು ರವೀಂದ್ರ ಕಲಾಕ್ಷೇತ್ರ, ಬೆಂಗಳೂರಿನಲ್ಲಿ ತುಂಬ ಸೊಗಸಾಗಿ ಪ್ರದರ್ಶಿಸಿದ್ದಾರೆ).

ಯಾರೇ ಆಗಲಿ 'ಸಂಕ್ರಾಂತಿ'ಯನ್ನು ನಿರ್ದೇಶಿಸುವಲ್ಲಿ ಅದರ ಬಹುಮುಖ್ಯ ಅಂಶವಾದ **raclal hatred**ನ್ನು ಗಮನಿಸಿ ಪಾತ್ರಗಳನ್ನು ಜಾತೀಯತೆಯ ಆಧಾರದ ಮೇಲೆ ಹಂಚುವುದಕ್ಕೆ ಅವಕಾಶವಿದೆ. (ಹರಿಜನರ ಪಾತ್ರಗಳನ್ನು ಬ್ರಾಹ್ಮಣರು ಅಭಿನಯಿಸಿದಾಗ ಆಗುವ ಅಭಾಸವನ್ನು ಗಮನಿಸುವುದು ಒಳ್ಳೆಯದು) ಬೇರೆಯ ರೀತಿಯಾದರೆ ಇದರ ಬಹುಪಾಲು ಕೇವಲ ಅಣಕವಾಗುವ ಸಂಭವವಿದೆ. ಇದರಷ್ಟು ಕಲಾತ್ಮಕವೂ ಸಮಕಾಲಿಕವೂ ಆದ ಕೃತಿ ಕನ್ನಡದಲ್ಲಿ ಬೇರೊಂದು ಸಿಕ್ಕಲಾರದು ಎಂಬ ಹಿರಿಮೆ ಈ ಕೃತಿ ಸಲ್ಲುತ್ತದೆ. ಅಂತೆಯೇ ನಿರ್ದೇಶಕರಿಗೆ ಒಂದು ಸವಾಲಾಗಿ ಉಳಿದಿದೆ.

ಚಂದ್ರಶೇಖರ ಕಂಬಾರರ (1) ಜೋಕುಮಾರಸ್ವಾಮಿ ಒಂದು ವಿಶಿಷ್ಟ ಕೃತಿ ಯಾಗಿದೆ. ಇದರಲ್ಲಿನ ಜಾನಪದ ಸತ್ವಕ್ಕೆ ಮನಸೋಲದವರಿಲ್ಲ. ಇತರ ಪ್ರಯೋಗ ವನ್ನು ಬಿ. ವಿ. ಕಾರಂತರು ಸಾಧಿಸಿ ನವ್ಯ ನಾಟಕಗಳ ಪ್ರಯೋಗಗಳಿಗೆ ಹೊಸ ಸಾಧ್ಯತೆ ಯನ್ನೇ ತೋರಿದರೆನ್ನಬಹುದು ಇದು ಮುಖ್ಯವಾಗಿ ಬಯಲುರಂಗಭೂಮಿಯ ದೇಶೀ ಕೃತಿ. ಅಂಥ ಲಕ್ಷಣಗಳೆಲ್ಲವೂ ಇದರಲ್ಲಿವೆ. ಆದರೆ ಇವರ ಇತರ ಹತ್ತು ನಾಟಕಗಳಿಗಿಂತಲೂ ಉತ್ತಮವಾದ ಕೃತಿಯಾಗಿದೆ. ಅವುಗಳೆಲ್ಲಾ ಪ್ರಾಯೋಗಿಕವಾಗಿ

ಮಾತ್ರ ಗಮನಾರ್ಹವಾಗಬಹುದು. ಏಕೆಂದರೆ ಕಂಬಾರರು ಉತ್ತರ ಕರ್ನಾಟಕದ ಮಿಥ್‌ಗಳಲ್ಲಿ ಅಲ್ಲಿಯ ಕಾವ್ಯಮಯ ಮಾತಿನಲ್ಲಿ ಮತ್ತು ಜಾನಪದ ಮಟ್ಟುಗಳ ಚೌಕಟ್ಟುಗಳಲ್ಲಿ ಸ್ವತಹ ಕವಿಗಳು.

ಚಂದ್ರಶೇಖರ ಪಾಟೀಲರ (1) ಕೊಡೆಗಳು (2) ಅಪ್ಪ (3) ಕುಂಟಕುಂಟ ಕುರವತ್ತಿ ಮತ್ತು (4) ಟಿಂಗರ ಬುಡ್ಡಣ್ಣ-ಇವುಗಳೆಲ್ಲಾ ಏಕಾಂಕಗಳು. ಇವುಗಳಲ್ಲಿ ಕಾಣುವ ಸತ್ವದಿಂದಾಗಿ ಈ ನಾಟಕಗಳು ಮುಖ್ಯವಾಗಿವೆ ಮತ್ತು ಆಧುನಿಕವಾಗಿವೆ. ಇವರ ಇತರ ಬೀದಿನಾಟಕಗಳಲ್ಲಿ ಇಂತಹ ತನ್ಮಯತೆಯಾಗಲಿ 'ಜೀವನದ ಕಾಳಜಿ'ಯಾಗಲಿ ಇಲ್ಲದಿರುವುದನ್ನು ಗಮನಿಸಿದರೆ ಈ ಕೃತಿಗಳ ಹಿರಿಮೆ ಬೆಳಕಿಗೆ ಬರುತ್ತದೆ. ಇವುಗಳ ಒಂದೊಂದು ಪ್ರತ್ಯೇಕವಾದ ಕವಿತೆಯಂತೆ ಅರ್ಥಪೂರ್ಣವಾಗುತ್ತದೆ.

ನ. ರತ್ನರ (1) ಎಲ್ಲಿಗೆ. ಪೂಚಂತೇಯವರ (1) ಯಮಳ ಪ್ರಶ್ನೆ. ಶ್ರೀನಿವಾಸ ರಾಜು ಅವರ (1) ಫೀನಿಕ್ಸ್ ಮತ್ತು (2) ನಾಳೆ ಯಾರಿಗೂ ಇಲ್ಲ. ಸಿ. ಜಿ. ಕೃಷ್ಣಸ್ವಾಮಿಯವರ (3) ಬೆಲ್ಚಿ ನರಸಿಂಹನ್‌ರ 'ಕತ್ತಲೆದಾರಿ ದೂರ' ಬಿ. ವಿ. ಕಾರಂತರ (1) ಪಂಜರಶಾಲೆ ಇವುಗಳು ಕನ್ನಡ ರಂಗಭೂಮಿಯ ಪ್ರಯೋಜನವನ್ನೂ ಪ್ರಾಯೋಗಿಕತೆಯನ್ನು ಸಮರ್ಥಿಸುತ್ತವೆ ಎನ್ನಬಹುದು. 'ಬೆಲ್ಚಿ' ನಾಟಕವನ್ನು ಬಾದಲ್ ಸರ್ಕಾರರ ಪ್ರಯೋಗಕ್ಕಾಗಿಯೇ ರಚಿಸಲಾಯಿತೆನ್ನಬಹುದು. ಇದು ಏಕಾಂಗಿಯಾಗಿ ಯಾವುದೇ ದೊಡ್ಡ ನಾಟಕಕ್ಕೂ ಕಡಿಮೆಯಾಗದ ಸಂಕೀರ್ಣತೆ ಹಾಗೂ ತೀಕ್ಷ್ಣತೆಯನ್ನು ಪಡೆದಿದೆ.

ಕೆ. ವಿ. ನಾರಾಯಣರ 'ಹುತ್ತವ ಬಡಿದರೆ' ಎಂಬ ನಾಟಕವನ್ನು 'ಸಮುದಾಯದ' ಚಳುವಳಿಗಾಗಿ ರಚನೆ ಪ್ರಯೋಗಿಸಲಾಯಿತು. ಇದರ ನಿರ್ದೇಶಕ ಪ್ರಸನ್ನ ಮುಂದೆ ಗೋರ್ಕಿಯವರ 'ತಾಯಿ' (ಬ್ರೆಕ್ಟ್ ಪ್ರಯೋಗದ ಆಧಾರದಿಂದ) ನಾಟಕವನ್ನೂ ಯಶಸ್ವಿಯಾಗಿ ಸಾಧಿಸಿದರು.

ಪಂಜರಶಾಲೆ ಎಂಬುದು ಬಿ.ವಿ. ಕಾರಂತರು ಪ್ರಯೋಗಿಸಿದ ಒಂದು ಅದ್ಭುತವಾದ ಮಕ್ಕಳ ನಾಟಕ. ರವೀಂದ್ರರ ಒಂದು ಸಣ್ಣ ಕತೆಯನ್ನು ಆಧರಿಸಿ ಈ ನಾಟಕವನ್ನು ರಚಿಸಿ ಶಿವಮೊಗ್ಗ ಜಿಲ್ಲೆಯ ಹೆಗ್ಗೋಡಿನಲ್ಲಿನ ಒಂದು ಶಾಲೆಯ ಮಕ್ಕಳಿಂದ ಇದನ್ನು ಆಡಿಸಿ ಬೆಂಗಳೂರಿಗೂ ತಂದರು. ಹೀಗೆಯೇ ಎ. ಎಸ್. ಮೂರ್ತಿಯವರ 'ಜಂಬೂ ಸವಾರಿ' (ಮಕ್ಕಳ ನಾಟಕ) ಕಾರಂತರ ಮತ್ತೊಂದು ಯಶಸ್ವೀಪ್ರಯೋಗವಾಯಿತು. ಇವುಗಳ ಸಂಗಡ ಎಚ್. ಎಂ. ಚನ್ನಯ್ಯನವರ (1) ಎಲ್ಲರಂಥವನಲ್ಲ ನನಗಂಡ ಚದುರಂಗರ (2) ಇಲಿ ಬೋನು. ನಾ.ಕೃ.ಸರವರ (3) ನಹಿನಹಿರಕ್ಷತಿ (ಬಿ. ವಿ. ಕಾರಂತರ ನಿರ್ದೇಶನ). ಅಶೋಕ ಕುಲಕರ್ಣಿಯವರ (4) ಹಾದಿಗಳಲ್ಲಿವೆ ದ.ರಾ.

ಬೇಂದ್ರೆಯವರ (5) ಸಾಯೋ ಆಟ ಮತ್ತು (6) ಉದ್ಧಾರ. ರಾಮಚಂದ್ರ ಶರ್ಮರ (7) ನೆರಳು ಮತ್ತು (8) ನೀಲಿ ಕಾಗದ. ಎ. ಕೆ. ರಾಮಾನುಜಂ ರ (9) ಗಾನಪ್ರಿಯ ಆರ್. ಪಿ. ಕುಲಕರ್ಣಿಯವರ (10) ಗೌರಿ. ಚಂದ್ರಕಾಂತ ಕುಸನೂರರ (11) ಮನೆ (ಇವರು ತಮ್ಮ ರಚನೆಗಳನ್ನೆಲ್ಲಾ 'ಅಸಂಗತ' ಎಂದಿದ್ದಾರೆ) ಆರ್ಯರ (12) ಬಯಲು ಆಲಯದೊಳಗೋ !......ಮೊದಲಾದ ಕೃತಿಗಳನ್ನು 'ಅಸಂಗತ' ಕೃತಿಗಳನ್ನಾಗಿ ಗುರುತಿಸಬಹುದು.

4. ಆಚಾರ್ಯ ಬಿ. ಎಂ. ಶ್ರೀಯವರ (1) 'ಅಶ್ವತ್ಥಾಮನ್' ಕುವೆಂಪು ಅವರ (2) ರಕ್ತಾಕ್ಷಿ (3) ಬಿರುಗಾಳಿ, (4) ಬೆರಳ್ಗೆ ಕೊರಳ್ ಮತ್ತು (5) ಜಲಗಾರ ನಾಟಕಗಳ ಪ್ರಯೋಗಗಳು ಹಲವು ರೀತಿಯಲ್ಲಿ ಆಗುತ್ತಲೇ ನಡೆದಿವೆ. ಅವುಗಳ ಲ್ಲಿರುವ ಸಾಹಿತ್ಯಿಕ ಸತ್ವವು ಮುಖ್ಯವಾಗಿ ನಮ್ಮ ಕಲಾವಿದರನ್ನು ಆಕರ್ಷಿಸುತ್ತಲೇ ಬಂದಿದೆ-ಎಂಬುದು ಮುಖ್ಯ. ಆದರೂ ಇವು ನಮ್ಮ ರಂಗಭೂಮಿಯ ಇತಿಹಾಸಕ್ಕೆ ಸೇರಿಹೋಗಿರುವ ಕೃತಿಗಳು. ಇವೂ ವಿಶೇಷವಾಗಿ ಕನ್ನಡ ನಾಟಕ ಸ್ಪರ್ಧೆಗಳಲ್ಲಿ ಮಾತ್ರ ಪ್ರಯೋಗವಾಗುತ್ತಿರುವುದನ್ನು ಮರೆಯಬಾರದು.

'ಈಡಿಪಸ್ ದೊರೆ' (ಲಂಕೇಶರ ಅನುವಾದ) ನಾಟಕವನ್ನು 1972ರಲ್ಲಿ ಕಾರಂತರು ರವೀಂದ್ರ ಕಲಾಕ್ಷೇತ್ರದ ಹಿಂಬದಿಗೆ ಪ್ರಯೋಗಿಸಿದಮೇಲೆ ಅದೊಂದು ಮುಖ್ಯ ಬಯಲು ರಂಗಭೂಮಿಯಾಗಿ ಬಿಟ್ಟಿದೆ. ಅಲ್ಲದೆ ಈ ಪ್ರಯೋಗದಿಂದ ಆಧುನಿಕ ನಾಟಕಗಳಲ್ಲಿ ಬೆಳಕಿನ ಸಂಯೋಜನೆ ಒಂದು ಕಲಾತ್ಮಕ ಅಂಶವನ್ನು ಪಡೆದಂತಾಗಿದೆ. (ಇದರಲ್ಲಿ ಬೆಳಕನ್ನು ಸಂಯೋಜಿಸಿದವರು ಎಂ. ರಾಮಮೂರ್ತಿ. ಇವರ ಕ್ರಮವನ್ನು ನಮ್ಮ ಬಯಲು ರಂಗಭೂಮಿಗಳಲ್ಲಿ ತಪ್ಪದೆ ಅನುಸರಿಸಲಾಗುತ್ತಿದೆ.) ಹೀಗೆ ಈಡಿಪಸ್ ದೊರೆ ಪ್ರಯೋಗವು ಕನ್ನಡ ರಂಗಭೂಮಿಯ ಬೆಳವಣಿಗೆಯಲ್ಲಿ ಒಂದು ದಾಖಲೆಯಾಗಿ ಪರಿಗಣಿಸಬಹುದು.

ರೇಡಿಯೋ ನಾಟಕಗಳನ್ನೂ ರಂಗಭೂಮಿಗೆ ತರಲಾಯಿತು. ಡಾ. ವಸಂತ ಕವಲಿಯವರು ಇಂಥ ಹಲವು ಪ್ರಯೋಗಗಳನ್ನು ಸಾಧಿಸಿದ್ದಾರೆ. ಇವರ 'ಮುದ್ದಣ್ಣ ಮನೋರಮ' ಮತ್ತು 'ಮಧುಪಾತ್ರೆಗೆ ಮತ್ತೊಮ್ಮೆ ತುಂಬು'—ಎಂಬ ಕೃತಿಗಳು ಗಮನಾರ್ಹವಾದುವು. ಮುಂಬಯಿ ಕನ್ನಡ ಕಲಾ ಸಂಘವೊಂದು ತ್ರಿವೇಣಿಯವರ 'ಬೆಕ್ಕಿನಕಣ್ಣು' (ಕಾದಂಬರಿಯ ರೂಪಾಂತರ) ನಾಟಕವನ್ನು ಅಭಿನಯಿಸಿದ್ದುಂಟು. ಆದರೆ ಇದೇ ಕೃತಿ ರೇಡಿಯೋ ಮಧ್ಯಮದಲ್ಲಿ ಹೆಚ್ಚು ಯಶಸ್ವಿಯಾಗಿತ್ತು. ಇಂತಹ ಪ್ರಯೋಗಗಳಲ್ಲಿ 'ಮಾಧ್ಯಮ'ವನ್ನು ಗಮನಿಸಬೇಕಾಗುತ್ತದೆ. ಆದುದರಿಂದ ಇವು ರಂಗಭೂಮಿಯ ಪ್ರಯೋಗಗಳಾಗುವುದಿಲ್ಲ. ಅಂತಹ ದೌರ್ಬಲ್ಯವನ್ನು ಇವುಗಳಲ್ಲಿ ಸ್ಪಷ್ಟವಾಗಿಯೂ ಗುರುತಿಸಬಹುದು.

5. 'ಜಾನಪದ'ದ ತಿಳುವಳಿಕೆಯಿಂದ ರೂಪಿತವಾದ ಕೆಲವು ನಾಟಕಗಳು ಈಚೆಗೆ ಕಾಣಿಸಿಕೊಂಡಿವೆ. ಹೀಗೆ ತನ್ನ ಪರಿಸರದಿಂದ ಕಿತ್ತಂತೆ ತಂದು ಪ್ರಯೋಗಿಸಿದ 'ಸಂಗ್ಯಾಬಾಳ್ಯಾ' ಒಂದು ಕಲಾತ್ಮಕ ಬಯಲಾಟ. ಇದರಿಂದ ನಾಗರಿಕ ಪ್ರೇಕ್ಷಕರಿಗೂ ರೋಮಾಂಚಕ ಅನುಭವವಾದುದುಂಟು. ಇಂತಹ ಕೃತಿಗೆ ಹಳ್ಳಿಯ ನಟರೇ ನಿಸ್ಸೀಮರೆಂಬುದೂ ಗಮನಿಸಬೇಕಾದ ವಿಷಯ. ಆದರೆ ನಮ್ಮ ಹಳ್ಳಿಯ ಜೀವನ ವನ್ನು ಆಸಕ್ತಿಯಿಂದ ಪರಿಶೀಲಿಸುವಂತೆ ಈ ನಾಟಕದ ಪ್ರಭಾವವಾಯಿತು. ಗೊ.ರು. ಚೆನ್ನಬಸಪ್ಪನವರ (1) ಸಾಕ್ಷಿಕಲ್ಲು. ಕಾಳೇಗೌಡನಾಗವಾರರ (2) ಬೆಟ್ಟಸಾಲು ಮಳೆ, ವಿಜಯ ಸಾಸನೂರರ (3) ಸೇವೆ. ಇವುಗಳಲ್ಲಿ ನಮ್ಮ ಹಳ್ಳಿಯ ಜೀವನವನ್ನು ಪಟ್ಟಣದವರು ಪರಿಶೀಲಿಸುವ ವಿಶೇಷ ರೀತಿಯೊಂದು ಬೆಳೆಯುತ್ತಿದೆ.

ನಮ್ಮ 'ಬಂಡಾಯ' ಸಾಹಿತ್ಯದ ಚಳುವಳಿಯು ಇದಕ್ಕೆ ಕಾರಣವೆಂದರೂ ಸರಿಯೆ. ಇದಕ್ಕಾಗಿ ಬಾದಲ್ ಸರ್ಕಾರ್ ಅವರು ಒಂದು ಒಂದು work shop ನಡೆಯಿಸಿ ಅಲ್ಲಿ 'ಬೆಲ್ಚಿ' ನಾಟಕವನ್ನು ಪ್ರಯೋಗಿಸಿ ಸೇರಿಸಿಕೊಟ್ಟರು.—ಇದನ್ನು ಒಂದು ಮುಖ್ಯವಾದ ಬೀದಿ ನಾಟಕವೆಂದು ಗಣಿಸಬಹುದು. (ಇದರ ನೂರಾರು ಪ್ರಯೋಗಗಳೂ ಆಗಿವೆ.)

ಈ ಹಿನ್ನೆಲೆಯಲ್ಲಿ ಶಿವರಾಮಕಾರಂತರ 'ಚೋಮನದುಡಿ' (ಸಿನಿಮಾದ ವಾಕ್ ರೂಪವನ್ನು) ನಾಟಕವಾಗಿ ಪ್ರಸಿದ್ಧಿಗೆ ಬಂದಿದೆ. ಆರ್. ನಾಗೇಶ್ ಇದರ ನಿರ್ದೇಶಕ ನಟರು. ಬಯಲು ರಂಗಭೂಮಿಗೆ (ಬೆಂಗಳೂರಿನ ಚಿತ್ರ ಕಲಾಪರಿಷತ್ತಿನ ರಂಗ ಭೂಮಿ) ಇದೊಂದು ವಿಶೇಷ ಕಾಣಿಕೆಯೆನ್ನಬಹುದು. ಇಂತಹ ಪ್ರಯೋಗಗಳನ್ನು ಗಮನಿಸಿದಾಗ ನಮ್ಮ ಸಾಹಿತ್ಯಿಕ ಚಳುವಳಿಗಳು ನಮ್ಮ ರಂಗಭೂಮಿಯನ್ನು ಒಳ ಗೊಳ್ಳುತ್ತಿವೆ ಎನ್ನಬಹುದು. ಇದರಿಂದ ನಮ್ಮ ರಂಗಭೂಮಿಯ 'ವಿಚಾರ ಶಕ್ತಿ' ಯಂತೂ ಅರ್ಥಪೂರ್ಣವಾಗುತ್ತಿದೆ.

6. ಕನ್ನಡದ ಸ್ವತಂತ್ರ ನಾಟಕಗಳ ಜೊತೆಗೆ 'ಅನುವಾದ'ಗಳನ್ನು ಹೇರಳ ವಾಗಿಯೇ ಕಾಣುತ್ತೇವೆ. ಇದರಿಂದ ಕನ್ನಡ ನಾಟಕಗಳು ಕಡಿಮೆ ಅಥವಾ ಸಾಲ ದೆಂಬ ಅನುಮಾನವೂ ಮಾಡಬಹುದು. ಆದರೆ ವಾಸ್ತವವಾಗಿ ಅನುವಾದಗಳನ್ನು ಬರಸುತ್ತಲೇ ಬೆಳೆಯುವುದು ಕನ್ನಡ ರಂಗಭೂಮಿಯ ಒಂದು ಲಕ್ಷಣವೂ ಆಗಿದೆ. ಮರಾಠಿಯಿಂದ ಪು.ಲ. ದೇಶಪಾಂಡೆ, ತೆಂಡೂಲ್ಕರ್ ಮತ್ತು ಜಯವಂತದಳ್ವಿಯವರ ಅನುವಾದಗಳು ಹೆಚ್ಚು ಆಕರ್ಷಕವಾಗಿವೆ. ಇವುಗಳಲ್ಲಿ (1) ವಿಠ್ಠಲ ಬಂದಾ, (2) ತನುವು ನಿನ್ನದು ಮನವು ನಿನ್ನದೇ (3) ಸದ್ದು! ವಿಚಾರಣೆ ನಡೆಯುತ್ತಿದೆ. (4) ಘಾಶೀರಾಂ ಕೊತ್ವಾಲ್ (5) ಬ್ಯಾರಿಸ್ಟರ್ – ಇವು ತುಂಬ ಮೆಚ್ಚಿಕೆಯನ್ನು ಗಳಿಸಿರುವ ಪ್ರಯೋಗಗಳಾಗಿವೆ. (ಇವುಗಳನ್ನು ಕ್ರಮವಾಗಿ ಬಿ. ಎಸ್. ನಾಣಿ,

ಕೆ.ವಿ. ಅಯ್ಯರ್ ಮತ್ತು ಲೋಕನಾಥ್. ಬಿ. ವಿ. ಕಾರಂತ. ಜಯಶ್ರೀ ಮತ್ತು ಕೆ. ವಿ. ಸುಬ್ಬಣ್ಣ, ಶಂಕರನಾಗ್ ನಿರ್ದೇಶಿಸಿದ್ದಾರೆ) ಇವುಗಳ ಪ್ರಭಾವವು ಬೇರೆಯ ಪ್ರಯೋಗಗಳ ಮೇಲೆಯೂ ಆಗಿದೆ ಎನ್ನಬಹುದು.

ಬಂಗಾಲಿಯಿಂದ ಹಿಂದೆ "ಕಂಪೆನಿ" ಗಳು ಲಾಭ ಪಡೆದಿದ್ದುವು. ದ್ವಿಜೇಂದ್ರ ಲಾಲ್‌ರ ಎಲ್ಲಾ ಕೃತಿಗಳು ಕನ್ನಡಕ್ಕೆ ಬಂದಿರಬಹುದು – ಆದರೆ ಈಚೆಗೆ ಬಾದಲ್ ಸರ್ಕಾರ್ (1970ರ ನಂತರ) ಪ್ರಸಿದ್ಧರಾಗಿದ್ದಾರೆ. ಇವರ 'ಏವಂ ಇಂದ್ರಜಿತ್' ನಾಟಕವನ್ನು ಬಿ.ವಿ. ಕಾರಂತರು ಅನುವಾದಿಸಿ ಪ್ರಯೋಗಿಸಿದರು. ನಂತರ ಬಾಕಿ ಇತಿಹಾಸ್. ಮತ್ತು ಹುಚ್ಚು ಕುದುರೆಗಳ ಪ್ರಯೋಗವಾಯಿತು. ಅವರ ನಿರ್ದೇಶನದಲ್ಲಿ ರೂಪ ತಾಳಿದ ಬೆಲ್ಚಿ (ಸಿ.ಜಿ. ಕೃಷ್ಣಸ್ವಾಮಿ, ಸಮುದಾಯ) ಒಂದು ಬೀದಿ ನಾಟಕವಾಗಿದ್ದರೂ ಒಂದು ವಿಶೇಷ ಅನುಭವದ ಕೃತಿಯಾಯಿತು. 1977 ರಲ್ಲಿ ಅವರೇ ಬಂದು ಪ್ರದರ್ಶಿಸಿದ ಬಂಗಾಲಿ ಪ್ರಯೋಗಗಳು ಬೆಂಗಳೂರಿನ ನಾಟಕ ಪ್ರೇಮಿಗಳಿಗೆ ಮರೆಯಲಾಗದ ಅನುಭವಗಳಾದುವು. ಇದರಿಂದ ಬೆಂಗಳೂರಿನಲ್ಲಿ "ಬೀದಿನಾಟಕ"ದ ಚಟುವಟಿಕೆಯು ಸ್ಥಿರವಾಯಿತೆನ್ನ ಬಹುದು. ಈಚೆಗೆ ದೇಬಶೀಷ್ ಮಜುಂದಾರರ ಕಫನ್' (ಮೂಲ: ಪ್ರೇಮಚಂದ್) ಮತ್ತು ತಾಮ್ರಪತ್ರ (ಇದರ ನಿರ್ದೇಶಕ ಗೋಪಾಲಕೃಷ್ಣ ನಾಯರಿ) ಪ್ರಾತಿನಿಧಿಕವಾದ ಪ್ರಯೋಗಗಳಾಗಿವೆ.

7. ಕಳೆದ ದಶಕದಲ್ಲಿ ಅದುವರೆಗೂ ಕನ್ನಡ ರಂಗಭೂಮಿಗೆ ಬೆಂಗಳೂರೇ ಸರಿ– ಎನ್ನುವಂತಿದ್ದ ವಿಷಯವು ಬದಲಾಗುವಂತಾಯಿತು. ಧಾರವಾಡ. ಸಾಗರದ ಬಳಿಯ ಹೆಗ್ಗೋಡು, ಉಡುಪಿ. ಚಿಕ್ಕಮಗಳೂರು, ಮೈಸೂರು, ಗುಲ್ಬರ್ಗ, ದಾವಣಗೆರೆ. ಬಿಜಾಪುರ – ಮುಂತಾದ ಸ್ಥಳಗಳಲ್ಲಿ ನವ್ಯ ನಾಟಕಗಳ ಪ್ರಯೋಗಗಳು ಜರುಗತೊಡಗಿದುವು. ಅವಶ್ಯವಾದ ಸೆಟ್ಸ್, ಬೆಳಕಿನ ಯೋಜನೆ ಮತ್ತು ಪ್ರೇಕ್ಷಕರ ಮನ ಮುಟ್ಟುವ ನಾಟಕಗಳು ನಮ್ಮ ರಂಗಭೂಮಿಯ ಲಕ್ಷಣಗಳಾಗಿವೆ. ಇಂಥ ಸ್ಥಿತಿಗತಿಗೆ ಪರದೇಶಗಳಿಂದ ಬಂದ ನಾಟಕ ಸಂಸ್ಥೆಗಳ ಪ್ರದರ್ಶನಗಳೂ ಕಾರಣವಾಗಿವೆ. ಇವುಗಳಲ್ಲಿ ಇಂಗ್ಲಿಷ್ ನಾಟಕಗಳೂ ಮುಖ್ಯ ಪಾತ್ರವಹಿಸಿವೆ. 1950ರ ದಶಕದಲ್ಲಿ ಇಬ್ಸನ್ ನಾಟಕಗಳನ್ನು ಕೆ.ವಿ. ಅಯ್ಯರ್ ಪ್ರಯೋಗಿಸಿದ್ದರು. 1970ರ ದಶಕದಲ್ಲಿ ಷೇಕ್ಸ್‌ಪಿಯರ್ ಮತ್ತೆ ಅನುವಾದಕರ ಸ್ವತ್ತಾದ. ನಿಸಾರ್ ಅಹಮದ್‌ರ 'ಮಿಡ್ ಸಮರ್ ನೈಟ್ಸ್ ಡ್ರೀಂ" ಮತ್ತು 'ಒಥೆಲೋ'ಕೃತಿಗಳನ್ನು ಬೆಂಗಳೂರಿನ "ನಟರಂಗ"ದವರು ಪ್ರಯೋಗಿಸಿದರು. ಮುಂದೆ ರಾಮಚಂದ್ರದೇವರ "ಹ್ಯಾಮ್‌ಲೆಟ್" ಮತ್ತು "ಮ್ಯಾಕ್‌ಬೆತ್" ನಾಟಕಗಳು ಪ್ರಯೋಗಗಳಾದುವು. ಇವುಗಳನ್ನು ನಿರ್ದೇಶಿಸಿದ ಬಾದರ್‌ದಿನ್ನಿ ಇಂದಿಗೆ ಒಬ್ಬ ಮುಖ್ಯ ನಿರ್ದೇಶಕರೆನ್ನಿಸಿಕೊಂಡಿದ್ದಾರೆ.

"ಸಮುದಾಯದ"ವರು ಸಿ.ವೀರಣ್ಣರ "ತಾಯಿ" ಮತ್ತು "ಗೆಲಿಲಿಯೋ" ನಾಟಕಗಳನ್ನು ಬ್ರೆಕ್ಟ್‌ರ ರೀತಿಯಲ್ಲಿ ಪ್ರಯೋಗಿಸಿದರು. ಹೀಗೆಯೇ ಚಿ.ನ. ಮಂಗಳರ

"ಎಲ್ಲಾ ನನ್ನ ಮಕ್ಕಳೇ (ಹೆನ್ರಿಮಿಲ್ಲರ್‌ಕೃತಿ), ಜಿ.ಕೆ. ಗೋವಿಂದರಾವ್‌ರ "ಚೆಗವಾರಾ" ಜಿ. ಎನ್. ರಂಗನಾಥರಾವ್‌ರ "ಕಕೇಷಿಯನ್ ಚಾಕ್ ಸರ್ಕಲ್" (ಬ್ರೆಕ್ಟ್ ನಾಟಕ), ಪರ್ವತವಾಣಿ'ಯವರ 'ಅಧಃಪಾತಾಳ' (ಗೋರ್ಕಿಯು ಕೃತಿ) ಸುಧೀಂದ್ರರ "ಮಳೆ ನಿಲ್ಲುವವರೆಗೂ" ಪ್ರಯೋಗಗಳಾಗಿವೆ.

ರವೀಂದ್ರ ಕಲಾಕ್ಷೇತ್ರದ ಹಿಂಬದಿಗೆ ಬಯಲು ರಂಗಭೂಮಿಯಲ್ಲಿ ಈಡಿಪಸ್ ದೊರೆ – ಒಂದು ವಿಶೇಷ ಪ್ರಯೋಗವಾದಂತೆ ಕಲಾಕ್ಷೇತ್ರದಲ್ಲಿ "ಚೆಗವಾರಾ" ಒಂದು ಮರೆಯಲಾಗದ ಅನುಭವವಾಗಿಸಿದವರು ಬಿ. ವಿ. ಕಾರಂತರೇ ಆಗಿದ್ದಾರೆ. ಹೀಗೆಯೇ ಪಟ್ಟಿಯು ಬೆಳೆಯಬಹುದು. ಮಾರ್ಕ್ಲೋರ "ಡಾಕ್ಟರು ಫಾಸ್ಟಸ್" (ರಾಣೆ ರಾವ್ ನಿರ್ದೇಶನ) ಅರಿಸ್ಟೋಫೇನಿಸ್‌ನ 'ಮೋಡಗಳು' (ಚಂದ್ರು ನಿರ್ದೇಶನ) ಸಾರ್ತ್ರ್‌ನ "ಕಿಂಗ್‌ಅಂಡ್‌ನೋ ಎಕ್ಸಿಟ್" (ವೆಂಕಟಸುಬ್ಬಯ್ಯನವರ ನಿರ್ದೇಶನ) ಅನೂಲಿಯ "ಬೆಕೆಟ್" ಮತ್ತು 'ನೆರಳಿಲ್ಲದವರು' ಸಾರ್ತ್ರ್‌ರನ 'ಮೆನ್ ವಿಥೌಟ್ ಷಾಡೋಸ್' ನಾಟಕಗಳನ್ನು ಶ್ರೀನಿವಾಸಪ್ರಭುಗಳು ಯಶಸ್ವಿಯಾಗಿ ಪ್ರಯೋಗಿಸಿದ್ದಾರೆ.

ಇಂಥ ಪ್ರಯೋಗಗಳ ಯಶಸ್ಸಿನ ಹಿನ್ನೆಲೆಗೆ ಪರಕೀಯ ಸಂಸ್ಥೆಗಳು ಇಲ್ಲಿಗೆ ಬಂದು ನೀಡಿದ ಪ್ರದರ್ಶನಗಳು 1970ರ ದಶಕದಲ್ಲಿಯಂತೂ ಬಹುಮುಖ್ಯವಾಗಿವೆ. ದೆಹಲಿಯಿಂದ ಅಲ್ಕಾಜಿಯವರ ಗುಂಪು ಸುಮಾರು 1972 ರ ವೇಳೆಗೆ ನೀಡಿದ ಕಕೇಷಿಯನ್ ಚಾಕ್ ಸರ್ಕಲ್ ಮತ್ತು ಥ್ರೀ ಪೆನ್ನಿ ಅಪೆರಾಗಳಲ್ಲದೆ ಜಸ್ಮಾ. ಓಡನ್ ನೃತ್ಯನಾಟಕ ಷೇಕ್ಸ್‌ಪಿಯರ್‌ನ 400 ನೇ ಶತಾಬ್ದಿಯ ಪ್ರಚಾರಕ್ಕೆಂದೇ ಬಂದ ಒಂದು ಇಂಗ್ಲಿಷ್ ಸಂಸ್ಥೆ ನೀಡಿದ ರೋಸೆನ್ ಕ್ರಾಸ್ ಅಂಡ ಗಿಲ್ಡಿಸ್ಟ್ರನ್ ಆರ್‌ಡೆಡ್ ಮತ್ತು ಹ್ಯಾಮ್‌ಲೆಟ್ ಮತ್ತು ಬರ್ತ್‌ಡೇ ಪಾರ್ಟಿ (ಆಸ್ ಬೋರಾನ್ ಕೃತಿ) ಮೊದಲಾದುವು ಇಂಥವೆಲ್ಲಾ ನಮ್ಮ ಹವ್ಯಾಸಿ ಸಂಸ್ಥೆಗಳ ಕಲಾವಿದರನ್ನು ಉತ್ತೇಜಿಸಿವೆ. ಕಲೆಯ ವ್ಯಾಮೋಹವನ್ನು ಒಂದು ಮೌಲ್ಯವನ್ನಿಸಿವೆ. "ಅಂಥಾ" ಪರಿಣಾಮವನ್ನು ತಾವೂ ತರಬೇಕೆಂದು ಹುರಿದುಂಬಿಸಿವೆ. ಇತ್ಯಾದಿ.

8. ಒಟ್ಟಿನಲ್ಲಿ ಕನ್ನಡ ರಂಗಭೂಮಿಯಲ್ಲಿ ಒಂದು ಬಗೆಯ ಸಾಮಾಜಿಕವೂ ರಾಜಕೀಯವೂ ಅದೇವೇಳೆಗೆ ಕಲಾತ್ಮವೂ ಆದ ಒತ್ತಡವು ಪ್ರದರ್ಶನ ರೂಪವನ್ನು ತಳೆದಂತಾಗಿದ್ದು 1970ರ ದಶಕದಲ್ಲಿ ಎನ್ನಬಹುದು. ಇವರಿಂದ ಹೊಸ ನಾಟಕಗಳಿಗೆ ಕರೆಯಿತ್ತಂತೆಯೂ ಆಗಿದೆ. ಇತ್ತೀಚೆಗೆ 'ರಾಜಕೀಯ ನಾಟಕ'ಗಳು ಎಂದು ಕರೆಯಬಹುದಾದ ಒಂದು ಬಗೆಯ ಕೃತಿಗಳು ಕಾಣಿಸಿಕೊಂಡಿವೆ. ಟಿ.ಎನ್. ಸೀತಾರಾಂರ 'ಆಸ್ಫೋಟ' ಮತ್ತುವೈಕುಂಠರಾಜು ಅವರ "ಸಂದರ್ಭ" ನಾಟಕಗಳು ಇತ್ತೀಚೆಗೆ ಪ್ರಯೋಗವಾಗಿವೆ. ಇವರ ಜೊತೆಗೆ "ಸ್ವರ್ಗಸ್ಥ"ದಿಂದ "ನಿಸರ್ಗಪ್ರಿಯ"ರೂ 'ಕಲ್ಯಾಣದಲ್ಲಿ ಒಂದು ಕ್ರಾಂತಿ'ಯಿಂದ ಹೂಲಿ ಶೇಕರ್ ಅವರು "ಕ್ರಮ"ದಿಂದ ಸತ್ಯ

ನಾರಾಯಣರೂ "ಹೆಜ್ಜೆಗಳು" ಕೃತಿಯಿಂದ ಹೆಚ್.ಎಸ್. ವೆಂಕಟೇಶ ಮೂರ್ತಿಗಳು "ನಾಳೆ ಯಾರಿಗೂ ಇಲ್ಲ"ದಿಂದ ಶ್ರೀನಿವಾಸ ರಾಜು ಲಿಂಗದೇವರು ಹಳೆಮನೆ ಅವರು 'ಚಿಕ್ಕದೇವ ಭೂಪ'ದಿಂದ ಮತ್ತು "ಗಾಂಧಾರಿ"ಯಿಂದ ಶೂದ್ರ ಶ್ರೀನಿವಾಸ್–ಹೀಗೆ ತರುಣರ ಒಂದು ಹೊಸಪೀಳಿಗೆ ನಾಟಕ ರಚನೆಯಲ್ಲಿ ತೊಡಗಿದೆ.

ಶ್ರೀರಂಗರ "ನೀವೇ ಹೇಳಿರಿ" ಮತ್ತು "ಕಾಲಾಯ ತಸ್ಮೈನಮಃ" ಎಂಬ ಹೊಸ ಕೃತಿಗಳು ಪ್ರಕಟವಾಗುತ್ತಿವೆ. ಅವರ ಪ್ರಾಯೋಗಿಕ. ಸಾಮಾಜಿಕ ಕಳಕಳಿಯನ್ನು ಬಹುಶಃ ಮತ್ತೆ ಯಾರೂ ಮೀರಲಾರೆನ್ನಬಹುದು.

9. ಒಟ್ಟಿನಲ್ಲಿ ಕನ್ನಡ ರಂಗ ಭೂಮಿಗೆ 1970ರ ವರ್ಷಗಳಲ್ಲಿ ಹತ್ತಾರು ಬಗೆಯ ಸಾಧ್ಯತೆಗಳು ಪ್ರಾಯೋಗಿಕವಾಗಿ ಒದಗಿಬಂದಿತೆಂಬುದನ್ನು ಗುರುತಿಸಬೇಕಾಗುತ್ತದೆ.

ಇವುಗಳಲ್ಲಿ ಅತ್ಯಂತ ಶ್ರೇಷ್ಠ ಕೃತಿಗಳೆಂದು ಗುರುತಿಸಲು ಯತ್ನಿಸಿದರೆ ಶ್ರೀರಂಗರ 'ಕೇಳುಜನಮೇಜಯ', 'ಕತ್ತಲು ಬೆಳಕು' ಮತ್ತು 'ಸ್ವರ್ಗಕ್ಕೆ ಮೂರೇ ಬಾಗಿಲು' ನಾಟಕಗಳೂ, ಕಾರ್ನಾಡರ 'ತುಘಲಕ್' ಮತ್ತು ಲಂಕೇಶರ 'ಸಂಕ್ರಾಂತಿ' ನಾಟಕಗಳೂ ನೆನಪಾಗುತ್ತದೆ.

ಏಕಾಂಕಗಳಲ್ಲಿ ಶ್ರೀರಂಗರ 'ಸ್ವಗತಸಂಭಾಷಣ' ಲಂಕೇಶರ 'ತೆರೆಗಳು' ಸಿ.ಜಿ. ಕೃಷ್ಣಸ್ವಾಮಿಯವರ 'ಬೆಲ್ಚಿ' ಇವುಗಳನ್ನು ಹೇಳಬೇಕಾಗುತ್ತದೆ.

ಸಾಧನೆ

1972-1981

ಲೇಖನ ಸೂಚಿ

ಕವಿತೆ

29	ಕವನ ಹುಟ್ಟುವ ಸಮಯ	ನರಸಿಂಹಸ್ವಾಮಿ, ಕೆ. ಎಸ್.	2-2	1
30	ಇದ್ದಂತೆ ನೀನು ಬಾ	ನಾಗಲಕ್ಷ್ಮಿ ಹರಿಹರೇಶ್ವರ	2-2	22-23
31	ಹಾಯಿ	ಮೇಗರವಳ್ಳಿ ರಮೇಶ್	2-2	44-45
32	ಉಂಗುರ	ಶಶಿಧರ ಕುಲಕರ್ಣಿ	2-2	54
33	ಸೀಮಾಬದ್ಧ	ಜಯಸುದರ್ಶನ	2-2	61-62
34	ಕಲಸು	ಭಾಗ್ಯಲಕ್ಷ್ಮಿ, ಎನ್. ವಿ.	2-2	74
35	ದಿಲ್ಲಿಯ ಚಳಿ	ರಾಜಗೋಪಾಲ, ಕ. ವೆಂ.	2-3	1-2
36	ಒಂದು ಕಾಲಿಲ್ಲದ ಕತ್ತೆ	ವಿನಾಯಕ	2-3	20-21
37	ಪ್ರೇಮ ಪತ್ರ	ನರಸಿಂಹಸ್ವಾಮಿ, ಕೆ. ಎಸ್.	2-3	25-27
38	ಬಿಟ್ಟೆನೆಂದರೂ ಬಿಡದೀ ಮಾಯೆ	ಕೋದಂಡರಾಮ್, ಕೆ. ಎಂ.	2-3	36-38
39	ನಿರಾಳ	ಜಯಸುದರ್ಶನ	2-3	44
40	ಇಪ್ಪತ್ತೈದು ವರ್ಷಗಳೆ ನಿನಗೀಗ ಮಗು ?	ಸಿದ್ಧಲಿಂಗಯ್ಯ, ಜಿ. ಎಸ್.	2-4	1-2
41	ಒಂಟಿ	ಜಯಸುದರ್ಶನ	2-4	146
42	ಕೆಲವರಿಗೆ ಹೂವೆಂದರೆ ಬಲು ಪ್ರೀತಿ	ಶ್ರೀನಾಥ ರಾಯಸಮ್	2-4	165-166
43	ಕರ್ಮಣ್ಯೇವಾಧಿಕಾರಸ್ತೇ	ರೇಣುಕ ಪ್ರಸನ್ನ, ಮ. ಗಂ.	2-4	198-200
44	ನಿರಾಶ್ರಿತರು ನಾವು	ವೆಂಕಟೇಶಮೂರ್ತಿ, ಎಚ್. ಎಸ್.	2-4	201-204
45	ಇತಿವೃತ್ತ	ವೇಣುಗೋಪಾಲ ಸೊರಬ	3-1	1-4
46	ನೆಲವಿಲ್ಲದೆ ಬೇರಿಲ್ಲ	ಜಯಸುದರ್ಶನ	3-1	103-105
47	ನಮ್ಮೂರಿನವನು	ಶ್ರೀನಿವಾಸ, ವೆಂ.	3-1	126-127
48	ರೆಕ್ಕೆಹುಳ	ವ್ಯಾಸರಾವ್, ಎಂ. ಎಸ್.	3-1	158
49	ಜ್ಞಾನ ಭಾರತಿಗೆ	ಶಿವರುದ್ರಪ್ಪ, ಜಿ. ಎಸ್.	3-2	1
50	ದಾರಿ-ಪಾಠ	ಜೈಪ್ರಕಾಶ್, ಎಂ. ಎನ್.	3-2	49-50
51	ಪರಿತ್ಯಕ್ತ	ಜಯಸುದರ್ಶನ	3-2	92-94
52	ಪುರವರ್ಣನ	ವೆಂಕಟೇಶಮೂರ್ತಿ, ಎಚ್. ಎಸ್.	3-2	119-122
53	ನನ್ನ ಗುಲಾಬಿ ಗುಲಾಬಿಯ ನಾನು	ಜಯಸುದರ್ಶನ	3-3	1-3
54	ರತಿ	ಮೇಗರವಳ್ಳಿ ರಮೇಶ	3-3	28-29
55	ಶ್ರೀ ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯನವರನ್ನು ಕುರಿತ ಲಾವಣಿ	ಕೃತಿಕಾರ : ದಿ. ಮೂಗೂರು ಮಲ್ಲಪ್ಪ ಸಂಪಾದಕ : ಎಸ್. ಭೀಮಪ್ಪ	3-3	64-72
56	ಬಟ್ಟೆಯಂಗಡಿಯಲ್ಲಿ	ಶ್ರೀಕಂಠಕೂಡಿಗೆ, ಕೆ.	3-3	89
57	ಕ್ಷೇತ್ರ	ಗಂಗಾಧರಾಚಾರ್, ಎಚ್. ಎಚ್.	3-3	124
58	ಈ ಊರಿನ ಕಥೆ	ವ್ಯಾಸರಾವ್, ಎಂ. ಎಸ್.	3-3	162-163

90	ಕೆಲವು ನೋವಿನ ಪದ್ಯಗಳು	ಜೈಪ್ರಕಾಶ್, ಎಂ. ಎನ್.	5-1	92
91	'ಏಡನ್'ನ ಮರದ ಅಡಿಯಲ್ಲಿ	ಶಶಿಧರ ಕುಲಕರ್ಣಿ	5-1	134
92	ಒಂದು ಈಜಿಪ್ಷಿಯನ್ ಕವನ	ವೆಂಕಟ ಕೃಷ್ಣಯ್ಯ, ಎನ್.	5-2	1-2
93	ಕಿವಿಮಾತು	ಶಿವರುದ್ರಪ್ಪ, ಜಿ. ಎಸ್.	5-2	23
94	ಕುಟುಂಬ ಯೋಜನೆ	ಭೀಮನಗೌಡರ, ಎಚ್.ಎಸ್.	5-2	49
95	ಆಕಾಶದ ಕಡೆಗೆ ನೋಡು (ಅನು.)	ಮೀರಾಚಕ್ರವರ್ತಿ ಲಲಿತಾಂಬ, ಬಿ. ವೈ.	5-2	70
96	ಬದುಕು	ಗಂಗಾಧರಾಚಾರ್, ಎಚ್.ಎಚ್.	5-2	81
97	ಬೆಟ್ಟಕ್ಕೆ ಕಲ್ಲು	ಜಯಸುದರ್ಶನ	5-3	1-2
98	ದಾರಿ	ಶ್ರೀನಾಥರಾಯಸಂ	5-3	62-63
99	ಸಲ್ಲದ ನಾಣ್ಯ	ರಾಚಪ್ಪ, ಆರ್.	5-3	32-33
100	ಬೇಸಿಗೆಯ ಮೂರು ಚಿತ್ರಗಳು	ಶಾಸ್ತ್ರೀ, ಎನ್. ಆರ್.	5-3	77-78
101	ಹದ್ದು ಮತ್ತು ಮಾಂಸ	ಭೀಮನಗೌಡರ, ಎಚ್. ಎಸ್.	5-3	114
102	ಇನ್ನೆಂದು ಬೆಳಗು ನಿಮಗೆ ?	ಶಿವರುದ್ರಪ್ಪ, ಜಿ. ಎಸ್.	5-4	1
103	ದಾರಿ	ಭಾಗ್ಯಲಕ್ಷ್ಮಿ, ಎನ್. ವಿ.	5-4	28
104	ಗೋರಿ	ಶ್ರೀನಿವಾಸಮೂರ್ತಿ, ಎಂ. ವಿ.	5-4	58-59
105	ನಿಮ್ಮಿಂದ ದೂರ	ಪ್ರಭುಸ್ವಾಮಿ ಮಠ	5-4	77-
106	ಬೇಡ	ರಾಜಣ್ಣ, ಬಿ.	5-4	-104
107	ತನಿಖೆ	ದೊಡ್ಡರಂಗೇಗೌಡ	5-4	133-34
108	ಶುಭಾಶಯಗಳು	ಗಂಗಾಧರಚಾರ್, ಎಚ್. ಎಚ್.	6-1	1-2
109	ಆರ್. ಪಿ. ಎ. 301-ಒಂದು ಕಂಪ್ಯೂಟರ್ ಕವಿ–	ಲಲಿತಾಂಬ, ಬಿ. ವೈ.	6-1	56-58
110	ಕತ್ತಲೂ ಕೂಡಾ ಕೆಂಪೇರಿದೆ	ಸುಬ್ಬರಾವ್, ಟಿ. ವಿ.	6-1	68
111	ಕೇಳುವವರಿಗಾಗಿ	ಮೇಗರವಳ್ಳಿ ರಮೇಶ್	6-1	90-91
112	ಭ್ರಮನಿರಸನ	ಸುರೇಶ ಪಾಟೀಲ	6-1	116-117
113	ಮಗು	ವೇಣುಗೋಪಾಲ ಸೊರಬ	6-2	1-3
114	ಗೃಹಿಣಿ	ಗಂಗಾಧರಾಚಾರ್, ಎಚ್.ಎಚ್.	6-2	49
115	ತೂಗುತ್ತಿದೆ ಲೋಲಕ	ದೊಡ್ಡರಂಗೇಗೌಡ	6-2	69-70
116	ಮಳೆ	ಗುಂಟೂರು ಶೇಷೇಂದ್ರಶರ್ಮ	6-2	90
117	ಮಾತಿನ ಮಲ್ಲಿ	ಮೂಲ : ವಿದ್ಯಾಪತಿ ಅನು : ಜೈಪ್ರಕಾಶ್, ಎಂ. ಎನ್.	6-2	122
118	ನೋವು	ಗಂಗಾಧರಾಚಾರ್, ಎಚ್.ಎಚ್.	6-3	1-2
119	ಪಶ್ಚಾತ್ತಾಪ	ದೊಡ್ಡರಂಗೇಗೌಡ	6-3	40
120	ಸಾಮಾನ್ಯನ ಕುರಿತು	ವಿಜಯಕುಮಾರ್, ಹ. ನಂ.	6-3	54
121	ಬುದ್ಧಿಜೀವಿ	ಬಿದರಹಳ್ಳಿ ನರಸಿಂಹಮೂರ್ತಿ	6-3	63-64
122	ಇನ್ನೊಬ್ಬ ದೇವ	ಸುಬ್ಬರಾವ್ ಟಿ. ವಿ. ಮತ್ತು ವೆಂಕಟೇಶಮೂರ್ತಿ, ಎಚ್.ಎಸ್.	6-3	116-117
123	ಸುವಾಸಿನೀ	ಜೈಪ್ರಕಾಶ್, ಎಂ. ಎನ್.	6-3	83

ಕಾವ್ಯ ಮೀಮಾಂಸೆ

24	"ಪೂರ್ವ ನಿರೂಪಣಾ ತಂತ್ರ" ಮತ್ತು "ಸಿಂಹಾವಲೋಕನ ತಂತ್ರ"–ಒಂದು ಸ್ಪಷ್ಟನೆ	ಚಂದ್ರಶೇಖರ ನಂಗಲಿ, ವಿ.	8-4	13-25
25	ಭಾಷೆಯ ದುಃಸ್ಥಿತಿಯ ಹಲವು ನೆಲೆಗಳು	ಸತ್ಯನಾರಾಯಣ, ಕೆ.	9-3	120-127
26	"ಭಾವಗೀತೆ"–ಕೆಲವು ಟಿಪ್ಪಣಿಗಳು	ನರಸಿಂಹಮೂರ್ತಿ, ಆರ್.	10-1	133-138
27	ಕವಿಯಲ್ಲಿ ಸ್ವೋಪಜ್ಞತೆಯೆಲ್ಲಿ ?	ಸನದಿ, ಬಿ. ಎ.	10-2	101-103
28	ಸಾಹಿತ್ಯ ಪರಂಪರೆ	ಮಂಗಳಾ ಪ್ರಿಯದರ್ಶಿನಿ, ಡಿ.	10-2	110-112
29	ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಮರ್ಶೆ	ರುದ್ರಪ್ಪ ಕಾಯಿ	10-3	2-16
30	ಸೃಜನ ಸಾಹಿತ್ಯ ಪ್ರಗತಿ	ನಾರಾಯಣ, ಕೆ. ವಿ.	10-4	68-83

ಕವಿ ಕಾವ್ಯ ವಿಚಾರ : ಕಾಲ, ದೇಶಗಳ ಚರ್ಚೆ

1	ಕಾಲ ವಿಷಯದ ಚರ್ಚೆಯಲ್ಲಿ ವಡ್ಡಾರಾಧನೆಯ ಭಾಷೆ	ಭೋಯಿ, ಎಂ. ಬಿ.	9-2	33-44
2	ಎರಡನೆಯ ನಾಗವರ್ಮನ ಕಾಲ	ಸಂಗಮೇಶ ಬಿರಾದಾರ	4-3	79-92
3	ಕುಮಾರವ್ಯಾಸ ಹಾಗೂ ಕುಮಾರ ವಾಲ್ಮೀಕಿ ಕವಿಗಳ ಕಾಲ ಮತ್ತು ಮತಗಳ ವಿಚಾರ	ಸೀತಾರಾಮ ಜಾಗೀರ್‌ದಾರ್	5-2	133-168
4	ಕವಿ ಶಿಶುಮಾಯಣನ ಕಾಲ	ನಾಗರಾಜಯ್ಯ, ಹಂ.ಪ	6-1	69-77
5	ಪ್ರಭುದೇವ ಶೂದ್ರನೇ ?	ಶಿವಾನಂದ, ವಿ.	6-1	107-115
6	ಬೆಳಕಿಗೆ ಬಾರದ ಕೆಲವು ಕವಿಗಳು ಮತ್ತು ಕೃತಿಗಳು	ಬಿರಾದಾರ, ಎಂ. ಜಿ.	6-2	81-89
7	ಕವಿತಾ ಗುಣೋದಯ ನಾಗವರ್ಮನ ಕಾಲ ವಿಚಾರ	ದೇವೀರಪ್ಪ, ಎಚ್.	6-3	95-104
8	ಶ್ರೀ ಮಹೀಪತಿರಾಯರ ಕಾಲವಿಚಾರ	ಕೃಷ್ಣ ಕೊಲ್ಹಾರ ಕುಲಕರ್ಣಿ	6-4	91-104
9	ಬಸವ ಪೂರ್ವಯುಗದ ವೀರಶೈವದ ಅಧ್ಯಯನಕ್ಕೊಂದು ಆಕರ	ವಿದ್ಯಾಶಂಕರ, ಎಸ್.	8-4	26-56
10	ಜೇಡರ ದಾಸಿಮಯ್ಯನ ಮತ	ಸ್ವಾಮಿ, ಬಿ. ಜಿ. ಎಲ್.	9-1	65-68
11	ಗಂಗರ ಸಾಹಿತ್ಯಕ ಚಟುವಟಿಕೆಗಳು	ಕೊಪ್ಪಾ, ಎಸ್. ಕೆ.	9-1	104-123
12	ಜೇಡರ ದಾಸಿಮಯ್ಯನ ವೀರಶೈವತ್ವ	ಚಿದಾನಂದಮೂರ್ತಿ, ಎಂ.	9-3	2-5
13	ವೀರಶೈವ ಯುಗದ ವ್ಯಾಪ್ತಿ	ಕಲಬುರ್ಗಿ, ಎಂ. ಎಂ.	10-3	98-113

ಸಾಹಿತ್ಯ ಚರಿತ್ರೆ

1	ಪಂಪಯುಗದ ವ್ಯಾಪ್ತಿ –ಒಂದು ವಿವೇಚನೆ	ಕುಲಕರ್ಣಿ, ಎಂ. ಎಂ.	1-4	37-48
2	ಕನ್ನಡ ಚಂಪೂ ಷಟ್ಪದಿಗಳಲ್ಲಿ ಶ್ರೀಕೃಷ್ಣ ಪಾತ್ರ ಚಿತ್ರಣ	ಲಕ್ಷ್ಮೀದೇವಿ, ಎಂ. ಆರ್.	2-4	125-145
3	ಕರ್ನಾಟಕ ಇತಿಹಾಸ ಮತ್ತು ಕನ್ನಡ ಸಾಹಿತ್ಯ	ಚಿದಾನಂದಮೂರ್ತಿ, ಎಂ.	3-1	44-54
4	ಉಪರಾಷ್ಟ್ರೀಯತೆ ಮತ್ತು ಕನ್ನಡ ಸಾಹಿತ್ಯ	ಶಿವರುದ್ರಪ್ಪ, ಜಿ. ಎಸ್.	3-2	27-37
5	ಸಾಹಿತ್ಯ–ಚರಿತ್ರೆಗಳು ಕೆಲವು ಟಿಪ್ಪಣಿಗಳು	ಗೋಕಾಕ, ವಿ. ಕೃ.	4-2	129-131
6	ಸ್ವಾತಂತ್ರ್ಯೋತ್ತರ ಕಾದಂಬರಿಕಾರರು–ಒಂದು ಸಮೀಕ್ಷೆ	ಆರ್ಯಾಂಬ ಪಟ್ಟಾಭಿ	4-4	177-185
7	ಕನ್ನಡ ಜೈನ ಕವಿಗಳು ಹಾಗೂ ರಾಜಾಶ್ರಯ	ಮಹೀಶವಾಡಿ, ಬಿ. ಬಿ.	5-2	29-48
8	ಈಚಿನ ಸಾಹಿತ್ಯ ಧೋರಣೆ –ಒಂದುಟಿಪ್ಪಣಿ	ರಘುನಾಥರಾವ್. ಡಿ.	5-4	92–97
9	ಕನ್ನಡ ಸಾಹಿತ್ಯದಮೇಲೆ ಜಾನಪದದ ಪ್ರಭಾವ ?	ರಾಮಯ್ಯ, ಕೆ. ಎಚ್.	6-2	133-143
10	ಕನ್ನಡ ಕಾವ್ಯಗಳಲ್ಲಿ ಕಂಡು ಬರುವ ತತ್ವಾರ್ಥ ಸೂತ್ರದ ಉಲ್ಲೇಖಗಳು	ಕಮಲಾ ಹಂಪನಾ	7-1	106-118
11	ಕನ್ನಡ ಕಾದಂಬರಿಗಳಲ್ಲಿ ಹರಿಜನ ಸಮಸ್ಯೆ	ಮಂಗಳಾಪ್ರಿಯದರ್ಶಿನಿ. ಡಿ.	7-2	120–136
12	18ನೆಯ ಶತಮಾನದ ಕೆಫಲಿಕರ ಅಪೂರ್ವ ಕನ್ನಡ ಕೃತಿಗಳು	ಶ್ರೀನಿವಾಸ ಹಾವನೂರ	7-4	9-28
13	ಕಳೆದ ಎಂಟು ವರುಷಗಳ ಸಾಹಿತ್ಯ ಕೃತಿಗಳ ಸಮೀಕ್ಷೆ	ಶಿವರುದ್ರಪ್ಪ, ಜಿ. ಎಸ್.	8-1	110–123
14	ಕನ್ನಡ ಸಾಹಿತ್ಯದಲ್ಲಿ ಮಾನವ ಕಲ್ಪನೆ	ಮೂಲ :ಯು. ಆರ್. ಅನಂತಮೂರ್ತಿ ಅನು : ವೆಂಕಟೇಶಮೂರ್ತಿ, ಎಚ್.ಎಸ್.	9-1	2–20
15	ನಮ್ಮ ಸಾಹಿತ್ಯ ಪರಂಪರೆ ಒಂದು ಬಂಡಾಯ ಅನ್ವಯಿಕ ವಿಮರ್ಶೆ	ಕೆಮ್ಮೂರು ರಘುಪತಿಭಟ್ಟ	10-1	15–31
16	ವಚನ ವಾಙ್ಮಯದಲ್ಲಿ ನಿರೂಪಿತವಾದ ಶೈವ-ವೀರ ಶೈವಗಳ ಸಂಬಂಧ	ಜವಳಿ. ಬಿ. ಸಿ.	10-2	3–36

ಕವಿಕಾವ್ಯ ವಿಮರ್ಶೆ : ಪ್ರಾಚೀನ

1	ವಚನಾಂಕಿತಗಳು	ನಾರಾಯಣ, ಪಿ. ವಿ.	1-4	111-134
2	ಸತಿಭಾವದ ವಚನಗಳು	ರಘುನಾಥರಾವ್, ಡಿ.	2-3	56-60
3	ಪ್ರಮುಖ ಹರಿದಾಸರುಗಳ ಮೇಲೆ ಕುಮಾರವ್ಯಾಸನ ಪ್ರಭಾವ	ಲಕ್ಷ್ಮೀದೇವಿ, ಎಂ. ಆರ್.	2-3	61-76
4	ಪಂಪಭಾರತದಲ್ಲಿಯ ವರದಾನದಿ	ಸೀತಾರಾಮ್ ಜಾಗೀರ್‌ದಾರ್	2-3	92-95
5	ಬಸವಣ್ಣನವರ ವಚನಗಳಲ್ಲಿ ಕಾವ್ಯಸೌಂದರ್ಯ	ಶಿವರುದ್ರಪ್ಪ, ಜಿ. ಎಸ್.	2-4	3-15
6	ಬೆಡಗಿನ ವಚನ	ವೀರಭದ್ರಯ್ಯ, ಎಚ್. ವಿ.	2-4	32–39
7	ಬಸವಣ್ಣನವರ ಸಸ್ಯ ಸಂಬಂಧವಾದ ಸೂಕ್ತಿಗಳು	ಸ್ವಾಮಿ, ಬಿ. ಜಿ. ಎಲ್.	3-3	13-27
8	ಚಾಣಕ್ಯರಿಸಿಯ ಕಥೆ – ಪರಾಮರ್ಶೆ	ನಾಗರಾಜಯ್ಯ, ಹಂ.ಪ	3-4	18-35
9	ರಾಘವಾಂಕನ ಆದಯ್ಯ	ಜವಳಿ, ಬಿ. ಸಿ.	3-4	85-102
10	ಪುರಂದರದಾಸರ ಒಂದು ಪದ್ಯ	ವೆಂಕಟೇಶಮೂರ್ತಿ, ಎಚ್. ಎಸ್.	4-3	20-25
11	ಹೊನ್ನಮ್ಮನ ದೃಷ್ಟಿಯಲ್ಲಿ ಆದರ್ಶಸತಿ ಅಂದು-ಇಂದು	ಸಂಧ್ಯಾ, ವೈ. ಕೆ.	4-4	158-163
12	ನೇಮಿಚಂದ್ರ	ವೆಂಕಟಾಚಲಶಾಸ್ತ್ರಿ, ಟಿ. ವಿ.	5-1	66-75
13	ಸರ್ವಜ್ಞ ಕವಿಯ ಸಮಕಾಲೀನ ದೃಷ್ಟಿ	ಸಂಗಮನಾಥ ಜಿ. ಹಂಡಿ	5-3	153-161
14	'ದೀಪಿಕೆ'ಯ ಬೆಳಕಿನಲ್ಲಿ	ಮುಗಳಿ, ರಂ. ಶ್ರೀ.	5-4	2-27
15	ವಚನಗಳಲ್ಲಿ 'ಅನುಭಾವ' ; ಅದರ ಸ್ವರೂಪ ಮತ್ತು ಅರ್ಥಚ್ಛಾಯೆಗಳು	ನಾರಾಯಣ, ಪಿ. ವಿ.	5-4	37-57
16	ವಿಕ್ರಮಾರ್ಜುನ ವಿಜಯದ ಒಂದು ಪದ್ಯ	ಜಯದೇವ್, ಹು. ಕಾ.	6-1	143-146
17	ಪಂಪಭಾರತದ ಒಂದು ಕ್ಲಿಷ್ಟ ಪದ್ಯ	ಸೀತಾರಾಮ್ ಜಾಗೀರ್‌ದಾರ್	6-1	138-143
18	'ದೀಪಿಕೆ'ಯ ಬೆಳಕಿನಲ್ಲಿ	ಮುಗಳಿ, ರಂ. ಶ್ರೀ.	6-1	3–22
19	ಬಸವಪುರಾಣ, ಬಸವರಾಜದೇವರ ರಗಳೆಗಳಲ್ಲಿರುವ ಸಾಮ್ಯ ವ್ಯತ್ಯಾಸಗಳು	ಗಾಜುಲ ವೀರಯ್ಯ	6-2	30-48
20	ವಚನಕಾರರು ಮತ್ತು ನೇಮಿಚಂದ್ರ	ಶಿವರುದ್ರಪ್ಪ, ಜಿ. ಎಸ್.	6-3	41-48

21	ಹರಿಶ್ಚಂದ್ರನ ಕಥೆ, ಗ್ರಹಣದ ಸಂಕೇತ	ವಿಮಲ, ಎನ್. ವಿ.	6-3	33-39
22	ಹರಿಹರ-ಸೋಮನಾಥ (ಕೆಲವು ಟಿಪ್ಪಣಿಗಳು)	ವಿಜಯಕುಮಾರ್, ಹ. ನಂ.	6–3	121-125
23	ಕಾವ್ಯಗಳು/ಶಾಸನಗಳು	ನಾಗರಾಜಯ್ಯ, ಹಂ. ಪ.	6–3	118-120
24	ಹರಿಹರನ ದರ್ಶನ	ಶಿವರುದ್ರಪ್ಪ, ಜಿ. ಎಸ್.	6-4	2-14
25	ವರದಾನಿ ಗುಡ್ಡವ್ವೆ	ಜವಳಿ, ಬಿ. ಸಿ.	6-4	59-82
26	ವಿಡಂಬನಾತ್ಮಕ ಅನ್ಯೋಕ್ತಿಯಾಗಿ ಪಂಚತಂತ್ರ	ಪ್ರಶಾಂತ್ ವಲೇರಿಯನ್ ಮಾಡ್ರ	7-1	2-15
27	ಪಂಪಕವಿಯ "ವಿಕ್ರಮಾರ್ಜುನ ವಿಜಯ"ದಲ್ಲಿನ "ರಂಗತ್ತುಂಗ ತರಂಗ..."ಎಂಬ ಮಂಗಳವೃತ್ತ	ಗರ್ಗೇಶ್ವರಿ ವೆಂಕಟಸುಬ್ಬಯ್ಯ	7-2	78-90
28	ಕುಮಾರವ್ಯಾಸ ಭಾರತದಲ್ಲಿ ವ್ಯಕ್ತಿತ್ವ ವಿಘಟನೆ	ಮಾಣಿಕ್ಯ, ಡಿ.	7-2	31–40
29	ಬಸವಪುರಾಣದ ಸಾಮಾಜಿಕ ಅಧ್ಯಯನ	ಜವಳಿ, ಬಿ. ಸಿ.	8-1	92-107
30	..	,,	82	144–156
31	..	,,	8-3	122-137
32	ವಚನಗಳಲ್ಲಿ 'ಅನುಭಾವ' ಪದದ ಅನ್ವೀಕ್ಷಕೀರೀತಿಯ ಒಂದು ಪರಿಶೀಲನೆ	ಕಂಬಿ, ವಿ. ಎಸ್.	9-3	6–24
33	ಸಪ್ತಸಂತಾನಗಳ ಉಲ್ಲೇಖ ಕನ್ನಡ ಕೃತಿಯೊಂದರಲ್ಲಿ	ವಿದ್ಯಾಶಂಕರ, ಎಸ್.	9–4	16–18
34	ಕಪೋತಾಖ್ಯಾನದ ರಾಚನಿಕ ಅಧ್ಯಯನ–ಒಂದು ಪ್ರಯತ್ನ	ಸತ್ಯನಾಥ್, ಟಿ. ಎಸ್.	9-4	19-37
35	ಕರ್ಣಕೌರವರ ನೆತ್ತ	ತಾಳ್ತಜೆ ಕೃಷ್ಣಭಟ್	9-4	39-44
36	ಪಂಪಭಾರತದಲ್ಲಿ "ಸಾಹಸದ ಮಹಿಮೆಯೊಳ್ ಫಲ್ಗುಣಂ"	ಜವಳಿ, ಬಿ. ಸಿ.	10-1	139-153
37	..	..	10-2	47-59
38	ಕುಮಾರವ್ಯಾಸ ಮತ್ತು ಬೇಜವಾಬುದಾರಿಕೆ (ಪ್ರತಿಕ್ರಿಯೆ)	ಕಲಬುರ್ಗಿ ಎಂ. ಎಂ.	10-3	137-138

ಕವಿಕಾವ್ಯ ವಿಮರ್ಶೆ : ಆಧುನಿಕ

1	ಡಿ. ವಿ. ಜಿ. ಯವರ ಶೃಂಗಾರ ಸಂಹಿತೆ	ವರದರಾಜರಾವ್, ಜಿ.	1-1	11-35

2	ಶ್ರೀರಂಗರ ಪ್ರಕೃತಿ-ಪುರುಷ	ಭೈರಪ್ಪ, ಎಸ್. ಎಲ್.	1-1	93-123
3	ಕಾರಂತರ ಕಾದಂಬರಿಗಳಲ್ಲಿ ಕಡಲು	ಭಾಗ್ಯಲಕ್ಷ್ಮಿ, ಎನ್. ವಿ.	1-2	86-92
4	ನವರಾತ್ರಿ	ಸಿದ್ಧಲಿಂಗಯ್ಯ, ಜಿ. ಎಸ್.	1-2	132-144
5	ಶರತ್-ಶಾರದೆ (ಒಂದು ವಿವೇಚನೆ)	ರಾಜಗೋಪಾಲ್, ಕ ವೆಂ.	1-3	183-186
6	"ಗತಿ–ಸ್ಥಿತಿ"-ಒಂದು ಪ್ರತಿಕ್ರಿಯೆ	ಕೋದಂಡರಾಮ್, ಕೆ. ಎಂ.	1-4	142-148
7	ಕನ್ನಡ ಗ್ರಂಥಸೂಚಿ-ಸಂಪುಟ-1 ; ಒಂದು ವಿಮರ್ಶೆ	ಚಿದಾನಂದಮೂರ್ತಿ, ಎಂ.	2-2	55–60
8	ಬೇಂದ್ರೆಯವರ 'ಪಾತರಗಿತ್ತಿ ಪಕ್ಕ'	ಮಧುಸೂದನ, ಕೆ. ಎಸ್.	3-2	135-138
9	ಎಸ್. ಎಲ್. ಭೈರಪ್ಪನವರ 'ದಾಟು' ಒಂದು ಸಮೀಕ್ಷೆ	ವಿದ್ಯಾಶಂಕರ್, ಎಸ್.	3-3	56–63
10	ಜಿ. ಎಸ್. ಸದಾಶಿವ ಅವರ ಕತೆಗಳು ಒಂದು ಅಭ್ಯಾಸ	ನಾಗರಾಜಶೆಟ್ಟಿ, ಟಿ. ಎಸ್.	3-4	49-63
11	ಎಲ್ಲರಂಥವನಲ್ಲ ನನಗಂಡ-ಒಂದು ವಿಶ್ಲೇಷಣೆ	ಭಾರತಾದ್ರಿ, ಆರ್.	3-4	136–143
12	ದಾಟು-ಒಂದು ಬರವಣಿಗೆ	ಬಾಲಸುಬ್ರಹ್ಮಣ್ಯ	4-2	74-85
13	ನಂಬಿಕೆ : ಒಂದುವಿಶ್ಲೇಷಣೆ	ಕಾಪಸೆ, ಜಿ. ಎಸ್.	4-2	107-11
14	ತೇಜಸ್ವಿಯವರ 'ನಿಗೂಢ ಮನುಷ್ಯರು'	ಶಿವರಾಮಯ್ಯ	5-1	94-104
15	ಪಾಟೀಲರ ನಾಟಕಗಳು- ಒಂದು ಪ್ರತಿಕ್ರಿಯೆ	ಭಾರತಾದ್ರಿ	5-3	69-76
16	ದ್ಯಾವನೂರು–ಒಂದುವ್ಯಾಖ್ಯಾನ	ಕರಿಗೌಡ, ಬಿ. ಕೆ.	5-3	97-104
17	'ತುಘಲಕ್' ನಾಟಕದಲ್ಲಿ ಚದುರಂಗ ತಂತ್ರ	ಸತ್ಯನಾಥ್, ಟಿ. ಎಸ್.	5-4	105-1107
18	ಬೇಂದ್ರೆಯವರ ಜೋಗಿ–ಒಂದು ವಿಶ್ಲೇಷಣೆ	ಶ್ರೀನಿವಾಸಮೂರ್ತಿ ಎಂ.ವಿ	6-2	71-80
19	ಕೆ. ಎಸ್. ನರಸಿಂಹ ಸ್ವಾಮಿಗಳ ಕವನಗಳ ಪ್ರಧಾನ ಆಶಯ	ನಾರಾಯಣ, ಕೆ. ವಿ.	7-1	16-21
20	ಕಾರಂತರ ಮೂಕಜ್ಜಿಯ ಕನಸುಗಳು	ಶಿವರುದ್ರಪ್ಪ, ಜಿ. ಎಸ್.	7-3	2-5
21	'ಮೂಕಜ್ಜಿಯ ಕನಸುಗಳು–' ಅದರ ವಿಶಿಷ್ಟತೆ	ನಾರಾಯಣ, ಕೆ. ವಿ.	7-3	7-10
22	"ಮೂಕಜ್ಜಿಯ ಕನಸುಗಳು" ಶೋಧನಾತ್ಮಕ ಕಾದಂಬರಿಯಾಗಿ	ನಾಗರಾಜ, ಕಿ. ರಂ.	7-3	11-16
23	ಮೂಕಜ್ಜಿಯ 'ಅಮ್ಮ' ; ವಸ್ತು ಪ್ರತಿನಿಧಿಯಾದ ಪ್ರಕೃತಿ	ವೀರಣ್ಣ, ಸಿ.	7-3	17-23
24	ಚೋಮನ ದುಡಿ : ಒಂದು ವಿವೇಚನೆ	ಮಂಜುನಾಥ್, ಕೆ. ಜಿ.	7-3	24-28
25	ಧರ್ಮರಾಯನ ಸಂಸಾರ-ಒಂದು ಅನಿಸಿಕೆ	ಬರಗೂರು ರಾಮಚಂದ್ರಪ್ಪ	7-3	29-33

26	ಕಾರಂತರ ಕಾದಂಬರಿಗಳಲ್ಲಿ ಲೈಂಗಿಕ ಸಮಸ್ಯೆಗಳು	ವಿದ್ಯಾಶಂಕರ, ಎಸ್.	7-3	34-53
27	ಲಂಕೇಶರ 'ಸಂಕ್ರಾಂತಿ'- ಒಂದು ಸಾಂಸ್ಕೃತಿಕ ಅಧ್ಯಯನ	ಮರುಳುಸಿದ್ದಪ್ಪ, ಕೆ.	7-3	124-133
28	''ಭಾರತೀಯ ಸಂಸ್ಕೃತಿ ಮತ್ತು ಲೇಖಕ''- ಒಂದು ವಿವೇಚನೆ	ಗೋವಿಂದ ಜಾಲಿಹಾಳ	7-4	82-92
29	ಮೂಕಜ್ಜಿಯ ಕನಸುಗಳು : ಕಾರಂತರ ಜೀವನದರ್ಶನ	ನಾಗಭೂಷಣ, ಡಿ. ಎಸ್.	8-2	3-18
30	'ತಬ್ಬಲಿಯು ನೀನಾದೆ ಮಗನೆ' ಧರ್ಮಪ್ರಜ್ಞೆ–ಆಧುನಿಕ ವಿಚಾರಗಳ ಹುಸಿಸಂಘರ್ಷ	ಮಿಣಕನಗುರಿಕಿ ದಿವಾಕರ	8-3	103-112
31	ಕಾಣ್ಕೆ ಕಣ್ಕಟ್ಟುಗಳ ನಡುವೆ	ಸುಮತೀಂದ್ರ ನಾಡಿಗ	8-4	134-140
32	ಚಿತ್ತಾಲರ ಚರಮಗೀತೆಗಳು	ಪ್ರಭು, ಎಂ. ಎಸ್.	9-1	29-42
33	'ಮೂಕಜ್ಜಿಯ ಕನಸುಗಳು' ಒಂದು ಮನೋವೈಜ್ಞಾನಿಕ ವಿಶ್ಲೇಷಣೆ	ಪರಿಮಳಾ	9-1	90-99
34	'ಸೃಷ್ಟಿ' : ತತ್ವಗಳನ್ನು ವಿಡಂಬಿಸಿ ಬದುಕಿಗೆ ಬದ್ಧವಾದ ಕೃತಿ	ಕೋಟಿ, ಎಂ. ಬಿ.	9-3	77-84
35	ಡೈರಿಯ ಪುಟಗಳೊಂದಿಗೆ ಮೂರು ಕಾದಂಬರಿಗಳು	ಜಯಶ್ರೀ ಜಾಟಿ	10-1	58-80
36	ಪು. ತಿ. ನ. ರವರ ರಾಮಾಚಾರಿಯ ನೆನಪು	ಕೋಟಿ, ಎಂ. ಬಿ.	10-2	81-86

ಅನ್ಯಭಾಷಾ ಸಾಹಿತ್ಯ

1	ಋಗ್ವೇದದ ಸಂವಾದ ಸೂಕ್ತಗಳು	ಶಿವಕುಮಾರಸ್ವಾಮಿ, ಎಂ.	1-4	49-79
2	ಯಜುರ್ವೇದದಲ್ಲಿ ಸರಸ್ವತಿಯ ದರ್ಶನ	ವಿಮಲ, ಎನ್. ವಿ.	2-1	27-35
3	ವಿಕ್ರಮೋರ್ವಶೀಯದಲ್ಲಿ ನಾಲ್ಕನೆಯ ಅಂಕದ ಪ್ರಕ್ಷಿಪ್ತ ಭಾಗಗಳು	ರಾಮನಾಥನ್, ಸಿ.	2-2	14-21
4	ವೇದಗಳಲ್ಲಿ ರಾಷ್ಟ್ರಪ್ರಜ್ಞೆ	ಗಾಯತ್ರಿ, ಪಿ. ಕೆ.	2-3	45-41
5	ಭಗವತಿ ಲಲಿತ (ಲಲಿತಾ ಸಹಸ್ರನಾಮ)	ವಿಮಲ, ಎನ್. ವಿ.	2-4	53-69
6	ಮೈಥಿಲಿ ಶರಣಗುಪ್ತರ 'ಊರ್ಮಿಳೆ'	ಸೋಮಶೇಖರ್ "ಸೋಮ್"	2-4	110-116
7	ರಾಮಧಾರೀ ಸಿಂಹ ದಿನಕರ್	ಭಾರತೀರಮಣಾಚಾರ್, ಎಂ.ಕೆ.	3-1	9-13

ಭಾಷಾವಿಜ್ಞಾನ

ಶಾಸನಗಳು

16	ಬಿಳಿಗೆಯ ಶಾಸನಗಳು	ಗುರವ, ಆರ್. ಎನ್.	8-2	102-119
17	ಬಿಳಿಗೆಯ ಶಾಸನಗಳು	ಗುರವ, ಆರ್. ಎನ್.	8-4	93-111
18	ವೆಲುಪಗೊಂಡ ಗ್ರಾಮ ಹಾಗೂ ಅಲ್ಲಿಯ ಎರಡು ಶಾಸನಗಳು	ಕುಲಕರ್ಣಿ, ಪಿ. ಎಸ್.	9-1	59-64
19	ಯಾತಕೂರು ಗ್ರಾಮದ ಎರಡು ಶಾಸನಗಳು	ಕುಲಕರ್ಣಿ, ಪಿ. ಎಸ್.	9-2	74-83
20	ಇಂಗಳಗಿ ಗ್ರಾಮದ ಶಾಸನ	ಕುಲಕರ್ಣಿ, ವಿ. ಎನ್.	9-4	82-86
21	ರಾಜಧಾನಿ ; ಒಂದು ಸ್ವಪ್ಪನೆ	ಕಲಬುರ್ಗಿ, ಎಂ. ಎಂ.	10-1	32-35
22	ಸಿರಗುಪ್ಪೆಯ ಒಂದು ಶಾಸನ : ಅದರ ಮಹತ್ವ	ಭೋಯಿ, ಎಂ. ಬಿ.	10-1	82-85
23	ಅಡಕೆಗೆ ಪ್ರಸಿದ್ಧವಾಗಿದ್ದ 'ನೆಲವತ್ತಿ' ಗ್ರಾಮ ಯಾವುದು?	ಚಿದಾನಂದಮೂರ್ತಿ, ಎಂ.	10-2	33-38
24	ತಮಟ ಕಲ್ಲಿನ ಗುಣ ಮಧುರನ ಶಾಸನಗಳು ಪುನರ್ಪರಿಶೀಲನೆ	ದೇವರ ಕೊಂಡಾರೆಡ್ಡಿ ಶೇಷಶಾಸ್ತ್ರಿ, ಆರ್.	10-3	70-78

ಗ್ರಂಥ ಸಂಪಾದನೆ

1	ಮುರಿಗೆ ಶಾಂತವೀರೇಶ್ವರನ ಕಂದ	ಶಿವಣ್ಣ, ಎಸ್.	1-3	167-171
2	ಚಂದ್ರಾವಳಿ ; ಒಂದು ಪೌರಾಣಿಕ ಜಾನಪದ ಕಥನ	ಅನಂತಪದ್ಮನಾಭರಾವ್	2-4	80-92
3	ಹೆಚ್ಚಿಗೆ ದೊರೆತ ಚೆನ್ನಬಸವೇಶ್ವರನ ವಚನಗಳು	ಉಮಾಪತಿ, ಎಸ್.	2-4	117-127
4	ಮುಪ್ಪಿನಯ್ಯನ ಆಚರಣೆ ಸಂಬಂಧದ ವಚನಗಳು	ಶಿವಣ್ಣ, ಎಸ್.	3-2	123-127
5	ಎರಡು ವಚನಗಳ ಪಾಠ ಪರಿಷ್ಕರಣ	ನಾರಾಯಣ, ಪಿ. ವಿ.	3-3	120-123
6	ಕಾವ್ಯಸಾರಂ (ಮಲ್ಲಕವಿ ಸಂಯೋಜಿತ) ಆಕರಗಳ ಸೂಚಿ	ಶಿವಣ್ಣ, ಎಸ್.	3-3	132-161
7	ಗೋವಿನ ಹಾಡು-ಮೂಲ ಆಕರ	ಮಾಧವ ಪೈ, ಎಂ.	3-4	126-134
8	ಬಸವಣ್ಣನವರ ಒಂದು ಹೊಸ ವಚನ	ಉಮಾಪತಿ, ಎಸ್.	4-2	72
9	ನೀಲಮ್ಮನ ಒಂದು ಹೊಸ ವಚನ	ಶಿವಣ್ಣ, ಎಸ್.	4-2	73

ಸಾಹಿತ್ಯ : ತೌಲನಿಕ

ಛಂದಸ್ಸು

ವ್ಯಕ್ತಿ ವಿಚಾರ

ಸಂಸ್ಕೃತಿಯ ಅಧ್ಯಯನ ಮತ್ತು ಜಾನಪದ

10	ಡೊಳ್ಳಿನ ಪದದಲ್ಲಿ ಇಳೆ, ಮಳೆ, ಬೆಳೆ	(ಸಂ) ವಿರೂಪಾಕ್ಷಗೌಡ, ಕೆ.	2-1	36-45
11	ಜಾನಪದ ಅಭಿಮನ್ಯು	ಹೆಗಡೆ, ಎಲ್. ಆರ್.	2-1	108-120
12	ತೆಲುಗು ಜಾನಪದ ಗಾಯಕರು	ತಂಗಿರಾಲ ವೆಂಕಟಸುಬ್ಬಾರಾವು	2-3	106-129
13	ಜಾಣ–ಜಾಣೆ	(ಸಂ) ನಿಂಗಣ್ಣ ಸಣ್ಣಕ್ಕಿ	3-1	170-172
14	ಕರ್ನಾಟಕದ ಆದಿವಾಸಿಗಳು	ಶಂಕರನಾರಾಯಣರಾವ್, ಎನ್.ಪಿ.	4-1	127-132
15	ವೇದದಲ್ಲಿ ಒಗಟುಗಳು	ಕೃಷ್ಣಭಟ್ಟ ಎಸ್.	4-3	6-11
16	ದೇವದಾಸಿ ಪದ್ಧತಿ	ವೆಂಕಟಲಕ್ಷ್ಮಿ, ಬಿ. ಎಸ್.	4-4	131-142
16ಎ	ಕೊಂಡದ ಕಾಟವ್ವ	ಕೃಷ್ಣಮೂರ್ತಿ, ಎ. (ಸಂ)	5-3	34-56
17	ಮೋಡಿ	ಸಿದ್ದಗಂಗಪ್ಪ, ಎಚ್. ಎಸ್. ಮತ್ತು ದಶರಥ	5-4	111-117
18	ತಂತ್ರಶಾಸ್ತ್ರ : ಒಂದು ಟಿಪ್ಪಣಿ	ಮೀರಾ ಚಕ್ರವರ್ತಿ	5-4	135-141
18ಎ	ಪ್ರಚಲಿತ ಋಗ್ವೇದಸ್ಥ ಆದಿತ್ಯ ಸಂಪ್ರದಾಯ (ಒಂದು ಕಣ್ಕಟ್ಟು)	ಜೋಶಿ, ಶಂ. ಬಾ.	5-4	144-146
19	ಮಧ್ಯ ಅಮೆರಿಕ ಪ್ರದೇಶದ ಮತ್ತು ದಕ್ಷಿಣ ಅಮೆರಿಕದ ಮೂರು ಸಂಸ್ಕೃತಿಗಳು ಮತ್ತು ಭಾರತೀಯ ಸಂಸ್ಕೃತಿ	ಕಾಶಿ ಪುಟ್ಟಸೋಮಾರಾಧ್ಯ	6-1	44-55
20	'ಜಾನಪದ'–ಕೆಲವು ಟಿಪ್ಪಣಿಗಳು	ಸಿದ್ಧರಾಮಯ್ಯ, ಎಸ್. ಜಿ.	6-1	125-129
21	ವೀರ ಸಿದ್ಧಾಂತ	ಕಲಬುರ್ಗಿ, ಎಂ. ಎಂ.	6-1	148-155
22	ಕರ್ನಾಟಕದಲ್ಲಿ ಶ್ರೀಕೃಷ್ಣ ಪಾರಿಜಾತ (ಬಯಲಾಟ) ಪರಂಪರೆ (ಒಂದು ವಿವೇಚನೆ)	ಭುಜೇಂದ್ರ ಮಹಿಷವಾಡಿ	6-2	91-106
23	ಜಾನಪದ ವರ್ಗೀಕರಣ : ಒಂದು ಸಲಹೆ	ಸತ್ಯನಾಥ್, ಟಿ. ಎಸ್.	6-3	3-32
24	ಜಪಾನಿನ ಲೋಕನಾಟ್ಯ "ನೊ"	ಲಲಿತಾಂಬ, ಬಿ. ವೈ.	6-4	15-37
25	ಪ್ರಾಚೀನ ಕರ್ನಾಟಕದಲ್ಲಿ ವೃಕ್ಷಾರೋಪಣ	ಚಿದಾನಂದಮೂರ್ತಿ, ಎಂ.	6-4	39-44
26	ಜನಪದ ಪೋಲಿ ಕಥೆ	ರಾಮೇಗೌಡ, ದೊ. ನಾ.	6-4	45-57
27	ಕರಗಶಕ್ತಿ ನೃತ್ಯ	ರಾಮಮೂರ್ತಿ, ಕೆ. ಎಸ್.	6-4	105-117
28	'ಪುಲಿಗೆರೆ' ಒಂದು ಜೈನಕೇಂದ್ರ	ಪಾಟೀಲ, ಎಸ್. ಪಿ.	6-4	120-131
29	ಮರಾಠಿ ಶ್ರೀಕೃಷ್ಣಪಾರಿಜಾತ ಮತ್ತು ನಮ್ಮ ನಾಟ್ಯ ಪರಂಪರೆ	ಪ್ರಹ್ಲಾದ್ ಮುರ್ಗಲ್	6-4	132-151
30	ಕನ್ನಡ ಜಾನಪದದ ಕೆಲವು ಮುಖಗಳು : ವಿಶಿಷ್ಟಾಂಶ (Distinctive feature) ತತ್ವವನ್ನು ಆಧರಿಸಿ ಮಾಡಿದ ಒಂದು ಕಂಪ್ಯೂಟರ್ ಅಧ್ಯಯನ	ಸತ್ಯನಾಥ್, ಟಿ. ಎಸ್.	7-1	69-105

31	ಕಾಲಜ್ಞಾನ ಸಾಹಿತ್ಯ ಮತ್ತು ಅದರ ಜಾನಪದ ಧೋರಣೆಗಳು	ಶಿವಾನಂದ, ವಿ.	7-2	41-61
32	ಬಳರಿ (ಬಳಾರಿ)–ಉಗ್ರ ಹೆಣ್ಣು ದೇವತೆ	ಹಿರೇಮಠ, ಎಸ್. ಎಸ್.	7-2	100-106
33	ಬುರ್ರ ಕಥೆ	ಹನುಮಂತರಾಯಪ್ಪ, ಸಿ.	7-2	108-111
34	ಸ್ಥಳನಾಮ ಅಧ್ಯಯನ– ಸಮಸ್ಯೆಗಳು ಹಾಗೂ ನಿವಾರಣೆ	ಗೋಪಾಲಕೃಷ್ಣ, ವಿ.	7-2	112-119
35	ತುಳುನಾಡಿನ 'ಕಾರ್'–ಊರುಗಳ ಒಂದು ಸ್ಥಳ ನಾಮಾಧ್ಯಯನ	ಕೆಮ್ತೂರು ರಘುಪತಿಭಟ್	7-2	140-148
36	'115 ಜಾನಪದ ಕಿರುಗತೆಗಳು' ಪುಸ್ತಕವನ್ನು ಕುರಿತು	ಚಿದಾನಂದಮೂರ್ತಿ, ಎಂ.	7-3	117-123
37	ವೇದದೊಳಗಿನ ನಾಗಪೂಜೆ	ಜೋಶಿ, ಶಂ. ಬಾ.	7-4	4-8
38	ಬುನ್ ರಾಕೂ : ಜಪಾನಿನ ಗೊಂಬೆ ನಾಟಕ	ಲಲಿತಾಂಬ, ಬಿ. ವೈ.	7-4	35-55
39	'ಹಗರಣ' ಜಾನಪದ ಕಲೆಯ ಇನ್ನೊಂದು ಅವಶೇಷ : ದಕ್ಷಿಣ ಕರ್ನಾಟಕದಲ್ಲಿ	ಚಿದಾನಂದಮೂರ್ತಿ, ಎಂ	7-4	121-131
40	ಜಾನಪದ ಗದ್ಯ ಕಥೆಗಳ ಕಥನ ಕಲೆ	ಜಯಚಂದ್ರ, ಎಂ. ಎ.	8-1	133-137
41	ಹವ್ಯಕರ ಮೂಲ	ಶಾಲಿನಿ ರಘುನಾಥ	8-2	36-42
42	ಮಾಟ–ಮುದ್ದು	ಮರುಳಸಿದ್ದಪ್ಪ, ಕೆ.	8-2	83-90
43	ಸ್ಥಳನಾಮ ರೂಪರೇಷೆ	ಕೆಮ್ತೂರು ರಘುಪತಿಭಟ್ಟ	8-2	129-133
44	ಜೋಕುಮಾರನ ಕಥೆಯ ಇನ್ನೊಂದು ಪ್ರಭೇದ	ಚಿದಾನಂದಮೂರ್ತಿ, ಎಂ.	8-3	18-26
45	ಅನಂತಪುರ ಜಿಲ್ಲೆಯ 'ಸಮರ್ತ' ಪದ್ಧತಿಗಳು	ಮೋಹನ್, ಜಿ. ಎಸ್.	8-3	146-153
46	ಕಲ್ಲಕೆರೆ ಮುಳುಕಟ್ಟಮ್ಮನ ಹಬ್ಬ	ಶಿವಲಿಂಗಸ್ವಾಮಿ, ಕೆ. ಸಿ.	8-4	128-133
47	ಸಂಸ್ಕೃತಿಯ ಪರಿಚಯಕ್ಕೆ	ಶಿವರಾಮ ಕಾರಂತ	9-2	1-17
48	ಹವ್ಯಕರಲ್ಲಿ ಅಡ್ಡ ಹೆಸರುಗಳು	ರಾಮಭಟ್, ಪಿ.	9-3	69-76
49	ತಾಂತ್ರಿಕ ಪಂಥವೊಂದರ ಆಚರಣೆಗಳ ಬಗೆಗಿನ ಒಂದು ಹೊಸ ಉಲ್ಲೇಖ	ವಿದ್ಯಾಶಂಕರ, ಎಸ್.	9-3	85-95
50	ಜನಪದ ಕತೆಗಳಲ್ಲಿ ಸಂಜ್ಞೆಯ ಮಾಧ್ಯಮ	ಶಂಕರಗೌಡ, ಮ. ಬಿರಾದಾರ	9-3	96-108
51	ಡಪ್ಪಿನಪದಗಳಲ್ಲಿ ಕುಕ್ವಾಡದ ಅಂಬಾಭವಾನಿ	ಅಣಜಿ, ಸಿ. ಆರ್.	9-3	109-110
52	"ಪೆಣ್ಬುಯ್ಯಲ್"– ಒಂದು ವಿಶ್ಲೇಷಣೆ	ಗೀತಾಚಾರ್ಯ, ನಾ.	9-4	72-81

ಕರ್ನಾಟಕದ ಚರಿತ್ರೆ

ಮಾನವಿಕ : ವಾಣಿಜ್ಯ, ವ್ಯವಹಾರ

ಮಾನವಿಕ : ಸಮಾಜಶಾಸ್ತ್ರ

ಇತಿಹಾಸ

ಆರ್ಥಿಕ ವಿಚಾರ ಹಾಗೂ ಆಡಳಿತ

ಗ್ರಂಥಾಲಯ ವಿಜ್ಞಾನ

ರಾಜ್ಯಶಾಸ್ತ್ರ

ಸಂಕೀರ್ಣ

ಜನಪ್ರಿಯ ವಿಜ್ಞಾನ

ವಿಜ್ಞಾನ ಸಂಖ್ಯಾಶಾಸ್ತ್ರ

ಗಣಿತ

ವಿಜ್ಞಾನ : ಭೂವಿಜ್ಞಾನ

ವಿಜ್ಞಾನ : ಜೀವವಿಜ್ಞಾನ

ಮನೋವಿಜ್ಞಾನ

ತತ್ತ್ವ ಚಿಂತನೆ

ಸಾಮಾನ್ಯ ಆರೋಗ್ಯ

6	ಮುಟ್ಟು ನಿಲ್ಲುವಿಕೆ	ಷಡಕ್ಷರಪ್ಪ, ಕೆ. ಎಸ್.	3–3	79–88
7	ಆಹಾರ ಸೇವನೆಯ ನಿಯಂತ್ರಣ	ಪದ್ಮಾ ಉಮಾಪತಿ, ಕೆ.	5–1	24–79
8	ನಾಯಿ ಹುಚ್ಚು	ಸತ್ಯನಾರಾಯಣರಾವ್, ಎಂ.	5–1	86-91
9	ಧೂಳಿನಿಂದೇಳುವ ರೋಗಗಳು	ವಿಜಯಕುಮಾರ್, ಜಿ. ಆರ್.	6-2	144-152

ಮಂಥನ

ಗ್ರಂಥ ಸಂಪಾದನೆ

1	ನೇಮಿನಾಥ ಪುರಾಣದ ಒಂದು ಪದ್ಯ ಪಾಠವನ್ನು ಕುರಿತು	ಲಲಿತಮ್ಮ, ಎಂ. ಎಲ್.	1-2	187
2	ಕಾವ್ಯಾವಲೋಕನದ ಒಂದು ಪದ್ಯ	ನಾಗರಾಜಯ್ಯ, ಹಂಪ	2-2	153
3	ಅಪ್ರಮಾಣ ಕೂಡಲ ಸಂಗಮ ದೇವಾಂಕಿತ ವಚನವೊಂದನ್ನು ಕುರಿತು	ಶಿವಣ್ಣ, ಎಸ್.	6-2	159
4	ಪಂಪಭಾರತದ ಒಂದು ಪಾಠಾಂತರ	ರಾಚಪ್ಪ, ಆರ್.	6-3	126
5	ಕೊಂಡಗುಳಿ ಕೇಶಿರಾಜ ಕವಿಯ ಮತ್ತೊಂದು ಕೃತಿ	ಶಿವಲಿಂಗಯ್ಯ, ಜಿ. ಎ.	7-2	151
6	ನಿಜಗುಣದೇವನ ಒಂದು ಹೊಸ ಸ್ವರ ವಚನ	ಭೂಸರೆಡ್ಡಿ, ಎಸ್. ಎಸ್. ವೀರಣ್ಣ ರಾಜೂರ	7-2	155
7	"ಗದಾಯುದ್ಧ"ದ ಒಂದು ಪಾಠಾಂತರ	ರಾಚಪ್ಪ, ಆರ್.	7-3	152
8	'ಜೇಡರ ದಾಸಿಮಯ್ಯ'ನ ಮೂರು ಅಪ್ರಕಟಿತ ವಚನಗಳು	ಶಿವಣ್ಣ, ಎಸ್.	7-4	151
9	'ಶೂದ್ರಕ'ದ ಒಂದು ಅಪೂರ್ಣ ಕಂದ ಪದ್ಯ	ಶಿವಣ್ಣ, ಎಸ್.	8-1	141
10	ಚೆನ್ನಬಸವಣ್ಣನವರ ಎರಡು ವಚನಗಳ ಪಾಠಾಂತರ ಪರಿಶೀಲನೆ	ಕಂಬಿ, ವಿ. ಎಸ್.	8-1	146

ಸಂಕೀರ್ಣ (ಜಾನಪದ, ಸಂಸ್ಕೃತಿ ಅಧ್ಯಯನ ಇತ್ಯಾದಿ)

1	ಬಸವಿ ಪದ್ಧತಿಯ ಸಾಮಾಜಿಕ ಹಿನ್ನೆಲೆ	ಶಂಕರನಾರಾಯಣರಾವ್, ಎನ್. ಪಿ.	1-3	195

ಹಸ್ತಪ್ರತಿ

ಛಂದಸ್ಸು

ಶಾಸನಗಳು

ಕವಿ–ಕೃತಿ–ಕಾಲ ಚರ್ಚೆ ವಿಮರ್ಶೆ

22	ಪಂಪನ ಒಂದು ಪದ್ಯದ ಟಿಪ್ಪಣಿ	ಶಿವರಾಮಯ್ಯ	6-4	165–168
23	ಪಂಪ ಭಾರತದ ಒಂದು ಕ್ಲಿಷ್ಟ ಪದ್ಯ-ಒಂದು ಸಮಾಲೋಚನೆ	ಶ್ರೀನಿವಾಸಮೂರ್ತಿ, ಎಂ. ವಿ.	7-1	149
24	ನಾಗವರ್ಮನ ಕಾಲವಿಚಾರ : ಮರು ಪರಿಶೀಲನೆ	ನಾಗರಾಜಯ್ಯ, ಹಂಪ.	7-1	154
25	'ಅಂತರಂಗಾಷ್ಟಕ'ದ ಕಾಲದ ಬಗೆಗೆ	ಶಿವಣ್ಣ, ಎಸ್.	7-2	157
26	'ಇಷ್ಟಲಿಂಗ ಚಾರಿತ್ರ'ದ ಕರ್ತೃತ್ವ ವಿಚಾರ	ಶಿವಣ್ಣ, ಎಸ್.	7-2	157
27	ಪಂಪನ ಪದ್ಯದ ಟಿಪ್ಪಣಿ (ನೋಡಿ 8)	ಶ್ರೀನಿವಾಸಶರ್ಮ, ಎಚ್. ವಿ.	7-3	146
27	ವಿರುಪಾಕ್ಷ ಸ್ತುತಿ-ಕರ್ತೃತ್ವ ವಿಚಾರ	ಶಿವಣ್ಣ, ಎಸ್.	7-3	151
28	ಸೋಮಶೇಖರ ಶಿವಯೋಗಿಯ ಕಾಲವಿಚಾರ	ವಿದ್ಯಾಶಂಕರ, ಎಸ್.	7-4	152
29	ಲೋಚಿನ ಸಿದ್ಧಲಿಂಗಸ್ವಾಮಿ– ಕಾಲವಿಚಾರ	ಶಿವಣ್ಣ, ಎಸ್.	7-4	156-157
30	ನಂದಪ್ಪನ 'ಪ್ರಭುಚರಿತ್ರೆ'ಯ ಒಂದು ಹಸ್ತಪ್ರತಿ	,,	8-1	142
31	ಕಸ್ತೂರಿಸಿದ್ಧನ ಕಾಲ ವಿಚಾರ	,,	8–3	156
32	ಸರ್ವಜ್ಞನ ಕಾಲದ ಬಗೆಗೆ	,,	8–4	152
33	ಚಂದ್ರಮನ ಕಾಲವಿಚಾರ ಮತ್ತು 'ಗಣಿತಸಾರ'ದ ಪರಿಚಯ	,,	9–2	146
34	ಪುಷ್ಪದಂತ ಪುರಾಣ–ಅಜ್ಞಾತ ಕರ್ತೃವಿನ ಅಲಭ್ಯಕೃತಿ	,,	9-3	142
35	ಶಾಲಿ ಚೆನ್ನಬಸವ-ಕಾಲವಿಚಾರ	,,	9-4	148
36	ಕ್ಷಾರ ಪಾನಿಯಂ ಕೃತಿ ಹೆಸರಿನ ಬಗೆಗೆ	,,	10-1	154-55
37	ಸೋಮಕಟ್ಟೆ ಚನ್ನವೀರಸ್ವಾಮಿಗಳ ಗುರುಕರುಣಾಮೃತ	,,	10-3	147-48

ಶಬ್ದಾರ್ಥ ವಿವೇಚನೆ

1	ಕೆಲವು ವಸ್ತ್ರನಾಮ ವಿಶೇಷಗಳು	ನಾಗರಾಜಯ್ಯ, ಹಂ. ಪ.	1-13	206-212
2	ಉಭಯ ಕವಿ–ಒಂದು ಟಿಪ್ಪಣಿ	ನಾರಾಯಣ, ಕೆ. ವಿ.	1-2	195
3	ಸಿದ್ಧಾಯ ಮತ್ತು ಅರುವಣ	ಗುರುರಾಜಾಚಾರ್, ಎಸ್.	1-2	200

35	(ಸಂ) ಘಟಸರ್ಪ ಕೋಡನ ಮಣಿ (ಕ)	ಶ್ರೀನಿವಾಸಮೂರ್ತಿ, ಎಂ. ವಿ.	7-1	152
36	ನವ್ಯಕಾವ್ಯ	ನಾಗರಾಜಯ್ಯ, ಹಂ. ಪ.	7-2	154
37	'ಕೀಳ್ ಶಾಂತಿ' ಎಂದರೇನು ?	ಚಿದಾನಂದಮೂರ್ತಿ, ಎಂ.	7-4	154
38	'ಬೆಕ್ಕಿಗೆ ಜ್ವರ ಬರುವ ಮಾತು' ಕೇಳ್ ನಯವಿದೆ'	ವೆಂಕಟಸುಬ್ಬಯ್ಯ, ಜಿ.	8-1	138–139
39	ಮುನ್ನೀರ್	ವಿಜಯಕುಮಾರ್, ಹ. ನಂ.	8-2	160
40	ವೀರಸಿದ್ಧಾಂತ	ಶೆಟ್ಟರ್, ಷ.	8-3	154
41	ನಡೆದೇಗುಲ	ವೆಂಕಟಸುಬ್ಬಯ್ಯ, ಜಿ.	8-4	148
42	ನಡೆದೇಗುಲ–ಪ್ರತಿ–ಪ್ರತಿಕ್ರಿಯೆ	ಚಿದಾನಂದಮೂರ್ತಿ, ಎಂ.	9-2	140
43	ನಡೆದೇಗುಲ ಒಂದು ಮರು ಪ್ರತಿಕ್ರಿಯೆ	ವೆಂಕಟಸುಬ್ಬಯ್ಯ, ಜಿ.	9-3	151
44	'ತ್ರಾಸು-ತಕ್ಕಡಿ' ಒಂದು ವಿವೇಚನೆ	ಶ್ರೀಕಂಠಯ್ಯ, ಕೆ.	8-4	151
45	ಸ್ತ್ರೀನಾಮಗಳ ಕೊನೆಯಲ್ಲಿ ಬರುವ 'ಬಾಯಿ'	ಕಲಬುರ್ಗಿ, ಎಂ. ಎಂ.	9-2	147
46	ಬಳರಿ ಮತ್ತು ವೀರವ್ರತಗಳ ಬಗ್ಗೆ ಹೆಚ್ಚಿನ ವಿವರಗಳು	ಹಿರೇಮಠ, ಎಸ್. ಎಸ್.	9-3	143
47	ಬಾಲವದ್ದೆ–ಅರ್ಥವಿವರಣೆ	ಶ್ರೀನಿವಾಸಶರ್ಮ, ಎಚ್. ವಿ.	10-2	142
48	ಮೊಲೆಲಿಂಗ–ಒಂದು ಟಿಪ್ಪಣಿ	ವಿದ್ಯಾಶಂಕರ, ಎಸ್.	10-2	147–150
49	'ಕುರುತಾಪಣೆ' ಪದದ ವಿವರಣೆ ಕುರಿತು ಒಂದು ಪ್ರತಿಕ್ರಿಯೆ	ರೇಣುಕಾರಾಧ್ಯ, ಎಸ್. ಎಸ್.	10-2	150
50	ಯಾಪನೀಯ (= ಜಾಪುಲಿ = ಆಪುಲಿ) ಸಂಘದ ಅಪೂರ್ವ ಉಲ್ಲೇಖ	ಚಿದಾನಂದಮೂರ್ತಿ, ಎಂ.	10-3	139
51	ವಾಸುಗಿಯುಮರಿಯಲಾರದೆ	ಉಪ್ಪಂಗಳರಾಮಭಟ್ಟ,	10-3	141

ಈ ಸಂಚಿಕೆಯ ಲೇಖಕರು

ಡಾ॥ ಸೂರ್ಯನಾಥ ಕಾಮತ್	ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ, ಕಾವೇರಿ ಭವನ, ಬೆಂಗಳೂರು-560001
ಪ್ರೊ॥ ಎಂ. ವಿ. ಸೀತಾರಾಮಯ್ಯ	'ಅರವಿಂದ', ಪೋಸ್ಟಾಫೀಸ್ ರಸ್ತೆ, 3ನೇ ಕ್ರಾಸ್, ಗವೀಪುರಂ ವಿಸ್ತರಣ, ಬೆಂಗಳೂರು-560019
ಶ್ರೀ ಟಿ. ಬಿ. ಚಂದ್ರಶೇಖರಯ್ಯ	ಅರ್ಥಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560056
ಶ್ರೀ ಸಿ. ವಿ. ರಾಜಗೋಪಾಲ	ಮುಖ್ಯ ಪತ್ರಕರ್ತರು, ಪ್ರಜಾವಾಣಿ, 16, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001
ಶ್ರೀ ಬಿ. ವಿ. ಕೆ. ಶಾಸ್ತ್ರಿ	42/10 ಶ್ರೀಪುರಂ ಎರಡನೇ ಅಡ್ಡರಸ್ತೆ ಶೇಷಾದ್ರಿಪುರಂ, ಬೆಂಗಳೂರು-560020
ಶ್ರೀ ಕೆ. ವಿ. ನಾರಾಯಣ	ಅಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು-560056
ಡಾ॥ ಎಸ್. ಚಂದ್ರಶೇಖರ್	ಅಧ್ಯಾಪಕರು, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಬೆಂಗಳೂರು-560056
ಶ್ರೀ ಎನ್. ಎಸ್. ತಾರಾನಾಥ್	ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು-570005
ಪ್ರೊ॥ ಕ. ವೆಂ. ರಾಜಗೋಪಾಲ	ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರು, ನೃತ್ಯ, ನಾಟಕ ಮತ್ತು ಸಂಗೀತ ವಿಭಾಗ, ಪ್ರಸನ್ನಕುಮಾರ ಬ್ಲಾಕ್, ಸೆಂಟ್ರಲ್ ಕಾಲೇಜ್, ಬೆಂಗಳೂರು-560009